ಪರಲೋಕ ಚಿತ್ರಣ ಕುರ್‌ಆನಿನಲ್ಲಿ

ಕೆ.ಸಿ. ಅಬ್ದುಲ್ಲಾ ಮೌಲವಿ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಕೇರಳದ ಪ್ರಸಿದ್ಧ ಧಾರ್ಮಿಕ ಚಿಂತಕ ಹಾಗೂ ಬರಹಗಾರರಾಗಿದ್ದ ಮೌಲಾನಾ ಕೆ.ಸಿ. ಅಬ್ದುಲ್ಲಾ ಮೌಲವಿಯವರು ಮಲಯಾಳಮ್‌ನಲ್ಲಿ ರಚಿಸಿದ 'ಪರಲೋಕಮ್ ಕುರ್‌ಆನಿಲ್' ಎಂಬ ಕೃತಿಯನ್ನು ಅನುವಾದಿಸಿ 'ಪರಲೋಕ ಚಿತ್ರಣ: ಕುರ್‌ಆನಿನಲ್ಲಿ' ಎಂಬ ಶೀರ್ಷಿಕೆಯೊಂದಿಗೆ ವಾಚಕರ ಮುಂದಿಡುತ್ತಿದ್ದೇವೆ.

ಪರಲೋಕದ ನೈಜ ನೆಲೆಯ ಬಗ್ಗೆ ಮಾನವನು ವೈವಿಧ್ಯಮಯ ವಿಚಾರಧಾರೆಗಳನ್ನು ಹೊಂದಿರುವುದು ಒಂದು ವಾಸ್ತವಿಕತೆಯಾಗಿದೆ. ಅಗೋಚರವಾಗಿರುವ ಪರಲೋಕವು ನಮ್ಮ ಸಾಮಾನ್ಯ ತಿಳುವಳಿಕೆಗೆ ಮೀರಿರುವುದೇ ಇದಕ್ಕೆ ಕಾರಣ. ಒಂದು ವಸ್ತುವಿನ ವಾಸ್ತವಿಕಾಂಶಗಳನ್ನು ತಿಳಿದುಕೊಳ್ಳಲು ಬೇಕಾದ ಜ್ಞಾನ ಅಥವಾ ಉಪಕರಣಗಳು ನಮ್ಮ ವಶವಿಲ್ಲದಿದ್ದರೆ, ಅದರ ಕುರಿತು ಒಪ್ಪಿಗೆ ಅಥವಾ ನಿರಾಕರಣೆಯ ಎರಡು ವಾದಗಳಿಂದಲೂ ದೂರವಿರಲು ನಮಗೆ ಸಾಧ್ಯವಿದೆ. ಆದರೆ ಪವಿತ್ರ ಕುರ್‌ಆನ್ ಪ್ರಸ್ತುತ ಪರಲೋಕದ ವಿಚಾರ ಮತ್ತು ಅಗತ್ಯವನ್ನು ಸಾಕ್ಷ್ಯ ಮತ್ತು ಸಮರ್ಥನೆಗಳ ಮೂಲಕ ನಮ್ಮ ಐಹಿಕ ಜೀವನದೊಂದಿಗೆ ಅನಿವಾರ್ಯಗೊಳಿಸಿರುವುದರಿಂದ ನಾವು ಆ ಬಗ್ಗೆ ಒಂದು ದೃಢವಿಶ್ವಾಸ ಹೊಂದಲೇ ಬೇಕಾಗಿದೆ.

ಈ ನಿಟ್ಟಿನಲ್ಲಿ ಪರಲೋಕದ ಕುರಿತು ವಸ್ತುನಿಷ್ಠವಾಗಿ ಮನನ ಮಾಡಲು ಈ ಗ್ರಂಥವು ಸಹಾಯಕವಾಗಿದೆ. ಪರಲೋಕದ ಕುರಿತು ಇಷ್ಟೊಂದು ನಿಖರ ಆಧಾರ ಪ್ರಮಾಣಗಳನ್ನು ಹೊಂದಿರುವ ಗ್ರಂಥವೊಂದನ್ನು ಕನ್ನಡ ವಾಚಕರ ಮುಂದಿಡಲು ಅನುಗ್ರಹಿಸಿದ ಅಲ್ಲಾಹನಿಗೆ ಸರ್ವಸ್ತುತಿ.

ಶಾಂತಿ ಪ್ರಕಾಶನ

ಎರಡು ಮಾತು

ಪರಲೋಕದ ಕುರಿತು ಕುರ್‌ಆನಿನ ವಿವಿದೆಡೆಗಳಲ್ಲಿ ವಿವರಿಸಲಾಗಿರುವ ವಿಷಯಗಳನ್ನು ಕ್ರಮ ಪ್ರಕಾರ ಈ ಗ್ರಂಥದಲ್ಲಿ ಕ್ರೋಡೀಕರಿಸಲಾಗಿದೆ. ಅನುಕ್ರಮವು ಕೆಲವೆಡೆಗಳಲ್ಲಿ ಕೇವಲ ಅಭಿಪ್ರಾಯವಾಗಿದೆ. ಉದಾ: ಅಲ್ಲಾಹನು ಮಹ್‌ಶರದಲ್ಲಿ ಅನೇಕ ಪ್ರಶ್ನೆಗಳನ್ನು ಕೇಳುವನೆಂದು ಕುರ್‌ಆನಿನಲ್ಲಿ ಹೇಳಿದೆ. ಆದರೆ, ಮೊದಲು ಯಾವುದು ಅನಂತರ ಯಾವುದು ಎಂಬುದನ್ನು ಕ್ರಮಪ್ರಕಾರ ಕುರ್‌ಆನ್ ವಿವರಿಸಿಲ್ಲ.

ಪರಲೋಕದ ವಸ್ತುಸ್ಥಿತಿ ಮತ್ತು ಸ್ವರೂಪ ನಮಗೆ ತಿಳಿದಿಲ್ಲ. ಅದನ್ನು ತಿಳಿಯಲು ಸಾಧ್ಯವೂ ಇಲ್ಲ. ಇಲ್ಲಿಯೇ ಇರುವ ಮತ್ತು ನಾವು ನಿತ್ಯ ಅನುಭವಿಸುವ ಹಲವು ಅಂಶಗಳ ವಾಸ್ತವಿಕತೆಯೂ ನಮಗೆ ತಿಳಿದಿಲ್ಲವಷ್ಟೆ. ಉದಾ: ನಮ್ಮ ಆತ್ಮ. ನಾವು ತಿಳಿದಿದೆಯೆಂದು ಭಾವಿಸುವ ಹಲವು ವಿಷಯಗಳ ಬಗ್ಗೆ ಗಾಢವಾಗಿ ಆಲೋಚಿಸಿದಾಗ ನಮ್ಮ ಜ್ಞಾನದ ಪರಿಮಿತಿ ವ್ಯಕ್ತವಾಗುತ್ತದೆ. ಹೀಗಿರುತ್ತಾ, ಅಗೋಚರವಾಗಿರುವ ಪರಲೋಕವು ನಮ್ಮ ತಿಳುವಳಿಕೆಗೆ ಮೀರಿದ್ದರೆ ಅಚ್ಚರಿಯಿಲ್ಲ.

ಒಂದು ವಿಷಯವನ್ನು ಅಮೂರ್ತವಾಗಿ ಹೇಳಿ ಮನಗಾಣಿಸಲು ಸಾಧ್ಯವಿಲ್ಲವಷ್ಟೆ. ನಮಗೆ ಪರಿಚಿತ, ಸುಗ್ರಾಹ್ಯ ಶೈಲಿ ಮತ್ತು ರೂಪದಲ್ಲಿ ಹೇಳಿದರೆ ಮಾತ್ರ ಅದು ಅರ್ಥವಾದೀತು. ಸರ್ವಾಧಿಪತಿ ಮತ್ತು ಸರ್ವಶಕ್ತನಾದ ಅಧಿಪತಿಯೆಂದು ಅಲ್ಲಾಹನ ಬಗ್ಗೆ ಹೇಳಿದಾಗ ನಮಗೆ ಅದು ಅರ್ಥವಾಗುತ್ತದೆ. ಕಿಯಾಮತ್‌ನಂದು ಅಲ್ಲಾಹನು ಭೂಮಿ-ಆಕಾಶಗಳನ್ನು ಕೈಯಲ್ಲಿ ಹಿಡಿದು ಚೆಂಡಿನಂತೆ ಅತ್ತಿತ್ತ ಉರುಳಾಡಿಸುವನೆಂದು ಹೇಳಿದರೂ ನಮಗೆ ಅರ್ಥವಾದೀತು. ಅಲ್ಲಾಹನು ಸರ್ವವನ್ನೂ ನೋಡುತ್ತಾನೆ, ಆಲಿಸುತ್ತಾನೆ, ತಿಳಿಯುತ್ತಾನೆಂಬುದನ್ನು ನಾವು ಗ್ರಹಿಸಬಹುದಾದರೆ ಮಾನವರು ಮತ್ತು ಜಿನ್ನ್‌ಗಳೆಲ್ಲರೂ ಹಾಜರುಪಡಿಸುವ ಆ ಮಹಾಸಭೆಯಲ್ಲಿ (ಮಹ್‌ಶರ) ಸಕಲ ಸೃಷ್ಟಿಗಳ ವಿಚಾರಣೆ ನಡೆಸಿ ತೀರ್ಪು ನೀಡಲಿಕ್ಕಾಗಿ ಅಲ್ಲಾಹನು ಇಳಿದು ಬಂದು ಸಿಂಹಾಸನದಲ್ಲಿ ಆಸೀನನಾಗುವನೆಂದು ಹೇಳುವುದನ್ನೂ ನಾವು ಊಹಿಸಬಹುದು. ಅಲ್ಲಾಹನು ಹೇಗೆ

ನೋಡುತ್ತಾನೆ, ಹೇಗೆ ಆಲಿಸುತ್ತಾನೆ, ಹೇಗೆ ತಿಳಿಯುತ್ತಾನೆ, ಇವುಗಳ ವಾಸ್ತವಿಕತೆಯನ್ನು ನಾವು ಅರಿಯದಿರುವಂತೆಯೇ ಆತ ಹೇಗೆ ಇಳಿಯುತ್ತಾನೆ, ಹೇಗೆ ಆಸೀನನಾಗುತ್ತಾನೆ ಎಂಬುದರ ವಾಸ್ತವಿಕತೆಯೂ ನಮಗೆ ತಿಳಿದಿಲ್ಲ. ಮೊದಲಿನ ಇಂಗಿತವೇನೆಂದು ತಿಳಿದರೆ ಎರಡನೆಯ ಇಂಗಿತವೂ ಸ್ವಯಂ ಅರ್ಥವಾಗುವುದು. ಹಾಗಿದ್ದರೆ ಇಂತಹ ವಿಷಯಗಳ ಕುರಿತು ಅಧಿಕೃತವಾಗಿ ಹೇಳುವ ಅರ್ಹತೆಯುಳ್ಳ ಅಲ್ಲಾಹ್ ಮತ್ತು ಪ್ರವಾದಿಯವರು(ಸ) ಏನು ಹೇಳಿದ್ದಾರೆ ಎಂಬುದನ್ನಷ್ಟೇ ನಾವು ಪರಿಶೀಲಿಸಬೇಕಾಗಿದೆ. ಹೇಳಿದ್ದೆಂದು ಸಾಬೀತಾದುದೆಲ್ಲವನ್ನೂ ಅಂಗೀಕರಿಸಲೇ ಬೇಕು. ಅವುಗಳ ಕೆಲವಂಶವನ್ನು ಅಂಗೀಕರಿಸಿ ಕೆಲವಂಶವನ್ನು ತಿರಸ್ಕರಿಸುವ ವಿಂಗಡನೆಗೆ ಯಾವ ಸಮರ್ಥನೆಯೂ ಇಲ್ಲ.

ವಿಜ್ಞಾನ ಯುಗದಲ್ಲಿ ಎಲ್ಲವೂ ವೈಜ್ಞಾನಿಕವಾಗಿರಬೇಕೆಂಬ ಅಭಿಲಾಷೆ ಸಹಜ. ಆದರೆ ವಿಷಯವು ವಿಜ್ಞಾನದ ಮಿತಿಯನ್ನು ಮೀರಿದ್ದರೆ?

ಪರಲೋಕದ ವಿಚಾರ ಮತ್ತು ಅಗತ್ಯವನ್ನು ಅನಿವಾರ್ಯಗೊಳಿಸುವ ಅನೇಕ ಸಾಕ್ಷ್ಯ ಮತ್ತು ಸಮರ್ಥನೆಗಳು ಕುರ್‌ಆನಿನಲ್ಲಿವೆ. ಅಂತಹ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಸೂಚಿಸುತ್ತೇನೆ:

1. ಮಾನವನನ್ನು ವ್ಯರ್ಥವಾಗಿ ಸೃಷ್ಟಿಸಲಾಗಿಲ್ಲವೆಂಬ ಘೋಷಣೆಯು ಅವುಗಳಲ್ಲೊಂದು. ಇಲ್ಲಿ ಕೋಟಿಗಟ್ಟಲೆ ಜನರನ್ನು ನಾವು ನೋಡುತ್ತಿದ್ದೇವೆ. ಅವರಲ್ಲಿ ಸಜ್ಜನರು ಮತ್ತು ದುರ್ಜನರಿದ್ದಾರೆ. ಎಷ್ಟೋ ಮಂದಿ ಆಗಿ ಹೋಗಿದ್ದಾರೆ. ಅವರಲ್ಲಿಯೂ ಆ ಎರಡು ವಿಭಾಗಗಳಿದ್ದುವು. ಇನ್ನೂ ಅದೆಷ್ಟೋ ಮಂದಿ ಬರಬಹುದು. ಸಹಜವಾಗಿ ಅವರಲ್ಲಿ ಇಂತಹ ಎರಡು ವಿಭಾಗಗಳುಂಟಾಗಬಹುದು. ಒಳಿತು ಕೆಡುಕುಗಳ ಮಾನದಂಡ ಏನೇ ಆಗಿದ್ದರೂ ಇದು ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟ ಒಂದು ವಾಸ್ತವಿಕತೆಯಾಗಿದೆ. ಸಜ್ಜನರಲ್ಲಿ ಹಲವರು ಇಲ್ಲಿ ಸಂಕಷ್ಟಮಯ ಜೀವನ ಸಾಗಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದೇ ವೇಳೆ ಅನೇಕ ದುರ್ಜನರು ಸುಖಮಯ ಜೀವನ ಸಾಗಿಸುತ್ತಿದ್ದಾರೆ. ಹಾಗಿದ್ದರೆ, ಕರ್ಮಗಳ ಸೂಕ್ತ ಪ್ರತಿಫಲ ಅನುಭವಿಸುವ ಅವಕಾಶ ದೊರೆಯದೆ ಕೊನೆಗೊಳ್ಳುವ ಐಹಿಕ ಜೀವನದಲ್ಲಿಯೇ ಈ ಮಾನವ ಜೀವನ ಅಂತ್ಯಗೊಳ್ಳುವುದೆಂದಾದರೆ ಅದು ಎಷ್ಟೊಂದು ನಿರರ್ಥಕ!

"ನಾವು ನಿಮ್ಮನ್ನು ನಿರರ್ಥಕವಾಗಿ ಸೃಷ್ಟಿಸಿದ್ದೇವೆಂದೂ ನಿಮಗೆ ನಮ್ಮ ಕಡೆಗೆ ಮರಳಲಿಕ್ಕೇ ಇಲ್ಲವೆಂದೂ ನೀವು ತಿಳಿದುಕೊಂಡಿದ್ದೀರಾ?" ಎಂದು ಹೇಳಲಾಗುವುದು.

(ಅಲ್ ಮೂಮಿನೂನ್: 115)

2. ಅಲ್ಲಾಹ್ ಸಂಪೂರ್ಣ ನ್ಯಾಯಪಾಲಕನೆಂಬ ಘೋಷಣೆ ಇನ್ನೊಂದು. ಅಲ್ಲಾಹ್ ಮಾನವರನ್ನು ಸೃಷ್ಟಿಸಿದ. ಶಿಕ್ಷೆ-ಪುರಸ್ಕಾರಗಳ ಎಚ್ಚರಿಕೆಯೊಂದಿಗೆ ಅವರಿಗೆ ಕೆಲವು ಆದೇಶಗಳನ್ನು ನೀಡಿದ. ಕೆಲವರು ಅಂಗೀಕರಿಸಿದರು, ಇನ್ನು ಕೆಲವರು ಅದನ್ನು ಧಿಕ್ಕರಿಸಿದರು. ಹೀಗಿರುತ್ತಾ, ಕೊನೆಯಲ್ಲಿ ಎರಡು ವಿಭಾಗಗಳನ್ನೂ ಒಂದೇ ಸ್ಥಿತಿಗೆ ದೂಡುವುದಾದರೆ ಅದಕ್ಕಿಂತ ದೊಡ್ಡ ಅನ್ಯಾಯ ಬೇರೇನಿದೆ!

"ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗುವವರನ್ನೂ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವವರನ್ನೂ ನಾವು ಸಮಾನವಾಗಿಸಬೇಕೇ? ಧರ್ಮನಿಷ್ಠರನ್ನು ನಾವು ಧರ್ಮ ಭ್ರಷ್ಟರಂತೆ ಮಾಡಬೇಕೇ?" (ಸ್ವಾದ್: 28)

"ಅಲ್ಲಾಹನು ಎಲ್ಲ ಅಧಿಪತಿಗಳಿಗಿಂತ ಮಹಾ ಅಧಿಪತಿಯಲ್ಲವೇ?" (ಅತ್ತೀನ್: 8)

ಹೀಗೆ ಕುರ್‌ಆನಿನಲ್ಲಿ ಅನೇಕ ಸಾಕ್ಷ್ಯಗಳಿವೆ. ಅವುಗಳಲ್ಲಿ ಹಲವು ಮಾನವೀಯ ಪ್ರಭಾವ, ಪ್ರಾಪಂಚಿಕ ರಹಸ್ಯ, ಸೃಷ್ಟಿ ವೈಶಿಷ್ಟ್ಯಗಳನ್ನು ಬೆಟ್ಟು ಮಾಡುತ್ತಿವೆ. ಅವು ಮಾನವ ನನ್ನು ಗಾಢ ಚಿಂತನೆಗೆ ತೊಡಗಿಸಿ ಭಯ-ಭಕ್ತಿ ಮತ್ತು ವಿಶ್ವಾಸ ಸುದೃಢಗೊಳಿಸಲು ಪರ್ಯಾಪ್ತವಾಗಿವೆ. ವಕ್ರತೆ ಅಥವಾ ಪೂರ್ವಾಗ್ರಹವಿಲ್ಲದೆ ಗಂಭೀರವಾಗಿ ನೋಡುವವರಿಗೆ ಮಾತ್ರ ಅದು ಉಪಯುಕ್ತವಾಗುವುದೆಂಬುದು ಇನ್ನೊಂದು ವಾಸ್ತವಿಕತೆಯಾಗಿದೆ. ನಿರಾಕರಿಸಲೇ ಬೇಕೆಂಬ ಹಠವಿರುವವರಿಗೂ ಅವಕಾಶವಿರುವ ರೀತಿಯಲ್ಲಿ ಅವುಗಳನ್ನು ಸಂಯೋಜಿಸಲಾಗಿದೆ. ಆದ್ದರಿಂದಲೇ ಜೀವನವನ್ನು ಪರೀಕ್ಷಾ ಹಂತವೆನ್ನಲಾಗಿದೆ.

ಗ್ರೀಕ್ ತತ್ವಶಾಸ್ತ್ರದ ಆಕ್ರಮಣದ ಪ್ರಭಾವದಿಂದ ಕುರ್‌ಆನಿನ ಪೂರ್ವೋಕ್ತ ಶೈಲಿಯ ಸಮರ್ಥನೆ ಮತ್ತು ಸಾಕ್ಷ್ಯಗಳು ಯೋಗ್ಯ ಸಾಕ್ಷ್ಯಗಳಲ್ಲವೆಂದು ಕೆಲವು ಮಹಾನುಭಾವರೇ ಹೇಳಿದ ದುಃಖ ಚರಿತ್ರೆ ಹಿಂದೆ ಗತಿಸಿದೆ. ಅವರು ಅಂಗೀಕರಿಸಿದ ವೈಜ್ಞಾನಿಕ ಸಾಕ್ಷ್ಯವಾದರೋ ಮತ್ತಷ್ಟು ಅಭಿಪ್ರಾಯ ಗೊಂದಲ, ವಾಗ್ವಾದ ಮತ್ತು ಗುಂಪುಗಾರಿಕೆಗಳಿಗೆ ಪ್ರೇರಕವಾಯಿತು. ಆದರೆ ಈ ಗಂಡಾಂತರ ಬಹುವಂಶ ಶಮನ ವಾಯಿತೆನ್ನುವಾಗ, ಇಲ್ಲಿ ಮತ್ತೊಂದು ಘಟನೆ ಸಂಭವಿಸಿತು. ಕೇವಲ ಲೌಕಿಕತೆಯ ಅತಿ ಪ್ರಸಾರ, ಹಳೆಯದರ ಬಗೆಗಿನ ಕುರುಡು ತಾತ್ಸಾರ, ಆಧುನಿಕವಾಗಿರುವ ಎಲ್ಲವನ್ನೂ ಅಪ್ಪಿಕೊಳ್ಳುವ ಲಗಾಮಿಲ್ಲದ ಭ್ರಮೆ, ತುಚ್ಛ ಸಾಧನೆಗಳಿಂದ ಮೈಮರೆತ ವಿಜ್ಞಾನದ ಅಹಂಕಾರಮಯ ಸರ್ವಜ್ಞ ಸೋಗು ಮುಂತಾದ ಕೆಲವು ಪ್ರಕ್ರಿಯೆಗಳು ಮಧ್ಯಕಾಲದಲ್ಲಿ ಸಂಭವಿಸಿದುವು. ತನ್ಮಧ್ಯೆ ಕೆಲವು ವಿಶೇಷ ಸಮಸ್ಯೆಗಳ ಕುರಿತು ಕೃತಕವಾಗಿ ಸೃಷ್ಟಿಸಿದ ವಾದ-ಪ್ರತಿವಾದ-ಗದ್ದಲಗಳು ಸಮಸ್ಯೆಗಳನ್ನು ಅವುಗಳ ವಾಸ್ತವಿಕ ಸ್ಥಾನದಿಂದ ಪಲ್ಲಟ

ಗೊಳಿಸಿದುವು. ಪ್ರಧಾನಗಳು ಅಪ್ರಧಾನವಾದುವು, ಅಪ್ರಧಾನಗಳು ಪ್ರಧಾನಗಳಾದುವು. ತತ್ಪರಿಣಾಮವಾಗಿ ಧರ್ಮದ ಮೂಲಾಧಾರಗಳಲ್ಲಿ ಅತಿಪ್ರಧಾನವಾಗಿರುವ ಪರಲೋಕ ವಿಶ್ವಾಸವನ್ನು ಅದರ ವಾಹಕರೇ ಅರಿತೋ ಅರಿಯದೆಯೋ ನಿರ್ಲಕ್ಷಿಸುವ ಸ್ಥಿತಿ ಬಂತು. ಅವರ ಸ್ವಂತ ತರಗತಿಗಳಲ್ಲಿಯೂ ಭಾಷಣ, ಉಪದೇಶ, ಉದ್ಬೋಧೆಗಳಲ್ಲಿಯೂ ಅದಕ್ಕೆ ಸ್ಥಾನವಿಲ್ಲದಂತಾಯಿತು. ಪರಲೋಕ ವಿಷಯದ ಕುರಿತು ಹೇಳಲಿಕ್ಕೆ ಏನಿದೆ, ಎಲ್ಲರೂ ಅದನ್ನು ಒಪ್ಪುತ್ತಾರಲ್ಲವೇ ಎಂಬ ಸಮರ್ಥನೆಯನ್ನೂ ಈ ನಿರ್ಲಕ್ಷ್ಯಕ್ಕೆ ನೀಡಲಾಯಿತು. ಅದರ ಅನಿವಾರ್ಯ ಫಲವಾಗಿ ಪರಲೋಕ ವಿಶ್ವಾಸಿಗಳೆನ್ನಲಾಗುವ ನಮ್ಮ ಜೀವನದ ಎಲ್ಲ ರಂಗಗಳಲ್ಲಿಯೂ ಅಪಾಯಕಾರಿ ಅನೈತಿಕತೆ ಮತ್ತು ಅನಾಚಾರ ವ್ಯಾಪಿಸಿತು.

ಕಾಲವು ಬಹಳ ವೇಗದಿಂದ ಬದಲಾಗುತ್ತಿದೆ. ವಾದ-ಪ್ರತಿವಾದ-ಗದ್ದಲಗಳಲ್ಲಿ ಜನರಿಗೆ ವಿರಕ್ತಿ ಮೂಡಲಾರಂಭಿಸಿದೆ. ಗ್ರೀಕ್ ತತ್ವಶಾಸ್ತ್ರವು ಬಹುವಂಶ ಕಾಲಹರಣ ಗೊಂಡಿದೆ. ಇಂದು ಅದರ ಅಲಗು ಮತ್ತು ಹಿಡಿಯನ್ನು ತಿದ್ದಿ ಬರೆಯಲಾಗಿದೆ. ಕೇವಲ ಲೌಕಿಕತೆಯ ಪತನವಾಗತೊಡಗಿದೆ. ನವೀನತೆಯ ಉತ್ತುಂಗ ಸೌಧದಲ್ಲಿ ಬಾಳಿದವರು ಅದರಿಂದ ಜಿಗುಪ್ಸೆಗೊಂಡು ಹಳತನ್ನು ಹುಡುಕುತ್ತಾ ಲೋಕ ಸಂಚರಿಸುತ್ತಿದ್ದಾರೆ. ವಿಜ್ಞಾನ ಪ್ರಗತಿ ಸಾಧಿಸಿದಂತೆಯೇ ವಿಜ್ಞಾನಿಯು ವಿನಮ್ರನಾಗುತ್ತಿದ್ದಾನೆ. ವಿಜ್ಞಾನದ ಈ ವರೆಗಿನ ಸಾಧನೆಯು ಇನ್ನು ಸಾಧಿಸಲಿರುವುದರ ಶತಕೋಟಿಯ ಒಂದಂಶವನ್ನೂ ತಲಪಿಲ್ಲವೆಂದು ಆತ ಮನಗಂಡಿದ್ದಾನೆ. ಪ್ರಪಂಚ ರಹಸ್ಯದ ಪ್ರತಿಯೊಂದು ಕವಾಟ ತೆರೆಯಲ್ಪಡುವಾಗ, ತೆರೆಯಲ್ಪಡದ ಮತ್ತಷ್ಟು ಕವಾಟಗಳು ಅವನ ಮುಂದೆ ಪ್ರತ್ಯಕ್ಷಗೊಂಡು ಆಶ್ಚರ್ಯಚಕಿತನಾದ ಆತನು ಸ್ವಯಂ ಅರಿತೋ ಅರಿಯದೆಯೋ ನಮ್ಮ ಪ್ರಭೂ! ನೀನು ಇವುಗಳನ್ನು ನಿರರ್ಥಕವಾಗಿ ಸೃಷ್ಟಿಸಿಲ್ಲ, ನೀನು ಮಹಾ ಪರಿಶುದ್ಧನು ಎಂದು ಸಾರಲು ನಿರ್ಬಂಧಿತನಾಗುತ್ತಾನೆ.

ಹೀಗೆ ಪ್ರಪಂಚದ ಸೃಷ್ಟಿಕರ್ತ, ಪ್ರಭು, ಸಂರಕ್ಷಕನಾದ ಅಲ್ಲಾಹನು ಮಾನವರ ಮಾರ್ಗದರ್ಶನಕ್ಕಾಗಿ ಕರುಣಿಸಿದ ಪವಿತ್ರ ಕುರ್‌ಆನನ್ನು ಅದರ ನೈಜ ರೂಪದಲ್ಲಿ ಪ್ರಬುದ್ಧ ಜಗತ್ತಿನ ಮುಂದೆ ಸಮರ್ಪಿಸುವ ಸುವರ್ಣಾವಕಾಶ ಬಂದೊದಗಿದೆ. ಅದನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವ ಅನುಗ್ರಹವನ್ನು ಅಲ್ಲಾಹನು ನಮಗೆ ದಯಪಾಲಿಸಲಿ. (ಆಮೀನ್)

ಚೆನ್ನಮಂಗಲೂರು **ಕೆ.ಸಿ. ಅಬ್ದುಲ್ಲಾ**

01-04-1976

ಅನುಕ್ರಮಣಿಕೆ

ಓ ಮಾನವಾ! ನೀನು ಮೆಲ್ಲಮೆಲ್ಲನೆ ನಿನ್ನ ಪ್ರಭುವಿನ ಕಡೆಗೆ ಸಾಗುತ್ತಿರುವೆ ಮತ್ತು ಅವನನ್ನು ಭೇಟಿಯಾಗಲಿರುವೆ. ಅನಂತರ ಯಾರ ಕರ್ಮಪತ್ರವು ಅವನ ಬಲಗೈಯಲ್ಲಿ ಕೊಡಲ್ಪಡುವುದೋ ಅವನಿಂದ ಲಘುವಾಗಿ ಲೆಕ್ಕಾಚಾರ ಪಡೆಯಲಾಗುವುದು ಮತ್ತು ಅವನು ತನ್ನವರ ಕಡೆಗೆ ಪರಮಾನಂದದೊಂದಿಗೆ ಮರಳುವನು. ಇನ್ನು ಯಾರ ಕರ್ಮಪತ್ರವನ್ನು ಅವನ ಬೆನ್ನ ಹಿಂದಿನಿಂದ ಕೊಡಲಾಗುವುದೋ ಅವನು ಮೃತ್ಯುವನ್ನು ಕೂಗಿ ಕರೆಯುವನು ಮತ್ತು ಧಗಧಗಿಸುವ ನರಕಾಗ್ನಿಯಲ್ಲಿ ಬೀಳುವನು. (ಪವಿತ್ರ ಕುರ್‌ಆನ್: 84: 6-12)

ಜನರೇ, ನಿಮ್ಮ ಪ್ರಭುವಿನ ಕ್ರೋಧದಿಂದ ತಪ್ಪಿಸಿಕೊಳ್ಳಿರಿ ಮತ್ತು ಯಾವ ತಂದೆಯೂ ತನ್ನ ಮಗನ ಪರವಾಗಿ ಪರಿಹಾರ ಕೊಡದ ಮತ್ತು ಯಾವ ಮಗನೂ ತನ್ನ ತಂದೆಯ ಪರವಾಗಿ ಯಾವುದೇ ಪರಿಹಾರ ಕೊಡದ ದಿನವನ್ನು ಭಯಪಡಿರಿ. ನಿಶ್ಚಯವಾಗಿಯೂ ಅಲ್ಲಾಹನ ವಾಗ್ದಾನವು ಸತ್ಯವಾಗಿದೆ. ಆದುದರಿಂದ ಈ ಲೌಕಿಕ ಜೀವನವು ನಿಮ್ಮನ್ನು ಅಲ್ಲಾಹನ ವಿಷಯದಲ್ಲಿ ವಂಚಿಸದಿರಲಿ. (ಪವಿತ್ರ ಕುರ್‌ಆನ್: 31: 33)

ಅಧ್ಯಾಯ 01

ಜೀವನದ ಹಂತಗಳು

ಮಾನವ ಜೀವನವನ್ನು ಒಟ್ಟು ಮೂರು ಹಂತಗಳಾಗಿ ವಿಂಗಡಿಸಬಹುದು. ಐಹಿಕ, ಬರ್ಝುಖ್ (ಮಧ್ಯ ಕಾಲಾವಧಿ) ಮತ್ತು ಕಿಯಾಮತ್ (ಲೋಕಾಂತ್ಯ). ಜನನದಿಂದ ಮರಣದ ವರೆಗಿನ ಈ ಲೋಕದ ಜೀವನವನ್ನು ಐಹಿಕವೆನ್ನಲಾಗುತ್ತದೆ. ದೇಹ ಪ್ರಧಾನವಾಗಿರುವುದೇ ಇದರ ವೈಶಿಷ್ಟ್ಯ. ಅರ್ಥಾತ್, ಇಲ್ಲಿ ದೇಹವೇ ಬಹಿರಂಗವಾಗಿ ಗೋಚರಿಸುತ್ತದೆ. ಆತ್ಮವು ಅದೃಶ್ಯವಾಗಿರುವುದು. ಮಾನವನು ಇಲ್ಲಿ ಸುಖ-ದುಃಖಗಳನ್ನು ದೇಹದ ಮೂಲಕ ಅನುಭವಿಸುತ್ತಾನೆ. ಇದು ಮಾನವನ ಪರೀಕ್ಷಾ ಹಂತವೂ ಆಗಿದೆ.

ಮರಣದ ಬಳಿಕ ಅಥವಾ ಮಾನವನ ದೇಹ ಮತ್ತು ಆತ್ಮವು ಪರಸ್ಪರ ಬೇರ್ಪಟ್ಟ ಬಳಿಕ ಪುನಃ ಎರಡನೇ ಬಾರಿ ಮಾನವನನ್ನು ಜೀವಂತಗೊಳಿಸುವ ವರೆಗಿನ ಹಂತವೇ ಬರ್ಝುಖ್. ಇದು ಐಹಿಕ ಜೀವನ ಮತ್ತು ಸಾಕ್ಷಾತ್ ಪರಲೋಕ ಜೀವನದ ಮಧ್ಯಂತರವಾಗಿದೆ. ಆತ್ಮ ಪ್ರಧಾನವಾಗಿರುವುದೇ ಇದರ ವೈಶಿಷ್ಟ್ಯ. ಅರ್ಥಾತ್, ಮಾನವ ಜೀವನದ ಹಿಂದಿನ ವ್ಯಕ್ತಿತ್ವವು ಮಾಯವಾಗಿ ದೇಹವು ಅಳಿದು ಹೋಗುತ್ತದೆ. ಅದೇ ವೇಳೆ ಆತ್ಮವು ಅದರ ಪೂರ್ಣ ವ್ಯಕ್ತಿತ್ವದೊಂದಿಗೆ ಯಾವುದೇ ನ್ಯೂನತೆ ಇಲ್ಲದೆ ಉಳಿಯುತ್ತದೆ. ಇಲ್ಲಿ ದೇಹವಿಲ್ಲದೆ, ಆತ್ಮವೇ ಸ್ವತಃ ಸುಖ-ದುಃಖಗಳನ್ನು ಅನುಭವಿಸುತ್ತದೆ. ಆದ್ದರಿಂದಲೇ ಈ ಹಂತವನ್ನು 'ಆತ್ಮಪ್ರಧಾನ'ವೆಂದು ವಿಶ್ಲೇಷಿಸಲಾಗಿದೆ.

ಮಾನವನನ್ನು ಪುನಃ ಜೀವಂತಗೊಳಿಸಿದ ಬಳಿಕ ಅನಂತವಾಗಿ ಮುಂದುವರಿಯುವ ಹಂತವನ್ನು ಕಿಯಾಮತ್ (ಲೋಕಾಂತ್ಯ) ಎನ್ನಲಾಗುತ್ತದೆ. ಈ ಹಂತದಲ್ಲಿ ಆತ್ಮ ಮತ್ತು ದೇಹವು ಸಮಾನ ಪ್ರಾಧಾನ್ಯತೆಯಿರುವುದು. ಇಲ್ಲಿ ಅವೆರಡೂ ಗೋಚರವಾಗುತ್ತವೆ. ಸುಖ-ದುಃಖಗಳನ್ನು ಅವು ನೇರವಾಗಿ ಅನುಭವಿಸುತ್ತವೆ. 'ಆಖಿರತ್' ಅಥವಾ ಪರಲೋಕದರಲ್ಲಿ ಎರಡನೆಯ ಮತ್ತು ಮೂರನೆಯ ಹಂತಗಳು ಸೇರಿವೆ. 'ಆಖಿರತ್'ನ ಮಟ್ಟಿಗೆ ಎರಡನೆಯ ಹಂತವು ಒಂದನೆಯ ರಂಗ ಮತ್ತು ಮೂರನೆಯ ಹಂತವು

ಎರಡನೆಯ ರಂಗವಾಗಿದೆ. ಪ್ರಥಮ ಹಂತವು ಆಖಿರತ್‌ನಲ್ಲಿ ಸೇರುವುದಿಲ್ಲ, ಅದು ಇಲ್ಲಿ ಚರ್ಚಾ ವಿಷಯವೂ ಅಲ್ಲ.

ನಮ್ಮ ಮಾನಸಿಕ ಧೋರಣೆ

'ಆಖಿರತ್' ಎಂಬುದು ಬಹಳ ಗಂಭೀರ ವಿಷಯ. ಅದು ಮಾನವನ ಶಾಶ್ವತವಾದ ಸಾಕ್ಷಾತ್ ಜೀವನವಾಗಿದೆ ಎಂಬುದು ಅದರ ಪ್ರಾಮುಖ್ಯತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಆದ್ದರಿಂದ ಆ ವಿಷಯವನ್ನು ಕಲಿಯುವಾಗ ಅದರ ಬಗ್ಗೆ ನಮ್ಮ ಮಾನಸಿಕ ಧೋರಣೆ ಹೇಗಿರಬೇಕೆಂಬ ಕುರಿತು ಕೆಲವು ಪ್ರಧಾನ ವಿಚಾರಗಳನ್ನು ಆರಂಭದಲ್ಲಿಯೇ ತಿಳಿದಿರಬೇಕಾದ ಅಗತ್ಯವಿದೆ.

ಮಾನವನನ್ನು ಅಲ್ಲಾಹನು ಆವೆ ಮಣ್ಣಿನಿಂದ ಸೃಷ್ಟಿಸಿದ್ದಾನೆ. "ಅವನು ಮಾನವ ಸೃಷ್ಟಿಯ ಆರಂಭವನ್ನು ಮಣ್ಣಿನ ಗಾರೆಯಿಂದ ಮಾಡಿದನು." **(ಅಸ್ಸಜ್‌ದಃ: 7)**

ಪ್ರಥಮವಾಗಿ ಮಣ್ಣಿನಿಂದ ಮಾನವ ರೂಪವನ್ನು ನಿರ್ಮಿಸಿದನು. ಅನಂತರ ಅಲ್ಲಾಹನು ತನ್ನ ಆತ್ಮದ ಒಂದಂಶವನ್ನು ಅದರಲ್ಲಿ ಸೇರಿಸಿದನು, "ಮತ್ತು ಅದರೊಳಗೆ ತನ್ನ ಆತ್ಮವನ್ನು ಊದಿದನು." **(ಅಸ್ಸಜ್‌ದಃ: 9)**

ಈ ರೀತಿ ಮೊದಲ ಮಾನವ ಜನ್ಮತಾಳಿದನು. ಅವನಿಗೆ ಒಂದು ಸಂಗಾತಿಯನ್ನು ಅಲ್ಲಾಹನು ಸೃಷ್ಟಿಸಿದನು, "ಅದೇ ಜೀವದಿಂದ ಅದರ ಜೋಡಿಯನ್ನು ಉಂಟು ಮಾಡಿದನು." **(ಅನ್ನಿಸಾ: 1)**

ಸ್ವಲ್ಪ ಕಾಲ ಸ್ವರ್ಗದಲ್ಲಿ ತರಬೇತಿ ನೀಡಿದ ಬಳಿಕ ಅವರನ್ನು ಭೂಮಿಗೆ ಕಳುಹಿಸಿದನು. ಅಲ್ಲಿ ವಂಶಪರಂಪರೆಯನ್ನು ಮುಂದುವರಿಸಲಿಕ್ಕಾಗಿ ಒಂದು ಸಂಪ್ರದಾಯವನ್ನು ಏರ್ಪಡಿಸಿದನು. ಅದುವೇ ಸ್ತ್ರೀ-ಪುರುಷರ ದೈಹಿಕ ಮಿಲನ.

"ತರುವಾಯ ಅವನ ಸಂತತಿಯನ್ನು ತುಚ್ಛವಾದ ನೀರಿನಂತಹ ದ್ರವ್ಯದಿಂದ ಮುಂದುವರಿಸಿದನು." **(ಅಸ್ಸಜ್‌ದಃ: 8)**

ಈ ಪ್ರಕ್ರಿಯೆಯಲ್ಲಿಯೂ ಒಂದು ನಿರ್ದಿಷ್ಟ ವೇಳೆಯಲ್ಲಿ, ಗರ್ಭಧಾರಣೆಯಾದ ಸುಮಾರು 120 ದಿನಗಳೊಳಗೆ, ದೇಹದಲ್ಲಿ ಆತ್ಮವನ್ನು ಸೇರಿಸುವ ಕ್ರಮವನ್ನೇ ಅಲ್ಲಾಹನು ಮಾಡಿಟ್ಟಿದ್ದಾನೆ. ಈ ರೀತಿ ಮಾನವರು ಭೂಮಿಯಲ್ಲಿ ಹುಟ್ಟಿ ಬೆಳೆದರು. ಸೃಷ್ಟಿಸಿದ್ದೇಕೆಂದು ಅಲ್ಲಾಹನು ಮಾನವನಿಗೆ ತಿಳಿಸಿದನು, "ನಾನು ಜಿನ್ನ್‌ಗಳನ್ನೂ ಮಾನವರನ್ನೂ ಸೃಷ್ಟಿಸಿರುವುದು ನನ್ನ ದಾಸ್ಯ ಮತ್ತು ಆರಾಧನೆಗಾಗಿಯೇ ಹೊರತು ಬೇರಾವುದೇ ಕಾರ್ಯಕ್ಕಾಗಿ ಅಲ್ಲ." **(ಅದ್ದಾರಿಯಾತ್: 56)**

ಈ ಆಧಾರದಲ್ಲಿ ಜಯಾಪಜಯ ಮಾರ್ಗಗಳನ್ನೂ ಆತನು ನಿರ್ಣಯಿಸಿ ಕೊಟ್ಟನು, "ನಾವು ಅವನಿಗೆ ಎರಡು ಸುಸ್ಪಷ್ಟ ಮಾರ್ಗಗಳನ್ನು ತೋರಿಸಿ ಕೊಡಲಿಲ್ಲವೇ?" (ಅಲ್ ಬಲದ್: 10)

ಒಂದೋ ಸನ್ಮಾರ್ಗದಲ್ಲಿ ನಡೆದು ಸೃಷ್ಟಿಕರ್ತನಿಗೆ ಕೃತಜ್ಞನಾಗಿ ಬಾಳಿ ವಿಜಯಿಯಾಗ ಬಹುದು ಅಥವಾ ದುರ್ಮಾರ್ಗದಲ್ಲಿ ನಡೆದು ದೇವನಿಗೆ ಕೃತಘ್ನನಾಗಿ ಪರಾಜಿತ ನಾಗಬಹುದು. "ನಾವು ಅವನಿಗೆ ಮಾರ್ಗದರ್ಶನ ಮಾಡಿದೆವು. ಅವನು ಕೃತಜ್ಞತೆ ಸಲ್ಲಿಸುವವನಾಗಲಿ ಅಥವಾ ಕೃತಘ್ನನಾಗಲಿ." (ಅದ್ದಹ್ರ್: 3)

ಜೀವನದ ಈ ಪರೀಕ್ಷಾವಧಿಯಲ್ಲಿ ಯಾರು ಉತ್ತಮವಾಗಿ ವರ್ತಿಸುತ್ತಾನೆಂದು ಅಲ್ಲಾಹನು ವೀಕ್ಷಿಸುತ್ತಿರುತ್ತಾನೆ, "ನಿಮ್ಮ ಪೈಕಿ ಯಾರು ಸತ್ಕರ್ಮವೆಸಗುವವನೆಂದು ನೋಡಲಿಕ್ಕಾಗಿ." (ಅಲ್ ಮುಲ್ಕ್: 2)

ಆದರೆ ಇಲ್ಲಿನ ಅವಸ್ಥೆ ಹೇಗಿದೆ? ಮಾನವನನ್ನು ಸನ್ಮಾರ್ಗದಿಂದ ತಪ್ಪಿಸಲು ಪಣ ತೊಟ್ಟ ಶೈತಾನನು ಅಲ್ಲಾಹನ ಆಜ್ಞೆಯನ್ನು ಅಹಂಕಾರದಿಂದ ಧಿಕ್ಕರಿಸಿದ, ಬಹುತೇಕ ಮಾನವರನ್ನು ದಾರಿ ತಪ್ಪಿಸುವೆನೆಂದು ಅಲ್ಲಾಹನಿಗೆ ಸವಾಲೊಡ್ಡಿದ. "ನಿನಗೆ ಸಾಧ್ಯವಿರುವವರನ್ನೆಲ್ಲಾ ನಿನ್ನ ಪ್ರಚಾರದಿಂದ ನಿನ್ನ ಕಡೆಗೆ ಸೇರಿಸಿಕೋ, ನಿನ್ನ ಕುದುರೆ, ಕಾಲಾಳು ಸೇನೆಗಳನ್ನೆಲ್ಲ ಅವರತ್ತ ತಿರುಗಿಸು, ಸಂಪತ್ತು ಸಂತಾನಗಳಲ್ಲಿ ಅವರ ಸಹಭಾಗಿಯಾಗು, ನಾನಾ ರೀತಿಯ ಆಶೆ ಆಮಿಷಗಳ ಮಾಯಾಜಾಲಗಳಲ್ಲಿ ಅವರನ್ನು ಸಿಲುಕಿಸಲು ಪ್ರಯತ್ನಿಸು, ನೀನು ಎಷ್ಟೇ ಶ್ರಮಿಸಿದರೂ ನನ್ನ ಪ್ರಾಮಾಣಿಕ ದಾಸರನ್ನು ಏನು ಮಾಡಲೂ ನಿನ್ನಿಂದ ಸಾಧ್ಯವಿಲ್ಲ" ಎಂಬ ಕಟು ಉತ್ತರವನ್ನು ಅಲ್ಲಾಹನಿಂದ ಆಲಿಸಿದ್ದ, ದೊರೆತ ಪ್ರತಿಯೊಂದು ಅವಕಾಶವನ್ನು ಬಳಸಿ ಮಾನವರನ್ನು ಮೋಸಗೊಳಿಸಲಿಕ್ಕಾಗಿ ಅವರ ನಾಲ್ದೆಸೆಗಳಲ್ಲಿ ಹೊಂಚು ಹಾಕುತ್ತಿರುವ 'ಇಬ್ಲೀಸ್' (ಶೈತಾನ) ಮತ್ತು ಅವನ ಸೇನೆ ಒಂದೆಡೆ; ವಿಶ್ವಾಸ, ಆಚಾರ, ಕಲೆ, ಸಂಸ್ಕೃತಿ, ನಾಗರಿಕತೆ, ರಾಜಕೀಯ, ಆಡಳಿತ ವ್ಯವಸ್ಥೆ ಮುಂತಾದ ಜೀವನದ ವಿವಿಧ ರಂಗಗಳಲ್ಲಿ ಇಬ್ಲೀಸ್‌ನನ್ನು ಅನುಸರಿಸಿದವರು ಇನ್ನೊಂದೆಡೆ; ಮಾನವರಲ್ಲಿಯೇ ಸುಪ್ತವಾಗಿರುವ ದೇಹೇಚ್ಛೆಗಳು ಮತ್ತು ದುರ್ಭಾವನೆಗಳು ಮತ್ತೊಂದೆಡೆ– ಇವೆಲ್ಲವುಗಳ ಮಧ್ಯದಿಂದ ಮಾನವನು ಈ ಪರೀಕ್ಷಾ ಹಂತವನ್ನು ಯಶಸ್ವಿಯಾಗಿ ದಾಟಬೇಕಾಗಿದೆ. ಪ್ರಬಲ 'ಆಂತರಿಕ ಪ್ರೇರಣೆ'ಯಿದ್ದರೆ ಮಾತ್ರ ಅದು ಸಾಧ್ಯವಾದೀತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ. ಆದರೆ ಪರಮ ಕರುಣಾಮಯನಾದ ಅಲ್ಲಾಹನು ಅದಕ್ಕೆ ಅಗತ್ಯವಿರುವ ವ್ಯವಸ್ಥೆ ಮಾಡಿದ್ದಾನೆ. ನಮ್ಮ ಭವಿಷ್ಯದ ಬಗ್ಗೆ ಉತ್ಕಟವಾದ ಭೀತಿ ಮತ್ತು

ಸುದೃಢ ಭರವಸೆ ಮೂಡುವ ರೀತಿಯಲ್ಲಿ ನಾಳೆ ನಾವೆಲ್ಲರೂ ನೋಡಲಿರುವ ಪರಲೋಕದ ಬಗ್ಗೆ ಆತನು ವಿವರಿಸಿದ್ದಾನೆ. ಎಲ್ಲ ಶೈತಾನರು ಒಟ್ಟಾಗಿ ಆಕ್ರಮಿಸಿದರೂ ಧೈರ್ಯ ಮತ್ತು ಮುಗುಳ್ನಗೆಯಿಂದ ಎದುರಿಸುವಂತಹ ವಿಶ್ವಾಸದಾರ್ಢ್ಯ ಮತ್ತು ಸ್ಫೂರ್ತಿಯನ್ನು ಅದು ನಮಗೆ ನೀಡುತ್ತದೆ. ಆದ್ದರಿಂದ, ಪರಲೋಕದ ಬಗ್ಗೆ ಕಲಿಯುವಾಗ ಮತ್ತು ಆಲೋಚಿ ಸುವಾಗ ನಮ್ಮಲ್ಲಿ ಭಯ ಮತ್ತು ಭರವಸೆಯ ಸಮ್ಮಿಶ್ರ ಭಾವನೆಗಳು ಮೂಡಬೇಕು. ನಮ್ಮ ಧೋರಣೆಯು ಆ ರೀತಿಯಲ್ಲಿರಬೇಕು. ಹಾಗಿದ್ದರೆ ಮಾತ್ರ ಅಲ್ಲಾಹನು ಮೆಚ್ಚಿದ ಮಾರ್ಗದಲ್ಲಿ ಸುದೃಢವಾಗಿದ್ದು, ಆ ಮಾರ್ಗದಲ್ಲಿ ಮುನ್ನಡೆದು ಆ ಮೂಲಕ ಈ ಪರೀಕ್ಷೆಯಲ್ಲಿ ವಿಜಯ ಸಾಧಿಸಲು ನಮಗೆ ಸಾಧ್ಯವಾದೀತು.

ಪ್ರವಾದಿಗಳ ರಾಯಭಾರ

ಜನರಲ್ಲಿ ಪ್ರಸ್ತುತ ಭಾವನೆಗಳನ್ನು ಮೂಡಿಸಲಿಕ್ಕಾಗಿ ಪ್ರವಾದಿಗಳು ಬಹಳಷ್ಟು ಪ್ರಯತ್ನಿಸಿದ್ದರು. ಅವರ ಸಂದೇಶವು ಈ ಬಿಂದುವಿನಿಂದಲೇ ಆರಂಭಗೊಂಡಿತ್ತು. ಉದಾಹರಣೆಗೆ: ಪ್ರವಾದಿ ಮುಹಮ್ಮದ್‌ರಿಗೆ(ಸ) ಅಲ್ಲಾಹನು ಹೀಗೆ ಆಜ್ಞಾಪಿಸಿದ್ದನು, "ಎದ್ದೇಳು, ಎಚ್ಚರಿಕೆ ನೀಡು." **(ಮುದ್ದಸ್ಸಿರ್: 2)** ಇನ್ನೊಂದೆಡೆ ಹೀಗೆ ಹೇಳಿದ್ದಾನೆ, "ಜನರಿಗೆ ಎಚ್ಚರಿಕೆ ನೀಡಲಿಕ್ಕೂ ಸತ್ಯವಿಶ್ವಾಸಿಗಳಿಗೆ ಅವರ ಪ್ರಭುವಿನ ಬಳಿ ನಿಜವಾದ ಗೌರವಾದರಗಳಿವೆಯೆಂಬ ಸುವಾರ್ತೆ ನೀಡಲಿಕ್ಕೂ." **(ಯೂನುಸ್: 2)**

"ನಾವು ನೂಹರನ್ನು ಅವರ ಜನಾಂಗದ ಕಡೆಗೆ ರವಾನಿಸಿದೆವು. ಅವರು ತಮ್ಮ ಜನಾಂಗದವರಿಗೆ ವೇದನಾಯುಕ್ತ ಯಾತನೆ ಬಂದೆರಗುವುದಕ್ಕಿಂತ ಮುಂಚೆಯೇ ಎಚ್ಚರಿಕೆ ನೀಡಲೆಂದು." **(ನೂಹ್: 1)**

"ಅವರಿಗೆ 'ಆದ್'ರ ಸಹೋದರನ (ಹೂದ್‌ರ) ವೃತ್ತಾಂತವನ್ನು ತಿಳಿಸಿರಿ. ಅವರು ಅಹ್‌ಕಾಫ್‌ನಲ್ಲಿ ತಮ್ಮ ಜನಾಂಗಕ್ಕೆ ಈ ರೀತಿ ಎಚ್ಚರಿಕೆ ಕೊಟ್ಟರು. 'ಅಲ್ಲಾಹನ ಹೊರತು ಇನ್ನಾರ ದಾಸ್ಯ-ಆರಾಧನೆಯನ್ನು ಮಾಡಬೇಡಿರಿ. ನನಗೆ ನಿಮ್ಮ ವಿಷಯದಲ್ಲಿ ಒಂದು ಭಯಾನಕ ದಿನದ ಯಾತನೆಯ ಭಯವಿದೆ.' ಇಂತಹ ಎಚ್ಚರಿಕೆ ನೀಡುವವರು ಅವರಿಗಿಂತ ಮುಂಚೆಯೂ ಬಂದಿದ್ದರು. ಅವರ ನಂತರವೂ ಬರುತ್ತಿದ್ದರು. ಇದು ಆ ಎಚ್ಚರಿಕೆಯಾಗಿತ್ತು." **(ಅಹ್‌ಕಾಫ್: 21)**

ಪ್ರವಾದಿಗಳನ್ನು ಪವಿತ್ರ ಕುರ್‌ಆನ್ 'ಬಶೀರ್' (ಸುವಾರ್ತೆ ನೀಡುವವರು) ಮತ್ತು 'ನದೀರ್' (ಎಚ್ಚರಿಕೆ ಕೊಡುವವರು) ಎಂದು ವರ್ಣಿಸಿದೆ. ಪ್ರವಾದಿ ಮುಹಮ್ಮದ್‌ರ(ಸ) ಕುರಿತು ಕುರ್‌ಆನ್ ಹೀಗೆ ಹೇಳಿದೆ, "ನಾವು ನಿಮ್ಮನ್ನು ಸಕಲ

ಮಾನವರಿಗೆ ಸುವಾರ್ತೆ ಕೊಡುವವರಾಗಿಯೂ ಎಚ್ಚರಿಕೆ ನೀಡುವವರಾಗಿಯೂ ಮಾಡಿ ಕಳುಹಿಸಿರುತ್ತೇವೆ." (ಸಬಾ: 28)

ಇದು ಪ್ರವಾದಿಯವರ(ಸ) ಅಧಿಕೃತ ನಿಲುಮೆಯ ಸಾರಾಂಶ. ಇತರೆಲ್ಲ ನಿಲುಮೆಗಳು ಇದಕ್ಕೆ ಬದ್ಧವಾಗಿವೆ ಅಥವಾ ಇದರ ವ್ಯಾಖ್ಯಾನವಾಗಿದೆ.

"ನಾನು ಕೇವಲ ಸುವಾರ್ತೆ ನೀಡುವವನೂ ಎಚ್ಚರಿಕೆ ಕೊಡುವವನೂ ಆಗಿದ್ದೇನೆ."
(ಅಲ್ ಅಅ್‌ರಾಫ್: 188)

ಇತರ ಪ್ರವಾದಿಗಳ ನಿಲುಮೆಯೂ ಇದೇ ಆಗಿತ್ತು. "ಪ್ರವಾದಿಗಳನ್ನು ಸುವಾರ್ತೆ ನೀಡುವವರೂ ಎಚ್ಚರಿಕೆ ಕೊಡುವವರಾಗಿಯೂ ಅಲ್ಲದೆ ನಾವು ಕಳುಹಿಸಿಲ್ಲ."
(ಅಲ್ ಕಹ್ಫ್: 56)

ಸುವಾರ್ತೆ ನೀಡುವವರು ಮತ್ತು ಎಚ್ಚರಿಕೆ ಕೊಡುವವರು ಎಂಬ ಈ ಎರಡು ಸ್ಥಾನಗಳು ಪ್ರವಾದಿಗಳ ಮಟ್ಟಿಗೆ ಮೂಲಭೂತವಾಗಿ ಸಮಾನ ಮಹತ್ವ ಪಡೆದಿವೆ. ಆದರೆ 'ಎಚ್ಚರಿಕೆ ಕೊಡುವವರು' ಎಂಬ ಅವರ ನಿಲುಮೆಯನ್ನು ಕುರ್‌ಆನ್ ಹೆಚ್ಚು ಬಹಿರಂಗವಾಗಿ ಮತ್ತು ಪುನರಾವರ್ತಿಸಿ ಹೇಳಿದೆ. ಕೇವಲ ಸುವಾರ್ತೆ ನೀಡುವವರೆಂದು ಹೇಳಿರುವುದು ಕಾಣಸುವುದಿಲ್ಲ, ಆದರೆ, ಕೇವಲ 'ಎಚ್ಚರಿಕೆ ನೀಡುವವರೆಂದು' ಅನೇಕ ಕಡೆಗಳಲ್ಲಿ ಹೇಳಲಾಗಿದೆ. ಉದಾಹರಣೆಗೆ: "ಎಚ್ಚರಿಕೆ ಕೊಡುವವರಾರೂ ಬಂದಿರದಂತಹ ಸಮುದಾಯವೊಂದು ಗತಿಸಿಲ್ಲ." (ಫಾತಿರ್: 24) "ನಾವು ಎಂದೂ ಯಾವ ನಾಡನ್ನೂ ಅದಕ್ಕೆ ಎಚ್ಚರಿಕೆ ಕೊಡುವ ಉದ್ಬೋಧಕರಿಲ್ಲದೆ ನಾಶಗೊಳಿಸಲಿಲ್ಲ." (ಅಶ್ಶುಅರಾ: 208) "ಅವರು (ಮುಹಮ್ಮದ್) ಕಠೋರ ಶಿಕ್ಷೆಯ ಕುರಿತು ನಿಮಗೆ ಮುಂಚಿತವಾಗಿ ಕೇವಲ ಎಚ್ಚರಿಕೆ ನೀಡುವವರಾಗಿದ್ದಾರೆ." (ಸಬಾ: 46) "ನೂಹ್ ಹೇಳಿದರು: ನನ್ನ ಜನಾಂಗವೇ, ನಾನು ನಿಮಗಾಗಿ ಓರ್ವ ಸುಸ್ಪಷ್ಟ ಎಚ್ಚರಿಕೆ ನೀಡುವವನಾಗಿದ್ದೇನೆ." (ನೂಹ್: 2)

ಪರಲೋಕದಲ್ಲಿ ಅನುಭವಿಸಬೇಕಾದ ವಿವಿಧ ವಿಪತ್ತುಗಳನ್ನು ಎತ್ತಿ ಹೇಳಿ ಪಾರತ್ರಿಕ ಜೀವನದ ಗಂಭೀರತೆಯ ಬಗ್ಗೆ ಜನರಲ್ಲಿ ಭಯ ಮೂಡಿಸಲಿಕ್ಕಾಗಿ ಪ್ರವಾದಿಗಳು ಪ್ರಯತ್ನಿಸಿದ್ದರು.

"ಜನರಿಗೆ ಶಿಕ್ಷೆ ಬರುವ ದಿನದ ಕುರಿತು ನೀವು ಅವರಿಗೆ ಎಚ್ಚರಿಕೆ ನೀಡಿರಿ. ಅಂದು ಅಕ್ರಮಿಗಳು, 'ಪ್ರಭೂ, ನಮಗೆ ಇನ್ನೂ ಸ್ವಲ್ಪ ಕಾಲಾವಕಾಶ ನೀಡು, ಹಾಗಾದರೆ ನಾವು ನಿನ್ನ ಸಂದೇಶವನ್ನು ಸ್ವೀಕರಿಸಿ ನಿನ್ನ ಪ್ರವಾದಿಗಳನ್ನು ಅನುಸರಿಸುತ್ತೇವೆ' ಎಂದು ಪ್ರಲಾಪಿಸುವರು. ಆಗ ಅವರಿಗೆ, 'ನಮಗೆಂದೂ ಅವನತಿ ಬರಲಿಕ್ಕಿಲ್ಲವೆಂದು ಇದಕ್ಕೆ

ಮುಂಚೆ ಆಣೆ ಹಾಕಿ ಹೇಳುತ್ತಿದ್ದವರು ನೀವೇ ಅಲ್ಲವೇ? ಈಗ ಇಲ್ಲಿ ಪ್ರಲಾಪಿಸುತ್ತಿರುವುದೇಕೆ?' ಎಂದು ಉತ್ತರಿಸಲಾಗುವುದು." (ಇಬ್ರಾಹೀಮ್: 44)

ಇನ್ನೊಂದು ರಂಗವನ್ನು ನೋಡಿರಿ– "ಸಂದೇಶವಾಹಕರೇ, ಸನ್ನಿಹಿತವಾಗಿರುವ ಆ ದಿನದ ಬಗ್ಗೆ ಈ ಜನರಿಗೆ ಎಚ್ಚರಿಕೆ ನೀಡಿರಿ. ಆಗ ಹೃದಯಗಳು ಗಂಟಲಿಗೇರಿ ಜನರು ಶೋಕತಪ್ತರಾಗಿ ನಿಲ್ಲುವರು. ಅಕ್ರಮಿಗಳಿಗೆ ಯಾವ ಆಪ್ತ ಮಿತ್ರನಾಗಲಿ, ಪ್ರಭಾವಶಾಲಿ ಶಿಫಾರಸುದಾರನಾಗಲಿ ಇರಲಾರನು." (ಮೂಮಿನ್: 18)

ಪರಲೋಕದ ಬಗೆಗಿನ ಭೀತಿಯು ಸಜ್ಜನರ ವೈಶಿಷ್ಟ್ಯವೆಂದು ಕುರ್‌ಆನ್ ಅನೇಕ ಕಡೆಗಳಲ್ಲಿ ಹೇಳಿದೆ:

"ಅವರು ಹೃದಯಗಳು ಪಲ್ಲಟಗೊಳ್ಳುವ ಮತ್ತು ದೃಷ್ಟಿಗಳು ಸ್ತಬ್ಧಗೊಳ್ಳುವಂಥ ಆ ದಿನವನ್ನು ಭಯಪಡುತ್ತಿರುವರು." (ಅನ್ನೂರ್: 37)

"ಎಲ್ಲೆಲ್ಲೂ ವಿಪತ್ತೇ ಹಬ್ಬಿಕೊಂಡಿರುವ ಆ ದಿನವನ್ನು ಭಯಪಡುವವರೂ ಆಗಿದ್ದಾರೆ." (ಅದ್ದಹ್ರ್: 7)

ಪ್ರವಾದಿಗಳು ಕೂಡಾ ಪರಲೋಕದ ಬಗ್ಗೆ ಭಯಪಡುತ್ತಿದ್ದರು: "ಹೇಳಿರಿ, ನಾನು ನನ್ನ ಪ್ರಭುವಿನ ಆಜ್ಞೋಲ್ಲಂಘನೆ ಮಾಡಿದರೆ ಒಂದು ಮಹಾ (ಭಯಾನಕ) ದಿನ ನಾನು ಶಿಕ್ಷೆ ಅನುಭವಿಸಬೇಕಾದೀತೆಂದು ಭಯಪಡುತ್ತೇನೆ. ಅಂದು ಶಿಕ್ಷೆಯಿಂದ ಪಾರಾದವನ ಮೇಲೆ ಅಲ್ಲಾಹನು ಮಹಾಕೃಪೆಗೈದನು. ಇದುವೇ ಸುಸ್ಪಷ್ಟ ವಿಜಯವಾಗಿರುತ್ತದೆ." (ಅಲ್ ಅನ್‌ಆಮ್: 15-16)

ಪರಲೋಕದ ಭೀತಿಯಿಲ್ಲದಿರುವುದು ಶಿರ್ಕ್‌ನ ಲಕ್ಷಣವೆಂದು ಕುರ್‌ಆನ್ ವಿವರಿಸಿದೆ: "ವಾಸ್ತವದಲ್ಲಿ ಇವರಿಗೆ ಪರಲೋಕದ ಭಯವಿಲ್ಲ." (ಮುದ್ದಸ್ಸಿರ್: 53)

ಒಟ್ಟಿನಲ್ಲಿ, ಮರಣದ ವೇಳೆ 'ಮಹ್‌ಶ'ರ ಮತ್ತು 'ನರಕ' ಮುಂತಾದೆಡೆಗಳಲ್ಲಿ ಸಂಭವಿಸಲಿರುವ ಹಲವು ಕಠಿಣ ಕಠೋರ ರಂಗಗಳನ್ನು ವಿವರಿಸಿ ಮಾನವರನ್ನು ಭಯಭಕ್ತರಾಗಿ ಮಾಡುವ ಪ್ರಯತ್ನವು ಕುರ್‌ಆನಿನಾದ್ಯಂತ ಕಂಡು ಬರುತ್ತದೆ.

'ರಹ್ಮಾನ್' ಮತ್ತು 'ರಹೀಮ್' ಆದ ಅಲ್ಲಾಹನು, ತನ್ನ ದಾಸರು ವಿನಾಶಕ್ಕೆ ಈಡಾಗದಿರಲಿಕ್ಕಾಗಿ ಈ ಅಂಶವನ್ನು ತಿಳಿಸಿರುವುದರಲ್ಲಿ ಅಚ್ಚರಿಯಿಲ್ಲ. ಅದೇ ವೇಳೆ, ತುಲನಾತ್ಮಕವಾಗಿ ಕೆಲವು ಬಾರಿಯಾದರೂ ಪರಲೋಕದ ವಿವಿಧ ರಂಗಗಳಲ್ಲಿ ಸಜ್ಜನರು ಅನುಭವಿಸುವ ಸುಖಾನಂದಗಳನ್ನು ವರ್ಣಿಸಿ, ಮಾನವರಲ್ಲಿ ಶುಭ ನಿರೀಕ್ಷೆ ಮತ್ತು ಭರವಸೆ ಮೂಡಿಸುವ ಪ್ರಯತ್ನವನ್ನು ಕುರ್‌ಆನ್ ನಡೆಸಿದೆ. ಐಹಿಕ ಜೀವನದ ಎಲ್ಲ

ರೀತಿಯ ಅಡೆತಡೆಗಳನ್ನು ದಾಟಿ, ವಿರೋಧಿ ಶಕ್ತಿಗಳ ನಾನಾ ರೀತಿಯ ಆಕ್ರಮಗಳನ್ನು ಎದುರಿಸಿ, ಅಲ್ಲಾಹನು ನಿರ್ದೇಶಿಸಿದ ಮಾರ್ಗದಿಂದ ಮುನ್ನಡೆಯುವುದಕ್ಕೆ ಅಗತ್ಯವಿರುವ ಆಂತರಿಕ ಪ್ರೇರಣೆಯನ್ನು ಮಾನವನಲ್ಲಿ ಮೂಡಿಸಲಿಕ್ಕಾಗಿ ಕುರ್‌ಆನ್ ಈ ಧೋರಣೆಯನ್ನು ಅನುಸರಿಸಿದೆ. ಪರಲೋಕದ ಬಗ್ಗೆ ಸುದೃಢ ವಿಶ್ವಾಸ, ಭಯ, ಶುಭ ನಿರೀಕ್ಷೆ ಮತ್ತು ಸುಶಕ್ತ ಭಾವನೆ ಮೂಡಿದರೆ ವಿಜಯ ಖಚಿತ, ಇಲ್ಲದಿದ್ದರೆ ಪರಾಜಯ.

ಮರಣ ಪರಲೋಕದ ಕವಾಟ

ಮರಣವು ಆಖಿರತ್‌ನ (ಪರಲೋಕದ) ಕವಾಟವಾಗಿದೆ. ಪ್ರತಿಯೊಬ್ಬ ಮಾನವನನ್ನು ಸೃಷ್ಟಿಸಿದಾಗಲೂ ಆತನು ಈ ಲೋಕದಲ್ಲಿ ಎಷ್ಟು ಕಾಲ ಜೀವಿಸಬೇಕೆಂಬುದನ್ನು ಅಲ್ಲಾಹನು ನಿರ್ಣಯಿಸಿದ್ದಾನೆ. "ನಿಮಗಾಗಿ ಒಂದು ಜೀವನ ಕಾಲಾವಧಿಯನ್ನು ನಿರ್ಣಯಿಸಿದವನು." **(ಅಲ್ ಅನ್‌ಆಮ್:2)**

ಆ ಅವಧಿಗೆ ಅವನು ಮರಣ ಹೊಂದಲೇ ಬೇಕು. ಅವಧಿ ಮೀರಲು ಮಾನವನಿಗೆ ಸಾಧ್ಯವಿಲ್ಲ, "ನಾವು ನಿಮ್ಮೊಳಗೆ ಮರಣವನ್ನು ಹಂಚಿರುತ್ತೇವೆ ಮತ್ತು ನಮಗೆ ಇದು ಕಷ್ಟದ ಕಾರ್ಯವಲ್ಲ." **(ಅಲ್ ವಾಕಿಆ: 60)**

ಅವಧಿ ಮುಗಿದ ಬಳಿಕ ಯಾರನ್ನೂ ಬಿಡುವುದಿಲ್ಲ. "ವಾಸ್ತವದಲ್ಲಿ ಓರ್ವನ ಕರ್ಮಾವಧಿಯು ಪೂರ್ಣಗೊಳ್ಳುವ ಸಮಯ ಬಂದು ಬಿಟ್ಟರೆ ಅಲ್ಲಾಹನು ಯಾರಿಗೂ ಇನ್ನಷ್ಟು ಕಾಲಾವಧಿಯನ್ನು ಕೊಡುವುದಿಲ್ಲ." **(ಅಲ್ ಮುನಾಫಿಕೂನ್: 11)**

ಈ ಭೂಮಿಯಲ್ಲಿ ಮಾನವಕುಲದ ಜೀವನಾವಧಿಯನ್ನು ಅಲ್ಲಾಹನು ಮೊದಲೇ ನಿರ್ಣಯಿಸಿದ್ದಾನೆ. "ನಿಮಗೆ ಒಂದು ನಿರ್ದಿಷ್ಟ ಕಾಲದವರೆಗೆ ಭೂಮಿಯ ಮೇಲಿದ್ದು ಅಲ್ಲಿ ಜೀವಿಸಬೇಕಾದೀತು." **(ಅಲ್ ಬಕರ: 36)**

ಐಹಿಕ ಜೀವನದ ಕರ್ಮಗಳ ನೈಜ ಪ್ರತಿಫಲವು ಸಂಪೂರ್ಣವಾಗಿ ಪರಲೋಕದಲ್ಲಿ ಮಾತ್ರ ದೊರೆಯುವುದು. "ನೀವೆಲ್ಲರೂ ನಿಮ್ಮ ನಿಮ್ಮ ಪ್ರತಿಫಲವನ್ನು ಪುನರುತ್ಥಾನ ದಿನದಂದು ಪಡೆಯುವವರಿದ್ದೀರಿ." **(ಆಲಿ ಇಮ್ರಾನ್: 185)**

ನಮ್ಮ ಈ ಜೀವನದ ನೈಜ ಪ್ರತಿಬಿಂಬವು ನಮಗೆ ಅಲ್ಲಿ ಕಾಣಿಸುವುದು. ತರುವಾಯ ಅವರ ಕರ್ಮಗಳೊಂದಿಗೆ ಅವರು ಎಬ್ಬಿಸಲ್ಪಡುವರು.

"ಪ್ರತಿಯೊಬ್ಬ ಮಾನವನೂ ಮರಣ ಹೊಂದುವಾಗಿನ ಸ್ಥಿತಿಯಲ್ಲಿಯೇ ಎದ್ದೇಳಿಸಲ್ಪಡುವನು." **(ಮುಸ್ಲಿಮ್)**

ಮರಣವೆಂದರೆ!

ಮಾನವನಲ್ಲಿ ಭೌತಿಕ ದೇಹ ಮತ್ತು ಅಭೌತಿಕ ಆತ್ಮ ಸೇರಿದೆಯಲ್ಲವೇ. ಅವು ಪರಸ್ಪರ ಬೇರ್ಪಡುವುದೇ ಮರಣವಾಗಿದೆ. ಮಾನವನ ಐಹಿಕ ಜೀವನವು ನಿರ್ಣಿತವೆಂದು ನಾವು ತಿಳಿದಿದ್ದೇವೆ. ದೇಹದಿಂದ ಆತ್ಮವನ್ನು ತೆಗೆಯುವ ಕಾರ್ಯವನ್ನು ಅಲ್ಲಾಹನು ಪ್ರತ್ಯೇಕ ದೇವಚರರಿಗೆ ವಹಿಸಿಕೊಟ್ಟಿದ್ದಾನೆ. ಪ್ರಾಮಾಣಿಕ ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಕ್ಲಪ್ತವಾಗಿ ನಿರ್ವಹಿಸುವಂತೆ ಆ ದೇವಚರರು ತಮ್ಮ ಕೆಲಸವನ್ನು ನಿರ್ದಿಷ್ಟ ಸಮಯವಾದ ಕೂಡಲೇ ಕಾರ್ಯಗತಗೊಳಿಸುತ್ತಾರೆ.

"ನಿಮ್ಮ ಮೇಲೆ ನಿಯುಕ್ತನಾಗಿರುವ ಮೃತ್ಯುದೂತನು ನಿಮ್ಮನ್ನು ಸರ್ವ ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಳ್ಳುವನು." **(ಅಸ್ಸಜ್‌ದಃ: 11)**

ಅದರಲ್ಲಿ ಅವರು ಯಾವುದೇ ಲೋಪವನ್ನು ಮಾಡುವುದಿಲ್ಲ. "ಯಾರಿಗಾದರೂ ಮರಣ ಆಸನ್ನವಾದಾಗ ಅವನಿಂದ ಕಳುಹಿಸಲ್ಪಟ್ಟ ದೇವಚರರು ಅವನ ಪ್ರಾಣಹರಣ ಮಾಡುತ್ತಾರೆ ಮತ್ತು ತಮ್ಮ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಅವರು ಸ್ವಲ್ಪವೂ ಲೋಪ ಮಾಡುವುದಿಲ್ಲ." **(ಅಲ್ ಅನ್‌ಆಮ್: 61)**

ಮರಣ ಎರಡು ವಿಧ

ಮರಣವು ಎರಡು ರೀತಿಯಲ್ಲಿ ಸಂಭವಿಸುತ್ತದೆ. ಒಂದನೆಯದು ತ್ರಾಸರಹಿತ ಮತ್ತು ಬಹಳ ಆನಂದದಾಯಕ ಮರಣ, ಎರಡನೆಯದು ತ್ರಾಸದಾಯಕ ಮತ್ತು ಅತ್ಯಧಿಕ ದುಃಖಮಯ ಮರಣ. ಹೀಗೇಕೆ?

ಐಹಿಕ ಜೀವನವು ದೇಹ ಪ್ರಧಾನವೆಂದು ಹೇಳಲಾಗಿದೆಯಷ್ಟೆ, ದೇಹದ ಪೋಷಣೆ, ಸಂರಕ್ಷಣೆ ಮತ್ತು ಆರೈಕೆಯ ಬಗ್ಗೆ ನಾವು ಯಾವಾಗಲೂ ನಿಗಾ ವಹಿಸುತ್ತೇವೆ. ದೇಹವು ರೋಗ ಪೀಡಿತವಾಗದಂತೆ ನಾವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತೇವೆ. ರೋಗ ಬಂದರೆ ಸೂಕ್ತ ಚಿಕಿತ್ಸೆ ನಡೆಸುತ್ತೇವೆ. ಆಯಾಸವಾದಾಗ ವಿಶ್ರಾಂತಿ ಪಡೆಯುತ್ತೇವೆ. ಹಸಿವು ಬಾಯಾರಿಕೆಗಳನ್ನು ಕೂಡಲೇ ತಣಿಸುತ್ತೇವೆ. ದೇಹವನ್ನು ಉತ್ತಮವಾಗಿ ಪೋಷಿಸಿ ಸುಂದರವಾಗಿರಿಸಲು ಯಾವಾಗಲೂ ಶ್ರಮಿಸುತ್ತೇವೆ. ಇದು ದೇಹದ ಬಗ್ಗೆ ನಮ್ಮ ಸಾಮಾನ್ಯ ನೀತಿ. ಆದರೆ ಬಹಳ ವಿರಳವಾದರೂ ದೇಹವನ್ನು ನಿರ್ಲಕ್ಷಿಸಿ, ಪೀಡಿಸಿ, ವಿಕೃತಗೊಳಿಸುವ ಕೆಲವರೂ ಇದ್ದಾರೆ. ಅಂಥ ವರ್ತನೆಗಳಿಂದಾಗಿ ಅವರ ದೇಹವು ರೋಗ ಪೀಡಿತ, ದುರ್ಬಲ ಮತ್ತು ವಿರೂಪವಾಗುತ್ತದೆ. ಹಾಗಿದ್ದರೆ, ಆರೋಗ್ಯದ ವಿಷಯದಲ್ಲಿ ನಮ್ಮ ವರ್ತನೆಯು ಒಂದೋ ದೇಹದ ಆರೋಗ್ಯವನ್ನು ಉತ್ತಮಪಡಿಸುತ್ತದೆ

ಇಲ್ಲವೇ ಕೆಡಿಸುತ್ತದೆ. ಇದು ವಿವಾದಕ್ಕೆ ಎಡೆಯಿಲ್ಲದಂತಹ ಸತ್ಯ. ಆದರೆ ಸಾಮಾನ್ಯವಾಗಿ ಗಮನಿಸದ, ಬಾಹ್ಯ ದೃಷ್ಟಿಗೆ ಗೋಚರಿಸದ ಇನ್ನೊಂದು ಸತ್ಯವೂ ಇದೆ. ಅರ್ಥಾತ್ ದೇಹದಂತೆಯೇ ಆತ್ಮವೂ ಸೇರಿರುವ ಮಾನವನ ಪ್ರತಿಯೊಂದು ವರ್ತನೆಗೆ ಭೌತಿಕ ಪರಿಣಾಮವಿರುವಂತೆಯೇ ಆಧ್ಯಾತ್ಮಿಕ ಪರಿಣಾಮವೂ ಇದೆ. ಆರೋಗ್ಯಕ್ಕೆ ಸಂಬಂಧಿಸಿದ ಆತನ ವರ್ತನೆಗಳು ನೇರವಾಗಿ ದೇಹವನ್ನು ಬಾಧಿಸುವಂತೆಯೇ ನೀತಿಗೆ ಸಂಬಂಧಿಸಿದ ಆತನ ವರ್ತನೆಗಳು ನೇರವಾಗಿ ಆತ್ಮವನ್ನು ಬಾಧಿಸುತ್ತವೆ. ಸ್ವಲ್ಪ ವಿಶಾಲವಾಗಿ ಆಲೋಚಿಸಿದರೆ, ಮಾನವನ ಪ್ರತಿಯೊಂದು ಕ್ರಿಯೆಯು ನೈತಿಕ ಅಂಶವನ್ನೂ ಒಳಗೊಂಡಿರುವುದು ಕಂಡುಬರುತ್ತದೆ. ಹಾಗಿದ್ದರೆ, ನಮ್ಮ ಪ್ರತಿಯೊಂದು ಮಾತು-ಕೃತಿ, ಭಾವ- ವಿಚಾರಗಳಲ್ಲಿ ನಮ್ಮ ಆತ್ಮವು ಪ್ರತಿಬಿಂಬಿಸುತ್ತದೆ. ಈ ಪ್ರಕ್ರಿಯೆಯು ಮರಣದ ತನಕ ನಿರಂತರ ನಡೆಯುತ್ತದೆ. ನಮ್ಮ ಜೀವನದ ಸ್ವಭಾವಕ್ಕನುಸಾರ ಅದರ ಪ್ರತಿಬಿಂಬವೆಂಬ ನೆಲೆಯಲ್ಲಿ ಬಹಳ ಸ್ಪಷ್ಟ ವ್ಯಕ್ತಿತ್ವ ಮತ್ತು ರೂಪ ಪಡೆದು ನಮ್ಮ ಆತ್ಮವು, ಮರಣದ ವೇಳೆ ನಮ್ಮ ದೇಹವನ್ನು ತೊರೆದು ಆತ್ಮ ಪ್ರಧಾನವಾದ ಬರ್ಝಖ್ ಲೋಕವನ್ನು ಸೇರುತ್ತದೆ. ಪವಿತ್ರ ವಾಕ್ಯವನ್ನು (ಲಾ ಇಲಾಹ ಇಲ್ಲಲ್ಲಾಹ್) ಸಂಪೂರ್ಣವಾಗಿ ಮೈಗೂಡಿಸಿ ಅದರ ಬೇಡಿಕೆಯನುಸಾರ ಬದುಕಿದವರ ಆತ್ಮವು ಪರಿಶುದ್ಧ ಮತ್ತು ಸುಂದರ ರೂಪ ಪಡೆಯುವುದು. ಪ್ರವಾದಿಯವರ(ಸ) ಭಾಷೆಯಲ್ಲಿ ಅದು 'ನಫ್ಸ್ ತಯ್ಯಿಬ' (ಪರಿಶುದ್ಧ ಆತ್ಮ) ಆಗಿರುತ್ತದೆ. ಮ್ಲೇಚ್ಛ ವಾಕ್ಯವನ್ನು ಮೈಗೂಡಿಸಿಕೊಂಡವರ ಆತ್ಮವು ಮ್ಲೇಚ್ಛ ಮತ್ತು ವಿಕೃತ ರೂಪ ಪಡೆಯುವುದು. ಪ್ರವಾದಿಯ ಭಾಷೆಯಲ್ಲಿ ಅದು 'ನಫ್ಸ್ ಖಬೀಸ' (ಭ್ರಷ್ಟ ಆತ್ಮ) ಇಲ್ಲಿ ಆತ್ಮವು ಅದೃಶ್ಯವಾಗಿರುವುದರಿಂದ ನಮ್ಮ ಕರ್ಮಗಳು ಅದನ್ನು ರೂಪಿಸುತ್ತಿರುವ ಪ್ರಕ್ರಿಯೆಯು ನಮ್ಮ ಬಾಹ್ಯ ದೃಷ್ಟಿಗೆ ಗೋಚರಿಸುವುದಿಲ್ಲ, ಪರೀಕ್ಷಾ ಕಾಲವಾಗಿರುವ ಈ ಐಹಿಕ ಜೀವನದಲ್ಲಿ ಆತ್ಮವನ್ನು ಪಾವನಗೊಳಿಸಿದವರು ವಿಜಯಿಗಳಾಗುವರು. ಮ್ಲೇಚ್ಛಗೊಳಿಸಿದವರು ಪರಾಜಿತರಾಗುವರು.

"ಖಂಡಿತವಾಗಿಯೂ ತನ್ನ ಆತ್ಮವನ್ನು ಸಂಸ್ಕರಿಸಿಕೊಂಡವನು ವಿಜಯಿಯಾದನು ಮತ್ತು ಅದನ್ನು ದಮನಿಸಿದವನು ಸೋಲುಂಡನು." **(ಅಶ್ಶಮ್ಸ್: 9-10)**

ಮರಣವು ಎರಡು ರೀತಿಯಲ್ಲಿ ಸಂಭವಿಸುತ್ತದೆಯೆಂದು ಹೇಳಿದೆಯಷ್ಟೆ. ಮೊದಲನೆಯ ವರ್ಗದವರ (ಆತ್ಮವನ್ನು ಪರಿಶುದ್ಧಗೊಳಿಸಿದವರ) ಮರಣವು ಅತಿ ಸುಲಭ ಮತ್ತು ಆನಂದದಾಯಕವಾಗಿರುವುದು. ಎರಡನೆಯ ವರ್ಗದವರ (ಆತ್ಮವನ್ನು ಮ್ಲೇಚ್ಛಗೊಳಿಸಿದವರ) ಮರಣವು ಅತ್ಯಂತ ತ್ರಾಸದಾಯಕ ಮತ್ತು ದುಃಖಮಯವಾಗಿರುವುದು.

ದೇವಚರರು ಮಾನವನ ದೇಹದಿಂದ ಆತ್ಮವನ್ನು ಹೊರಗೆಳೆಯುವುದರಿಂದಾಗಿ ಅವು ಪರಸ್ಪರ ಬೇರ್ಪಡುವುದೇ ಮರಣವೆಂದು ನಾವು ತಿಳಿದಿದ್ದೇವೆ. ಮರಣದಿಂದ ದೇಹವು, ಆ ತನಕ ಹೊಂದಿದ್ದ ವ್ಯಕ್ತಿತ್ವವನ್ನು ಕಳೆದುಕೊಂಡು ನಾಶವಾಗಲಾರಂಭಿಸುತ್ತದೆ. ಆತ್ಮವು ಐಹಿಕ ಜೀವನದಲ್ಲಿ ಪಡೆದ ಅದರ ಪೂರ್ಣ ವ್ಯಕ್ತಿತ್ವದೊಂದಿಗೆ ಆತ್ಮ ಪ್ರಧಾನವಾದ 'ಬರ್ಝಖ್' ಲೋಕಕ್ಕೆ ಪ್ರವೇಶಿಸಿ ಮತ್ತಷ್ಟು ಪ್ರತ್ಯಕ್ಷವಾಗಿ ಉಳಿಯುತ್ತದೆ. ಈ ಪ್ರಕ್ರಿಯೆ ಅರ್ಥಾತ್ ಮರಣವು 'ನಫ್ಸ್ ತಯ್ಯಿಬಃ'ದ ಮಟ್ಟಿಗೆ ಆನಂದಮಯ ಮತ್ತು 'ನಫ್ಸ್ ಖಬೀಸಕ್ಕೆ' ದುಃಖದಾಯಕವಾಗಿರುವುದು.

ಏಕನಾದ ಅಲ್ಲಾಹನಲ್ಲಿ ದೃಢವಿಶ್ವಾಸವಿರಿಸಿ, ಇಸ್ಲಾಮ್ ಧರ್ಮವನ್ನು ಅಂಗೀಕರಿಸಿ, ಪ್ರವಾದಿಯವರು ಕಲಿಸಿದ್ದೆಲ್ಲವೂ ಸತ್ಯವೆಂದು ಖಚಿತಪಡಿಸಿ ಜೀವನವನ್ನು ಕ್ರಮಬದ್ಧ ಗೊಳಿಸಿದಾತನ ಆತ್ಮವೇ 'ನಫ್ಸ್ ತಯ್ಯಿಬ' ಅಥವಾ ಪರಿಶುದ್ಧ ಆತ್ಮ. ಮರಣದ ಸ್ವರೂಪ ಮತ್ತು ಅನಂತರದ ಇತರ ಸ್ವರೂಪಗಳೆಲ್ಲವನ್ನೂ ಮುಂಚಿತವಾಗಿಯೇ ಅದು ಬಹುವಂಶ ತಿಳಿದಿರುತ್ತದೆ. ಅದರ ಮಟ್ಟಿಗೆ ಇದೆಲ್ಲವೂ ನಿರೀಕ್ಷಿಸಿದಂತೆಯೇ ಆಗಿದೆ. ಅರ್ಥಾತ್, ಅಲ್ಲಾಹ್ ಮತ್ತು ಪ್ರವಾದಿವರ್ಯರು(ಸ) ಕಲಿಸಿದ ವಿಷಯಗಳು ಕ್ರಮಶಃ ಸಾಕ್ಷಾತ್ಕಾರ ವಾಗುತ್ತದೆಂದು ಅದು ಗ್ರಹಿಸುತ್ತದೆ. ಅದಕ್ಕೆ ಯಾವ ಘಟನೆಯೂ ಅನಿರೀಕ್ಷಿತವೆನಿಸು ವುದಿಲ್ಲ. ಆದ್ದರಿಂದ, ಅದು ಸ್ವಲ್ಪವೂ ಕಳವಳಗೊಳ್ಳುವುದಿಲ್ಲ. ಸಂಪೂರ್ಣ ಸಮಾಧಾನ ದಿಂದ ಅದು ಎಲ್ಲವನ್ನೂ ಎದುರಿಸಲು ಶಕ್ತವಾಗಿರುತ್ತದೆ. ಈ ಸ್ಥಿತಿಯ ಹಿನ್ನೆಲೆಯಲ್ಲಿ ಅದಕ್ಕೆ ಶಾಂತಚಿತ್ತವಾದ ಆತ್ಮವೆಂಬ ವಿಶೇಷಣವನ್ನು ಪವಿತ್ರ ಕುರ್‌ಆನ್ ನೀಡಿದೆ.

ಪರಿಶುದ್ಧ ಆತ್ಮದ ಮರಣ

ಮೃತ್ಯು ದೇವಚರರು ಪರಿಶುದ್ಧ ಆತ್ಮದ ಬಳಿಗೆ ವಸ್ತುತಃ ಅದನ್ನು ಹೊರಗೆಳೆ ಯಲಿಕ್ಕಾಗಿ ಬರುವುದಿಲ್ಲ. ಬದಲಾಗಿ ಅಲ್ಲಾಹನ ಬಳಿಗೆ ಹೋಗುವ ಮರು ಪ್ರಯಾಣ ಕ್ಕಾಗಿ ಆಹ್ವಾನಿಸಿ, ಸ್ವಾಗತಿಸಿ ಜತೆಯಲ್ಲಿ ಕರೆದೊಯ್ಯಲಿಕ್ಕಾಗಿ ಬರುತ್ತಾರೆ. ತಮ್ಮನ್ನು ಕಂಡಾಗಲೇ ಅದಕ್ಕೆ ಅತ್ಯಧಿಕ ಸಂತೋಷವಾಗಬೇಕೆಂಬ ಭಾವನೆಯಿಂದ ಅತಿಸುಂದರ ಮತ್ತು ಅತ್ಯಾಕರ್ಷಕ ಉಡುಪು ಧರಿಸಿ ದೇವಚರರು ಅದರ ಬಳಿ ಬರುತ್ತಾರೆ. ನೋಡಿದ ಕೂಡಲೇ ಪ್ರೇಮಾದರದಿಂದ 'ಅಸ್ಸಲಾಮು ಅಲೈಕುಮ್' ಎಂದು ಅಭಿನಂದಿಸುತ್ತಾರೆ. ಸ್ವರ್ಗದ ಸುವಾರ್ತೆಯನ್ನು ತಿಳಿಸುತ್ತಾರೆ. "ದೇವಚರರು ಆ ಮುತ್ತಕೀಗಳ ಪ್ರಾಣಗಳನ್ನು ಪಾವನಾವಸ್ಥೆಯಲ್ಲಿ ವಶಪಡಿಸಿ ಕೊಳ್ಳುವಾಗ, ನಿಮ್ಮ ಮೇಲೆ ಶಾಂತಿಯಿರಲಿ, ನಿಮ್ಮ ಕರ್ಮದ ಪ್ರತಿಫಲವಾಗಿ ಸ್ವರ್ಗದೊಳಗೆ ಪ್ರವೇಶಿಸಿರಿ– ಎನ್ನುವರು." **(ಅನ್ನಹ್ಲ್: 32)** ಆ

ಬಳಿಕ ಅಲ್ಲಾಹನ ಇನ್ನೊಂದು ಸಂದೇಶವನ್ನು ನೀಡುವರು: "ಓ ಶಾಂತಚಿತ್ತವೇ! ನೀನು (ನಿನ್ನ ಸದ್ಗತಿಯಿಂದ) ಸಂತುಷ್ಟನೂ (ನಿನ್ನ ಪ್ರಭುವಿನ ಬಳಿ) ಮೆಚ್ಚುಗೆಗೆ ಪಾತ್ರನೂ ಆಗಿರುವ ಸ್ಥಿತಿಯಲ್ಲಿ ನಿನ್ನ ಪ್ರಭುವಿನ ಬಳಿಗೆ ನಡೆ. ನನ್ನ (ಸಜ್ಜನ) ದಾಸರೊಂದಿಗೆ ಸೇರಿಕೋ ಮತ್ತು ನನ್ನ ಸ್ವರ್ಗದೊಳಗೆ ಪ್ರವೇಶಿಸು." **(ಅಲ್ ಫಜ್ರ್: 27-30)**

ಪರಿಶುದ್ಧ ಆತ್ಮದ ಮರಣವು ಬಹಳ ಸಂತೋಷ ಮತ್ತು ಆನಂದದಾಯಕವಾಗಿರುವುದೆಂದು ಈ ವಾಕ್ಯಗಳಿಂದ ವ್ಯಕ್ತವಾಗುತ್ತದೆ.

ಪ್ರವಾದಿಯವರು(ಸ) ಅದನ್ನು ಹೀಗೆ ವಿವರಿಸಿದ್ದಾರೆ: ಅದಾಅ್(ರ) ಹೇಳಿದರು: ನಾವು ಪ್ರವಾದಿಯವರ ಜತೆ ಓರ್ವ ಅನ್ಸಾರಿಯ ಜನಾಝದೊಂದಿಗೆ ಹೊರಟೆವು. ಕಬರ್‌ನ ಬಳಿ ತಲಪಿದಾಗ ಅದರ ಕೆಲಸ ಮುಗಿದಿರಲಿಲ್ಲ. ಆದ್ದರಿಂದ ಪ್ರವಾದಿ(ಸ) ಅಲ್ಲಿ ಕುಳಿತುಕೊಂಡರು. ನಾವೂ ಅವರ ಸುತ್ತ ಕುಳಿತೆವು. ನಮ್ಮ ತಲೆಯ ಮೇಲೆ ಪಕ್ಷಿಗಳಿರುವಂತೆ ನಾವು ನಿಶ್ಚಲರಾಗಿದ್ದೆವು. ಪ್ರವಾದಿಯವರು(ಸ) ಕೈಯಲ್ಲಿದ್ದ ಕೋಲಿನಿಂದ ನೆಲಕ್ಕೆ ತಟ್ಟುತ್ತಾ ಪಕ್ಕನೆ ತಲೆಯೆತ್ತಿ ಹೀಗೆಂದರು, "ಕಬರ್‌ನ ಶಿಕ್ಷೆಯ ಬಗ್ಗೆ ನೀವು ಅಲ್ಲಾಹನ ಅಭಯ ಯಾಚಿಸಿರಿ." ಎರಡು ಮೂರು ಬಾರಿ ಆ ಮಾತನ್ನು ಆವರ್ತಿಸಿದ ಬಳಿಕ ಹೀಗೆ ಹೇಳಿದರು: ಓರ್ವ ಸತ್ಯವಿಶ್ವಾಸಿ ದಾಸನ ಐಹಿಕ ಜೀವನ ಅಂತ್ಯಗೊಂಡು ಪರಲೋಕ ಜೀವನ ಆರಂಭವಾದರೆ, ಸ್ವರ್ಗೀಯ ಉಡುಪು ಮತ್ತು ಸುಗಂಧ ದ್ರವ್ಯಗಳೊಂದಿಗೆ ಸೂರ್ಯನಂತೆ ಪ್ರಕಾಶಿಸುವ ಅನೇಕ ಪ್ರಸನ್ನ ದೇವಚರರು ಆಕಾಶದಿಂದ ಇಳಿದು ಬಂದು ಆತನ ದೃಷ್ಟಿಯ ಮುಂದೆ ತುಂಬಿ ತುಳುಕುವಂತೆ ಕುಳಿತುಕೊಳ್ಳುವರು. ಅನಂತರ ಮೃತ್ಯು ದೇವಚರ ಆತನ ತಲೆಯ ಹತ್ತಿರ ಕುಳಿತು ಹೀಗೆ ಆಮಂತ್ರಿಸುವರು, "ಹೇ ಪರಿಶುದ್ಧ ಆತ್ಮವೇ! ಅಲ್ಲಾಹನ ಮಗ್ಫಿರತ್ ಮತ್ತು ಕ್ಷಮೆಗಾಗಿ ಇತ್ತ ಹೊರಟು ಬಾ." ಆಗ ಹೂಜಿಯಿಂದ ನೀರು ಹರಿದು ಬರುವಂತೆ ಆತ್ಮವು ಹೊರ ಬರುವುದು. ಆ ಕೂಡಲೇ 'ಮೃತ್ಯು ದೇವಚರ' ಅದನ್ನು ಸ್ವಾಗತಿಸಿ ಕ್ಷಣಮಾತ್ರದಲ್ಲಿ ಜತೆಗಿರುವ ಇತರ ಮಲಕ್‌ಗಳಿಗೆ ಒಪ್ಪಿಸಿದಾಗ, ಅವರು ಅದಕ್ಕೆ ಸುಗಂಧ ದ್ರವ್ಯ ಪೂಸಿ ಸ್ವರ್ಗೀಯ ಉಡುಪು ತೊಡಿಸುವರು. ಆಗ ಭೂಮಿಯಲ್ಲಿ ಅತಿಶ್ರೇಷ್ಠವಾದ ಕಸ್ತೂರಿಯ ಪರಿಮಳವು ಅದರಿಂದ ಹೊರಸೂಸುವುದು. ಹೀಗೆ ಆ ಆತ್ಮದ ಜತೆ ಅವರು ಬಾನಲೋಕಕ್ಕೆ ಏರುವರು. ದಾರಿಯಲ್ಲಿ ಕಾಣಸಿಗುವ ಎಲ್ಲ ದೇವಚರ ಗುಂಪುಗಳೂ ಇದು ಯಾವ ಆತ್ಮವೆಂದು ವಿಚಾರಿಸುವುದು. ಐಹಿಕ ಜೀವನದಲ್ಲಿ ಆತನನ್ನು ಕರೆಯುತ್ತಿದ್ದ ಉತ್ತಮ ಹೆಸರುಗಳಿಂದ ಅವರು ಅದರ ಪರಿಚಯ ಮಾಡುವರು. ಹೀಗೆ ಅವರು ಮೊದಲ ಆಕಾಶಕ್ಕೆ ತೆರಳಿ ಕದ ತೆರೆಯುವಂತೆ ಕೋರಿದಾಗ ಅದು ತೆರೆಯುವುದು. ಅಲ್ಲಿಂದ

ಎರಡನೆಯ ಆಕಾಶಕ್ಕೆ ಹೊರಡುವಾಗ ಅಲ್ಲಿರುವ ಮುಕರ್‍ರಬ್ (ದೇವ ಸಾಮಿಪ್ಯ ಸಿದ್ಧಿಸಿದ) ದೇವಚರರು ಮುಂದಿನ ಆಕಾಶದ ತನಕ ಅವರನ್ನು ಅನುಗಮಿಸುವರು. ಮುಂದಿನ ಆಕಾಶದಲ್ಲಿಯೂ ಈ ಪ್ರಕ್ರಿಯೆ ನಡೆಯುವುದು. ಹೀಗೆ ಏಳನೆಯ ಆಕಾಶಕ್ಕೆ ತಲಪುವರು. ಆಗ ಅಲ್ಲಿ ಅಲ್ಲಾಹನು ಹೇಳುತ್ತಾನೆ, "ನನ್ನ ಈ ದಾಸನ ಕಡತಗಳನ್ನು 'ಇಲ್ಲಿಯ್ಯೀನ್'(ಶ್ರೇಷ್ಠ ಜನರ ಸಾಲಿ)ನಲ್ಲಿ ದಾಖಲಿಸಿ ಆತನನ್ನು ಪುನಃ ಭೂಮಿಗೆ ಮರಳಿಸಿರಿ. ಏಕೆಂದರೆ ನಾನು ಆತನನ್ನು ಭೂಮಿಯಿಂದ ಸೃಷ್ಟಿಸಿದ್ದೇನೆ. ಭೂಮಿಗೆ ಮರಳಿಸಿ, ಭೂಮಿಯಿಂದಲೇ ಎರಡನೆಯ ಬಾರಿ ದೇಹದಲ್ಲಿ ಸೇರಿಸಿ ಪುನಃ ಜೀವಂತ ಗೊಳಿಸುತ್ತೇನೆ.' ಹೀಗೆ ಆತನ ಆತ್ಮವು ಪುನಃ ದೇಹಕ್ಕೆ ಮರಳಿಸಲಾಗುತ್ತದೆ. ಆಗ ಇಬ್ಬರು ದೇವಚರರು ಆತನನ್ನು ಎಬ್ಬಿಸಿ ಕುಳ್ಳಿರಿಸಿ ಕೇಳುತ್ತಾರೆ, "ನಿನ್ನ ರಬ್ಬ್ (ಪ್ರಭು)ಯಾರು?"

ಆತ ಹೇಳುತ್ತಾನೆ, "ನನ್ನ ಪ್ರಭು ಅಲ್ಲಾಹ್."

"ನಿನ್ನ ಧರ್ಮ ಯಾವುದು?"

"ನನ್ನ ಧರ್ಮ ಇಸ್ಲಾಮ್."

"ನಿಮ್ಮತ್ತ ಕಳುಹಿಸಲಾದ ಈ ವ್ಯಕ್ತಿ ಯಾರು?"

"ಅವರು ಅಲ್ಲಾಹನ ಪ್ರವಾದಿ."

"ನಿನಗೆ ಲಭಿಸಿದ ಗ್ರಂಥ ಯಾವುದು?"

"ನಾನು ಅಲ್ಲಾಹನ ಗ್ರಂಥವನ್ನು ಓದಿ ಅದರಲ್ಲಿ ವಿಶ್ವಾಸವಿರಿಸಿ ಅದು ಸತ್ಯವೆಂದು ಅಂಗೀಕರಿಸುತ್ತೇನೆ."

ಆಗ ಬಾನಲೋಕದಿಂದ ಒಂದು ಕರೆ ಕೇಳಿಸುವುದು, "ನನ್ನ ದಾಸ ಸತ್ಯ ಹೇಳಿದ್ದಾನೆ. ಆತನಿಗೆ ನಿಮ್ಮ ಸ್ವರ್ಗೀಯ ಹಾಸಿಗೆ ಮತ್ತು ಸ್ವರ್ಗೀಯ ಉಡುಪು ನೀಡಿರಿ. ಆತನ ಕಬರ್‌ನಿಂದ ಸ್ವರ್ಗಲೋಕಕ್ಕೆ ಒಂದು ದ್ವಾರವನ್ನು ತೆರೆದಿಡಿರಿ."

ಆಗ ಅಲ್ಲಿ ಸುತ್ತಲೂ ಸ್ವರ್ಗದ ಪರಿಮಳ ಸೂಸಲಾರಂಭಿಸುವುದು. ಅದರೊಂದಿಗೆ ಆತನ ಸಮಾಧಿಯು ಆತನ ದೃಷ್ಟಿ ಹಾಯುವಷ್ಟು ವಿಶಾಲವಾಗುವುದು. ಹೀಗಿರಲು ಚೆನ್ನಾಗಿ ವಸ್ತ್ರ ಧರಿಸಿದ ಓರ್ವ ಸುಂದರ ವ್ಯಕ್ತಿಯು ಸುಗಂಧ ಬೀರುತ್ತಾ ಅಲ್ಲಿಗೆ ಬಂದು ಹೇಳುತ್ತಾರೆ, "ಸಂತೋಷಪಡಿರಿ. ಆನಂದದಾಯಕವಾದುದೆಲ್ಲವನ್ನು ನಿಮಗೆ ಸಿದ್ಧಪಡಿಸ ಲಾಗಿದೆ. ಇದು ವಾಗ್ದಾನ ನೀಡಲಾಗಿದ್ದ ದಿನವಾಗಿದೆ."

ಆತನು ಕೇಳುತ್ತಾನೆ: ಸದ್ಗುಣ ಸಂಪನ್ನವಾದ ಮುಖಾರವಿಂದವಿರುವವರೇ ನೀವು ಯಾರೆಂದು ತಿಳಿಸುವಿರಾ?

ಅವರು ಹೇಳುತ್ತಾರೆ: ಹೌದು ಹೇಳುತ್ತೇನೆ. ನೀನು ಇಹಲೋಕದಲ್ಲಿ ಮಾಡಿದ ಸತ್ಕರ್ಮಗಳೇ ನಾನು.

ಆಗ ಆತ ಹೇಳುತ್ತಾನೆ: ಪ್ರಭೂ! ಆ ಕಿಯಾಮತ್ ಒಮ್ಮೆ ಬೇಗ ಬಂದು ಬಿಡಲಿ. ನಾನು ನನ್ನ ಕುಟುಂಬ ಮತ್ತು ಸಂಪತ್ತಿನತ್ತ ಮರಳಿ ಸಾಮೂಹಿಕವಾಗಿ ಸುಖ ಅನುಭವಿಸಬಹುದಲ್ಲವೇ.

ಇನ್ನೊಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ವಿಶ್ವಾಸಿಯ ಆತ್ಮವು ದೇಹದಿಂದ ಹೊರಟರೆ, ಭೂಮಿ-ಆಕಾಶಗಳ ಮಧ್ಯೆ ಇರುವ ಮತ್ತು ಆಕಾಶದಲ್ಲಿರುವ ದೇವಚರರು ಆತನಿಗಾಗಿ ಪ್ರಾರ್ಥಿಸುವರು. ಆಕಾಶದ ಎಲ್ಲಾ ದ್ವಾರಗಳನ್ನು ಆತನಿಗಾಗಿ ತೆರೆಯಲಾಗು ವುದು. ಪ್ರತಿಯೊಂದು ದ್ವಾರದ ದೇವಚರರು ಆದರ ಆಕಾಶಯಾನವು ತಮ್ಮ ಸಮೀಪ ದಿಂದ ಸಾಗಬೇಕೆಂದು ಅಲ್ಲಾಹನೊಡನೆ ವಿನಂತಿಸುವುವು. (ಹದೀಸ್)

ಭ್ರಷ್ಟ ಆತ್ಮದ ಮರಣ

ಇನ್ನು ನಾವು 'ನಫ್ಸ್ ಖಬೀಸ'(ಭ್ರಷ್ಟ ಆತ್ಮ)ದ ಕಠೋರ ಮತ್ತು ದುಃಖಮಯ ಮರಣದ ರೀತಿಯನ್ನು ಪರಿಶೀಲಿಸೋಣ. ಆತ್ಮವನ್ನು ಭ್ರಷ್ಟಗೊಳಿಸಿದ (ಸತ್ಯನಿಷೇಧಿಗಳಾದ ಅಪರಾಧಿ ಗಳು) ವಸ್ತುಶಃ ಮರಣವನ್ನು ಇಷ್ಟಪಡುವುದಿಲ್ಲ. ಅವರು ಬಹಳಷ್ಟು ಬಡಾಯಿ ಕೊಚ್ಚಿ ಕೊಳ್ಳುತ್ತಾರೆ; ಜೀವನ ಪರ್ಯಂತ ದುಷ್ಕರ್ಮಗಳಲ್ಲಿಯೇ ಮುಳುಗಿರುತ್ತಾರೆ; ಅಹಂಕಾರ, ದರ್ಪ, ದೇಹೇಚ್ಛೆ ಇತ್ಯಾದಿ ದುರ್ಭಾವನೆಗಳಿಂದ ತಮ್ಮ ಸ್ವಭಾವವನ್ನು ಹೊಲಸು ಗೊಳಿಸಿರುತ್ತಾರೆ; ಅಂತಹವರನ್ನು ಯಾವ ಸಹಜ ಸ್ವಭಾವದಲ್ಲಿ ಸೃಷ್ಟಿಸಲಾಗಿದೆಯೋ ಆ ಸಹಜ ಸ್ವಭಾವದ ಅಂತಃಪ್ರಜ್ಞೆಯು ಸ್ವಲ್ಪ ಪ್ರಮಾಣದಲ್ಲಾದರೂ ಅವರಲ್ಲಿ ಇರುತ್ತದೆ. ಆಪತ್ಕಾಲ ಗಳಲ್ಲಿ ಅದು ವಿಶೇಷವಾಗಿ ಪ್ರಕಟವಾಗುತ್ತದೆ. ಅವನು ಆದಕ್ಕೆ ನಿತ್ಯ ಮಣಿಯುವುದಿಲ್ಲ ವೆಂಬುದು ಬೇರೆ ಮಾತು. ಈ ವಿಷಯದಲ್ಲಿ ಬಹುದೇವವಿಶ್ವಾಸಿಗಳೂ ನಾಸ್ತಿಕರೂ ಸಮಾನರಾಗಿದ್ದಾರೆ. ನೀನು ಎಂತಹ ದೃಷ್ಟಾಂತಗಳನ್ನು ತೋರಿಸಿದರೂ ನಾನು ನಿನ್ನನ್ನು ನಂಬುವುದಿಲ್ಲ ಎಂದು ಪ್ರವಾದಿ ಮೂಸಾರೊಡನೆ(ಅ) ಖಡಾಖಂಡಿತವಾಗಿ ಹೇಳಿ, ಅವರನ್ನೂ ಇಸ್ಲಾಮ್ ಧರ್ಮವನ್ನೂ ನಾಶಪಡಿಸಲು ತೀವ್ರವಾಗಿ ಪ್ರಯತ್ನಿಸಿದ ಗರ್ವಿಷ್ಠ ನಾಗಿದ್ದ ದುಷ್ಟ ಫಿರ್‌ಔನ್ ಮತ್ತು ಸಂಗಡಿಗರು ಆಪತ್ತು ಬಂದೆರಗಿದಾಗ, "ನಿನ್ನ ಪ್ರಭು ವಿನೊಡನೆ ಪ್ರಾರ್ಥಿಸು, ಈ ವಿಪತ್ತು ನಿವಾರಣೆಯಾದರೆ ನಾವು ನಿನ್ನನ್ನು ನಂಬುತ್ತೇವೆ" ಎಂದು ಹೇಳಿದ್ದರು. ಹಾಗೆಯೇ ಮಕ್ಕಾದಲ್ಲಿ ತೀವ್ರ ಕ್ಷಾಮ ತಲೆದೋರಿದಾಗ ಮುಶ್ರಿಕರು ಪ್ರವಾದಿಯವರ(ಸ) ಬಳಿ

ಬಂದು ಪ್ರಾರ್ಥಿಸಬೇಕೆಂದು ವಿನಂತಿಸಿದುದು ಆ ಆಂತರಿಕ ಪ್ರೇರಣೆಯಿಂದಲೇ ಆಗಿತ್ತು. ತಾನು ಸಹಾಯಕರೆಂದು ಭಾವಿಸಿದ್ದವರಿಂದ ಏನು ಮಾಡಲೂ ಸಾಧ್ಯವಿಲ್ಲವೆಂದು ಭಾಸವಾಗುವಂತಹ ವಿಪತ್ತು ಬಂದಾಗ, ಇನ್ನು ಸೃಷ್ಟಿಕರ್ತನೇ ರಕ್ಷಿಸಬೇಕು ಎಂಬ ಉದ್ಗಾರವು ಕೇವಲ ಮಾಮೂಲು ಮಾತ್ರವಲ್ಲ, ಜೀವನವನ್ನೊಮ್ಮೆ ಅವಲೋಕಿಸಿದರೆ ಇಂತಹ ಮಾನಸಿಕ ತುಮುಲವನ್ನು ಸ್ವಲ್ಪವಾದರೂ ಅನುಭವಿಸದ ವರಿಲ್ಲವೆಂದು ವ್ಯಕ್ತವಾಗಬಹುದು.

ಒಟ್ಟಿನಲ್ಲಿ, ಜೀವನದಲ್ಲಿ ಮಾಡಿದ ದುಷ್ಕೃತ್ಯಗಳ ನೆನಪು ಮತ್ತು ಮಾನಸಿಕ ತುಮುಲವು ಆತನನ್ನು ಮರಣಕ್ಕೆ ಹೆದರುವಂತೆ ಪ್ರೇರೇಪಿಸುತ್ತದೆ. ನಾವು ಅಲ್ಲಾಹನ ಸಂತಾನಗಳು, ಆತನಿಗೆ ಅತ್ಯಂತ ಪ್ರಿಯರಾದವರು, ಪರಲೋಕದ ಅನುಗ್ರಹಗಳು ನಮಗೆ ಮಾತ್ರ ಮೀಸಲೆಂದು ಡಂಗುರ ಸಾರುತ್ತಾ ಮೆರೆಯುತ್ತಿದ್ದ ಯಹೂದಿಯರನ್ನು ಕರೆದು ಅಲ್ಲಾಹ್ ಹೀಗೆ ಹೇಳಿದ್ದಾನೆ, "ಅವರೊಡನೆ ಹೇಳಿರಿ, ಯಹೂದಿಗಳಾಗಿ ಬಿಟ್ಟವರೇ, ಇತರೆಲ್ಲರನ್ನು ಬಿಟ್ಟು ನೀವು ಮಾತ್ರ ಅಲ್ಲಾಹನಿಗೆ ನೆಚ್ಚಿನವರೆಂಬ ಅಭಿಮಾನ ನಿಮಗಿದ್ದರೆ ಮತ್ತು ಅದರಲ್ಲಿ ನೀವು ಸತ್ಯವಂತರಾಗಿದ್ದರೆ ಮರಣವನ್ನು ಅಪೇಕ್ಷಿಸಿರಿ. ಆದರೆ ತಾವು ಮಾಡಿರುವಂತಹ ದುಷ್ಕೃತ್ಯಗಳ ಕಾರಣದಿಂದಾಗಿ ಇವರು ಎಷ್ಟು ಮಾತ್ರಕ್ಕೂ ಅದನ್ನು ಅಪೇಕ್ಷಿಸಲಾರರು ಮತ್ತು ಅಲ್ಲಾಹನು ಈ ಅಕ್ರಮಿಗಳನ್ನು ಚೆನ್ನಾಗಿ ಬಲ್ಲನು." **(ಜುಮುಅಃ 6-7)**

ದುಷ್ಕೃತ್ಯಗಳಲ್ಲಿ ನಿರತರಾದ ಆ ಶೂರರನ್ನೂ ಈ ಮಾನದಂಡದಿಂದ ಸ್ವಯಂ ಅಳೆದು ನೋಡುವುದು ಒಳ್ಳೆಯದು. ಒಟ್ಟಿನಲ್ಲಿ ಆತ್ಮವನ್ನು ಭ್ರಷ್ಟಗೊಳಿಸಿದವರು ಮರಣವನ್ನು ಸ್ವಾಗತಿಸಲು ಸಿದ್ಧರಿರುವುದಿಲ್ಲ, ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವರು. ಸಮಯ ಬಂದಾಗ ಮರಣವು ಅವರನ್ನು ಹಿಡಿದೇ ತೀರುವುದು. "ನೀವು ಪಾರಾಗಲು ಪ್ರಯತ್ನಿಸುತ್ತಿರುವ ಮರಣವು ನಿಮ್ಮನ್ನು ಹಿಡಿದೇ ತೀರುವುದು." **(ಜುಮುಅ: 8)**

ಈ ಸ್ಥಿತಿಯಲ್ಲಿ, ಮರಣಕ್ಕೆ ಹೆದರಿ ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ, ಆತನ ನಿರೀಕ್ಷೆ ಮತ್ತು ಬಯಕೆಗಳಿಗೆ ವಿರುದ್ಧವಾಗಿ ಮರಣವು ಥಟ್ಟನೆ ಆತನನ್ನು ಹಿಡಿಯುತ್ತದೆ. ಕೊಲೆಗಾರನನ್ನು ಬಂಧಿಸಲು ಸಮವಸ್ತ್ರಧಾರಿ ಪೊಲೀಸ್ ಪಡೆಯು ಅನಿರೀಕ್ಷಿತವಾಗಿ ಬರುವಂತೆ. ನೋಡಿದಾಕ್ಷಣ ಹೆದರಿ ನಡುಗುವಂತಹ ಭೀಕರ ವೇಷ ಧರಿಸಿ ಮಲಕುಲ್ ಮೌತ್ (ಮೃತ್ಯು ದೇವಚರ) ಮತ್ತು ತಂಡವು ಆತನನ್ನು ಬಂಧಿಸಿ ಎಳೆದೊಯ್ಯಲಿಕ್ಕಾಗಿ ಸುತ್ತುವರಿಯುತ್ತದೆ. ಆಗಿನ ಅವಸ್ಥೆ ಹೇಗಿರಬಹುದು?

"ಖಂಡಿತ ಅಲ್ಲ, ಪ್ರಾಣವು ಗಂಟಲಿಗೆ ತಲಪುವಾಗ (ಅನುಗ್ರಹದ ದೇವಚರರೋ ಶಿಕ್ಷೆಯ ದೇವಚರರೋ) ಯಾರು ಇದನ್ನು ಕೊಂಡೊಯ್ಯಬೇಕೆಂದು (ದೇವಚರರ ಮಧ್ಯೆ) ವಿವಾದ ಉಂಟಾಗುವುದು. ಐಹಿಕ ಜೀವನದಿಂದ ಅಗಲುವುದು ಖಚಿತವೆಂದು ತಿಳಿದು ಕಾಲುಗಳು ಪರಸ್ಪರ ಸುತ್ತಿಕೊಳ್ಳುವುದು ಅಥವಾ ಆಪತ್ತಿನ ಮೇಲೆ ಆಪತ್ತು ರಾಶಿ ಬೀಳುವುದು. ಹೌದು, ಅಂದು ನಿನ್ನ ಪ್ರಭುವಿನೆಡೆಗೆ ಮರಳುವ ದಿನವಾಗಿರುವುದು."

(ಅಲ್ ಕಿಯಾಮಃ: 26-30)

ದೇವಚರರನ್ನು ನೋಡಿ ಹೆದರಿ ದೇಹದ ಒಳ ಸೇರುವ ಆತ್ಮವು ಹೀಗೆ ಮೊರೆಯಿಡುತ್ತದೆ, "ಪ್ರಭೂ! ನಾನು ಬಿಟ್ಟು ಬಂದ ಆ ಲೋಕಕ್ಕೆ ನನ್ನನ್ನು ಪುನಃ ಕಳುಹಿಸು. ನಾನು ಸತ್ಕರ್ಮಗಳನ್ನೇ ಮಾಡುತ್ತೇನೆ." **(ಮೂಮಿನೂನ್: 99-100)** "ಪ್ರಭೂ! ಸ್ವಲ್ಪ ಸಮಯದ ಮಟ್ಟಿಗೆ ನನ್ನನ್ನು ಹಿಂದಕ್ಕೆ ಕಳುಹಿಸು. ನಾನು ದಾನ ಧರ್ಮಗಳನ್ನು ಮಾಡುತ್ತೇನೆ, ಸಜ್ಜನರೊಂದಿಗೆ ಸೇರುತ್ತೇನೆ." **(ಮುನಾಫಿಕೂನ್: 10)** ಆದರೆ ಅದು ಸಫಲವಾದೀತೇ! "ಅದು ಕೇವಲ ಪ್ರಲಾಪ, ಅವನು ಹಾಗೆ ಹೇಳುತ್ತಿರುವನು." **(ಮೂಮಿನೂನ್: 100)**

ಅಡಗಿ ಕುಳಿತ ಕೊಲೆಗಾರನನ್ನು ಸುತ್ತುವರಿದ ಪೊಲೀಸರು 'ಬಾರೋ ಹೊರಗೆ' ಎಂದು ಬಂದೂಕು ತೋರಿಸಿ ಘರ್ಜಿಸುವಂತೆ, ಆತ್ಮವನ್ನು ಭ್ರಷ್ಟಗೊಳಿಸಿ ಸ್ವಯಂ ಅಕ್ರಮಿಯಾಗಿ ಬದುಕಿ, ಈಗ ಮರಣದ ಭೀಕರ ಕ್ರೌರ್ಯಕ್ಕೆ ಸಿಲುಕಿರುವ ಆ ಮಾನವನೊಡನೆ ದೇವಚರರು ಕೈಬೀಸಿ ಆರ್ಭಟಿಸುತ್ತಾರೆ, "ತನ್ನಿರಿ, ನಿಮ್ಮ ಪ್ರಾಣವನ್ನು ಹೊರತೆಗೆಯಿರಿ. ನೀವು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸಿ ವೃಥಾ ಒದರುತ್ತಿದ್ದುದರ ಹಾಗೂ ಅವನ ನಿದರ್ಶನಗಳಿಗೆ ವಿರುದ್ಧ ಉದ್ಧಟತನ ತೋರುತ್ತಿದ್ದುದರ ಫಲವಾಗಿ ಇಂದು ನಿಮಗೆ ಅಪಮಾನಕರ ಶಿಕ್ಷೆ ನೀಡಲಾಗುವುದು." **(ಅಲ್ ಅನ್ಆಮ್: 93)**

ಹಾ! ಅದೆಂತಹ ಭೀಕರ ದೃಶ್ಯವಾಗಿರಬಹುದು!! ದೇವಚರರ ಈ ಘರ್ಜನೆಯನ್ನು ಕೇಳಿ ಆತ್ಮವು ಹೆದರಿ ನಡುಗಿ ಮತ್ತಷ್ಟು ನುಸುಳಿಕೊಳ್ಳುತ್ತದೆ. ಹೊರಬರುವ ಧೈರ್ಯವಿಲ್ಲ! ಆದರೆ ದೇವಚರರು ಬಿಡುತ್ತಾರೆಯೇ! ಅದೋ ಬೀಸಿದ ಕೈಗಳು ಒಮ್ಮೆಲೆ ಅಪ್ಪಳಿಸುತ್ತವೆ. ಹೊಡೆದು ಬಡಿದು ಆ ಭ್ರಷ್ಟ ಆತ್ಮವನ್ನು ಹೊರಗೆಳೆಯುತ್ತಾರೆ.

"ಅವರು ಅವರ ಮುಖಗಳ ಹಾಗೂ ಸೊಂಟಗಳ ಮೇಲೆ ಪ್ರಹಾರಗಳನ್ನೆಸಗುತ್ತ, 'ಇದೋ ಈಗ ಸುಡುವ ಶಿಕ್ಷೆಯನ್ನು ಸವಿಯಿರಿ. ನಿಮ್ಮ ಸ್ವಹಸ್ತಗಳು ಈ ಮುಂಚೆ ಸಿದ್ಧಗೊಳಿಸಿಟ್ಟಿದ್ದ ಸಾಧನಗಳ ಪ್ರತಿಫಲವಿದು. ಅನ್ಯಥಾ ಅಲ್ಲಾಹನು ತನ್ನ ದಾಸರ ಮೇಲೆ ಅಕ್ರಮವೆಸಗುವವನಲ್ಲ' ಎನ್ನುವರು." **(ಅಲ್ ಅನ್ಫಾಲ್: 50-51)**

ಆತ್ಮವನ್ನು ಹೊರಹಾಕುವುದಕ್ಕಿಂತ ಮುಂಚೆ ದೇವಚರರು ಅವರೊಡನೆ ಕೆಲವು ಪ್ರಶ್ನೆಗಳನ್ನು ಕೇಳುವರು, "ನೀವು ಈ ದುಃಸ್ಥಿತಿಗೆ ಹೇಗೆ ಸಿಲುಕಿದಿರಿ?" ಅವರು ಹೇಳುವರು, "ನಾವೇನು ಮಾಡಲಿ! ನಾವು ಭೂಮಿಯಲ್ಲಿ ಪ್ರಬಲರನ್ನು ಎದುರಿಸಲಾರದಷ್ಟು ಅಶಕ್ತರಾಗಿದ್ದೆವು. ನಾವು ಅವರನ್ನು ಅನುಸರಿಸಿದೆವು. ಆದ್ದರಿಂದ ಅಲ್ಲಾಹನ ಆಜ್ಞೆಯನ್ನು ಉಲ್ಲಂಘಿಸಿ ಬದುಕಬೇಕಾಯಿತು." ಆಗ ದೇವಚರರು, "ಅದೆಲ್ಲ ಹೋಗಲಿ, ಈ ಉಪಾಯವೇನೂ ನಡೆಯಲಾರದು. ಅಲ್ಲಾಹನ ಭೂಮಿ ವಿಶಾಲವಾಗಿರಲಿಲ್ಲವೇ? ನಿಮಗೆ ಬೇರೆಲ್ಲಿಗಾದರೂ ಹೋಗಬಹುದಾಗಿತ್ತಲ್ಲಾ, ನೀವು ಹಾಗೆ ಬಯಸಿರಲಿಲ್ಲವೆಂಬುದೇ ಸತ್ಯ. ಈಗ ಅನುಭವಿಸಿರಿ ನರಕ ಶಿಕ್ಷೆಯನ್ನು." **(ಅನ್ನಿಸಾ: 97)**

"ನೀವು ನಿಮ್ಮ ಅವಶ್ಯಕತೆ ಮತ್ತು ಸಹಾಯಕ್ಕಾಗಿ ಅಲ್ಲಾಹನನ್ನು ಬಿಟ್ಟು ಇತರ ಅನೇಕರನ್ನು ಕರೆದು ಪ್ರಾರ್ಥಿಸುತ್ತಿದ್ದಿರಲ್ಲವೇ? ಅದು ಶಿರ್ಕ್, ಹಾಗೆ ಮಾಡಬಾರದೆಂದು ಹೇಳಿದವರನ್ನು ಬೆದರಿಸುತ್ತಿದ್ದಿರಲ್ಲವೇ? ಈಗ ಅವರು ಎಲ್ಲಿದ್ದಾರೆ? ಯಾರೂ ಕಾಣಿಸುವುದಿಲ್ಲವಲ್ಲ? ಯಾರಾದರೂ ಇದ್ದರೆ ಸಹಾಯಕ್ಕಾಗಿ ಈಗ ಬರಬೇಕಾಗಿತ್ತಲ್ಲವೇ?" ಅವರು ಹೇಳುವರು, "ಅವರು ಕಾಣಿಸುವುದಿಲ್ಲ, ಎಲ್ಲವೂ ನಮಗೆ ನಷ್ಟವಾಯಿತು. ನಾವು ತಪ್ಪು ಮಾಡಿದೆವು. ಹೀಗೆ ನಾವು ಸತ್ಯನಿಷೇಧಿಗಳಾಗಿದ್ದೆವು" ಎಂದು ಅವರು ಸ್ವಯಂ ಸಾಕ್ಷ್ಯ ವಹಿಸುವರು. (ಆಗ) ಹೇಳಲಾಗುವುದು, "ನಿಮಗಿಂತ ಮುಂಚೆ ಗತಿಸಿದ ಜಿನ್ನ್ ಮತ್ತು ಮಾನವರ ಜತೆ ನರಕಕ್ಕೆ ಹೋಗಿರಿ." **(ಅಲ್ ಅಅ್‌ರಾಫ್: 37-38)**

ಸ್ವಯಂ ಅಕ್ರಮಿಗಳಾಗಿ ಆತ್ಮಗಳನ್ನು ಭ್ರಷ್ಟಗೊಳಿಸಿದ ಈ ಮಂದಿ ಅವರ ಆತ್ಮಗಳನ್ನು ಬಂಧಿಸಲಿಕ್ಕಾಗಿ ಬರುವ ದೇವಚರರಿಂದ ಪಾರಾಗಲಿಕ್ಕಾಗಿ ಏನೇನೋ ತಂತ್ರಗಳನ್ನು ಪ್ರಯೋಗಿಸುತ್ತಾರೆ. ನಾವು ಪ್ರಬಲರ ಬಲಾತ್ಕಾರಕ್ಕೆ ಗುರಿಯಾದೆವೆಂದು ಮೊದಲು ಹೇಳಿದರಷ್ಟೆ. ಈಗ ಇನ್ನೊಂದು ತಂತ್ರ. ಹೌದು, ಈ ಸತ್ಯನಿಷೇಧಿಗಳು ತಮ್ಮ ಮೇಲೆ ತಾವೇ ಅಕ್ರಮವೆಸಗುತ್ತಿರುವ ವೇಳೆ ದೇವಚರರ ಕೈಯಲ್ಲಿ ಸೆರೆಸಿಕ್ಕಿದಾಗ (ಹಟಮಾರಿತನವನ್ನು ಬಿಟ್ಟು) ತಕ್ಷಣ ಶರಣು ಹೋಗುತ್ತಾರೆ ಮತ್ತು 'ನಾವೇನೂ ದುಷ್ಕರ್ಮವೆಸಗುತ್ತಿರಲಿಲ್ಲ' ಎಂದು ಹೇಳುತ್ತಾರೆ. ಆಗ ದೇವಚರರು, 'ಏಕಿಲ್ಲ? ಅಲ್ಲಾಹ್ ನೀವು ಮಾಡುತ್ತಿದ್ದ ನಿಮ್ಮ ದುಷ್ಕರ್ಮಗಳನ್ನು ಚೆನ್ನಾಗಿ ಬಲ್ಲವನಾಗಿರುತ್ತಾನೆ. ಈಗ ನರಕ ದ್ವಾರಗಳೊಳಗೆ ನುಗ್ಗಿರಿ. ನಿಮಗೆ ಸದಾ ಇಲ್ಲೇ ಇರಬೇಕಾಗಿದೆ' ಎಂದು ಉತ್ತರ ಕೊಡುವರು. ಒಟ್ಟಿನಲ್ಲಿ ಅಹಂಕಾರಿಗಳ ವಾಸಸ್ಥಾನವು ಅತ್ಯಂತ ನಿಕೃಷ್ಟವಾಗಿದೆ. **(ಅನ್ನಹ್ಲ್: 28-29)**

ಅಯ್ಯೋ! ಈ ಮರಣ ಎಷ್ಟೊಂದು ಕಠೋರ ಮತ್ತು ದುಃಖದಾಯಕ!

ಇನ್ನು ಆ ಕುರಿತು ಪ್ರವಾದಿಯವರ(ಸ) ಮಾತನ್ನು ಸ್ವಲ್ಪ ಕೇಳೋಣ: ಅವಿಶ್ವಾಸಿಯಾದ ದಾಸನ ಐಹಿಕ ಜೀವನ ಅಂತ್ಯವಾಗಿ ಪರಲೋಕ ಜೀವನ ಆರಂಭವಾದರೆ ಆಕಾಶದಿಂದ ಕರಾಳ ಮುಖದ ದೇವಚರರ ತಂಡವು ದೊರಗು ಕರಿಕಂಬಳಿ ಹಿಡಿದು ಇಳಿದು ಬಂದು, ಆತನಿಗೆ ಗೋಚರಿಸುವ ಎಲ್ಲೆಡೆಗಳಲ್ಲಿ ಕುಳಿತುಕೊಳ್ಳುತ್ತವೆ. ಅನಂತರ ಮೃತ್ಯು ದೇವಚರ ಆತನ ತಲೆಯ ಬಳಿ ಬಂದು ಹೀಗೆ ಘರ್ಜಿಸುತ್ತದೆ, ಹೇ ಭ್ರಷ್ಟ ಆತ್ಮವೇ! ಅಲ್ಲಾಹನ ಕ್ರೋಧದತ್ತ ಬಾ. ಆಗ ಅದು ದೇಹದೊಳಗೆ ಅಡಗಿಕೊಳ್ಳಲು ಪ್ರಯತ್ನಿಸುತ್ತದೆ. ಅನೇಕ ಕೊಕ್ಕೆಗಳಿರುವ ಕಬ್ಬಿಣದ ಸರಳನ್ನು ಒದ್ದೆ ಹತ್ತಿಯ ರಾಶಿಯಿಂದ ಹೊರಗೆಳೆಯುವಂತೆ ದೇವಚರರು ದೇಹದೊಳಗಿಂದ ಆ ಆತ್ಮವನ್ನು ಎಳೆಯುತ್ತಾರೆ. ಆ ಕೂಡಲೇ ಮೃತ್ಯು ದೇವಚರ ಅದನ್ನು ಇತರರಿಗೆ ಒಪ್ಪಿಸಿ, ತಕ್ಷಣ ಅವರು ಅದನ್ನು ಕರಿಕಂಬಳಿಯಲ್ಲಿ ಸುತ್ತುತ್ತಾರೆ. ಹೀಗೆ ಅದರೊಂದಿಗೆ ಅವರು ಮೇಲೇರುವಾಗ ದಾರಿಯಲ್ಲಿ ಕಾಣಿಸುವ ಎಲ್ಲ ದೇವಚರ ವೃಂದಗಳು, ಈ ಭ್ರಷ್ಟ ಆತ್ಮ ಯಾವುದು? ಎಂದು ಪ್ರಶ್ನಿಸುತ್ತವೆ. ಭೂಮಿಯಲ್ಲಿ ಆತನನ್ನು ಕರೆಯುತ್ತಿದ್ದ ಅತ್ಯಂತ ಕೆಟ್ಟ ಹೆಸರಿನಿಂದ ಅವರು ಅದರ ಪರಿಚಯ ತಿಳಿಸುತ್ತಾರೆ. ಈ ರೀತಿ ಅವರು ಮೊದಲ ಆಕಾಶಕ್ಕೆ ತಲಪಿ, ತೆರೆಯಲು ವಿನಂತಿಸಿದಾಗ ತೆರೆಯಲ್ಪಡದೆ ಹತಾಶರಾಗುತ್ತಾರೆ. ಇಲ್ಲಿ ಪ್ರವಾದಿವರ್ಯರು, “ಆಕಾಶದ ದ್ವಾರಗಳು ಅವರಿಗೆ ತೆರೆಯಲ್ಪಡುವುದಿಲ್ಲ, ಸೂಜಿಯ ತೂತಿನಿಂದ ಒಂಟೆ ದಾಟಿ ಹೋಗುವ ತನಕ ಅವರು ಸ್ವರ್ಗ ಪ್ರವೇಶಿಸಲಾರರು” (**ಅಅ್‌ರಾಫ್: 40**) ಎಂಬ ಕುರ್‌ಆನ್ ವಾಕ್ಯವನ್ನು ಓದಿದರು.

ಆಗ ಅಲ್ಲಾಹನು ಹೇಳುವನು, ಆತನ ಕರ್ಮಗಳ ಕಡತಗಳನ್ನು ಭೂಮಿಯ ಅತ್ಯಂತ ಕೆಳಸ್ತರವಾಗಿರುವ ‘ಸಿಜ್ಜೀನ್’ನಲ್ಲಿ ದಾಖಲಿಸಿರಿ. ಆ ಮಾತುಗಳನ್ನು ಕೇಳಿದ ಕೂಡಲೇ ದೇವಚರರು ಆ ಆತ್ಮವನ್ನು ಎಸೆದು ಬಿಡುತ್ತಾರೆ. ಅನಂತರ ಪ್ರವಾದಿವರ್ಯರು(ಸ), “ಅಲ್ಲಾಹನಿಗೆ ಸಹಭಾಗಿಗಳನ್ನು ಮಾಡುವವರು ಆಕಾಶದಿಂದ ಬೀಳುವವನಂತಿರುತ್ತಾರೆ. ಅವರನ್ನು ಪಕ್ಷಿಗಳು ಕಿತ್ತುಕೊಳ್ಳುತ್ತವೆ ಅಥವಾ ಗಾಳಿಯು ಆತನನ್ನು ಯಾವುದಾದರೂ ವಿದೂರ ಸ್ಥಳಕ್ಕೆ ದೂಡಿ ಬಿಡುತ್ತದೆ” (**ಹಜ್ಜ್: 31**) ಎಂಬ ವಾಕ್ಯವನ್ನು ಪಠಿಸಿದರು. ಹೀಗೆ ಆ ಆತ್ಮವನ್ನು ದೇಹಕ್ಕೆ ಮರಳಿಸಲಾಗುವುದು. ಆ ಕೂಡಲೇ ಎರಡು ದೇವಚರರು ಬಂದು ಆತನನ್ನು ಎಬ್ಬಿಸಿ ಕುಳ್ಳಿರಿಸಿ ಪ್ರಶ್ನಿಸುವರು:

‘ನಿನ್ನ ಪ್ರಭು ಯಾರು?’

‘ಅಯ್ಯೋ! ನನಗೆ ತಿಳಿದಿಲ್ಲ.’

‘ನಿನ್ನ ಧರ್ಮ ಯಾವುದು?’

'ಹಾ! ತಿಳಿದಿಲ್ಲ.'

'ನಿಮ್ಮೆಡೆಗೆ ಕಳುಹಿಸಲ್ಪಟ್ಟ ಆ ವ್ಯಕ್ತಿ ಯಾರು?'

'ಅಯ್ಯೋ! ಏನೂ ತಿಳಿದಿಲ್ಲ.'

ಆಗ ಆಕಾಶದಿಂದ ಒಂದು ಕರೆ ಕೇಳಿಸುವುದು. 'ಆತ ಸುಳ್ಳುಗಾರ ಆತನಿಗೆ ನರಕದ ಹಾಸಿಗೆ ಹಾಸಿರಿ. ನರಕದ ಒಂದು ಬಾಗಿಲನ್ನು ತೆರೆದಿರಿಸಿರಿ!' ಅಷ್ಟರಲ್ಲಿ ನರಕದ ತೀವ್ರ ಬಿಸಿಯು ಅಲ್ಲೆಲ್ಲ ವ್ಯಾಪಿಸುವುದು. ಆತನ ಪಕ್ಕೆಲುಬುಗಳು ಸೇರಿಕೊಳ್ಳುವ ರೀತಿಯಲ್ಲಿ ಸಮಾಧಿಯು ಇಕ್ಕಟ್ಟಾಗುವುದು. ಅದೋ ಒಬ್ಬನು ಬರುತ್ತಿದ್ದಾನೆ! ದುರ್ಗಂಧ ಸೂಸುತ್ತಾ! ಅತ್ಯಂತ ಕೊಳಕು ವಸ್ತ್ರಗಳನ್ನು ಆತ ಧರಿಸಿರುತ್ತಾನೆ. ಅತ್ಯಂತ ವಿಕಾರ ಮುಖ. ಆತ ಹೇಳುತ್ತಾನೆ, "ನಿನಗೆ ಮಹಾ ನಷ್ಟ, ನಷ್ಟವನ್ನು ತಿಳಿಸಲಿಕ್ಕಾಗಿ ನಾನು ಬಂದಿದ್ದೇನೆ. ಈಗ ತಿಳಿಯಿತೆ! ಇದು ನಿನಗೆ ಎಚ್ಚರಿಕೆ ನೀಡಿದ್ದಂತಹ ದಿನ!" ಆಗ, 'ನೀನು ಯಾರು! ನಿನ್ನ ಮುಖ ನೋಡುವುದೇ ಹಾಳು!' ಎಂದು ಆತ ಹೇಳುತ್ತಾನೆ. 'ಓಹೋ ನಾನೋ, ಗುರುತು ಸಿಗಲಿಲ್ಲವೇ, ನಿನ್ನ ಆ ದುಷ್ಕರ್ಮಗಳು ನಾನೇ' ಆಗ ಆತ ಹೇಳುತ್ತಾನೆ, 'ಪ್ರಭೂ! ಆ ಕಿಯಾಮತ್ ಸದ್ಯಕ್ಕೆ ಬಾರದಿರಲಿ.'

ಇನ್ನೊಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಬೆವರಿನಲ್ಲಿ ಮುಳುಗಿದ ಆ ಭ್ರಷ್ಟ ಆತ್ಮವನ್ನು ಹೊರತೆಗೆಯುವಾಗ ಭೂಮಿ-ಆಕಾಶಗಳ ಮಧ್ಯೆ ಮತ್ತು ಆಕಾಶಗಳಲ್ಲಿರುವ ಎಲ್ಲ ದೇವಚರರೂ ಅದನ್ನು ಶಪಿಸುತ್ತಾ ಆಕಾಶ ದ್ವಾರಗಳನ್ನು ಮುಚ್ಚುವರು. ಪ್ರತಿಯೊಂದು ದ್ವಾರದಲ್ಲಿರುವ ದೇವಚರರು, ಅದನ್ನು ಇಲ್ಲಿಗೆ ಕಳುಹಿಸಬಾರದೆಂದು ಪ್ರಾರ್ಥಿಸುತ್ತಿರುತ್ತಾರೆ. **(ಅಹ್ಮದ್)**

❖ ❖ ❖ ❖

ಅಧ್ಯಾಯ 02

ಬರ್ಝಖ್ (ಮಧ್ಯ ಕಾಲಾವಧಿ)

"ಅವರ ಹಿಂದೆ ಅವರನ್ನು ಪುನಃ ಜೀವಂತಗೊಳಿಸಲಾಗುವ ವರೆಗಿನ ಬರ್ಝಖ್ (ಮಧ್ಯ ಕಾಲಾವಧಿ) ಇದೆ." **(ಅಲ್ ಮೂಮಿನೂನ್: 100)**

ಮಾನವರು ಮರಣದ ಕವಾಟದ ಮೂಲಕ 'ಆಲಮುಲ್ ಬರ್ಝಖ್' ಎಂಬ ಪರಲೋಕದ ಪ್ರಥಮ ಹಂತವನ್ನು ಪ್ರವೇಶಿಸುತ್ತಾರೆ. ಅದು ಆತ್ಮ ಪ್ರಧಾನವೆಂದು ಈ ಹಿಂದೆ ಹೇಳಿದೆಯಷ್ಟೆ. ಆದರೆ ಅಲ್ಲಿಗೆ ತಲುಪಿದ ಅನಂತರದ ಸ್ಥಿತಿ ಹೇಗಿರುತ್ತದೆ ಎಂಬುದನ್ನು ನೋಡೋಣ.

ನಿಧನರಾದ ಮಾನವರನ್ನು ನಾವು ಸಾಮಾನ್ಯವಾಗಿ ದಫನ ಮಾಡುತ್ತೇವೆ. ದಫನವೆಂದರೆ ಭೂಮಿಯಲ್ಲಿ ಒಂದು ಗುಂಡಿ ತೋಡಿ ಅದರಲ್ಲಿ ಮಲಗಿಸಿ ಮುಚ್ಚುವುದು. ಕೆಲವರು ಕಳೇಬರವನ್ನು ಹೂಳುವ ಬದಲಾಗಿ ಸುಟ್ಟು ಬೂದಿಯನ್ನು ನೀರಿನಲ್ಲಿ ತೇಲಿಸಿ ಬಿಡುತ್ತಾರೆ ಅಥವಾ ಗಾಳಿಯಲ್ಲಿ ಹಾರಿಸಿ ಬಿಡುತ್ತಾರೆ. ನೌಕಾಯಾನದ ವೇಳೆ ಮರಣ ಹೊಂದಿದರೆ ಸಮುದ್ರಕ್ಕೆ ಎಸೆದು ಬಿಡುತ್ತಾರೆ. ಮರಣ ಮತ್ತು ಪುನರುತ್ಥಾನದ ಮಧ್ಯೆ ಮಾನವನ ಆತ್ಮ ಮತ್ತು ದೇಹಾಂಶಗಳು ನೆಲೆಸುವ ವ್ಯಾಪ್ತಿಯನ್ನು 'ಬರ್ಝಖ್' ಎನ್ನಲಾಗುತ್ತದೆ. ಈ ವಿಶಾಲ ಅರ್ಥವನ್ನು ಕಬರ್ (ಗೋರಿ) ಎಂಬ ಪದಕ್ಕೂ ಅನ್ವಯಗೊಳಿಸಬಹುದು. ಮಣ್ಣಿನೊಳಗೆ, ಸಮುದ್ರದಾಳ, ಮೃಗಪಕ್ಷಿಗಳ ಹೊಟ್ಟೆ ಮತ್ತು ಆಕಾಶ ಮಂಡಲ ಇತ್ಯಾದಿಗಳೆಲ್ಲವೂ ಅದರಲ್ಲಿ ಸೇರಿವೆ.

"ಅಲ್ಲಾಹನು ಖಂಡಿತವಾಗಿಯೂ ಸಮಾಧಿಗಳೊಳಗೆ ಹೋಗಿರುವವರನ್ನು ಎಬ್ಬಿಸುವನು" **(ಅಲ್ ಹಜ್ಜ್: 7)** ಎಂಬುದರಲ್ಲಿ ಈ ವಿಶಾಲ ಅರ್ಥ ಅಡಗಿದೆ.

ಈ ವಚನದ ಸಂಕ್ಷಿಪ್ತ ತಾತ್ಪರ್ಯವೇನೆಂದರೆ, ಕಬರ್‌ನಲ್ಲಿ (ಸಮಾಧಿಯಲ್ಲಿ) ನಡೆಯುವ ಪ್ರಶ್ನೋತ್ತರ ಅಥವಾ ಸುಖ–ದುಃಖಗಳ ಅನುಭವವು ನೆಲದಲ್ಲಿ ದಫನರಾದವರಿಗೆ ಮಾತ್ರವಲ್ಲ ಇತರ ರೀತಿಯಿಂದ ಬರ್ಝಖ್ ಪ್ರವೇಶಿಸಿದವರಿಗೂ ಆಗುತ್ತದೆ.

ನಿದ್ದೆ ಮತ್ತು ಮರಣ

ದೇಹ ಪ್ರಧಾನವಾದ ಭೌತಿಕ ಲೋಕದಲ್ಲಿ ಬದುಕುವ ನಮಗೆ ಆಧ್ಯಾತ್ಮಿಕ ಲೋಕದ ಅಥವಾ 'ಆಲಮುಲ್ ಬರ್ಝಖ್'ನ ವಿಷಯಗಳ ಕುರಿತು ಸಾಮಾನ್ಯ ತಿಳುವಳಿಕೆ ನೀಡುವ ಕೆಲವು ಸೌಲಭ್ಯಗಳನ್ನು ಅಲ್ಲಾಹನು ನಮಗೆ ಒದಗಿಸಿದ್ದಾನೆ. ನಮ್ಮ ನಿದ್ದೆಯು ಅದರಲ್ಲಿ ಅತೀ ಪ್ರಧಾನವಾಗಿದೆ. ನಿದ್ದೆ ಮತ್ತು ಮರಣಕ್ಕೆ ಬಹಳಷ್ಟು ಸಾಮ್ಯತೆಯಿದೆ. ಆದ್ದರಿಂದಲೇ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಹೆಚ್ಚಿನ ಕಡೆ ಮರಣವನ್ನು ನಿದ್ದೆಯೆಂದೂ ನಿದ್ದೆಯನ್ನು ಮರಣವೆಂದೂ ಪ್ರಯೋಗಿಸಲಾಗಿದೆ. ಕೆಲವು ಉದಾಹರಣೆಗಳನ್ನು ನೋಡಿ:

"ಮರಣದ ವೇಳೆ ಆತ್ಮಗಳನ್ನು ವಶಪಡಿಸಿಕೊಳ್ಳುವವನು ಅಲ್ಲಾಹನೇ ಮತ್ತು ಇನ್ನೂ ಸಾಯದಿದ್ದವನ ಆತ್ಮವನ್ನು ನಿದ್ರಾವಸ್ಥೆಯಲ್ಲಿ ವಶಪಡಿಸಿಕೊಳ್ಳುವವನೂ ಅವನೇ. ಅವನು ಯಾವುದರ ಮೇಲೆ ಮರಣದ ತೀರ್ಮಾನವನ್ನು ಜಾರಿಗೊಳಿಸುತ್ತಾನೋ ಅದನ್ನು ತಡೆಯುತ್ತಾನೆ ಮತ್ತು ಇತರ ಆತ್ಮಗಳನ್ನು ಒಂದು ನಿರ್ದಿಷ್ಟ ಕಾಲದ ವರೆಗಾಗಿ ಹಿಂದಕ್ಕೆ ಕಳುಹಿಸುತ್ತಾನೆ. ನಿಶ್ಚಯವಾಗಿಯೂ ವಿಚಾರಶೀಲರಿಗೆ ಇದರಲ್ಲಿ ದೊಡ್ಡ ನಿದರ್ಶನಗಳಿವೆ." (ಅಝ್ಝುಮರ್: 42)

ಈ ಕುರ್‌ಆನ್ ವಾಕ್ಯ ಬಹಳ ಸ್ಪಷ್ಟವಾಗಿದೆ. ಮರಣದ ವೇಳೆ ಆತ್ಮವನ್ನು ವಶ ಪಡಿಸಿಕೊಳ್ಳುವಂತೆಯೇ ನಿದ್ರಾ ವೇಳೆಯಲ್ಲಿಯೂ ವಶಪಡಿಸಿಕೊಳ್ಳಲಾಗುವುದೆಂದು ಹೇಳಲಾಗಿದೆ. ಅದರ ಇಂಗಿತವೇನು? ವಶಪಡಿಸಿಕೊಳ್ಳುವುದು ಹೇಗೆ? ಅದರ ಜ್ಞಾನ ನಮಗಿಲ್ಲ, ನಾವು ಕೇವಲ ಕೆಲವು ಅನುಭವಗಳನ್ನು ಅರಿತಿದ್ದೇವೆ. ನಿದ್ರಿಸುವಾಗ ನಮ್ಮ ದೃಶ್ಯ, ಶ್ರವಣ, ಬುದ್ಧಿ ಹಾಗೂ ಇತರ ಇಂದ್ರಿಯಗಳ ಕ್ರಿಯೆ ನಮಗೆ ತಿಳಿಯುವುದಿಲ್ಲ, ಕಣ್ಣು ಮುಚ್ಚಿಕೊಂಡಿರುತ್ತದೆ. ರೆಪ್ಪೆಗಳು ಮುಚ್ಚಿರದಿದ್ದರೂ ನಮಗೇನೂ ಕಾಣಿಸುವುದಿಲ್ಲ, ಪರಿಸರದ ಸದ್ದುಗದ್ದಲಗಳು ನಮಗೆ ಕೇಳಿಸುವುದಿಲ್ಲ, ಯಾವುದರ ಬಗ್ಗೆಯೂ ನಾವು ಆಲೋಚಿಸುವುದಿಲ್ಲ, ಇರುವೆ, ಹಾವು ಇತ್ಯಾದಿ ಕಚ್ಚಲು ಬಂದರೆ ನಮಗೆ ತಿಳಿಯು ವುದಿಲ್ಲ, ಅವು ಸುಲಭವಾಗಿ ಕಚ್ಚಬಹುದು. ಯಾರಾದರೂ ನಮ್ಮನ್ನು ಕಡಿದು ಕೊಲ್ಲ ಬಂದರೂ ಆ ಕಾರ್ಯ ಸುಸೂತ್ರವಾಗಿ ಈಡೇರುತ್ತದೆ. ನಮ್ಮ ವಿವೇಚನಾ ಶಕ್ತಿ ಮತ್ತು ಇಚ್ಛಾಶಕ್ತಿಗಳೆಲ್ಲವೂ ಮರೆಯಾಗಿರುತ್ತದೆ. ಪರಿಸರ ಪ್ರಜ್ಞೆ ಸಂಪೂರ್ಣವಾಗಿ ಹೋಗಿ ಬಿಡುತ್ತದೆ. ಇವೆಲ್ಲವೂ ಅಲ್ಲಾಹನು ಆತ್ಮಗಳನ್ನು ವಶ ಪಡಿಸಿಕೊಳ್ಳುವನೆಂಬುದರ ಇಂಗಿತವಾಗಿರಬಹುದೇ? ಮರಣ ಮತ್ತು ನಿದ್ರೆ ಹಲವು ವಿಷಯಗಳಲ್ಲಿ ಸಾಮ್ಯತೆ

ಹೊಂದಿದೆಯೆಂಬುದನ್ನು ಅನುಭವದಿಂದ ನಾವು ಅರಿತಿದ್ದೇವೆ. ನಾವು ಪುನಃ ಏಳ ಬಹುದೇ? ಅದೂ ನಮಗೆ ತಿಳಿದಿಲ್ಲ. ನಿದ್ರಿಸಿದವರು ನಿದ್ರಾವಸ್ಥೆಯಲ್ಲಿಯೇ ಮರಣ ಹೊಂದಿದ ಘಟನೆಗಳನ್ನು ನಾವು ನೋಡಿದ್ದೇವೆ. ಆದ್ದರಿಂದಲೇ ನಿದ್ರಿಸಲು ಮಲಗುವಾಗ ಹೀಗೆ ಪ್ರಾರ್ಥಿಸಬೇಕೆಂದು ಪ್ರವಾದಿ(ಸ) ಕಲಿಸಿದ್ದಾರೆ: "ಅಲ್ಲಾಹನೇ ನಿದ್ದೆಯಲ್ಲಿ ನೀನು ವಶಪಡಿಸಿಕೊಂಡ ನನ್ನ ಆತ್ಮವನ್ನು ಮರಳಿಸದೆ ಅಲ್ಲಿಯೇ ತಡೆಹಿಡಿದರೆ ನಿನ್ನ ಕರುಣೆಯನ್ನು ಅದಕ್ಕೆ ದಯಪಾಲಿಸು! ಒಂದು ವೇಳೆ ಮರಳಿಸುವುದಿದ್ದರೆ ನಿನ್ನ ಉತ್ತಮ ದಾಸರಿಗೆ ನೀಡುವ ಎಲ್ಲ ಸಂರಕ್ಷಣೆಗಳನ್ನು ಅದಕ್ಕೆ ಅನುಗ್ರಹಿಸು!"

ಮರಣದ ನಿರ್ದಿಷ್ಟ ಅವಧಿ ಮುಗಿದರೆ ಅಲ್ಲಿಯೇ ತಡೆಹಿಡಿಯಲಾಗುವುದು, ಅವಧಿ ಮುಗಿದಿಲ್ಲದಿದ್ದರೆ ಮರಳಿಸಲಾಗುವುದೆಂದು ಅಲ್ಲಾಹನೇ ಹೇಳಿರುವನಷ್ಟೆ. ಇದು ಜೀವನದಲ್ಲಿ ಯಾವಾಗಲಾದರೊಮ್ಮೆ ಅನುಭವವಾಗುವ ಘಟನೆಗಳಲ್ಲ. ಬದಲಾಗಿ ದಿನನಿತ್ಯ ಪ್ರತಿರಾತ್ರೆಯೂ ಅನುಭವವಾಗುವ ಪ್ರಕ್ರಿಯೆಯಾಗಿದೆ.

"ಅವನೇ ರಾತ್ರಿಕಾಲದಲ್ಲಿ ನಿಮ್ಮ ಪ್ರಾಣಹರಣ ಮಾಡುತ್ತಾನೆ ಮತ್ತು ಹಗಲಲ್ಲಿ ನೀವು ಮಾಡುತ್ತಿರುವುದನ್ನೆಲ್ಲ ಅವನು ಅರಿಯುತ್ತಾನೆ. ಅನಂತರ ಜೀವನಾವಧಿಯನ್ನು ಪೂರ್ಣಗೊಳಿಸಲಿಕ್ಕಾಗಿ ಮರುದಿನ ನಿಮ್ಮನ್ನು ಅದೇ ವ್ಯವಹಾರ ಜಗತ್ತಿಗೆ ಮರಳಿಸುತ್ತಾನೆ."

(ಅಲ್ ಅನ್‌ಆಮ್: 60)

ಸಹಸ್ರಾರು ವರ್ಷಗಳ ಹಿಂದೆ ಮರಣ ಹೊಂದಿದವರಿಗೂ ಕಿಯಾಮತ್‌ನಂದು (ಅಂತ್ಯ ದಿನ) ಪುನಃ ಜೀವಂತಗೊಳಿಸಲಾಗುವಾಗ ನಿದ್ದೆಯಿಂದ ಎಚ್ಚೆತ್ತ ಭಾವನೆ ಯುಂಟಾಗುತ್ತದೆ. ಅವರು ಹೇಳುವರು, "ನಮ್ಮನ್ನು ನಮ್ಮ ಶಯನಗೃಹದಿಂದ ಎಬ್ಬಿಸಿದವರಾರು?" **(ಯಾಸೀನ್: 52)**

ಅದೊಂದು ದಿನ ತಹಜ್ಜುದ್ ನಮಾಝ್‌ಗಾಗಿ ಏಳದ ಬಗ್ಗೆ ಪ್ರವಾದಿವರ್ಯ ರೊಡನೆ(ಸ) ಅಲೀ(ರ) ವಿಚಾರಿಸಿದಾಗ ಪ್ರವಾದಿ(ಸ) ಹೀಗೆ ಹೇಳಿದ್ದರು, "ನಿದ್ರಿಸಿದಾಗ ನಮ್ಮ ಆತ್ಮಗಳು ನಮ್ಮ ನಿಯಂತ್ರಣದಿಂದ ಮುಕ್ತವಾಗುವುದಲ್ಲವೇ. ಆತನು ಬಯಸಿ ದಾಗ ನಮ್ಮನ್ನು ಪುನಃ ಜೀವಂತಗೊಳಿಸುತ್ತಾನೆ." **(ಬುಖಾರಿ)**

"ಸಮಾಧಿಯಲ್ಲಿ ಪ್ರಶ್ನೋತ್ತರ ಮುಗಿದ ಬಳಿಕ ಸಜ್ಜನ(ನಫ್ಸ್ ತಯ್ಯಿಬಃ)ನಾಗಿದ್ದರೆ 'ಮದುಮಗ ನಿದ್ರಿಸಿದಂತೆ ಸುಖವಾಗಿ ನಿದ್ರಿಸಿರಿ' ಎಂದು ಹೇಳಲಾಗುವುದು." **(ತಿರ್ಮಿದಿ)**

ನಿದ್ರಿಸಲಿಕ್ಕಾಗಿ ಮಲಗುವಾಗ ಮರಣದ ಭಾವನೆ ಮೂಡಲಿಕ್ಕಾಗಿ, "ಅಲ್ಲಾಹನೇ ನಿನ್ನ ನಾಮದಿಂದ ನಾನು ಸಾಯುತ್ತೇನೆ ಮತ್ತು ನಿನ್ನ ನಾಮದಿಂದ ಬದುಕುತ್ತೇನೆ"

ಎಂದು ಹೇಳಬೇಕೆಂದು ಪ್ರವಾದಿ(ಸ) ಕಲಿಸಿದ್ದಾರೆ. ನಿದ್ದೆಯಿಂದ ಎದ್ದಾಗ ಅದೇ ಭಾವನೆ ಮೂಡಿಸಲಿಕ್ಕಾಗಿ, "ನಮ್ಮನ್ನು ಸಾಯಿಸಿದ ಬಳಿಕ ಜೀವಂತಗೊಳಿಸಿದ ಅಲ್ಲಾಹನಿಗೆ ಸರ್ವಸ್ತುತಿ. ಈ ಏಳುವಿಕೆಯೂ ಅವನ ಬಳಿಗೇ ಆಗಿದೆ" ಎಂದು ಹೇಳಬೇಕೆಂದು ಕಲಿಸಲಾಗಿದೆ. ಒಟ್ಟಿನಲ್ಲಿ ನಿದ್ದೆಯು ಒಂದು ರೀತಿಯ ಮರಣ, ಮರಣವು ಒಂದು ರೀತಿಯ ನಿದ್ದೆ, ಅವುಗಳಲ್ಲಿ ಬಹಳಷ್ಟು ಸಾಮ್ಯತೆಯಿದೆಯೆಂದು ಈ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ.

ಕನಸು

ಇಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ನಮಗೆಲ್ಲರಿಗೂ ಕನಸು ಬೀಳುತ್ತದೆ. ನಾವು ಅದಕ್ಕೆ ವಿಶೇಷ ಪ್ರಾಮುಖ್ಯತೆ ನೀಡುವುದಿಲ್ಲ. ಕನಸು ಎಂದರೇನು? ಇಂದಿನ ಮುಸ್ಲಿಮರಿಗೆ ಸಾಮಾನ್ಯವಾಗಿ ಆ ಕುರಿತು ಹೆಚ್ಚೇನೂ ತಿಳಿದಿಲ್ಲ, ತಿಳಿಯಲು ಪ್ರಯತ್ನಿಸಿಯೂ ಇಲ್ಲ. ಆಧುನಿಕ ವಿಜ್ಞಾನಿಗಳು ಕನಸಿನ ಅಧ್ಯಯನ ನಡೆಸಿ ವಿವಿಧ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಈಗಲೂ ಅಧ್ಯಯನ ನಡೆಸುತ್ತಿದ್ದಾರೆ. ಪ್ರಾಚೀನ ಮುಸ್ಲಿಮರು ಕನಸಿನ ಅಧ್ಯಯನ ನಡೆಸಿ ಹಲವು ವ್ಯಾಖ್ಯಾನಗಳನ್ನು ದಾಖಲಿಸಿದ್ದಾರೆ. ಹಳೆಯ ವಿಜ್ಞಾನಿಗಳೂ ಆ ಕೆಲಸ ಮಾಡಿದ್ದಾರೆ. ಪ್ರವಾದಿ ಇಬ್ರಾಹೀಮ್(ಅ)ರು ಕನಸಿನ ಆಧಾರದಲ್ಲಿಯೇ ತಮ್ಮ ಪುತ್ರನ ಬಲಿಗೆ ಸಿದ್ಧರಾಗಿದ್ದರು. ಈಜಿಪ್ಟ್‌ನ ರಾಜನಿಗೆ ಬಿದ್ದ ಕನಸಿಗೆ ಯೂಸುಫ್(ಅ)ರು ನೀಡಿದ ವ್ಯಾಖ್ಯಾನದಿಂದ ಆ ದೇಶಕ್ಕೆ ಕ್ಷಾಮವನ್ನು ಬಗೆಹರಿಸಲು ಸಾಧ್ಯವಾಯಿತು. ಯೂಸುಫ್(ಅ)ರಿಗೆ ಸಂಬಂಧಿಸಿ ಕುರ್‌ಆನಿನಲ್ಲಿ ಹಲವು ಸ್ವಪ್ನ ಕತೆಗಳಿವೆ. ಕನಸಿನ ವ್ಯಾಖ್ಯಾನ ಜ್ಞಾನವು ಅಲ್ಲಾಹನು ಯೂಸುಫ್‌ರಿಗೆ(ಅ) ನೀಡಿದ ಮಹಾ ಅನುಗ್ರಹವೆಂದು ಎತ್ತಿ ಹೇಳಲಾಗಿದೆ. (ಯೂಸುಫ್: 37)

ಇದೆಲ್ಲವೂ ಕುರ್‌ಆನ್‌ನಲ್ಲಿದೆ. ಪ್ರವಾದಿ ಮುಹಮ್ಮದ್‌ರಿಗೆ(ಸ) ಕನಸಿನ ಮೂಲಕ 'ವಹ್ಯ್' ಆರಂಭಗೊಂಡಿತು. ಸತ್ಯವಿಶ್ವಾಸಿಯ ಕನಸು ಪ್ರವಾದಿತ್ವದ ನಲ್ವತ್ತಾರನೇ ಒಂದು ಭಾಗವೆಂದು ಪ್ರವಾದಿ(ಸ) ಕಲಿಸಿದ್ದಾರೆ. (ಮುಸ್ಲಿಮ್) ಸತ್ಯನಿಷ್ಠರ ಕನಸು ಅಧಿಕ ವಸ್ತುನಿಷ್ಠವಾಗಿರುವುದು. (ಮುಸ್ಲಿಮ್)

"ಉತ್ತಮ ಕನಸುಗಳು ಅಲ್ಲಾಹನಿಂದ ಬರುತ್ತದೆ. ದುಃಸ್ವಪ್ನಗಳು ಪಿಶಾಚಿಯದ್ದಾಗಿದೆ. ನೀವು ಉತ್ತಮ ಕನಸುಗಳನ್ನು ಕಂಡರೆ ಸಂತೋಷಪಡಿರಿ. ಅದನ್ನು ನಿಮ್ಮ ಆಪ್ತಮಿತ್ರರೊಡನೆ ಮಾತ್ರ ಹೇಳಬಹುದು" ಎಂಬ ಹದೀಸ್ ಇದೆ. ಇನ್ನೊಂದೆಡೆ ಕನಸು ಅಲ್ಲಾಹನಿಂದ, ಹುಸಿಗನಸು ಪಿಶಾಚಿಯಿಂದ ಎಂದೂ ಹೇಳಲಾಗಿದೆ. "ಯಾರಿಗಾದರೂ ಅರೋಚಕವಾದ ಹುಸಿಗನಸುಗಳು ಬಿದ್ದರೆ ಎಡಮಗ್ಗುಲಿಗೆ ಮೂರು ಬಾರಿ

ಉಗುಳಿ, ಅಲ್ಲಾಹನ ಅಭಯ ಯಾಚಿಸಿ ಮಗ್ಗುಲು ಬದಲಿಸಬೇಕು ಮತ್ತು ಆ ಕನಸನ್ನು ಯಾರೊಡನೆಯೂ ಹೇಳಬಾರದು, ಆದರಿಂದ ಆತನಿಗೆ ಯಾವ ಉಪದ್ರವವೂ ಆಗುವುದಿಲ್ಲ" ಎಂದು ಪ್ರವಾದಿ(ಸ) ಕಲಿಸಿದ್ದಾರೆ. (ಮುಸ್ಲಿಮ್)

ಒಮ್ಮೆ ಒಬ್ಬರು ಪ್ರವಾದಿಯವರ(ಸ) ಬಳಿ ಬಂದು, ನನ್ನ ತಲೆಯನ್ನು ಕಡಿದು ಅದು ಉರುಳುತ್ತಾ ಹೋಗುವಾಗ ನಾನು ಅದರ ಹಿಂದೆ ಓಡುವ ಕನಸು ಕಂಡೆನು ಎಂದು ತಿಳಿಸಿದಾಗ ಪ್ರವಾದಿವರ್ಯರು(ಸ) ಅವರಿಗೆ ಎಚ್ಚರಿಕೆ ನೀಡಿ, "ಅದು ಪಿಶಾಚಿ ನಿನ್ನನ್ನು ಆಟವಾಡಿಸಿದ್ದಾಗಿದೆ. ಅದನ್ನು ಯಾರಿಗೂ ತಿಳಿಸಬೇಡ" ಎಂದರು. (ಮುಸ್ಲಿಮ್)

ಪ್ರವಾದಿ(ಸ) ಮತ್ತು ಅನುಯಾಯಿಗಳಿಗೆ ಕಂಡ ಅನೇಕ ಉತ್ತಮ ಮತ್ತು ಕೆಟ್ಟ ಕನಸುಗಳ ವರದಿಗಳು ಬುಖಾರಿ ಮತ್ತಿತರ ಗ್ರಂಥಗಳಲ್ಲಿವೆ. ಪ್ರಭಾತ ನಮಾಝ್ ಮುಗಿದರೆ ಪ್ರವಾದಿ(ಸ) ಹಲವೊಮ್ಮೆ ಸಹಾಬಿಗಳತ್ತ ತಿರುಗಿ ಕಳೆದ ರಾತ್ರಿ ಯಾವುದಾದರೂ ಉತ್ತಮ ಕನಸು ಕಾಣಿಸಿದೆಯೇ ಎಂದು ಕೇಳುತ್ತಿದ್ದರು. ಒಟ್ಟಿನಲ್ಲಿ ಆ ಕಾಲದಲ್ಲಿಯೂ ಕನಸನ್ನು ಪರಿಗಣಿಸಲಾಗುತ್ತಿತ್ತು. ಅದನ್ನು ನಾವು ನಿರ್ಲಕ್ಷಿಸುವುದು ಸರಿಯಲ್ಲ.

ಕನಸು ಹೇಗೆ ಬೀಳುತ್ತದೆ, ಅದನ್ನು ವೈಜ್ಞಾನಿಕವಾಗಿ ವ್ಯಾಖ್ಯಾನಿಸುವುದು ಹೇಗೆ ಎಂಬುದನ್ನು ಆ ಬಗ್ಗೆ ಹೆಚ್ಚು ಕಲಿತವರು ಹೇಳಲಿ. ಅದೇನಿದ್ದರೂ ಕನಸು ಬೀಳುವುದು ವಾಸ್ತವಿಕವಾಗಿದೆ. ಒಳ್ಳೆಯ, ಕೆಟ್ಟ, ನಗಿಸುವ, ಅಳು ಬರಿಸುವ, ಸ್ಪಷ್ಟ, ಅಸ್ಪಷ್ಟ ಕನಸುಗಳು. ಹಲವು ವರ್ಷಗಳ ಹಿಂದೆ ನಡೆದ ಘಟನೆಗಳು ಈಗ ನಡೆದಂತೆ ಭಾಸವಾಗಬಹುದು. ಮರಣ ಹೊಂದಿದವರೊಡನೆ ಈಗ ಬದುಕಿರುವವರ ರೀತಿಯಲ್ಲಿ ಸಂಪರ್ಕ ಉಂಟಾಗಬಹುದು. ಸಂಪೂರ್ಣ ಮರೆತು ಹೋದ ಘಟನೆಗಳು ಪುನಃ ಮೂಡಿ ಬರಬಹುದು. ಸ್ವಯಂ ಸತ್ತಂತೆ ಅಥವಾ ಯಾರೋ ಕೊಂದಂತೆ ಭಾಸವಾಗಬಹುದು. ಕೆಲವೊಮ್ಮೆ ವೈರಿಗಳನ್ನು ನಾವೇ ಕೊಂದಂತೆಯೂ ಕಾಣಿಸಬಹುದು. ದೇಹದ ಪಿತ್ತ, ಕಫ ಇತ್ಯಾದಿ ಘಟಕಗಳ ಅಸಂತುಲನೆಯಿಂದ ನಾನಾ ರೀತಿಯ ಕನಸುಗಳು ಬೀಳುತ್ತವೆ. ಕಫವು ಅಧಿಕವಾದಾಗ ನೀರಿನ ಕನಸು ಕಾಣಿಸುತ್ತದೆ. ಪಿತ್ತ ಹೆಚ್ಚಿದರೆ ಆನೆಯಂತಹ ಕರಿವಸ್ತುಗಳೊಡನೆ ಸಂಪರ್ಕ ಬೆಳೆಸಿದ ಕನಸು ಕಾಣಿಸುತ್ತದೆ. ಹೆಚ್ಚಿನಂಶ ಎಲ್ಲ ಸ್ಥಿತಿಯಲ್ಲೂ ಏನಾದರೊಂದು ಅಪಕ್ರಿಯೆ ಕಾಣಿಸಬಹುದು. ಕೆಲವು ಸತ್ಯವಾಗಿದ್ದರೆ, ಇತರ ಕೆಲವು ಕನಸುಗಳಿಗೆ ಸತ್ಯದೊಂದಿಗೆ ಸಂಬಂಧವೇ ಇರುವುದಿಲ್ಲ, ಆದರೆ ಕನಸಿನಲ್ಲಿ ಕಾಣಿಸುವ ವಿಷಯಗಳು ವಾಸ್ತವಿಕ ಜಗತ್ತಿನಲ್ಲಿ ಸಂಭವಿಸಿದಾಗ ಆಗುವ ಎಲ್ಲ ಅನುಭವಗಳು ಕನಸಿನಲ್ಲಿಯೂ ನಮಗೆ ಆಗುತ್ತದೆಂಬುದು ಇಲ್ಲಿ ಗಮನಾರ್ಹವಾಗಿದೆ. ಆದ್ದರಿಂದಲೇ ಒಂದು ಸ್ವಾರಸ್ಯಕರ ಕನಸು ಬಿತ್ತು, ಭಯಾನಕ ಕನಸು ಬಿತ್ತು, ಸಂತೋಷದ ಕನಸು

ಬಿತ್ತು ಎಂದು ಮುಂತಾಗಿ ನಾವು ಹೇಳುತ್ತೇವೆ. ಅದರಿಂದಾಗಿಯೇ ನಾವು ಅತಿಯಾಗಿ ನಗುತ್ತಾ ಅಥವಾ ಕಳವಳಪಡುತ್ತಾ ಎಚ್ಚರಗೊಳ್ಳುತ್ತೇವೆ. ಈ ವಿಷಯ ಇಲ್ಲಿ ನಮಗೆ ಪ್ರಸ್ತುತವಾಗಿದೆ. ನಿದ್ದೆಯಲ್ಲಿ ಪರಿಸರ ಪ್ರಜ್ಞೆ ದೂರವಾದ ಬಳಿಕ ಆತ್ಮವು ಅದರ ಯಾವುದೋ ಲೋಕದಲ್ಲಿ ಸಂಚರಿಸುತ್ತದೆ. ಭಾವನೆಗಳೂ ಅದಕ್ಕೆ ವೇದ್ಯವಾಗುತ್ತದೆ. ಆತ್ಮವು ದೇಹವೆಂಬ ಪಂಜರದಿಂದ ಕಿಂಚಿತ್ ಬಿಡುಗಡೆ ದೊರೆತಾಗ ಇಂತಹ ಅನುಭವ ಗಳು ಉಂಟಾಗುತ್ತದೆ. ಅದೇ ಪ್ರಕಾರ ಮರಣದ ಮೂಲಕ ಮತ್ತಷ್ಟು ಮುಕ್ತಿ ದೊರೆತಾಗ ವ್ಯಾಪಕ ಪ್ರಮಾಣದಲ್ಲಿ ಅಂತಹ ಸಂವೇದನೆಯುಂಟಾಗುತ್ತದೆಂದು ನಾವು ಸುಲಭದಲ್ಲಿ ಗ್ರಹಿಸಬಹುದು. ಇನ್ನೊಂದರ್ಥದಲ್ಲಿ ಹೇಳುವುದಿದ್ದರೆ, ಆತ್ಮ ಪ್ರಧಾನವಾದ 'ಆಲಮುಲ್ ಬರ್ಝಖ್'ನಲ್ಲಿ ನಮ್ಮ ಆತ್ಮಗಳು ಚೆನ್ನಾಗಿ ಸುಖ ಅಥವಾ ಕಷ್ಟವನ್ನು ಅನುಭವಿಸುತ್ತದೆಂಬ ಇಸ್ಲಾಮಿನ ಶಿಕ್ಷಣವನ್ನು ನಾವು ನಂಬದಿರುವುದು ಸಮರ್ಥನೀಯವಲ್ಲ.

ಭ್ರಷ್ಟ ಆತ್ಮ ಬರ್ಝಖ್‌ನಲ್ಲಿ

ಆದರೆ ಅಲ್ಲಿ 'ನಫ್ಸ್ ತಯ್ಯಿಬ' (ಪರಿಶುದ್ಧ ಆತ್ಮ) ಮತ್ತು 'ನಫ್ಸ್ ಖಬೀಸ' (ಭ್ರಷ್ಟ ಆತ್ಮ)ಗಳಿಗೆ ಒಂದೇ ರೀತಿಯ ಅನುಭವವಾಗುತ್ತದೆಯೇ? ಅವೆರಡರ ಮರಣದ ಬಗೆಗಿನ ವಿವರಣೆಯಿಂದಲೇ ಅದರ ಉತ್ತರ ಸ್ಪಷ್ಟವಾಗುತ್ತದೆ. ಕೆಲವು ವಿವರಣೆಗಳನ್ನು ಪುನಃ ನೀಡುತ್ತೇನೆ. ಕೆಲವು ಕಪಟ ವಿಶ್ವಾಸಿಗಳ ಕುರಿತು ಅಲ್ಲಾಹ್ ಹೀಗೆಂದಿದ್ದಾನೆ, "ನಿಶ್ಚಯವಾಗಿಯೂ ನಾವು ಅವರನ್ನು ಎರಡು ಬಾರಿ ದಂಡಿಸುತ್ತೇವೆ. ಅನಂತರ ಅವರು ಭಯಂಕರ ಶಿಕ್ಷೆಗೆ ನೂಕಲ್ಪಡುತ್ತಾರೆ." **(ಅತ್ತೌಬ: 101)**

ಇದರಲ್ಲಿ ಮೊದಲನೆಯದನ್ನು ಈ ಲೋಕದಲ್ಲಿಯೇ ನೀಡಲಾಯಿತು. ಎರಡನೆ ಯದು ಬರ್ಝಖ್‌ನಲ್ಲಿ, ಮೂರನೆಯದು ಕಿಯಾಮತ್‌ನ ಬಳಿಕ ನರಕದಲ್ಲಿ ನೀಡ ಲಾಗುವುದೆಂಬುದು ಸ್ಪಷ್ಟವಾಗುತ್ತದೆ. ಅತ್ಯಂತ ಸ್ಪಷ್ಟವಾದ ಇನ್ನೊಂದು ಸಾಕ್ಷ್ಯವನ್ನು ನೋಡಿರಿ: ಫಿರ್‌ಔನ್‌ನ ಸಂಗಡಿಗರಿಗೆ ಅತಿ ನೀಚವಾದ ದಂಡನೆ ಬಂದೆರಗಿತು. ನರಕ! ಬೆಳಿಗ್ಗೆ ಮತ್ತು ಸಂಜೆ ಅದನ್ನು ಅವರ ಮುಂದೆ ಪ್ರದರ್ಶಿಸಲಾಗುವುದು. ಇನ್ನು ಕಿಯಾಮತ್ ದಿನದಲ್ಲಿ ಫಿರ್‌ಔನ್ ಮತ್ತು ಸಂಗಡಿಗರನ್ನು ಅತಿ ಕಠಿಣವಾದ ಶಿಕ್ಷೆಗೆ ಗುರಿಪಡಿಸುವ ಆಜ್ಞೆ ನೀಡಲಾಗುವುದು. **(ಅಲ್ ಮೂಮಿನ್: 45-46)**

ಫಿರ್‌ಔನ್ ಮತ್ತು ಸಂಗಡಿಗರನ್ನು ಕೆಂಪು ಸಮುದ್ರದಲ್ಲಿ ಮುಳುಗಿಸಿದಂದಿನಿಂದ ಬರ್ಝಖ್‌ನಲ್ಲಿ ಅವರಿಗೆ ನಿರಂತರ ನೀಡಲಾಗುವ ಶಿಕ್ಷೆಯ ಕುರಿತು ಆ ರೀತಿ ಹೇಳ ಲಾಗಿದೆ: ದಿನನಿತ್ಯ ಬೆಳಿಗ್ಗೆ ಮತ್ತು ಸಂಜೆ ನರಕದ ಮುಂದೆ ಅವರನ್ನು ಹಾಜರು

ಪಡಿಸಲಾಗುವುದು. ಅವರಿಗೆ ಅಲ್ಲಿಗೆ ಹೋಗಲಿದೆಯೆಂದು ತೋರಿಸಲಾಗುವುದು. ಇದು ಕಿಯಾಮತ್ (ಲೋಕಾಂತ್ಯದ) ತನಕ ಮುಂದುವರಿಯುತ್ತದೆ. ಈ ವಿಷಯದಲ್ಲಿ ಇನ್ನು ಬೇರೆ ಸಾಕ್ಷ್ಯದ ಅಗತ್ಯವಿಲ್ಲವಷ್ಟೆ. ಈ ಶಿಕ್ಷಾ ಪದ್ಧತಿಯು ಫಿರ್‌ಔನ್ ಮತ್ತು ಸಂಗಡಿಗರಿಗೆ ಮಾತ್ರ ಸೀಮಿತವಲ್ಲ, ಇತರ ಅಪರಾಧಿಗಳಿಗೂ ಅನ್ವಯವಾಗುತ್ತದೆಂದು ಈ ಕೆಳಗಿನ ಪ್ರವಾದಿವಚನ ಸ್ಪಷ್ಟಪಡಿಸುತ್ತದೆ, "ನಿಮ್ಮಲ್ಲಿ ಯಾರಾದರೊಬ್ಬರು ಮರಣ ಹೊಂದಿದರೆ ಆತನಿಗೆ ನಿರ್ಣಯಿಸಲಾದ ನೆಲೆಯನ್ನು ಪ್ರತಿದಿನ ಬೆಳಗಾತ ಮತ್ತು ಸಂಜೆ ಆತನಿಗೆ ತೋರಿಸಲಾಗುವುದು. ಆತನು ಸ್ವರ್ಗವಾಸಿಯಾಗಿದ್ದರೆ ಆತನಿಗೆ ಸ್ವರ್ಗದ ನೆಲೆಯನ್ನೂ ನರಕವಾಸಿಯಾಗಿದ್ದರೆ ನರಕದ ನೆಲೆಯನ್ನೂ ತೋರಿಸಲಾಗುವುದು. ಇದೋ ನಿನ್ನ ನೆಲೆ ಎಂದು ಆತನಿಗೆ ತಿಳಿಸಲಾಗುವುದು. ನಿನ್ನನ್ನು ಅಲ್ಲಾಹನು ಕಿಯಾಮತ್ ದಿನ ಪುನಃ ಜೀವಂತಗೊಳಿಸುವ ತನಕ ಈ ಪ್ರಕ್ರಿಯೆ ಮುಂದುವರಿಯುವುದು." (ಬುಖಾರಿ)

ಇಲ್ಲಿ ಒಂದು ವಿಷಯ ಗಮನಾರ್ಹವಾಗಿದೆ. ಮರಣದ ವೇಳೆ 'ನಫ್ಸ್ ತಯ್ಯಿಬ' ದೊಡನೆ ಸ್ವರ್ಗದಲ್ಲಿ ಪ್ರವೇಶಿಸೆಂದೂ 'ನಫ್ಸ್ ಖಬೀಸ'ದೊಂದಿಗೆ ನರಕದಲ್ಲಿ ಪ್ರವೇಶಿಸೆಂದೂ ದೇವಚರರು ಹೇಳುವರೆಂದು ಕುರ್‌ಆನಿನಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಈ ಹಿಂದೆ ನೋಡಿದ್ದೇವಷ್ಟೆ. ಆದರೆ ಸಾಕ್ಷಾತ್ ಸ್ವರ್ಗ ಅಥವಾ ನರಕಕ್ಕೆ ಆ ಕೂಡಲೇ ಸೇರಿಸಲಾಗುವುದೆಂದು ಅದರ ಇಂಗಿತವಲ್ಲ, ಪುನರುತ್ಥಾನ, ಮಹ್‌ಶರ ಸಮ್ಮೇಳನ ಮತ್ತು ವಿಚಾರಣೆಗಳೆಲ್ಲವೂ ಮುಗಿದ ಬಳಿಕವೇ ಅದು ನಡೆಯುತ್ತದೆ. ಕುರ್‌ಆನಿನ ಅನೇಕ ವ್ಯಾಖ್ಯಾನಗಳು ಅದನ್ನು ಸ್ಪಷ್ಟಪಡಿಸುತ್ತವೆ. ಸ್ವರ್ಗವು ಖಚಿತವಾಯಿತೆಂಬ ಶುಭವಾರ್ತೆ ಮತ್ತು ನರಕದಿಂದ ಪಾರಾಗುವ ಯಾವ ಮಾರ್ಗವೂ ಇನ್ನು ಉಳಿದಿಲ್ಲವೆಂಬ ಎಚ್ಚರಿಕೆ ನೀಡುವುದೇ ಅದರ ತಾತ್ಪರ್ಯವಾಗಿದೆ. ಆ ಮೂಲಕ 'ಆಲಮುಲ್ ಬರ್ಝಖ್'ನಲ್ಲಿ ಆನಂದ ಮತ್ತು ಹಿಂಸೆ ನೀಡುವುದನ್ನೂ ಸೂಚಿಸಲಾಗಿದೆ. ಮೇಲಿನ ಹದೀಸ್ ಕೂಡ ಅದನ್ನು ಸ್ಪಷ್ಟಪಡಿಸಿದೆ. ಇತರ ಕೆಲವು ಘಟನೆಗಳನ್ನು ವಿವರಿಸಿ 'ನಫ್ಸ್ ಖಬೀಸ'ದ ಭಾಗವನ್ನು ಕೊನೆಗೊಳಿಸುತ್ತೇನೆ–

1. ಪ್ರವಾದಿ ಸಾಲಿಹ್‌ರ(ಅ) ಸಮೂದ್ ಜನತೆಯು ಕೊನೆಗೆ ಅಲ್ಲಾಹನು ಇಳಿಸಿದ ಆಕಾಶ ವಿಪತ್ತಿಗೆ ಗುರಿಯಾಗಿ ನಾಶಹೊಂದಿದಾಗ ಸಾಲಿಹ್‌ರು(ಅ) ಅಲ್ಲಿಂದ ಹೊರಟು ಹೋಗುವ ತೀರ್ಮಾನ ಮಾಡುತ್ತಾರೆ. ಅವರ ಮಧ್ಯೆ ಸಂಭವಿಸಿದ ಕೆಲವು ಪ್ರಮುಖ ಘಟನೆಗಳನ್ನು ಸ್ಮರಿಸಿ ಉರುಳಿಬಿದ್ದ ಹೆಣಗಳನ್ನು ನೋಡುತ್ತಾ ತೀವ್ರ ವಿಷಾದದಿಂದ ವಿದಾಯವೆಂಬ ನೆಲೆಯಲ್ಲಿ ಸಾಲಿಹ್(ಅ) ಹೀಗೆ ಹೇಳುತ್ತಾರೆ, "ಓ ನನ್ನ ಜನರೇ, ನನ್ನ ಪ್ರಭುವಿನ ಸಂದೇಶವನ್ನು ನಾನು ನಿಮಗೆ ತಲುಪಿಸಿದೆ. ನಾನು ನಿಮ್ಮ ಅತ್ಯುತ್ತಮ ಹಿತಾಕಾಂಕ್ಷಿಯಾದೆ. ಆದರೆ (ನನಗೇನು ಮಾಡಲು ಸಾಧ್ಯ) ನಿಮ್ಮ

ಹಿತಾಕಾಂಕ್ಷಿಗಳನ್ನು ನೀವು ಮೆಚ್ಚಲೇ ಇಲ್ಲ." **(ಅಲ್ ಅಅ್‌ರಾಫ್: 79)**

2. ಇದೇ ರೀತಿ ಬೇರೊಂದು ಪರಿಸ್ಥಿತಿಯಲ್ಲಿ ಶುಐಬ್‌ರು(ಅ) ತಮ್ಮ ಸತ್ತು ಬಿದ್ದ ಜನತೆಯನ್ನು ನೋಡಿ ಹೇಳಿದರು, "ಓ ನನ್ನ ಜನಾಂಗ ಬಾಂಧವರೇ! ಪ್ರಭುವಿನ ಸಂದೇಶಗಳನ್ನು ನಾನು ನಿಮಗೆ ತಲಪಿಸಿದೆ. ನಿಮ್ಮ ಶ್ರೇಯೋಭಿವೃದ್ಧಿಯ ಎಲ್ಲ ಬೇಡಿಕೆಗಳನ್ನು ಪೂರ್ಣಗೊಳಿಸಿದೆ. ಆದರೆ ಸತ್ಯವನ್ನು ನಿಷೇಧಿಸಬೇಕೆಂದು ನಿರ್ಧರಿಸಿದ ಜನತೆಯ ಬಗ್ಗೆ ನಾನು ಹೇಗೆ ತಾನೇ ಮರುಗಲಿ!" **(ಅಲ್ ಅಅ್‌ರಾಫ್: 93)**

3. ಅನಸ್(ರ)ರಿಂದ ವರದಿ. ಬದ್ರ್‌ನಲ್ಲಿ ವಧಿಸಲ್ಪಟ್ಟ ಅವಿಶ್ವಾಸಿಗಳ ಮೃತ ದೇಹ ಗಳನ್ನು ಮೂರು ದಿನ ಹಾಗೆಯೇ ಬಿಡಲಾಯಿತು. ಬಳಿಕ ಪ್ರವಾದಿಯವರು(ಸ) ಅಲ್ಲಿಗೆ ಹೋಗಿ ಅವರ ಹೆಸರೆತ್ತಿ ಕರೆದು ಪ್ರಶ್ನಿಸುತ್ತಾರೆ, "ಓ ಹಿಶಾಮ್‌ನ ಪುತ್ರ ಅಬೂ ಜಹಲ್! ಖಲಫ್‌ನ ಪುತ್ರ ಉಮಯ್ಯಾ, ರಬೀಅರ ಪುತ್ರರಾದ ಉತ್ಬಾ, ಶೈಬಾ! ನಿಮ್ಮ ಪ್ರಭುವು ನಿಮಗೆ ಮಾಡಿದ ವಾಗ್ದಾನ ಸತ್ಯವೆಂದು ನಿಮಗೆ ಮನವರಿಕೆಯಾಯಿತಷ್ಟೆ. ನನ್ನ ಪ್ರಭುವು ನನ್ನೊಡನೆ ಮಾಡಿದ ವಾಗ್ದಾನವೂ ಸತ್ಯವೆಂದು ಮನವರಿಕೆಯಾಗಿದೆ. ನೀವು ನಿಮ್ಮ ಪ್ರವಾದಿಯ(ಸ) ಅತಿ ನೀಚ ಸಂಗಡಿಗರಾಗಿ ಬಿಟ್ಟಿರಲ್ಲವೇ? ನೀವು ನನ್ನನ್ನು ಸುಳ್ಳಾಗಿಸಿದಿರಿ. ಜನರು ನನ್ನನ್ನು ಅಂಗೀಕರಿಸಿದರು. ನೀವು ನನ್ನನ್ನು ಊರಿನಿಂದ ಹೊರ ಹಾಕಿದಿರಿ, ಜನರು ನನಗೆ ಅಭಯ ನೀಡಿದರು. ನೀವು ನನ್ನೊಡನೆ ಯುದ್ಧ ಮಾಡಿದಿರಿ, ಜನರು ನನಗೆ ನೆರವಾದರು. ಹೀಗೆ ನೀವು ನಿಮ್ಮ ಪ್ರವಾದಿಯ ಅತಿ ನೀಚ ಸಂಗಡಿಗ ರಾದಿರಲ್ಲವೇ?" ಪ್ರವಾದಿಯವರ(ಸ) ಈ ಮಾತುಗಳನ್ನು ಆಲಿಸುತ್ತಿದ್ದ ಉಮರ್(ರ) ರವರು ಪ್ರವಾದಿಯವರಲ್ಲಿ(ಸ) ಕೇಳುತ್ತಾರೆ, "ಶವಗಳಾಗಿರುವ ಆ ಮಂದಿ ನಿಮ್ಮ ಮಾತುಗಳನ್ನು ಆಲಿಸುತ್ತಾರೆಯೇ? ಅವರು ಉತ್ತರ ನೀಡುವರೇ?" ಆಗ ಪ್ರವಾದಿ(ಸ) ಹೇಳಿದರು, "ನನ್ನ ಆತ್ಮ ಯಾರ ವಶದಲ್ಲಿದೆಯೋ ಆತನ ಆಣೆ! ನಾನು ಹೇಳಿದ ಮಾತುಗಳನ್ನು ಅವರು ನಿಮಗಿಂತ ಹೆಚ್ಚಾಗಿ ಆಲಿಸುತ್ತಾರೆ. ಆದರೆ ಅವರಿಗೆ ಉತ್ತರ ನೀಡಲು ಸಾಧ್ಯವಿಲ್ಲ." **(ಮುಸ್ಲಿಮ್)**

ಇನ್ನೊಂದು ಪ್ರಶ್ನೆ ಉಳಿಯುತ್ತದೆ. ಈ ಭ್ರಷ್ಟ ಆತ್ಮಗಳಿಗೆ ಆಕಾಶಲೋಕ ಅಥವಾ ಸ್ವರ್ಗಕ್ಕೆ ಪ್ರವೇಶಿಸಲು ಸಾಧ್ಯವಿಲ್ಲವೆಂದು ಕುರ್‌ಆನ್ ಸ್ಪಷ್ಟಪಡಿಸುತ್ತದೆ. ಹಾಗಾದರೆ ಅವು ಎಲ್ಲಿಗೆ ಹೋಗುತ್ತವೆ? ಭೂಮಿಯ ವಾತಾವರಣದಲ್ಲಿಯೇ ಅವು ಅಲೆದಾಡುತ್ತಿ ರುವುವೇ? ಅಥವಾ ನಾಶಹೊಂದಿದ ತನ್ನ ದೇಹಾಂಶಗಳ ಸುತ್ತ ತಿರುಗುತ್ತಿರುವುದೇ? ಅಥವಾ ಅವರಿಗಾಗಿ ಇತರ ಯಾವುದಾದರೂ ಪಾತಾಳ ಲೋಕವಿದೆಯೇ? ಅದನ್ನು ಅಲ್ಲಾಹನೇ ಬಲ್ಲ.

ಪರಿಶುದ್ಧ ಆತ್ಮ ಬರ್ಝಖ್‌ನಲ್ಲಿ

ಇನ್ನು, 'ನಫ್ಸ್ ತಯ್ಯಿಬ'ದ ಕುರಿತು ಹೇಳುತ್ತೇನೆ. ಪವಿತ್ರ ವಚನದಲ್ಲಿ ದೃಢ ವಿಶ್ವಾಸವಿರಿಸಿದ ಸತ್ಯವಿಶ್ವಾಸಿಗೆ ಐಹಿಕ ಜೀವನದಲ್ಲಿ ವಿಶ್ವಾಸಕ್ಕೆ ಸಂಬಂಧಿಸಿದ ಯಾವುದೇ ಚಂಚಲತೆಯೂ ಉಂಟಾಗುವುದಿಲ್ಲ, ಸಂಪೂರ್ಣ ಸಾವಧಾನದಿಂದ ಎಲ್ಲ ಸವಾಲುಗಳನ್ನೂ ಆತ ಎದುರಿಸಬಲ್ಲನು. ಅದೇ ಸ್ಥೈರ್ಯದಿಂದ ಮರಣವನ್ನೂ ಆ ಬಳಿಕದ ಬರ್ಝಖ್‌ನ (ಸಮಾಧಿಯ) ಪ್ರಶ್ನೋತ್ತರಗಳನ್ನೂ ಇತರ ರಂಗಗಳನ್ನೂ ಎದುರಿಸಲು ಆತನಿಗೆ ಸಾಧ್ಯವಾಗುವುದೆಂದು ನಾವು ಮನಗಂಡೆವು. ಪವಿತ್ರ ಕುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ, "ಐಹಿಕ ಜೀವನದಲ್ಲಿಯೂ ಆಖಿರತ್‌ನಲ್ಲಿಯೂ ವಿಶ್ವಾಸಿಗಳನ್ನು ಸುಸ್ಥಿರವಾದ ವಾಕ್ಯದಲ್ಲಿ ಅಲ್ಲಾಹನು ದೃಢಗೊಳಿಸುತ್ತಾನೆ." **(ಇಬ್ರಾಹೀಮ್: 27)**

ಕಿಯಾಮತ್‌ನ ಬಳಿಕ ಆ ರೀತಿ ಸುದೃಢಗೊಳಿಸುವ ಸಮಸ್ಯೆಯಿಲ್ಲದಿರುವುದರಿಂದ ಇಲ್ಲಿ ಆಖಿರತ್ ಎಂದರೆ ಬರ್ಝಖ್ ಎಂಬುದು ವ್ಯಕ್ತ. ಇಲ್ಲಿ ಕಬರ್‌ನ ಪ್ರಶ್ನೋತ್ತರವನ್ನೇ ಸೂಚಿಸಲಾಗಿದೆಯೆಂದು ಪ್ರವಾದಿಯವರೂ(ಸ) ಸ್ಪಷ್ಟಪಡಿಸಿದ್ದಾರೆ. **(ಮುಸ್ಲಿಮ್)**

ಗೋರಿ ಮುಚ್ಚಿದ ಕೂಡಲೇ ಸುತ್ತಲೂ ನಿಂತು, 'ಅಲ್ಲಾಹುಮ್ಮ ಸಬ್ಬಿತ್‌ಹು ಬಿಲ್ ಕೌಲಿ ಸಾಬಿತ್' (ಅಲ್ಲಾಹನೇ ಈತನನ್ನು ಸುಸ್ಥಿರ ವಾಕ್ಯದಲ್ಲಿ ದೃಢಗೊಳಿಸು) ಎಂಬ ಸಾಮೂಹಿಕ ಪ್ರಾರ್ಥನೆ ನಡೆಸುವುದೂ ಇಲ್ಲಿ ಸ್ಮರಣೀಯವಾಗಿದೆ. ಪ್ರತಿದಿನ ಆತನಿಗೆ ಆತನ ಸ್ವರ್ಗದ ನೆಲೆಯನ್ನು ತೋರಿಸಲಾಗುವುದೆಂದು ಈ ಹಿಂದೆ ಹೇಳಿದೆ. ಗೋರಿಯ ಪ್ರಶ್ನೋತ್ತರಗಳು ಮುಗಿದರೆ 'ನಫ್ಸ್ ತಯ್ಯಿಬ'ದೊಡನೆ 'ಮದುಮಗ ನಿದ್ರಿಸುವಂತೆ ನಿದ್ರಿಸು' ಎಂದು ಹೇಳಲಾಗುವುದೆಂದು ಹಿಂದೆ ಪ್ರಸ್ತಾವಿಸಲಾಗಿದೆ. ಪ್ರವಾದಿ(ಸ) ಒಮ್ಮೆ ಹೀಗೆ ಹೇಳಿದ್ದರು, "ವಿಶ್ವಾಸಿಯ ಆತ್ಮವು ಸ್ವರ್ಗದ ಮರಗಳಿಂದ ಆಹಾರ ಸೇವಿಸುವ ಒಂದು ಪಕ್ಷಿಯಾಗಿರುವುದು. ಪುನಃ ಜೀವಂತಗೊಳಿಸುವ ದಿನ ಅಲ್ಲಾಹನು ಅದನ್ನು ಅದರ ದೇಹಕ್ಕೆ ಮರಳಿಸುವ ತನಕ." **(ಅಹ್ಮದ್)**

ಇನ್ನೊಂದೆಡೆ ಹೀಗೆ ಹೇಳಿದ್ದಾರೆ, "ಅಲ್ಲಾಹನ ಬಳಿ ಒಳಿತಿಗೆ ಅರ್ಹವಾಗಿ ಸಾಯುವ ಯಾವುದೇ ಆತ್ಮವು ಪುನಃ ಭೂಮಿಗೆ ಮರಳುವುದನ್ನು ಮೆಚ್ಚಲಾರದು. ಆದರೆ ಹುತಾತ್ಮರ ಸ್ಥಿತಿ (ಶಹೀದ್) ಹಾಗಲ್ಲ, ಹುತಾತ್ಮತೆಯಿಂದಾಗಿ ಅವರಿಗೆ ದೊರೆಯುವ ಶ್ರೇಷ್ಠತೆಗಳನ್ನು ಕಂಡಾಗ ಅವರು ಪುನಃ ಭೂಮಿಗೆ ಹೋಗಿ ಇನ್ನೊಮ್ಮೆ ಅಲ್ಲಾಹನ ಮಾರ್ಗದಲ್ಲಿ ವಧಿಸಲ್ಪಡಬೇಕೆಂದು ಬಯಸುತ್ತಾರೆ." ಈ ಕುರಿತು 2 ಪ್ರಮುಖ ಘಟನೆಗಳನ್ನೂ ಹೇಳುತ್ತೇನೆ:

1. ಹಿಂದೊಮ್ಮೆ ಅಲ್ಲಾಹನು ಒಂದು ದೇಶಕ್ಕೆ ಇಬ್ಬರು ಪ್ರವಾದಿಗಳನ್ನು ಕಳುಹಿಸಿದನು. ಜನರು ಅವರನ್ನು ತಿರಸ್ಕರಿಸಿದರು. ಅಲ್ಲಾಹನು ಮೂರನೆಯ ಓರ್ವ ಪ್ರವಾದಿಯನ್ನು ಕಳುಹಿಸಿದನು. ಜನರು ಅವರನ್ನೂ ತಿರಸ್ಕರಿಸಿದರು. ಮಾತ್ರವಲ್ಲ, ಈ ಹೊಸ ಧರ್ಮಪ್ರಚಾರವನ್ನು ನಿಲ್ಲಿಸದಿದ್ದರೆ ನಾವು ನಿಮ್ಮನ್ನು ಕಲ್ಲೆಸೆದು ಕೊಲ್ಲುವುದಾಗಿಯೂ ಬೆದರಿಸಿದರು. ಈ ಹಂತದಲ್ಲಿ ದೇಶದ ಒಂದು ಕೊನೆಯಿಂದ ಸತ್ಯನಿಷ್ಠನಾದ ಓರ್ವ ಸತ್ಪುರುಷನು ಓಡಿ ಬಂದು ಪ್ರವಾದಿಗಳನ್ನು ಅನುಸರಿಸಬೇಕೆಂದು ತಮ್ಮ ಆ ಜನತೆಗೆ ಕರೆ ನೀಡಿದರು. ಅದು ಅವರಿಗೆ ಸ್ವಲ್ಪವೂ ಹಿಡಿಸಲಿಲ್ಲ, ಅವರು ಆ ವ್ಯಕ್ತಿಯನ್ನು ವಧಿಸಿಬಿಟ್ಟರು. ಕೂಡಲೇ ಆ ಹುತಾತ್ಮರ ಪವಿತ್ರ ಆತ್ಮಕ್ಕೆ ಅಲ್ಲಾಹನ ಕರೆ ಕೇಳಿಸಿತು, "ಸ್ವರ್ಗದಲ್ಲಿ ಪ್ರವೇಶಿಸು." ಆಗ ಆ ಮಾನವ ಪ್ರೇಮಿ ಹೇಳುತ್ತಾರೆ, "ನನ್ನ ಪ್ರಭೂ, ನನಗೆ ಕ್ಷಮೆ ನೀಡಿ, ನನ್ನನ್ನು ಆದರಣೀಯರಲ್ಲಿ ಸೇರಿಸಿರುವ ಸುದ್ದಿಯನ್ನು ಈ ನನ್ನ ಜನರು ಅರಿತಿರುತ್ತಿದ್ದರೆ!" **(ಯಾಸೀನ್: 26-27)**

ಇದು ಆ ಹಂತಕರ ಬಗ್ಗೆ ತೋರಿದ ಅಭಿಲಾಷೆಯೆಂಬುದು ಇಲ್ಲಿ ಗಮನಾರ್ಹ. ಆದ್ದರಿಂದಲೇ ಜೀವಂತವಿರುವಾಗ ಮತ್ತು ಆ ಬಳಿಕವೂ ಅವರು ತಮ್ಮ ಜನತೆಯ ಹಿತಾಕಾಂಕ್ಷಿಯಾದರೆಂದು ಪ್ರವಾದಿ(ಸ) ಪ್ರಶಂಸಿಸಿದ್ದರು.

2. ಅಲ್ಲಾಹನ ಮಾರ್ಗದಲ್ಲಿ ವಧಿಸಲ್ಪಟ್ಟವರ ಕುರಿತು ಅವರು ಮೃತಹೊಂದಿದರೆಂದು ನೀವು ಭಾವಿಸಬೇಡಿ. ವಸ್ತುಶಃ ಅವರು ಬದುಕಿದ್ದಾರೆ. ತಮ್ಮ ಪ್ರಭು ವಿನ ಬಳಿ ಅವರಿಗೆ ಆಹಾರವನ್ನೂ ನೀಡಲಾಗುತ್ತದೆ. ಅಲ್ಲಾಹನು ಅವರಿಗೆ ನೀಡಿದ ಔದಾರ್ಯದಲ್ಲಿ ಅವರು ಸಂಪೂರ್ಣ ಸಂತುಷ್ಟರಾಗಿದ್ದಾರೆ. ಈ ತನಕ ನಿಧನರಾಗಿ ಅವರ ಜತೆ ಸೇರಿಲ್ಲದ, ಭೂಲೋಕದಲ್ಲಿರುವ ಅವರ ಸಹಕಾರ್ಯಕರ್ತರ ಬಗ್ಗೆ ಅವರು ಕಿಂಚಿತ್ತೂ ಭಯ ಪಡಬೇಕಾಗಿಲ್ಲ, ದುಃಖಿಸಬೇಕಾಗಿಲ್ಲವೆಂದು ಹೆಮ್ಮೆ ಪಡುತ್ತಾರೆ. ಅಲ್ಲಾಹನ ಅನುಗ್ರಹ ಮತ್ತು ಔದಾರ್ಯದಿಂದ ಅವರು ಅತ್ಯಂತ ಆನಂದ ಪಡುತ್ತಾರೆ. ಸತ್ಯವಿಶ್ವಾಸಿಗಳ ಪ್ರತಿಫಲವನ್ನು ಆತನು ವ್ಯರ್ಥಗೊಳಿಸುವುದಿಲ್ಲವೆಂದು ಅವರಿಗೆ ಮನವರಿಕೆಯಾಗಿದೆ.

"ಅಲ್ಲಾಹನ ಮಾರ್ಗದಲ್ಲಿ ವಧಿಸಲ್ಪಟ್ಟವರನ್ನು ಮೃತರೆನ್ನಬೇಡಿರಿ. ಅವರು ವಾಸ್ತವದಲ್ಲಿ ಜೀವಂತವಿದ್ದಾರೆ. ತಮ್ಮ ಪ್ರಭುವಿನ ಬಳಿ ಅನ್ನಾಹಾರ ಪಡೆಯುತ್ತಿದ್ದಾರೆ. ಅಲ್ಲಾಹನು ತನ್ನ ಅನುಗ್ರಹದಿಂದ ಅವರಿಗೆ ನೀಡಿದುದರಲ್ಲಿ ಆನಂದ ತುಂದಿಲರಾಗಿದ್ದಾರೆ. ತಮ್ಮ ಹಿಂದೆ ಭೂಲೋಕದಲ್ಲಿ ಉಳಿದಿರುವ ಮತ್ತು ಇನ್ನೂ ಅಲ್ಲಿಗೆ ತಲಪಿರದ ಸತ್ಯವಿಶ್ವಾಸಿಗಳಿಗೂ ಯಾವುದೇ ಭಯ ಮತ್ತು ವ್ಯಥೆಗಳ ಸಂಭವವಿಲ್ಲವೆಂದು ನಿಶ್ಚಿಂತರಾಗಿದ್ದಾರೆ. ಅವರು ಅಲ್ಲಾಹನ ಪುರಸ್ಕಾರ ಮತ್ತು ಅವನ ಅನುಗ್ರಹದಿಂದಾಗಿ ಹರ್ಷಾನಂದಭರಿತರಾಗಿದ್ದಾರೆ.

ಅಲ್ಲಾಹ್ ಸತ್ಯವಿಶ್ವಾಸಿಗಳ ಪ್ರತಿಫಲವನ್ನು ವ್ಯರ್ಥ ಮಾಡುವುದಿಲ್ಲವೆಂದು ಅವರಿಗೆ ತಿಳಿದಿದೆ." (ಆಲಿ ಇಮ್ರಾನ್: 169 - 171)

ಈ ವಾಕ್ಯದ ಹಿನ್ನೆಲೆಯನ್ನು ವಿವರಿಸುತ್ತಾ ಪ್ರವಾದಿವರ್ಯರು(ಸ) ಒಮ್ಮೆ ಹೀಗೆ ಹೇಳಿದ್ದಾರೆ, "ಉಹುದ್‌ನಲ್ಲಿ ನಿಮ್ಮ ಸಹೋದರರಿಗೆ ಆಪತ್ತು ಸಂಭವಿಸಿದಾಗ (ಹುತಾತ್ಮರಾದಾಗ) ಅಲ್ಲಾಹನು ಅವರ ಆತ್ಮಗಳನ್ನು ಹಸಿರು ವರ್ಣದ ಪಕ್ಷಿಗಳ ಧಾಮದಲ್ಲಿ ಸೇರಿಸಿದನು. ಅವು ಸ್ವರ್ಗದ ನದಿಗಳಿಂದ ನೀರು ಕುಡಿದು ಹಣ್ಣುಗಳನ್ನು ತಿಂದು ಅರ್ಶ್‌ನ (ಸಿಂಹಾಸನ) ನೆರಳಿನ ಸ್ವರ್ಣ ದೀಪದ ಗೂಡುಗಳಲ್ಲಿ ವಿಶ್ರಾಂತಿ ಪಡೆಯುತ್ತಿವೆ. ಅತ್ಯಧಿಕ ರುಚಿಕರವಾದ ಈ ಆಹಾರ, ಪಾನೀಯ ಮತ್ತು ಐಷಾರಾಮವನ್ನು ಕಂಡಾಗ, ಅಲ್ಲಾಹನು ನಮಗೆ ಮಾಡಿದ ಈ ಅನುಗ್ರಹಗಳ ಕುರಿತು ಇಹಲೋಕದ ನಮ್ಮ ಸಹೋದರರು ಇದನ್ನು ತಿಳಿದಿದ್ದರೆ! ಯುದ್ಧರಂಗದಲ್ಲಿ ವಿರಕ್ತಿ ತೋರದೆ, ವೀರಾವೇಶದಿಂದ ಯುದ್ಧಕ್ಕೆ ಧುಮುಕುವ ಪ್ರೇರಣೆ ದೊರೆಯುತ್ತಿತ್ತೆಂದು ಅವರು (ಹುತಾತ್ಮರು) ಹಂಬಲಿಸಿದರು. ಅದನ್ನು ಕೇಳಿ ಅಲ್ಲಾಹನು ಅವರೊಡನೆ ಹೇಳುತ್ತಾನೆ, ಚಿಂತಿಲ್ಲ, ನಿಮ್ಮ ಈ ಅಭಿಲಾಷೆಯನ್ನು ನಾನು ಅವರಿಗೆ ತಲಪಿಸುತ್ತೇನೆ. ಹಾಗೆಯೇ ಅಲ್ಲಾಹನು ಪ್ರಸ್ತುತ ವಾಕ್ಯವನ್ನು ಅವತೀರ್ಣಗೊಳಿಸಿದನು."

ಪ್ರವಾದಿವರ್ಯರು(ಸ) ಅದಕ್ಕೆ ನೀಡಿದ ಇನ್ನೊಂದು ವಿವರಣೆ ಹೀಗಿದೆ: ಮಸ್ರೂಕ್ ಹೇಳಿದ್ದಾರೆ: ಈ ಸೂಕ್ತದ ಕುರಿತು ನಾವು ಅಬ್ದುಲ್ಲಾರೊಡನೆ ಕೇಳಿದಾಗ ಅಬ್ದುಲ್ಲಾ ಹೀಗೆ ಹೇಳಿದರು– ನಾವು ಆ ಕುರಿತು ಪ್ರವಾದಿಯವರೊಡನೆ(ಸ) ವಿಚಾರಿಸಿ ದ್ದೆವು ಪ್ರವಾದಿ(ಸ) ಹೀಗೆ ಹೇಳಿದ್ದರು, "ಅವರ ಆತ್ಮಗಳು ಹಸಿರು ವರ್ಣದ ಪಕ್ಷಿಗಳ ಧಾಮದಲ್ಲಿರುವುದು. ಅವು ಸ್ವರ್ಗದಲ್ಲಿ ಇಷ್ಟಬಂದಂತೆ ನಲಿದಾಡಿ ಅನಂತರ ಅರ್ಶ್‌ಗೆ ಜೋಡಿಸಲಾದ ಬೆಳಕಿನ ಗೂಡುಗಳಲ್ಲಿ ವಿಶ್ರಾಂತಿ ಪಡೆಯುತ್ತವೆ. ಹೀಗಿರಲು ಒಮ್ಮೆ ಪ್ರಭುವು (ರಬ್ಬ್) ಅವರ ಮುಂದೆ ಪ್ರತ್ಯಕ್ಷನಾಗಿ ಹೀಗೆ ಕೇಳಿದನು, 'ನಿಮಗೆ ಏನಾದರೂ ಆಶೆಯಿದೆಯೇ?' ಅವರು ಹೇಳುತ್ತಾರೆ, 'ಈ ಸ್ವರ್ಗದಲ್ಲಿ ಇಷ್ಟ ಬಂದಂತೆ ವಿಹರಿಸುತ್ತಿರುವ ನಮಗೆ ಇನ್ನಾವ ಆಸೆ ಉಳಿದಿದೆ!' ಪ್ರಭುವು ಅದೇ ಪ್ರಶ್ನೆಯನ್ನು ಪುನಃ ಕೇಳುತ್ತಾನೆ. ಹೀಗೆ ಮೂರನೇ ಬಾರಿ ಕೇಳಿದಾಗ, ನಾವು ಏನಾದರೂ ಅಪೇಕ್ಷಿಸದೆ ಅಲ್ಲಾಹನು ಬಿಡು ವುದಿಲ್ಲವೆಂದು ಮನಗಂಡಾಗ ಅವರು ಹೇಳುತ್ತಾರೆ, 'ಪ್ರಭೂ! ನಮಗೆ ಒಂದು ಅಭಿಲಾಷೆಯಿದೆ. ನಮ್ಮನ್ನು ಪುನಃ ನಮ್ಮ ದೇಹಗಳಿಗೆ ಮರಳಿಸು. ತರುವಾಯ ನಾವು ನಿನ್ನ ಮಾರ್ಗದಲ್ಲಿ ಇನ್ನೊಮ್ಮೆ ವಧಿಸಲ್ಪಡುವಂತಾಗಲಿ.' ಇವರಿಗೆ ಯಾವುದೇ ಅಭಿಲಾಷೆ ಯಿಲ್ಲವೆಂದರಿತು ಅಲ್ಲಾಹನು ಅನಂತರ ಹೆಚ್ಚು ಒತ್ತಾಯಿಸಲಿಲ್ಲ." (ಮುಸ್ಲಿಮ್)

ಸ್ವರ್ಗದಲ್ಲಿ ದೇವಚರರ ಜತೆ ವಿಹರಿಸುತ್ತಿರುವ ಜಅ್‌ಫರ್ ಬಿನ್ ಅಬೀತಾಲಿಬ್‌ರ ಕುರಿತು ಅವರ ಸಹೋದರ ಹೀಗೆ ಹಾಡಿದ್ದರು:

ವಜಅಫ್ಫುರುಲ್ಲಧೀ ವಯಳ್‌ಹಾ ವಯಮ್ಸೀ
ಯತೀರು ಮಅಲ್ ಮಲಾಯಿಕತ್ ಇಬ್ನು ಉಮ್ಮೀ

ನಮ್ಮ ಆತ್ಮಗಳಿಗೆ 'ಆಲಮುಲ್ ಬರ್ಝಖ್'ನಲ್ಲಿ ಎಷ್ಟು ಕಾಲ ಇರಬೇಕಾಗುವುದು. ಕೋಟ್ಯಾನುಗಟ್ಟಲೆ ವರ್ಷ ಇರಬೇಕಾದೀತೇ? ಅಥವಾ ಶೀಘ್ರ ಕೊನೆಗೊಳ್ಳಬಹುದೇ? ಇದು ಕೇವಲ ಅಲ್ಲಾಹನಿಗೆ ತಿಳಿದಿರುವ ವಿಷಯ.

ಗೋರಿಯ ಪ್ರಶ್ನೋತರ ಮತ್ತು ಶಿಕ್ಷೆ-ಪುರಸ್ಕಾರಗಳ ಕುರಿತು ಕೆಲವಾರು ಸೂಚನೆಗಳು ಪೂರ್ವೋಕ್ತ ವಿವರಣೆಯಲ್ಲಿದೆ. ಆದ್ದರಿಂದ ಅದನ್ನು ಇನ್ನೊಂದು ಪ್ರತ್ಯೇಕ ಅಧ್ಯಾಯದಲ್ಲಿ ವಿವರಿಸ ಬಯಸುವುದಿಲ್ಲ, ಕಬರ್‌ನ ಶಿಕ್ಷೆಯನ್ನು ಕೆಲವರು ಇದೇನು ಲಾಕಪ್ ಮರ್ದನವೇ ಎಂದು ಗೇಲಿಮಾಡಿ ಸಂತೋಷ ಪಡುತ್ತಾರೆ. ಧರ್ಮ ವಿರೋಧಿಗಳ 'ಚಪ್ಪಾಳೆ' ಗಿಟ್ಟಿಸುವುದು ಅವರ ಉದ್ದೇಶವೋ? ಅಥವಾ ಅವರ ತಿಳಿಗೇಡಿತನವೋ? ದಿನನಿತ್ಯ ಎಲ್ಲ ನಮಾಝ್‌ಗಳಲ್ಲಿಯೂ ಗೋರಿಯ ಶಿಕ್ಷೆಯ ಕುರಿತು ಅಲ್ಲಾಹನೊಡನೆ ಅಭಯ ಯಾಚಿಸಬೇಕೆಂಬ ಪ್ರವಾದಿಯವರ(ಸ) ಆದೇಶ ಮತ್ತು ಈ ವಿಷಯದ ಕುರಿತು ಪ್ರವಾದಿಯವರ(ಸ) ಇತರ ಬೋಧನೆಗಳೂ ಸಾಲದಿದ್ದರೆ ಮೇಲಿನ ಕುರ್‌ಆನ್ ವಚನವನ್ನಾದರೂ ಇವರು ಅಂಗೀಕರಿಸಬಹುದಲ್ಲವೇ.

❖ ❖ ❖ ❖

ಅಧ್ಯಾಯ 03

ಕಿಯಾಮತ್ ಅಥವಾ ಪುನರುತ್ಥಾನ

ಮಾನವಕುಲಕ್ಕೆ ಈ ಭೂಮಿಯಲ್ಲಿ ನಿರ್ದಿಷ್ಟ ಕಾಲದ ವರೆಗೆ ಜೀವಿಸುವ ಸೌಲಭ್ಯ ವನ್ನು ಒದಗಿಸಲಾಗಿದೆಯೆಂದು ಅಲ್ಲಾಹನು ನಮಗೆ ತಿಳಿಸಿದ್ದಾನೆ. ಆ ಅವಧಿಯ ತನಕ ದಿನನಿತ್ಯ ಕೆಲವರು ಮರಣ ಹೊಂದಿ ಬರ್ಝಖ್ ಸೇರುತ್ತಾರೆ. ಕೆಲವರು ಹುಟ್ಟಿ ಭೂಮಿಗೆ ಬರುತ್ತಾರೆ. ಈ ಪ್ರಕ್ರಿಯೆ ನಿರಂತರ ಸಾಗುತ್ತದೆ. ಅವಧಿ ಮುಗಿದರೆ ಈ ಪ್ರಕ್ರಿಯೆಯೂ ನಿಂತು ಬಿಡುತ್ತದೆ. ಅನಂತರ ಯಾರೂ ಹುಟ್ಟುವುದಿಲ್ಲ, ಅಂದು ಇರುವವರೆಲ್ಲರನ್ನೂ ಸಾಯಿಸಲಾಗುತ್ತದೆ. ತನ್ಮೂಲಕ ಎಲ್ಲರೂ ಬರ್ಝಖ್ ಪ್ರವೇಶಿ ಸುತ್ತಾರೆ. ಇನ್ನು ಬರ್ಝಖ್‌ನಲ್ಲಿ ಅವರು ಎಷ್ಟು ಕಾಲ ಇರಬೇಕು? ನಮಗದು ತಿಳಿ ಯದು, ಅಲ್ಲಾಹನೇ ಬಲ್ಲ.

"ಮರಣ ಹೊಂದಿದ ಎಲ್ಲರನ್ನೂ ಅಲ್ಲಾಹನು ಎರಡನೆಯ ಬಾರಿ ಜೀವಂತಗೊಳಿ ಸುವನು." **(ಅಲ್ ಬಕರ: 28)** ಅರ್ಥಾತ್, ಆತ್ಮವನ್ನು ಹೊಸ ರೂಪದ ದೇಹದಲ್ಲಿ ಸೇರಿಸಿ ಪುನಃ ಜೀವಂತಗೊಳಿಸುವನು. ಆದರೆ ಅದಕ್ಕಿಂತ ಮುಂಚೆ ಇಲ್ಲಿ ಇತರ ಹಲವು ವ್ಯವಸ್ಥೆ ಗಳನ್ನು ಮಾಡಬೇಕು. ಏಕೆಂದರೆ, ಒಂದು ನಿರ್ದಿಷ್ಟ ಧ್ಯೇಯದಿಂದ ಅವರನ್ನು ಪುನಃ ಜೀವಂತಗೊಳಿಸಲಾಗುತ್ತದೆ. ಐಹಿಕ ಜೀವನವು ಪರೀಕ್ಷಾ ಹಂತವಾಗಿದೆ. ಪರೀಕ್ಷೆಯಲ್ಲಿ ಯಾರು ಗೆದ್ದರು, ಯಾರು ಸೋತರೆಂಬುದನ್ನು ಅವರ ದಾಖಲೆ ಮತ್ತಿತರ ಸಾಕ್ಷ್ಯಗಳ ಆಧಾರದಲ್ಲಿ ಪರಿಶೀಲಿಸಬೇಕಾಗಿದೆ. ಅದನ್ನು ಅವರಿಗೆ ಸ್ಪಷ್ಟಪಡಿಸಬೇಕು. ಅನಂತರ ಅವರಿಗೆ ಸೂಕ್ತ ಪ್ರತಿಫಲವನ್ನೂ ನೀಡಬೇಕಾಗುತ್ತದೆ. ಪರೀಕ್ಷಾ ಕೊಠಡಿಯಾಗಿ ವ್ಯವಸ್ಥೆ ಗೊಳಿಸಲಾಗಿದ್ದ ಪ್ರಪಂಚದ ಇಂದಿನ ವ್ಯವಸ್ಥೆಯು ಅದಕ್ಕೆ ಅಪರ್ಯಾಪ್ತವಾಗಿದೆ. ಜೀವನದ ಎಲ್ಲ ಪೂರ್ವಾಪರ ಪ್ರಕ್ರಿಯೆಗಳು ನೈಜ ರೂಪದಲ್ಲಿ ಪ್ರಕಟವಾಗುವ, ಪ್ರಾಪಂಚಿಕ ಮತ್ತು ಅಪ್ರಾಪಂಚಿಕವಾದ ಎಲ್ಲ ವಸ್ತುಗಳೂ ಸಾಕ್ಷ್ಯಗಳಾಗಿ ಮಾರ್ಪಡುವ, ಪ್ರತಿಯೋರ್ವರೂ ಸ್ವಯಂ ಸಾಕ್ಷಿಯಾಗುವುದು ಅನಿವಾರ್ಯವಾಗುವ ರೀತಿಯಲ್ಲಿ ಸ್ಥಿತಿಗಳು ಪ್ರತ್ಯಕ್ಷವಾಗುವ ಹಾಗೂ ಅದರೊಂದಿಗೆ ಅತ್ಯಂತ ಯೋಗ್ಯ ಪ್ರತಿಫಲವನ್ನು

ಅನುಭವಿಸಲು ಪರ್ಯಾಪ್ತವಾದಂತಹ ಏರ್ಪಾಡನ್ನು ನಿಸರ್ಗದಲ್ಲಿ ಮಾಡಬೇಕಾಗಿದೆ. ಆ ಬಳಿಕ ಮಾನವನನ್ನು ಪುನಃ ಜೀವಂತಗೊಳಿಸಬೇಕೆಂದು ಅಲ್ಲಾಹನು ನಿರ್ಣಯಿಸಿದ್ದಾನೆ. ನಿಸರ್ಗದಲ್ಲಿ ಹೊಸ ಬದಲಾವಣೆಯನ್ನು ಮಾಡುವುದಕ್ಕಾಗಿ ಹಳೆಯ ಸ್ವರೂಪವನ್ನು ನಾಶಪಡಿಸಬೇಕು. ಆದರೆ, ಈ ಬದಲಾವಣೆ ಮತ್ತು ಮಾನವ ಹಾಗೂ ಇತರ ಸಕಲ ಜೀವಜಾಲಗಳನ್ನು ನಾಶ ಪಡಿಸುವ ಕಾರ್ಯವು ಏಕಕಾಲದಲ್ಲಿ ನಡೆಯುತ್ತದೆ. ಅದಕ್ಕಾಗಿ ಅಲ್ಲಾಹನು ವಿಶೇಷ ವಿಧಾನವನ್ನು ಮೊದಲೇ ನಿರ್ಣಯಿಸಿದ್ದಾನೆ. ಕಹಳೆ ಊದುವುದು! ಅದರಿಂದ ಎಲ್ಲವೂ ಧೂಳೀಪಟವಾಗುತ್ತದೆ. ತರುವಾಯ ಪ್ರಪಂಚದ ಪುನರ್ ವ್ಯವಸ್ಥೆ ನಡೆಯುತ್ತದೆ. ಪುನಃ ಎರಡನೆಯ ಬಾರಿ ಕಹಳೆ ಊದಲಾಗುತ್ತದೆ. ಒಂದನೆಯದು ಸಂಪೂರ್ಣ ಸಂಹಾರಕ್ಕೆ ಮತ್ತು ಎರಡನೆಯದು ಸಂಪೂರ್ಣ ವ್ಯವಸ್ಥೆಯ ಪುನಃ ನಿರ್ಮಾಣಕ್ಕೆ! ಅದರೊಂದಿಗೆ ಎಲ್ಲರೂ ಹೊಸ ವ್ಯವಸ್ಥೆಯ ದೇಹದೊಂದಿಗೆ ಎದ್ದೇಳಿ ಸಲ್ಪಡುವರು. ಸಾಕ್ಷಾತ್ ಕಿಯಾಮತ್ (ಪುನರುತ್ಥಾನ)! ಇದು ಅತ್ಯಂತ ಗಂಭೀರ, ಭೀಕರ ಮತ್ತು ನಿರ್ಣಾಯಕ ಘಟನೆಗಳಾಗಿವೆ. ಕಥೆ ಹೇಳುತ್ತಾ ಸಾಗಿದರೆ ಸಾಲದು. ಚೆನ್ನಾಗಿ ಗ್ರಹಿಸುವ ರೀತಿಯಲ್ಲಿ ಸವಿವರವಾದ ಅಧ್ಯಯನ ನಡೆಸುವ ಅಗತ್ಯವಿದೆ. ಸಂಹಾರ, ಪುನರ್‌ನಿರ್ಮಾಣವೆಲ್ಲವೂ ಈ ಎದ್ದೇಳುವಿಕೆಯ ಸಿದ್ಧತೆಯಾಗಿರುವುದರಿಂದ ಮುಂದಿನ ವಿವರಣೆಗಳಲ್ಲಿ ಕಿಯಾಮತ್ ಎಂದು ಹೇಳುವಾಗ ಆ ಮೂರನ್ನೂ ಒಳಗೊಂಡ ವಿಶಾಲ ಅರ್ಥವನ್ನು ಉದ್ದೇಶಿಸಲಾಗಿದೆಯೆಂದು ಇಲ್ಲಿ ಜ್ಞಾಪಿಸುತ್ತೇನೆ.

ಕಿಯಾಮತ್, ನಿಸರ್ಗದ ಕೇವಲ ಸ್ವಾಭಾವಿಕ ಪ್ರತಿಕ್ರಿಯೆಯೇ?

ಮಾನವನನ್ನು ಅನುಕೂಲ ಪರಿಸ್ಥಿತಿಯಲ್ಲಿ ಹಾಗೆಯೇ ಬಿಟ್ಟು ಬಿಟ್ಟರೆ, ಯಾವ ಪ್ರತಿಕೂಲ ಶಕ್ತಿಯೂ ಹಸ್ತಕ್ಷೇಪ ನಡೆಸದಿದ್ದರೆ, ಅವನು ನೂರೈವತ್ತು ಅಥವಾ ನೂರ ಎಂಭತ್ತು ವರ್ಷ ಬದುಕಬಹುದೆಂದು ಕೆಲವು ವಿಜ್ಞಾನಿಗಳು ಹೇಳುತ್ತಾರೆ. ಇತರ ಜೀವಿ ಗಳ ಕುರಿತು ಅವರು ಕೆಲವು ಲೆಕ್ಕಾಚಾರಗಳನ್ನು ಮಾಡಿದ್ದಾರೆ. ಎಲ್ಲ ವಸ್ತುವಿಗೂ ಒಂದು ಜೀವವಿದೆ. ಜೀವವಿರುವುದೆಲ್ಲವೂ ಬೆಳೆಯುತ್ತದೆ. ಪ್ರತಿಯೊಂದರ ಬೆಳವಣಿಗೆಗೂ ಒಂದು ಮಿತಿಯಿದೆ. ಒಂದು ವಸ್ತುವು ಅದರ ಸಂಪೂರ್ಣ ಬೆಳವಣಿಗೆಗೆ ತಲುಪಲು ವ್ಯಯವಾದ ಕಾಲಾವಧಿಯ ಐದು ಅಥವಾ ಆರು ಪಟ್ಟು ಕಾಲ ಮಾತ್ರ ಆ ವಸ್ತುವಿಗೆ, ಸಂಪೂರ್ಣ ಬೆಳವಣಿಗೆಯ ಬಳಿಕ ಉಳಿಯಲು ನೈಸರ್ಗಿಕವಾಗಿ ಸಾಧ್ಯವಿದೆ. ಅನಂತರ ಮರಣ ಹೊಂದುತ್ತದೆ. ಇದು ಅವರ ಅಂದಾಜಿನ ರೂಪ.

ಒಂದು ಗಿಡ ಚಿಗುರಿತು, ಬೆಳೆದು ಪಕ್ವಗೊಂಡು ನಾಶವಾಯಿತು. ಒಂದು ಆಡಿನ

ಮರಿ ಹುಟ್ಟಿ, ಬೆಳೆದು, ಬಾಳಿ 24ನೇ ವರ್ಷದಲ್ಲಿ ನೈಸರ್ಗಿಕವಾಗಿ ಅದರ ಕಾಲ ಮುಗಿದು ಸಾವನ್ನಪ್ಪಿತು. ಪ್ರಪಂಚವು ರೂಪುಗೊಂಡು, ಬೆಳೆದು, ಹಲವು ಕಾಲದ ಬಳಿಕ ಅದು ಸಂಪೂರ್ಣತೆಯನ್ನು ಪಡೆಯುತ್ತದೆ. ತರುವಾಯ ಆ ತನಕ ಗತಿಸಿದ ಕಾಲಾವಧಿಯ ಐದಾರು ಪಟ್ಟು ಕಾಲದ ಬಳಿಕ ಅದು ಸಾಯುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಪಂಚದ ನಾಶವು ಸ್ವಾಭಾವಿಕವಾಗಿ ಸಂಭವಿಸುವ ಒಂದು ಪ್ರಕ್ರಿಯೆಯಾಗಿದೆ ಅಥವಾ ನಮ್ಮ ಭಾಷೆಯಲ್ಲಿ ಹೇಳುವ ಕಿಯಾಮತ್ ಆಗಿದೆ. ಆದರೆ 180 ವರ್ಷ ಕಾಲ ಬದುಕುವ ಮಾನವರು ಎಷ್ಟು ಮಂದಿಯಿದ್ದಾರೆ? 24 ವರ್ಷ ಎಷ್ಟು ಆಡಿನ ಮರಿಗಳು ಬದುಕುತ್ತವೆ? ವಿಜ್ಞಾನಿಗಳ ಅಂದಾಜು ಪ್ರಕಾರ ಸಾಯುವ ಜೀವಿಗಳಲ್ಲಿ ನೈಸರ್ಗಿಕ ಕಾಲಾವಧಿಯನ್ನು ಪೂರೈಸುವ ಜೀವಿಯು ಒಂದು ವೇಳೆ ಇದ್ದರೆ ಅದೊಂದು ಮಹಾ ಅದ್ಭುತವಾಗಬಹುದು. ಮಾನವರು, ಗಿಡ-ಮರ, ಖಗ-ಮೃಗ ಇತ್ಯಾದಿಗಳೆಲ್ಲವೂ ಇವರ ಮಾತಿನಂತೆ ಅಕಾಲ ಸಾವಿಗೀಡಾಗುತ್ತಿರುವುದನ್ನು ನಾವು ಸಾಮಾನ್ಯವಾಗಿ ನೋಡುತ್ತಿದ್ದೇವೆ.

ಈ ಲೋಕವು ನಾಶವಾಗಲಿದೆಯೆಂದು ಎಲ್ಲ ವಿಜ್ಞಾನಿಗಳೂ ಸಮರ್ಥಿಸುತ್ತಾರೆ. ಅದಕ್ಕಾಗಿ ಅವರು ನಾನಾ ರೀತಿಯ ಆಧಾರ ಪ್ರಮಾಣಗಳನ್ನು ನೀಡುತ್ತಿದ್ದಾರೆ, ಹೆಚ್ಚಿನವರು ಅದೊಂದು ಸ್ವಾಭಾವಿಕ ಪ್ರಕ್ರಿಯೆ ಎಂಬ ಭಾವನೆ ಮೂಡಿಸಲು ಪ್ರಯತ್ನಿಸುತ್ತಾರೆ. ನಾವು ಕೂಡಾ ಹಾಗೆಯೇ ಭಾವಿಸಬೇಕೇ? ಒಂದು ವಿಷಯವಂತೂ ಖಚಿತ. ಯಾವುದಾದರೊಂದು ವಿಷಯವು ಸ್ವಾಭಾವಿಕವಾಗಿ ಸಂಭವಿಸಬಹುದೆಂಬ ಭಾವನೆ ಮತ್ತು ಪ್ರಜ್ಞಾವಂತ ಶಕ್ತಿಯ ಪೂರ್ವ ಯೋಜನೆಯನ್ವಯ ಒಂದು ನಿರ್ದಿಷ್ಟ ವೇಳೆಯಲ್ಲಿ ಅದು ಸಂಭವಿಸುವುದೆಂಬ ಭಾವನೆಗಳ ಮಧ್ಯೆ ಭಾರೀ ಅಂತರವಿದೆ. ವಿಶೇಷತಃ ಅಂಥವಾದ ಒಂದು ನಿಸರ್ಗದ ಬಗ್ಗೆ ವಿಶ್ವಾಸವಿರಿಸಿಕೊಂಡಿರುವಾಗ.

ಇನ್ನು ನಾವು ಇಸ್ಲಾಮ್ ಏನು ಕಲಿಸುತ್ತದೆ ಎಂಬುದನ್ನು ಪರಿಶೀಲಿಸೋಣ. ಪ್ರತಿಯೊಬ್ಬ ಮಾನವನನ್ನೂ ಸೃಷ್ಟಿಸುವಾಗಲೇ ಈ ಲೋಕದಲ್ಲಿ ಆತನ ಕಾಲಾವಧಿಯನ್ನು ನಿರ್ಣಯಿಸಲಾಗಿದೆ ಮತ್ತು ಅವಧಿ ತಲಪಿದಾಗ ಅಲ್ಲಾಹನ ಅಧಿಕಾರಿಗಳು (ದೇವಚರರು) ಆತನನ್ನು ಸಾಯಿಸುವರೆಂದು ನಾವು ತಿಳಿದಿದ್ದೇವೆ. ಆದರೆ ಅದೇ ರೀತಿ ಈ ಲೋಕವನ್ನು ಸೃಷ್ಟಿಸುವಾಗ ಅದಕ್ಕೆ ಅಲ್ಲಾಹನು ಒಂದು ಅವಧಿಯನ್ನು ನಿಶ್ಚಯಿಸಿರುತ್ತಾನೆ.

“ಕೇವಲ ಸ್ವಲ್ಪವೇ ಕಾಲಾವಧಿಯು ಅದಕ್ಕೆ ನಿಶ್ಚಯವಾಗಿದೆ.” **(ಹೂದ್: 104)** ಅವಧಿ ಮುಗಿದಾಗ ಅದನ್ನು ನಾಶಪಡಿಸಲಿಕ್ಕಾಗಿ ಓರ್ವ ವಿಶೇಷ ಅಧಿಕಾರಿಯನ್ನು ಅಲ್ಲಾಹನು ಅಂದೇ ನಿಶ್ಚಯಿಸಿದ್ದಾನೆ. ಇಸ್ರಾಫೀಲ್! ವಿನಾಶಕಾರಿ ಆಯುಧವಾಗಿರುವ

ಕಹಳೆಯನ್ನು ಬಾಯಿಯಲ್ಲಿರಿಸಿ, ತಲೆ ತಗ್ಗಿಸಿ, ಕಿವಿ ನಿಮಿರಿಸಿ ಯಾವಾಗ ಪ್ರಭುವಿನ ಆಜ್ಞೆ ಹೊರಡುವುದೆಂದು ಆ ದೇವಚರ ಎಚ್ಚರಿಕೆಯಿಂದ ನಿರೀಕ್ಷಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಲೋಕದಲ್ಲಿ ನಾನು ಹೇಗೆ ಸುಖಪಡಲಿ ಎಂದು ಪ್ರವಾದಿಯವರು(ಸ) ಒಮ್ಮೆ ಕಳವಳ ವ್ಯಕ್ತಪಡಿಸಿದ್ದರು. ಇದನ್ನು ಕೇಳಿ ಸಹಾಬಿಗಳು (ಅನುಚರರು) ಪ್ರಶ್ನಿಸಿದರು, ನಾವೇನು ಮಾಡಬೇಕು? ಪ್ರವಾದಿ(ಸ) ಹೇಳಿದರು, "ನಮಗೆ ಅಲ್ಲಾಹನೇ ಸಾಕು. ಭರವಸೆಯಿರಿಸಲು ಆತನೇ ಅತ್ಯಂತ ಅರ್ಹನಲ್ಲವೇ ಎಂದು ಹೇಳಿರಿ." (ತಿರ್ಮಿದಿ)

ವಿಜ್ಞಾನಿಗಳ ಅಂದಾಜಿನಂತೆ ಜಗತ್ತಿಗೆ ದೊರೆಯುವ ಅವಧಿ ಮತ್ತು ಅಲ್ಲಾಹ್ ನಿರ್ಣಯಿಸಿದ ಅವಧಿ ಒಂದೇ ಆಗಿರುವುದೆಂದು ಯಾರಾದರೂ ಭಾವಿಸುವುದಿದ್ದರೆ ಹಾಗೆಯೇ ಆಗಲಿ. ಮಾನವ, ಮೃಗ, ಸಸ್ಯ ಮುಂತಾದವುಗಳಿಗೆ ಸಾಮಾನ್ಯವಾಗಿ ಇವರ ವೈಜ್ಞಾನಿಕ ಅವಧಿ ದೊರೆಯುವುದಿಲ್ಲವೆಂಬುದು ಬಹಿರಂಗ ಸತ್ಯವಾಗಿದೆ. ಹೀಗಿರುತ್ತಾ, ಜಗತ್ತಿನ ನಾಶದ ಮಟ್ಟಿಗೆ ಮಾತ್ರ ಒಂದು ಅತಿ ಅದ್ಭುತದಲ್ಲಿ ವಿಶ್ವಾಸವಿರಿಸಲೇ ಬೇಕೆಂಬ ಹಠಕ್ಕೆ ಅರ್ಥವಿಲ್ಲ. ಏನಿದ್ದರೂ ಜಗತ್ತನ್ನು ಸೃಷ್ಟಿಸುವಾಗಲೇ ಅದರ ಪ್ರಭುವು ಅದಕ್ಕೊಂದು ಅವಧಿ ನಿರ್ಣಯಿಸಿದ್ದಾನೆ. ಆ ಅವಧಿಯಲ್ಲಿಯೇ ಆತನ ಆಜ್ಞೆಯಂತೆ ದೇವಚರರು ಅದನ್ನು ನಾಶಪಡಿಸುವರೆಂಬ ವಿಷಯವನ್ನು ತನ್ಮಧ್ಯೆ ಮರೆಯದಿದ್ದರಾಯಿತು.

ಕಿಯಾಮತ್ ಯಾವಾಗ?

ಅದು ಯಾವಾಗ ಸಂಭವಿಸಬಹುದು? ಈ ಪ್ರಶ್ನೆಯನ್ನು ಪ್ರವಾದಿಯವರ(ಸ) ವೈರಿಗಳಾದ ಮಕ್ಕಾದ ಜನರು, ಹಲವೊಮ್ಮೆ ಕೇಳಿದ್ದರು. ನೇರವಾಗಿಯೂ ವ್ಯಂಗ್ಯ ವಾಗಿಯೂ! ಹಾಗಾದರೆ ಅದನ್ನೊಮ್ಮೆ ನೋಡಿ ಬಿಡೋಣವೆಂದು ಅವರು ಸವಾಲು ಹಾಕಿದ್ದರು! ಪ್ರವಾದಿವರ್ಯರ(ಸ) ರಾಯಭಾರವನ್ನೇ ಪ್ರಶ್ನಿಸುವ ರೀತಿಯ ಈ ಸವಾಲುಗಳಿಗೆ ಏನಾದರೂ ಬೆಲೆಯಿರುತ್ತಿದ್ದರೆ, ಇಂತಹ ತಾರೀಕಿನಂದು ಸಂಭವಿಸುವು ದೆಂದು ಖಚಿತವಾಗಿ ಉತ್ತರಿಸುತ್ತಿದ್ದರು. ಆದರೆ ಅಲ್ಲಾಹನ ಆಜ್ಞಾನುಸಾರ ಅದಕ್ಕೆ ಪ್ರವಾದಿಯವರು(ಸ) ನೀಡಿದ್ದ ಉತ್ತರಗಳ ಒಟ್ಟು ಸಾರವು ಅದು ಕೇವಲ ಅಲ್ಲಾಹನಿಗೆ ತಿಳಿದಿದೆ ಎಂಬುದಾಗಿತ್ತು.

"ಆ ಘಳಿಗೆ ಬಂದೆರಗುವುದಾದರೂ ಯಾವಾಗ ಎಂದು ಇವರು ನಿಮ್ಮೊಡನೆ ಕೇಳುತ್ತಾರೆ. ಅದರ ಸಮಯವನ್ನು ತಿಳಿಸುವ ಕೆಲಸ ನಿಮಗೆಲ್ಲಿದೆ? ಅದರ ಜ್ಞಾನವಂತು ನಿಮ್ಮ ಪ್ರಭುವಿಗೇ ಸೀಮಿತಗೊಂಡಿದೆ. ನೀವಂತು ಅದನ್ನು ಭಯಪಡುವ ಪ್ರತಿಯೊಬ್ಬನಿಗೆ ಕೇವಲ ಎಚ್ಚರಿಕೆ ನೀಡುವವರಾಗಿದ್ದೀರಿ." (ಅನ್ನಾಝಿಆತ್: 42-45)

“ಎಚ್ಚರಿಕೆ! ಮರಣವು ಬರುವುದಕ್ಕಿಂತ ಮೊದಲೇ ಜೀವನವನ್ನು ಉತ್ತಮ ಪಡಿಸಿರಿ” ಎಂದು ಓರ್ವನಿಗೆ ಹೇಳಿದರೆ, “ನಾನು ಸಾಯುವ ದಿನಾಂಕವನ್ನು ತಿಳಿಸಿರಿ. ಹಾಗಾದರೆ ನಾನು ನಿನ್ನ ಮಾತಿನ ಬಗ್ಗೆ ಆಲೋಚಿಸುತ್ತೇನೆ” ಎಂದು ಉತ್ತರಿಸುವುದಕ್ಕೆ ಅರ್ಥವಿಲ್ಲ. ಯಾವಾಗ ಎಂದು ನಿರ್ದಿಷ್ಟವಾಗಿ ತಿಳಿಯದು. ಆದರೆ ಏನಿದ್ದರೂ ಸಾಯಲೇ ಬೇಕು. ಜಾಗ್ರತೆ ವಹಿಸುವುದೇ ಉತ್ತಮವೆಂದು ಹೇಳುವುದೇ ಹೆಚ್ಚು ನ್ಯಾಯೋಚಿತವೆಂದು ವ್ಯಕ್ತವಾಗುತ್ತದೆ. ಕ್ಲಪ್ತ ದಿನಾಂಕವನ್ನು ಕೇಳಿ ಪ್ರಯೋಜನವಿಲ್ಲ. ಅದನ್ನು ಅಲ್ಲಾಹನು ತಿಳಿಸುವುದೂ ಇಲ್ಲ. ಯಾವುದೋ ನಿರ್ದಿಷ್ಟ ಉದ್ದೇಶದಿಂದ ಅಲ್ಲಾಹನು ಅದನ್ನು ಬೇಕೆಂದೇ ಅಡಗಿಸಿಟ್ಟಿದ್ದಾನೆ. ಆ ದಿನಕ್ಕೆ ಹೆದರಿ ಜೀವನವನ್ನು ಸುಧಾರಿಸುವವರಾರು, ದೇಹೇಚ್ಛೆಯ ಪ್ರೇರಣೆಯಿಂದ ಅದನ್ನು ನಿರಾಕರಿಸುವವರಾರೆಂದು ಪರೀಕ್ಷಿಸಬೇಕಾಗಿದೆ. ಆ ಪ್ರಕಾರ ಅವರಿಗೆ ಪ್ರತಿಫಲವನ್ನೂ ನೀಡಬೇಕಾಗಿದೆ. ಆ ಮಹಾ ಘಟನೆಯ ತಾರೀಕು ಇತ್ಯಾದಿಗಳನ್ನು ತಿಳಿಸಿದರೆ ಆ ಪರೀಕ್ಷೆಯ ಸ್ವರೂಪ ಉಳಿಯದು. ಅಲ್ಲಾಹನೇ ಆ ವಿಷಯವನ್ನು ಸೂಚಿಸಿದ್ದಾನೆ, “ಪುನರುತ್ಥಾನದ ಘಳಿಗೆಯು ಖಂಡಿತ ವಾಗಿಯೂ ಬರಲಿದೆ. ಪ್ರತಿ ಯೊಂದು ಜೀವಿಯೂ ತನ್ನ ಪರಿಶ್ರಮಕ್ಕನುಸಾರ ಪ್ರತಿಫಲ ಪಡೆಯುವಂತಾಗಲು ನಾನು ಆ ಸಮಯವನ್ನು ರಹಸ್ಯವಾಗಿಡಲಿಚ್ಛಿಸುತ್ತೇನೆ. ಆದು ದರಿಂದ ಅದರ ಮೇಲೆ ವಿಶ್ವಾಸವಿರಿಸದವನು ಮತ್ತು ತನ್ನ ಸ್ವೇಚ್ಛೆಗಳ ದಾಸನಾಗಿ ಬಿಟ್ಟವನು ನಿಮ್ಮನ್ನು ಆ ಘಳಿಗೆಯ ಚಿಂತೆಯಿಂದ ತಡೆಯದಿರಲಿ. ಅನ್ಯಥಾ ನೀವು ವಿನಾಶದಲ್ಲಿ ಬೀಳುವಿರಿ.” **(ತಾಹಾ: 15-16)**

ಹಠಾತ್ತನೆ

ನಿರ್ದಿಷ್ಟ ದಿನಾಂಕವನ್ನು ತಿಳಿಸಿಲ್ಲ, ಮಾತ್ರವಲ್ಲ ಅದು ಅನಿರೀಕ್ಷಿತವಾಗಿ ಸಂಭವಿಸು ವುದೆಂದೂ ಆತನು ನಮಗೆ ತಿಳಿಯಪಡಿಸಿದ್ದಾನೆ. “ಅದು ನಿಮ್ಮ ಮೇಲೆ ಹಠಾತ್ತನೆ ಬರುವುದು.” **(ಅಲ್ ಆಅ್‌ರಾಫ್: 187)**

1897ರಲ್ಲಿ ಅಸ್ಸಾಮಿನಲ್ಲಿ ಭೂಕಂಪವುಂಟಾದಾಗ ಬ್ರಹ್ಮಪುತ್ರಾ ನದಿ ಪ್ರವಾಹದ ದಿಕ್ಕು ಬದಲಾಯಿತು ಮತ್ತು ಎವರೆಸ್ಟ್ ಶಿಖರವು 100 ಅಡಿ ಏರಿತು. 1755ರಲ್ಲಿ ಪೋರ್ಚುಗಲ್‌ನಲ್ಲಿ ಯುರೋಪಿನ ಕಾಲುಭಾಗವನ್ನು ನಡುಗಿಸಿ, ಮೂವತ್ತು ಸಾವಿರ ಮಂದಿಯನ್ನು ಬಲಿತೆಗೆದು, ಲಿಸ್ಬನ್ ಪಟ್ಟಣವನ್ನು ಧೂಳೀಪಟಗೈದ ಇನ್ನೊಂದು ಘಟನೆ ನಡೆಯಿತು. 1556ರಲ್ಲಿ ಚೀನಾದ ಶೆಲ್ಸಿ ನಗರದಲ್ಲಿ ಉಂಟಾದ ಭೂಕಂಪಕ್ಕೆ ಎಂಟು ಲಕ್ಷಕ್ಕೂ ಅಧಿಕ ಮಂದಿ ಆಹುತಿಯಾದರು. ‘ಅಗಾದೀರ್’ ಘಟನೆಯ ಸ್ಮರಣೆಯು

ಈಗಲೂ ಹಸಿರಾಗಿದೆ. ಕೇವಲ ಪ್ರಾದೇಶಿಕ ಮತ್ತು ತೀರಾ ಸೀಮಿತವಾದ ಇಂತಹ ಚಿಕ್ಕಪುಟ್ಟ ಘಟನೆಗಳ ಕುರಿತು ಕೇಳಿದಾಗ ಘಟನೆ ಹಳೆಯದಾಗಿದ್ದರೂ ಮಾನವ ನಡುಗುತ್ತಾನೆ. ಆದರೆ ಯಾವ ಕ್ಷಣದಲ್ಲಿಯೂ ಸಂಭವಿಸಬಹುದಾದ ಮತ್ತು ಭೂಮಿ, ಆಕಾಶಗಳನ್ನು ಸಂಪೂರ್ಣವಾಗಿ ನಾಶಪಡಿಸುವ ಹಾಗೂ ಸಕಲ ಜೀವಿಗಳನ್ನೂ ಸಾಯಿಸುವ ಘಟನೆಯು ಮಾನವನ ಮಟ್ಟಿಗೆ ವಿಧಿ ನಿರ್ಣಾಯಕವಾಗಿದ್ದು ಭೂಮಿ-ಆಕಾಶಗಳಲ್ಲಿ ಅದು ಅತ್ಯಂತ ಕಠಿಣ ಕಾಲವಾಗಿರುವುದು (ಅಲ್ ಅಅ್‌ರಾಫ್: 187) ಎಂದು ಅಲ್ಲಾಹನು ವರ್ಣಿಸಿರುವ ಆ ಮಹಾ ಘಟನೆಯ (ಆಖಿರತ್‌ನ) ಕುರಿತು ಆಲೋಚಿಸಲು ಮಾನವ ನಿಗೆ ಸಮಯ ಸಿಗುವುದಿಲ್ಲ!

"ಆಕಾಶಗಳಲ್ಲೂ ಭೂಮಿಯಲ್ಲೂ ಎಷ್ಟೋ ನಿದರ್ಶನಗಳಿವೆ. ಅವುಗಳನ್ನು ಇವರು ಹಾದುಕೊಂಡು ಹೋಗುತ್ತಿರುತ್ತಾರೆ ಮತ್ತು ಅವುಗಳ ಕಡೆಗೆ ಕಿಂಚಿತ್ ಗಮನ ಹರಿಸುವುದಿಲ್ಲ." (ಯೂಸುಫ್: 105)

ಆರೋಗ್ಯವಂತರೆನಿಸಿದ ಎಷ್ಟೋ ಜನರು ದಿನನಿತ್ಯ ಹೃದಯಾಘಾತದಿಂದ ಸಾಯುವುದಿಲ್ಲವೇ? ಅನಿರೀಕ್ಷಿತ ಅಪಘಾತಗಳಿಂದ ಸಾಯುವವರ ಸಂಖ್ಯೆಯೇನು ಕಡಿಮೆಯಿದೆಯೇ? ಜೀವನಾವಧಿಯು ಇನ್ನೂ ದೀರ್ಘವಾಗಿದೆ, ಪ್ರಚಲಿತ ನಿರ್ಭೀತ ಸ್ಥಿತಿ ಸದಾ ಶಾಶ್ವತವೆಂಬ ತಪ್ಪು ತಿಳುವಳಿಕೆಯಿಂದ ಭವಿಷ್ಯದ ಕುರಿತು ಆಲೋಚಿಸದಿರು ವುದು ಮಹಾ ಮೂರ್ಖತನವಲ್ಲವೇ? "ಅಲ್ಲಾಹನ ಯಾತನೆಯ ಒಂದಂಶ ವಿಪತ್ತು ಥಟ್ಟನೆ ಇವರ ಮೇಲೆ ಬಿದ್ದು ಬಿಡಲಾರದೆಂದು ಅಥವಾ ಲೋಕಾಂತ್ಯವಾಗುವ ಆ ಘಳಿಗೆಯು ಹಠಾತ್ತನೆ ಇವರ ಮೇಲೆ ಬಂದು ಬಿಡಲಾರದೆಂದು ಇವರೇನು ನಿಶ್ಚಿಂತ ರಾಗಿರುವರೇ?" (ಯೂಸುಫ್: 107)

ಈ ಲೋಕದ ಅಂತ್ಯ ಸಮೀಪಿಸಿತೆಂಬ ಭಾವನೆ ಕೂಡಾ ನಿಮ್ಮಲ್ಲಿಲ್ಲದಿರುವಾಗ, ನೀವು ಆ ಬಗ್ಗೆ ಸಂಪೂರ್ಣ ನಿಶ್ಚಿಂತರಾಗಿ, ಐಹಿಕ ವ್ಯವಹಾರಗಳಲ್ಲಿ ತಲ್ಲೀನರಾಗಿ, ಪರಸ್ಪರ ಚರ್ಚಿಸುತ್ತಾ, ಜಗಳಾಡುತ್ತಾ ಇರುವಾಗ, ಅದೋ ಹಠಾತ್ತನೆ ಅದು ನಿಮ್ಮನ್ನು ಹಿಡಿಯುತ್ತದೆ. ಆ ಭೀಕರ ಶಬ್ದ - ಕಿಯಾಮತ್!

ನೀವು ಯಾವುದಾದರೂ ಘೋರ ಪಾಪವನ್ನು ಮಾಡುತ್ತಿರುವಾಗ ಅಥವಾ ಸತ್ಕರ್ಮಗಳನ್ನು ಮಾಡುತ್ತಿರುವಾಗ, ವ್ಯಾಪಾರ ಅಥವಾ ಕೂಲಿ ಕೆಲಸ ಮಾಡುತ್ತಿರುವಾಗ, ಇನ್ನಾವುದಾದರೂ ಸ್ಥಿತಿಯಲ್ಲಿರುವಾಗ ಅದು ಸಂಭವಿಸುತ್ತದೆ.

ಪ್ರವಾದಿ(ಸ) ಹೇಳಿದರು, "ಇಬ್ಬರು ಬಟ್ಟೆಯನ್ನು ಬಿಡಿಸಿ ಹಿಡಿದಿರುವಾಗ

ಕಿಯಾಮತ್ ಬರುತ್ತದೆ, ಆಗ ಅದನ್ನು ಮಡಚಿಡಲು ಅಥವಾ ಕ್ರಯ-ವಿಕ್ರಯ ಮಾಡಲು ಅವರಿಗೆ ಸಾಧ್ಯವಾಗುವುದಿಲ್ಲ, ಒಬ್ಬನು ಒಂಟೆಯ ಹಾಲು ಕರೆದು ಬರುವಾಗ ಕಿಯಾಮತ್ ಬರುತ್ತದೆ. ಅದನ್ನು ಕುಡಿಯಲು ಅವನಿಗೆ ಸಾಧ್ಯವಾಗುವುದಿಲ್ಲ, ಹೊಂಡದಲ್ಲಿ ನೀರು ತುಂಬಿಸುವಾಗ ಕಿಯಾಮತ್ ಬರುತ್ತದೆ. ಅದನ್ನು ಕುಡಿಸುವ ಅವಕಾಶ ದೊರೆಯುವುದಿಲ್ಲ, ತುತ್ತನ್ನು ಬಾಯಿಗೆ ಹಾಕಿದ್ದಾಗ ಕಿಯಾಮತ್ ಬರುತ್ತದೆ. ಅದನ್ನು ನುಂಗಲು ಸಾಧ್ಯವಾಗುವುದಿಲ್ಲ." **(ಬುಖಾರಿ)**

"ಹೌದು, ಅದು ಹಠಾತ್ತನೆ ಬರುತ್ತದೆ. ತಪ್ಪಿಸಿಕೊಳ್ಳಲಾಗದ ರೀತಿಯಲ್ಲಿ ಅವರ ಮೇಲೆರಗುತ್ತದೆ. ಒಂದು ಕ್ಷಣದ ವ್ಯವದಾನವೂ ಇರಲಾರದು." **(ಅಲ್ ಅಂಬಿಯಾ: 40)**

ಸಾಯಲಿರುವೆನಲ್ಲವೇ, ಕೊನೆಯ ಕೆಲವು ಕೆಲಸ ಕಾರ್ಯಗಳು (ವಸಿಯ್ಯತ್) ಉಳಿದಿವೆ. ಅವುಗಳನ್ನು ಮಾಡಿ ಬಿಡುತ್ತೇನೆ, ಕುಟುಂಬಿಕರನ್ನು ಒಮ್ಮೆ ಕೊನೆಯ ಬಾರಿ ನೋಡಿ ಬಿಡುತ್ತೇನೆ. ಹೀಗೆ ಯೋಚಿಸಿ ಪ್ರಯೋಜನವಿಲ್ಲ, ಅದೇನೂ ಸಾಗದು. "ವಾಸ್ತವದಲ್ಲಿ ಇವರು ಯಾವುದನ್ನು ಕಾಯುತ್ತಲಿರುವರೋ ಅದೊಂದು ಘನ ಸ್ಫೋಟವಾಗಿರುತ್ತದೆ. ಅದು - ಇವರು (ತಮ್ಮ ಲೌಕಿಕ ವ್ಯವಹಾರಗಳಲ್ಲಿ) ಜಗಳ ವಾಡುತ್ತಿರುವಾಗ ಹಠಾತ್ತನೆ ಬಂದೆರಗುವುದು. ಆಗ ಇವರಿಗೆ ವಸಿಯ್ಯತ್ (ಉಯಿಲು) ಮಾಡಲಿಕ್ಕೂ ಸಾಧ್ಯವಾಗದು ಮತ್ತು ತಮ್ಮ ಮನೆಯವರ ಕಡೆಗೆ ಮರಳಲಿಕ್ಕೂ ಆಗದು.

(ಯಾಸೀನ್: 50)

ಆದೋ ಕಿಯಾಮತ್ ಬಂತು. ನಿನಾದ ಕೇಳಿಸುತ್ತಿದೆ. ಪೂರ್ವ ಸಿದ್ಧತೆಗೆ ಸಮಯಾವಕಾಶ ದೊರೆಯಲಾರದು. ಒಮ್ಮೆ ಎವೆಯಿಕ್ಕುವಷ್ಟರಲ್ಲಿ ಅಥವಾ ಅದಕ್ಕಿಂತ ಕಡಿಮೆ ಸಮಯದಲ್ಲಿ ಅದು ಸಂಭವಿಸಿ ಬಿಡುತ್ತದೆ. "ಪ್ರಳಯದ ಸಂಭವವು ಮನುಷ್ಯನು ರೆಪ್ಪೆ ಬಡಿಯುವುದರೊಳಗೆ ಅಥವಾ ಅದಕ್ಕಿಂತಲೂ ಕಡಿಮೆ ಸಮಯದೊಳಗಾಗುವುದು.

(ಅನ್ನಹ್ಲ್: 77)

ಕೇವಲ ಸುದ್ದಿಯೋ?

ಒಂದೊಮ್ಮೆ ಈ ಲೋಕವು ನಾಶವಾಗುವುದೆಂಬ ಸುದ್ದಿಯನ್ನು ಮಾತ್ರ ಜನರಿಗೆ ನೀಡುವುದು ಅಲ್ಲಾಹನ ಉದ್ದೇಶವಲ್ಲ, ಇಸ್ಲಾಮಿಗೆ ಮಹಾ ಔದಾರ್ಯ ತೋರಿಸುವ ರೀತಿಯಲ್ಲಿ ಅಂತಹ ಘಟನೆ ಸಂಭವಿಸಬಹುದು, ವೈಜ್ಞಾನಿಕ ದೃಷ್ಟಿಯಲ್ಲಿಯೂ ಅದು ತರ್ಕಬದ್ಧ ಎಂಬ ಮನ್ನಣೆಯನ್ನು 'ಬುದ್ಧಿಜೀವಿ'ಗಳಿಂದ ಗಿಟ್ಟಿಸಿ ಕೊಳ್ಳುವುದೂ ಅಲ್ಲಾಹನ ಗುರಿಯಲ್ಲ, ನನ್ನ ಪೂರ್ವ ನಿರ್ಧಾರದಂತೆ ಕ್ಲಪ್ತ ಸಮಯದಲ್ಲಿ, ಆದರೆ ನಿಮ್ಮ ಮಟ್ಟಿಗೆ

ಹಠಾತ್ತನೆ ರೆಪ್ಪೆ ಬಡಿಯುವುದರೊಳಗೆ ನಾನು ಅದನ್ನು ನಾಶಪಡಿಸುತ್ತೇನೆ. ಆ ಘಟನೆ ಅತಿಭಯಂಕರವಾಗಿರುವುದು. ಅದು ಸಂಭವಿಸಿದ ಬಳಿಕ ನಿಮ್ಮ ಯಾವ ತಂತ್ರವೂ ಫಲಿಸಲಾರದು, ವಿಷಾದಿಸಿದರೂ ಪ್ರಯೋಜನವಿಲ್ಲ, ಯಾರೂ ನೆರವಿಗೆ ಬರಲಾರರು, ಪಾರಾಗುವ ಯಾವ ದಾರಿಯೂ ಸಿಗಲಾರದು, ಎಲ್ಲವೂ ಒಮ್ಮೆಲೆ ಮುಗಿಯುವುದು. ಐಹಿಕ ಜೀವನದಲ್ಲಿ ಮಾಡಿದ ಕರ್ಮ ಮಾತ್ರ ಜತೆಗಿರುವುದು. ಅದಕ್ಕೆ ತಕ್ಕಂತೆ ಸಂಪೂರ್ಣ ಪ್ರತಿಫಲ ಅನುಭವಿಸಲಿಕ್ಕಾಗಿ ಶಾಶ್ವತ ಜೀವನಕ್ಕೆ ಪ್ರವೇಶಿಸಬೇಕಾಗುವುದು. ಆದ್ದರಿಂದ ಆ ಸಮಯ ಬರುವುದಕ್ಕಿಂತ ಮುಂಚೆ ಅಗತ್ಯವಿರುವ ಸಿದ್ಧತೆಗಳನ್ನು ಮಾಡಿರಿ, ಭಯಪಡಿರಿ, ಜಾಗ್ರತೆ ವಹಿಸಿರಿ, ಹಾಗಾದರೆ ಪಾರಾಗಬಹುದು. ಅನ್ಯಥಾ ಭೀಕರ ಶಾಶ್ವತ ಶಿಕ್ಷೆ ಅನುಭವಿಸಲು ಸಿದ್ಧರಾಗಿರಿ ಎಂಬಂತಹ ಎಚ್ಚರಿಕೆಯನ್ನು ಅಲ್ಲಾಹನು ನೀಡಿದ್ದಾನೆ. ಕಿಯಾಮತ್ ಎಂಬುದು, ಪ್ರಪಂಚದಲ್ಲಿ ನಿರಂತರ ನಡೆಯುತ್ತಿರುವ ಪ್ರಕ್ರಿಯೆಯ ಸಹಜ, ಸರಳ, ವಿಕಾಸಶೀಲ ಘಟನೆ ಮಾತ್ರವಾಗಿದೆ. ಯಾರನ್ನೂ ನೋಯಿಸದೆ, ಚಿಂತೆ ಮತ್ತು ಕಳವಳಕ್ಕೀಡು ಮಾಡದೆ, ಸವಿಯಾದ ಮಾತುಗಳಿಂದ ಮನವರಿಕೆ ಮಾಡಿಸುವ ಶೈಲಿಯನ್ನು ಕುರ್‌ಆನಿನಲ್ಲಿ ಅಲ್ಲಾಹ್ ಬಳಸಿಲ್ಲ. ಪರಲೋಕವನ್ನು ಮರೆಯುವ, ನಿರ್ಲಕ್ಷಿಸುವ ಅಥವಾ ನಿರಾಕರಿಸುವ ಜನರಿಗೆ ಆ ಕುರಿತು ತಿಳುವಳಿಕೆ, ನಂಬಿಕೆ ಮತ್ತು ಭಯಭಕ್ತಿ ಮೂಡಿಸುವುದಕ್ಕೆ ಪರ್ಯಾಪ್ತವಾದ ಉಗ್ರ ಶೈಲಿಯನ್ನು ಅದಕ್ಕಾಗಿ ಬಳಸಿದ್ದಾನೆ. ಆ ಭಯವು ಮಾನವರ ಮನದಲ್ಲಿ ಬೇರೂರಬೇಕು. ಅವರ ಜೀವನವನ್ನು ನಿಯಂತ್ರಿಸಬೇಕು, ಆ ಮೂಲಕ ಅವರು ಭಯ–ಭಕ್ತಿಯಿಂದ ಬಾಳಿ ಜಯಶಾಲಿಗಳಾಗಬೇಕೆಂದು ಅಲ್ಲಾಹ್ ಆಗ್ರಹಿಸಿದ್ದಾನೆ. ಆರಂಭದಲ್ಲಿ ಮಕ್ಕಾದಲ್ಲಿ ಅವತೀರ್ಣಗೊಂಡ ಅಧ್ಯಾಯಗಳು ಇಲ್ಲಿ ವಿಶೇಷವಾಗಿ ಗಮನಾರ್ಹವಾಗಿವೆ. ಆಲಿಸ ಬಾರದು, ಗಮನಿಸಬಾರದೆಂಬ ಹಠವಿರುವವರ ಹೃದಯಾಂತರಾಳವನ್ನೂ ಭೇದಿಸು ವಂತಹ ಚಿಕ್ಕಪುಟ್ಟ ವಾಕ್ಯಗಳು! ಯಾರನ್ನೂ ಆಲೋಚಿಸುವಂತೆ ಮಾಡುವ ಅರ್ಥ ಗಾಂಭೀರ್ಯ! ಎಂತಹ ಕಠೋರ ಹೃದಯವನ್ನೂ ನಡುಗಿಸುವಂತಹ ಭಾಷಾ ಶೈಲಿ! ಅದೇ ವೇಳೆ ಕೊಲ್ಲಲಿಕ್ಕಾಗಿ ಹೋದ ವೈರಿಯ ಮನಸ್ಸನ್ನೂ ಪಳಗಿಸುವ ಆಕರ್ಷಣೆ! ಕುರ್‌ಆನಿನ ಕೊನೆಯ ಭಾಗದಲ್ಲಿರುವ ಹಲವು ಸಣ್ಣ ಅಧ್ಯಾಯಗಳು ಅದಕ್ಕೆ ಉದಾಹರಣೆಗಳಾಗಿವೆ.

ಕಿಯಾಮತ್ (ಪುನರುತ್ಥಾನ) ಹೇಗೆ ಸಂಭವಿಸುತ್ತದೆ?

ಅತಿ ಮಹತ್ವದ ವಿಷಯಗಳನ್ನು ಸಾರಲಿಕ್ಕಾಗಿ ಮಾನವರು ಹಿಂದಿನ ಕಾಲದಿಂದಲೇ ಕಹಳೆ ಊದುವ ಕ್ರಮವನ್ನು ಬಳಸುತ್ತಿದ್ದರು. ಪ್ರಾಯಶಃ ಅದರ ಹಿನ್ನೆಲೆಯಲ್ಲಿಯೇ ಅಲ್ಲಾಹನು ಕಿಯಾಮತ್‌ನ ಸೂಚನೆಯನ್ನು ಕಹಳೆ ಊದುವ ಮೂಲಕ ನೀಡಲಾಗು

ವುದೆಂದು ತಿಳಿಸಿರಬೇಕು. "ಸೂರ್ (ಕಹಳೆ) ಊದಲ್ಪಡುವ ಹಾಗೂ ಆಕಾಶಗಳಲ್ಲೂ ಭೂಮಿಯಲ್ಲೂ ಇರುವವುಗಳೆಲ್ಲವೂ ದಿಗಿಲುಗೊಳ್ಳುವ ಆ ದಿನ ಹೇಗಿರುವುದು? ಅಲ್ಲಾಹನು ಆ ದಿಗಿಲಿನಿಂದ ಯಾರನ್ನು ರಕ್ಷಿಸಲಿಚ್ಛಿಸುವನೋ ಅವರ ಹೊರತು ಮಿಕ್ಕವರೆಲ್ಲರೂ ಕಿವಿಯೊತ್ತಿಕೊಂಡು ಅವನ ಸನ್ನಿಧಿಯಲ್ಲಿ ಹಾಜರಾಗುವರು." (ಅನ್ನಮ್ಲ್: 87)

ಅದರ ಭೀಕರತೆ ಎಷ್ಟೊಂದು ಕಠೋರವಾಗಿರುವುದು? ಕಿಯಾಮತ್‌ನ ಆ ಕಂಪನ ಅತಿ ಭಯಾನಕವಾಗಿರುವುದು. "ನೀವು ಅದನ್ನು ಕಾಣುವಂದು ಹಾಲುಣಿಸುವವಳು ಹಾಲುಣ್ಣುವ ತನ್ನ ಶಿಶುವನ್ನು ಮರೆತು ಬಿಡುವಳು. ಪ್ರತಿಯೊಂದು ಗರ್ಭಿಣಿಗೆ ಗರ್ಭಪಾತವಾಗಿ ಬಿಡುವುದು. ಜನರು ನಿಮಗೆ ಉನ್ಮತ್ತರಂತೆ ತೋರುವರು. ವಸ್ತುತಃ ಅವರು ಉನ್ಮತ್ತರಾಗಿರಲಾರರು. ನಿಜವಾಗಿಯೂ ಅಲ್ಲಾಹನ ಯಾತನೆಯೇ ಅಷ್ಟು ಭೀಕರವಾಗಿರುವುದು. ಆದ್ದರಿಂದ ಜನರೇ! ನೀವು ನಿಮ್ಮ ಪ್ರಭುವಿನ ಕ್ರೋಧವನ್ನು ಭಯಪಡಿರಿ! (ಅಲ್ ಹಜ್ಜ್: 1-2)

ಮಕ್ಕಳನ್ನು ಮುದುಕರಾಗಿ ಮಾಡುವ ದಿನ. (ಮುಝ್ಝಮ್ಮಿಲ್: 17) ಓಡಿ ಪಾರಾಗುವ ಜಾಗವೆಲ್ಲಿದೆಯೆಂದು ಅಂದು ಮಾನವನು ಕೇಳುತ್ತಾನೆ. (ಕಿಯಾಮ: 10)

ಬೂಮಿಯ ಸ್ಥಿತಿ ಹೇಗಿರುವುದು?

"ಭೂಮಿಯನ್ನು ಗಡಗಡನೆ ನಡುಗಿಸಲಾಗುವುದು, ಭಯಂಕರ ನಡುಕ." (ಅಲ್ ವಾಕಿಅ: 4) "ಭೂಮಿಯನ್ನು ಅಡಿಮೇಲುಗೊಳಿಸುವ ರೀತಿಯಲ್ಲಿ ಆ ಕಂಪನ ಸಂಭವಿಸುತ್ತದೆ." (ಅಲ್ ವಾಕಿಅ: 3) "ಭೂಮಿ ಮತ್ತು ಪರ್ವತಗಳನ್ನೆತ್ತಿ ಒಂದೇ ಏಟಿಗೆ ಛಿದ್ರ ವಿಚ್ಛಿದ್ರಗೊಳಿಸಲಾಗುವುದು." (ಅಲ್‌ಹಾಕ್ಕ: 14) "ಹಾಗೆ ಢಿಕ್ಕಿ ಹೊಡೆಸುವಾಗ ಅವುಗಳ ಒಳಗಿರುವುದೆಲ್ಲವೂ ಹೊರಬರುವುದು." (ಅಝ್ಝಿಲ್‌ಝಾಲ್: 2) "ಭೂಮಿಗೆ ಏನಾಯಿತೆಂದು ಮಾನವನು ದಿಗಿಲುಗೊಳ್ಳುವನು." (ಅಝ್ಝಿಲ್‌ಝಾಲ್: 3)

"ಅಂದು ಭೂಮಿಯು ಸಮುದ್ರ ಮಧ್ಯದಲ್ಲಿ ಚಂಡಮಾರುತಕ್ಕೆ ಸಿಲುಕಿ ಅಲೆಗಳ ಹೊಡೆತದಿಂದ ಅತ್ತಿತ್ತ ಓಲಾಡುತ್ತಿರುವ ಹಡಗಿನಂತಾಗುವುದು." (ಹದೀಸುಸ್ಸೂರ್)

ಹಾರಾಡುವ ಪರ್ವತಗಳು

ಬಯಾನಕವಾದ ಆ ಕಂಪನದಿಂದ ಭೂಮಿಯ ಎಲ್ಲ ವ್ಯವಸ್ಥೆಯೂ ಅಸ್ತವ್ಯಸ್ತಗೊಂಡು ಗುರುತ್ವಾಕರ್ಷಣೆ ಶಕ್ತಿಯನ್ನು ಕಳೆದುಕೊಳ್ಳುವುದರಿಂದ ಪರ್ವತಗಳು ಭಾರಹೀನವಾಗಿ ಸ್ಥಾನ ಪಲ್ಲಟವಾಗುತ್ತವೆ. (ಅತ್ತಕ್‌ವೀರ್: 3) ಅವು ಎಲ್ಲಿಯೂ ನಿಲ್ಲುವುದಿಲ್ಲ,

ಹಾರಾಡುತ್ತಿರುತ್ತವೆ. (ಅತ್ತೂರ್: 10) ಪರ್ವತಗಳನ್ನು ಚೂರುಚೂರು ಮಾಡಿ ಬಿಡಲಾಗುವುದು. (ಅಲ್‌ವಾಕಿಅ: 5) ಪರ್ವತಗಳು ಚದುರಿ ಹೋದ ಮರಳ ರಾಶಿಯಂತೆ ಆಗಿ ಬಿಡುವುವು. (ಮುಝ್ಝಮ್ಮಿಲ್: 14) ಇಂದು ಚೆನ್ನಾಗಿ ನಾಟಿಕೊಂಡಿರುವಂತೆ ತೋರುವ ಪರ್ವತಗಳು ಅಂದು ಮೋಡಗಳಂತೆ ಹಾರಾಡುತ್ತಿರುವುದು. (ಅನ್ನಮ್ಲ್: 88) ಪರ್ವತಗಳು ಬಣ್ಣಬಣ್ಣದ ಹಿಂಜಿದ ಉಣ್ಣೆಯಂತಾಗಿ ಬಿಡುವುದು. (ಅಲ್‌ಕಾರಿಅ: 5) ಗಾಳಿಯಲ್ಲಿ ಹಬ್ಬಿಸಿದ ಧೂಳಿನಂತಾಗುವುದು. (ಅಲ್‌ವಾಕಿಅ: 6) ಪರ್ವತಗಳು ಚಲಿಸಲ್ಪಡುವುವು. ಅವು ಮರೀಚಿಕೆಗಳಾಗಿಬಿಡುವುವು. (ಅನ್ನಬಾ: 20)

ನೀರಿನ ಹೊಂಡಕ್ಕೆ ಮಣ್ಣು ಅಥವಾ ಬೇರೆ ವಸ್ತುಗಳನ್ನು ಹಾಕಿದರೆ ಅಥವಾ ಹೊಂಡದ ದಂಡೆಯನ್ನು ಜರಿದು ಹಾಕಿದರೆ ನೀರು ಹೊರ ಹರಿಯುತ್ತದೆ. ಹಾಗೆಯೇ ಕಂಪನದಿಂದಾಗಿ ಭೂಮಿಯ ತೀರ ಪ್ರದೇಶವು ಏರುಪೇರಾಗುವುದರಿಂದ ಸಮುದ್ರಗಳ ನೀರು ದಡಮೀರಿ ಹರಿಯುತ್ತವೆ.

"ಸಮುದ್ರಗಳು ಭೇದಿಸಲ್ಪಡುವಾಗ..." (ಅಲ್ ಇನ್‌ಫಿತಾರ್: 3)

ದಡ ಮೀರಿ ಹರಿದು ಇಂಗಿ ಅಥವಾ ತಳವು ಒಡೆದು ಅಥವಾ ಬೇರೆ ರೀತಿಯಲ್ಲಿ ನೀರು ಭೂಮಿಯ ಒಳಭಾಗ ಸೇರುತ್ತದೆ. ಅಲ್ಲಾಹನು ಆಮ್ಲಜನಕ ಮತ್ತು ಅಂಗಾರಾಮ್ಲ (ಉರಿಸುವ ಮತ್ತು ಉರಿಯುವ) ಎಂಬ ಅನಿಲಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಸೇರಿಸಿ ನೀರನ್ನು ಸೃಷ್ಟಿಸಿದ್ದಾನೆ. ಆ ಅನಿಲಗಳ ಅನುಪಾತದಲ್ಲಿ ಕಿಂಚಿತ್ ವ್ಯತ್ಯಾಸವುಂಟಾದರೆ ಈ ವಿಸ್ಮಯಕಾರಿ ವಸ್ತು (ನೀರು) ಅದರ ಪೂರ್ವ ಸ್ಥಿತಿಗೆ ಮರಳಬಹುದು. ಭೂಮಿಯ ಒಳಭಾಗದಲ್ಲಿ ತೀವ್ರ ತಾಪದಲ್ಲಿರುವ ಬಿಸಿ ಲಾವಾ ಕುದಿಯುತ್ತಿದೆಯಷ್ಟೆ. ಒಳಹೋಗುತ್ತಿರುವ ನೀರು ಈ ಲಾವಾದೊಂದಿಗೆ ಸೇರಿದಾಗ ಅನಿಲಗಳ ಅನುಪಾತವು ಏರುಪೇರಾಗಿ ಎಲ್ಲವೂ ಉರಿಯುವುದು. ಆ ಮೂಲಕ ಇಡೀ ಸಮುದ್ರಕ್ಕೆ ಬೆಂಕಿ ಹಿಡಿದರೆ ಆಚ್ಚರಿಯೇನಿದೆ?

"ಸಮುದ್ರಗಳನ್ನು ಕೆರಳಿಸಿ ಬಿಡಲಾಗುವಾಗ..." (ಅತ್ತಕ್‌ವೀರ್: 6)

ಹೀಗಿರುತ್ತಾ, ಕಾಡುಗಳು ಉಳಿಯುವುವೇ! ಹುಲಿ, ಸಿಂಹ, ಕರಡಿ, ಘೇಂಡಾಮೃಗ, ಹಾವು ಇತ್ಯಾದಿ ಎಲ್ಲ ಜಂತುಗಳೂ ಅವುಗಳ ತಾಣವನ್ನು ತೊರೆದು ಮಾನವ ಸಮೂಹದ ಮಧ್ಯೆ ಸೇರಿಕೊಂಡಿವೆ. ಅವು ಪರಸ್ಪರ ಹಾಗೂ ಮಾನವರೊಂದಿಗಿನ ಅಂತರವನ್ನೂ ವೈರವನ್ನೂ ಮರೆತು ಮಹಾ ವಿಪತ್ತಿನಿಂದ ಭಯವಿಹ್ವಲವಾಗಿವೆ.

"ವನ್ಯ ಮೃಗಗಳೆಲ್ಲಾ ಒಂದೆಡೆ ಸೇರಿಸಲ್ಪಡುವಾಗ..." (ಅತ್ತಕ್‌ವೀರ್: 5)

ಓಲಾಡುವ ಆಕಾಶ

ಆಕಾಶ ಲೋಕವಾದರೂ ಸುರಕ್ಷಿತವಾಗಿರುವುದೇ? ಇಲ್ಲ, ಅಲ್ಲಿಯೂ ವಿಸ್ಫೋಟ ಸಂಭವಿಸುತ್ತದೆ. ಇಂದು ಸೂರ್ಯಪ್ರಕಾಶವು ಸೌರವ್ಯೂಹದಾದ್ಯಂತ ಹರಡಿದೆಯಷ್ಟೆ, ಆದರೆ ಆ ಕಂಪನದಿಂದಾಗಿ ಅದರ ಪ್ರಕಾಶ ಕಿರಣಗಳು ಬಟ್ಟೆ ಸುತ್ತಿದಂತೆ ಸುತ್ತಲ್ಪಡುತ್ತದೆ. ಆ ಮೂಲಕ ಅದು ಪ್ರಕಾಶಹೀನವಾಗುತ್ತದೆ. "ಸೂರ್ಯವು ಸುತ್ತಲ್ಪಡುವಾಗ..." **(ಅತ್ತಕ್‌ವೀರ್: 1)** ಅದರೊಂದಿಗೆ ಚಂದ್ರವೂ ಪ್ರಕಾಶ ಕಳೆದುಕೊಳ್ಳುತ್ತದೆ, "ಮತ್ತು ಚಂದ್ರವು ಕಳೆಗುಂದುವಾಗ..." **(ಕಿಯಾಮ: 8)**

ಚಂದ್ರವು, ಭೂಮಿಯೊಂದಿಗಿನ ಗುರುತ್ವಾಕರ್ಷಣೆಯನ್ನು ಕಳೆದುಕೊಂಡು ಸೂರ್ಯವನ್ನು ಸೇರುವುದೇ ಅಥವಾ ಈ ಘರ್ಷಣೆಯಿಂದ ಅವು ಇನ್ನಾವುದೇ ರೀತಿಯಲ್ಲಿ ಒಂದುಗೂಡುತ್ತವೆಯೇ? ಹೇಗಾದರೂ ಅವು ಒಂದುಗೂಡುವ ಘಟನೆ ಸಂಭವಿಸುತ್ತದೆ. "ಸೂರ್ಯ-ಚಂದ್ರರನ್ನು ಸೇರಿಸಿ ಒಂದಾಗಿಸಿದಾಗ..." **(ಕಿಯಾಮ: 9)**

ನಕ್ಷತ್ರಗಳಿಗೆ ಇಂದು ಸ್ಥಿರತೆ ಒದಗಿಸುವ ಎಲ್ಲ ಸಂಪರ್ಕಗಳೂ ಕಡಿದು ಹೋಗಿ ಅವು ಉದುರಿ ಬೀಳುತ್ತವೆ. "ನಕ್ಷತ್ರಗಳು ಚದರಿ ಬಿಡುವಾಗ..." **(ಅತ್ತಕ್‌ವೀರ್: 2)** ಅವುಗಳ ಪ್ರಕಾಶ ನಂದಿ ಹೋಗುತ್ತದೆ, "ಇನ್ನು ನಕ್ಷತ್ರಗಳು ಕಳೆಗುಂದಿ ಹೋಗುವಾಗ..." **(ಅಲ್ ಮುರ್‌ಸಲಾತ್: 8)** ಆಗ ಆಕಾಶಲೋಕದ ವಿವಿಧ ಘಟಕಗಳ ಪರಸ್ಪರ ಸಂಬಂಧವೂ ಅಸ್ತವ್ಯಸ್ತವಾಗು ವುದು, "ಆಕಾಶವು ತೀವ್ರವಾಗಿ ಓಲಾಡುತ್ತಿರುವುದು." **(ಅತ್ತೂರ್: 9)**

ಇಂದು ನೈಜ ಆಕಾಶವು ನಮಗೆ ಕಾಣಿಸುವುದಿಲ್ಲ, ಇಂದು ನಮಗೆ ಮೋಡ, ಧೂಳಿನ ಕಣ ಅಥವಾ ಶೂನ್ಯತೆಗಳು ಕಾಣಿಸುತ್ತಿವೆ. ಆದರೆ ಅಂದು ಆಕಾಶವು ನಗ್ನವಾಗುವುದು, "ಆಕಾಶದ ತೆರೆಯು ಸರಿಸಲ್ಪಡುವಾಗ..." **(ಅತ್ತಕ್‌ವೀರ್: 11)**

ಆದರೆ ಅದು ಒಡೆದು ಹೋಳಾಗಿದೆ. ಈಗ ಅದರ ಎಲ್ಲ ಸಂಬಂಧಗಳೂ ಶಿಥಿಲವಾಗಿ ಬಿಟ್ಟಿದೆ, "ಅಂದು ಆಕಾಶವು ಬಿರಿಯುವುದು ಮತ್ತು ಅದರ ಬಿಗಿತವು ಸಡಿಲವಾಗಿ ಬಿಡುವುದು." **(ಅಲ್ ಹಾಕ್ಕ: 16)** ಈ ಭಯಾನಕ ದುರಂತದ ವೇಳೆ ಭೂಮಿಯಿಂದ ಮೇಲೆ ನೋಡಿದರೆ ಖಗೋಲಕ್ಕೆ ಸಂಪೂರ್ಣ ಬೆಂಕಿ ಹಿಡಿದಂತೆ ಭಾಸವಾಗುವುದು, ಆಕಾಶವು ಕೆಂಪು ಚರ್ಮದಂತೆ, ಕರಗಿದ ಲೋಹದಂತೆ ಕಾಣಿಸುವುದು. **(ಅರ್ರಹ್ಮಾನ್: 37, ಅಲ್ ಮಆರಿಜ್: 8)**

ಬಾನಲೋಕದಲ್ಲಿ ಕೋಟಿಗಟ್ಟಲೆ ನಕ್ಷತ್ರಗಳನ್ನು ಇತರ ಗೋಲಗಳನ್ನೂ ನಿರ್ದಿಷ್ಟ ವಲಯ, ಅಕ್ಷ ಮತ್ತು ರೇಖೆಗಳಲ್ಲಿ ಸಂಪೂರ್ಣ ನಿಯಂತ್ರಿಸುತ್ತಿದ್ದ ಎಲ್ಲ ಸಂಬಂಧ

ಮತ್ತು ಶಕ್ತಿಗಳೂ ಕಡಿದು ಹೋಗಿವೆ. ಆಕಾಶದಿಂದ ಬರಬಹುದಾದ ವಿಪತ್ತು ಯಾವ ಘಳಿಗೆಯಲ್ಲಿಯೂ ಎರಗಬಹುದಾದ ಸ್ಥಿತಿ ಸಂಜಾತವಾಗಿದೆ. ಎಲ್ಲ ಅಡ್ಡಿಯೂ ನೀಗಿದೆ. ವಿಪತ್ತುಗಳಿಗಾಗಿ ಎಲ್ಲ ದ್ವಾರಗಳನ್ನೂ ತೆರೆದಿಟ್ಟಂತೆ; ಅಲ್ಲ, ಎಲ್ಲವೂ ದ್ವಾರಗಳಾಗಿ ಬಿಟ್ಟಂತೆ. "ಆಕಾಶವನ್ನು ತೆರೆದು ಬಿಡಲಾಗುವುದು. ಅದು ದ್ವಾರಗಳೇ ದ್ವಾರಗಳಾಗಿ ಬಿಡುವುದು." **(ಅನ್ನಬಅ್: 19)**

ದೇವಚರರು ಅದರ ವಿವಿಧ ಪಾರ್ಶ್ವಗಳಲ್ಲಿ ನೆಲೆ ನಿಂತಿರುತ್ತಾರೆ, "ದೇವಚರರು ಅದರ ಸುತ್ತಮುತ್ತಲಲ್ಲಿರುವವರು." **(ಅಲ್ ಹಾಕ್ಕ: 17)**

ಮಾನವರ ಅವಸ್ಥೆಯೇನು?

ಈ ಎಲ್ಲ ಅಪಾಯಗಳಿಂದ ಪಾರಾಗುವ ಸಾಮರ್ಥ್ಯವಿರುವ ಮಾನವನು ಯಾವುದಾದರೂ ಕುತಂತ್ರವನ್ನು ಕಂಡು ಹಿಡಯದಿರಲಾರನೇ? ಇಲ್ಲ, ಆ ಕಾಲ ಕಳೆದು ಹೋಗಿದೆ. ಇನ್ನು ಅವು ಫಲಿಸುವುದಿಲ್ಲ, ಕಂಪನದಿಂದ ಆತ ಎಂತಹ ಭಯಾನಕ ಅವಸ್ಥೆಗೆ ಸಿಲುಕುವನೆಂದು ಈ ಹಿಂದೆ ಹೇಳಿದ್ದೇನೆ. ಅದೋ ಸಮುದ್ರ ಮತ್ತು ನದಿಗಳಿಗೆ ಬೆಂಕಿ ಹೊತ್ತಿ ಅವು ಅಗ್ನಿಪರ್ವತಗಳಾಗಿ ಬಿಟ್ಟಿವೆ. ಹೆದರಿ ಓಡುವಾಗ ಅದೋ ಮಹಾ ಪರ್ವತಗಳು ಉರುಳಿ ಬರುತ್ತಿವೆ! ತಪ್ಪಿಸಿಕೊಳ್ಳಲು ಪ್ರಯತ್ನಿಸುವಾಗ ಇತ್ತ ಕಡೆಯಿಂದಲೂ ಅದೇ ಸ್ಥಿತಿ ಅದರೊಂದಿಗೆ ಸಿಂಹ, ಹುಲಿ, ಸರ್ಪ ಇತ್ಯಾದಿ ಅನೇಕಾನೇಕ ಜಂತುಗಳು! ತಳಭಾಗದಿಂದ ಲೋಹಗಳು ಕರಗಿ ಚಿಮ್ಮುತ್ತಿವೆ! ಯಾರಿಗೂ ಎಲ್ಲಿಯೂ ರಕ್ಷಣೆಯಿಲ್ಲ, ಬೆದರಿ ಓಡುವಾಗ ಜಿನ್ನ್‌ಗಳೂ ಜತೆ ಸೇರುತ್ತವೆ. ಆಕಾಶ ಲೋಕದಲ್ಲಿ ಅಭಯ ಪಡೆಯಬಹುದೇ? ಅಯ್ಯೋ, ಅಲ್ಲಿ ಇದಕ್ಕಿಂತ ದೊಡ್ಡ ಅನಾಹುತ! ಕೋಟಿಗಟ್ಟಲೆ ನಕ್ಷತ್ರಗಳು ಸಂಪರ್ಕ ಕಡಿದುಕೊಂಡು ಪ್ರಪಂಚದಾದ್ಯಂತ ಬೀಳುತ್ತಿವೆ. ಭೂಮಿಯನ್ನು ಅಪ್ಪಚ್ಚಿಗೊಳಿಸಲು ಅವುಗಳಲ್ಲೊಂದರ ಹೊಡೆತ ಸಾಕು! ಧಗಧಗಿಸುವ ಅಗ್ನಿ ಉಂಡೆಗಳು, ಕರಾಳ ಧೂಮರಾಶಿಗಳು ಆಗಾಗ ಭೂಮಿಯ ಮೇಲೆ ಬೀಳುತ್ತಿವೆ. "(ಓಡಿ ಹೋಗಲು ಪ್ರಯತ್ನಿಸಿದರೆ) ನಿಮ್ಮ ಮೇಲೆ ಬೆಂಕಿಯ ಜ್ವಾಲೆಯನ್ನೂ ಹೊಗೆಯನ್ನೂ ಬಿಡಲಾಗುವುದು. ನೀವು ಅದನ್ನು ಎದುರಿಸಲಾರಿರಿ." **(ಅರ್ರಹ್ಮಾನ್: 35)**

ಅಲ್ಲಿಂದ ಘೋರ ಶಬ್ದವೊಂದು ಅದಾಗಲೇ ಕೇಳಿಸುತ್ತಿದೆ. "ಜಿನ್ನ್ ಮತ್ತು ಮಾನವ ವರ್ಗದವರೇ, ನೀವು ಭೂಮಿ-ಆಕಾಶಗಳ ಸರಹದ್ದುಗಳಿಂದ ಹೊರಗೆ ಓಡಿ ಹೋಗಬಲ್ಲಿರಾದರೆ ಓಡಿ ನೋಡಿರಿ, ನೀವು ಓಡಲಾರಿರಿ, ಅದಕ್ಕೆ ಪ್ರಚಂಡ ಶಕ್ತಿ ಬೇಕು."

(ಅರ್ರಹ್ಮಾನ್: 33)

ಇನ್ನು ರಕ್ಷಣೆ ಎಲ್ಲಿ? "ಆಗ ಇದೇ ಮಾನವ ಎಲ್ಲಿಗೆ ಓಡಿ ಹೋಗಲಿ ಎಂದು ಹೇಳುವನು." **(ಅಲ್ ಕಿಯಾಮ: 10)**

ಪರಸ್ಪರ ಆರ್ತನಾದ ಮಾಡುತ್ತಾರೆ. ಹೆದರಿ, ನಡುಗಿ, ಬಿಳುಚಿ, ಕಣ್ಣುಗಳು ಕುರುಡಾಗಿ ಒಳಸೇರುತ್ತವೆ. "ದೃಷ್ಟಿಗಳು ಸ್ತಬ್ಧವಾಗಿ ಬಿಡುವಾಗ..." **(ಅಲ್ ಕಿಯಾಮ: 7)**

ದಿಕ್ಕುಗಾಣದೆ ಹಿಂತಿರುಗಿ ಓಡುತ್ತಾರೆ. "ಅಂದು ನೀವು ಪರಸ್ಪರರನ್ನು ಕೂಗಿ ಕರೆಯುವಿರಿ, ಬೆನ್ನು ತಿರುಗಿಸಿ ಓಡುವಿರಿ." **(ಅಲ್ ಮೂಮಿನ್: 33)**

ಈ ದೇವಶಿಕ್ಷೆಯಿಂದ ರಕ್ಷಿಸುವವರು ಯಾರೂ ಇಲ್ಲ. "ಆದರೆ, ಆಗ ನಿಮ್ಮನ್ನು ಅಲ್ಲಾಹನಿಂದ ರಕ್ಷಿಸುವವರು ಯಾರೂ ಇರಲಾರರು." **(ಅಲ್ ಮೂಮಿನ್: 33)**

ಪುನಃ ಓಡುತ್ತಾರೆ, ಗೊತ್ತು ಗುರಿಯಿಲ್ಲದೆ, ಅಗ್ನಿಗೆ ಹಾರಿ ಸಾಯುವ ಹಾತೆಗಳಂತೆ. "ಅಂದು ಜನರು ಚದುರಿದ ಹಾತೆಗಳಂತಾಗುವರು." **(ಅಲ್ ಕಾರಿಅ: 4)**

ಭೂಮಿ-ಆಕಾಶಗಳಲ್ಲಿರುವ ಎಲ್ಲರೂ ಹತರಾಗುತ್ತಾರೆ. ಮಾನವರೂ ಜಿನ್ನ್‌ಗಳೂ ಮಲಕ್‌ಗಳೂ! ಸಾಮಾನ್ಯ ಭೂಕಂಪಗಳಿಂದ ಮಲಕ್‌ಗಳು ಮತ್ತು ಜಿನ್ನ್‌ಗಳು ಹತರಾದುದು ನಮಗೆ ತಿಳಿದಿಲ್ಲ. ಆದರೆ ಈ ದುರ್ಘಟನೆಯಲ್ಲಿ ಮಲಕುಲ್ ಮೌತ್ ಕೂಡಾ ಸಾಯುತ್ತದೆ.

"ಅಲ್ಲಾಹ್ ಯಾರನ್ನು ಜೀವಂತವಾಗಿರಿಸಲಿಚ್ಛಿಸುವನೋ ಅವನ ಹೊರತು ಭೂಮಿ ಆಕಾಶಗಳಲ್ಲಿರುವವರೆಲ್ಲರೂ ಸತ್ತು ಬೀಳುವರು." **(ಅಝ್ಝುಮರ್: 68)**

ಆ ಕಹಳೆಯ ನಾದ ಮತ್ತು ಆ ಬಳಿಕದ ಕಂಪನ ಹಾಗೆಯೇ ಸ್ತಬ್ಧವಾಗುತ್ತದೆ. ಇಡೀ ಪ್ರಪಂಚವೇ ಮಸಣವಾಗುತ್ತದೆ! ಕರಾಳ ಮೌನ! ಭಯಾನಕ ರಂಗ!!

ಹಿಂದೆ ಪ್ರವಾದಿ ಸಾಲಿಹ್(ಅ) ಮತ್ತು ಪ್ರವಾದಿ ಶುಐಬ್(ಅ) ಅವರು ದೇವಶಿಕ್ಷೆಗೆ ಗುರಿಯಾದ ತಮ್ಮ ಜನತೆಯ ಜಡದೇಹಗಳನ್ನು ನೋಡಿ ಹೇಳಿದ ಮತ್ತು ಪ್ರವಾದಿ ಮುಹಮ್ಮದ್‌ರು(ಸ) ಬದ್ರ್‌ನಲ್ಲಿ ಹತರಾಗಿ ಬಿದ್ದ ಅವಿಶ್ವಾಸಿಗಳನ್ನು ಕರೆದು ಕೇಳಿದ ಮಾತುಗಳು ನೆನಪಿದೆಯಲ್ಲವೇ? ಮಹಾಪ್ರತಾಪಿಯೂ ಅತ್ಯಂತ ಮಹಾನನೂ ಆದ ಅಲ್ಲಾಹನ ಹೊರತು ಸಂಪೂರ್ಣ ನಾಶವಾದ ಒಂದು ಶೂನ್ಯ ಪ್ರಪಂಚ ಮಾತ್ರ ಆಗ ಉಳಿದಿರುವುದು. "ಈ ಭೂಮಿಯಲ್ಲಿರುವ ಪ್ರತಿಯೊಂದು ವಸ್ತುವೂ ನಾಶವಾಗಲಿದೆ ಮತ್ತು ನಿನ್ನ ಪ್ರಭುವಿನ ತೇಜೋಮಯ ಹಾಗೂ ಔದಾರ್ಯಪೂರ್ಣ ಅಸ್ತಿತ್ವ ಮಾತ್ರ ಉಳಿಯಲಿದೆ." **(ಅರ್ರಹ್ಮಾನ್: 26-27)**

ಅದೋ ಆತ ಇಡೀ ಭೂಮಿಯನ್ನು ಕೈಯಲ್ಲಿ ಹಿಡಿಯುತ್ತಾನೆ. "ಪುನರುತ್ಥಾನ ದಿನ ಇಡೀ ಭೂಮಿಯು ಆತನ ಮುಷ್ಟಿಯೊಳಗಿರುವುದು." (ಅಝ್ಝುಮರ್: 67) ಆಕಾಶವನ್ನು ಬಲಗೈಯಲ್ಲಿ ಸುರುಟಿ ಹಿಡಿಯುತ್ತಾನೆ. "ಮತ್ತು ಆಕಾಶಗಳು ಅವನ ಬಲಗೈಯಲ್ಲಿ ಸುತ್ತಿಕೊಂಡಿರುವುದು." (ಅಝ್ಝುಮರ್: 67) "ಮಕ್ಕಳು ಚೆಂಡಾಡುವಂತೆ ಎರಡು ಮೂರು ಬಾರಿ ಅವುಗಳನ್ನು ಹಾರಿಸಿ ಹಿಡಿ ಯುತ್ತಾನೆ." (ಹದೀಸುಸ್ಸೂರ್)

ಆ ಬಳಿಕ ಹೇಳುತ್ತಾನೆ, ಜಗತ್ತನ್ನು ಇಷ್ಟಬಂದಂತೆ ಆಳುವ ಅರ್ಹತೆ ಮತ್ತು ಯೋಗ್ಯತೆಯಿರುವ ನೈಜ ಸರ್ವಾಧಿಕಾರಿ (ಕಹ್ಹಾರ್, ಜಬ್ಬಾರ್) ರಾಜ, ಅಹಂಕಾರದ ನೈಜ ಹಕ್ಕುದಾರ (ಮುತಕಬ್ಬಿರ್) ಕೇವಲ ನಾನೊಬ್ಬನೇ. ಮಾನವರು ಮತ್ತು ಜಿನ್ನ್ ಗಳು ನನ್ನ ವಿಧೇಯ ದಾಸರು ಮತ್ತು ನಿಷ್ಠಾವಂತ ಪ್ರಜೆಗಳೆಂದು ನಾನು ಅವರಿಗೆ ತಿಳಿಸಿದ್ದೇನೆ. ಆದರೆ ಪರೀಕ್ಷಣಾಲಯದ ತಾತ್ಕಾಲಿಕ ತೆರೆಮರೆಯಲ್ಲಿ ಕೆಲವರು ಸ್ವತಃ ಸರ್ವಾಧಿಕಾರಿ, ರಾಜರು ಮತ್ತು ಅಹಂಕಾರಿಗಳಾಗಿ ಮೆರೆದರು. ಇತರ ಕೆಲವರು, ಕೇವಲ ನನಗೆ ಸೀಮಿತವಾಗಿರುವ ಹಕ್ಕು ಅಧಿಕಾರಗಳನ್ನು ಅನ್ಯರಿಗೆ ನೀಡಿ ಅವರನ್ನು ನನ್ನ ಸಹಭಾಗಿಗಳಾಗಿ ಮಾಡಿದರು. (ಹೀಗೆ) ಅಲ್ಲಾಹನ ಮಹಾತ್ಮೆ ಮತ್ತು ಪ್ರತಾಪ ವನ್ನು ಅವರ ಪೈಕಿ ಯಾರೂ ಯಥಾ ರೀತಿ ಅಂಗೀಕರಿಸಲಿಲ್ಲ, "ಇವರು ಅಲ್ಲಾಹನನ್ನು ಗೌರವಿಸಬೇಕಾದ ರೀತಿಯಲ್ಲಿ ಗೌರವಿಸಲಿಲ್ಲ." (ಅಝ್ಝುಮರ್: 67)

ಆದರೆ ಇಂದು, ಪುನರುತ್ಥಾನ ದಿನ, ಆ ತೆರೆಯನ್ನು ಸರಿಸಲಾಗಿದೆ. ನನ್ನ ಶಕ್ತಿ, ಅಧಿಕಾರ, ಪ್ರತಾಪ, ಮಹಾತ್ಮೆ ಎಲ್ಲವೂ ಸಂಪೂರ್ಣ ಪ್ರಕಟವಾಗಿದೆ. ಕೇವಲ ನಾನೇ ರಾಜ! ನಾನೇ ಜಬ್ಬಾರ್! ನಾವೂ ರಾಜರೆಂದು ವಾದಿಸಲು ಬೇರೆ ಯಾರಾದರೂ ಇದ್ದಾರೆಯೇ? ಭೂಮಿಯಲ್ಲಿ ರಾಜರಾಗಿ ಮೆರೆದವರು ಎಲ್ಲಿದ್ದಾರೆ? ಅಲ್ಲಿನ ಸರ್ವಾಧಿಕಾರಿಗಳೆಲ್ಲಿದ್ದಾರೆ? ಅಲ್ಲಿನ ಅಹಂಕಾರಿಗಳೆಲ್ಲಿದ್ದಾರೆ? ಉತ್ತರಿಸಲು ಯಾರೂ ಇಲ್ಲ, ಅಲ್ಲಾಹನೇ ಹೇಳುತ್ತಾನೆ, ಸಕಲ ಪ್ರಪಂಚವನ್ನೂ ಇಷ್ಟಬಂದಂತೆ ಆಳುತ್ತಿರುವ ಏಕನಾದ ಅಲ್ಲಾಹನಿಗೆ ಮಾತ್ರ ಸಂಪೂರ್ಣ ರಾಜತ್ವವೆಂಬುದು ಈಗ ಮನವರಿಕೆ ಯಾಯಿತಷ್ಟೆ. "ಏಕೈಕನೂ ಅಜೇಯನೂ ಆದ ಅಲ್ಲಾಹನದು." (ಅಲ್ ಮೂಮಿನ್: 16)

ಪುನರ್ ವ್ಯವಸ್ಥೆ

ವಿಚಾರಣೆ ನಡೆಸಿ ಸೂಕ್ತ ಶಿಕ್ಷೆ ಪುರಸ್ಕಾರಗಳನ್ನು ನೀಡಲಿಕ್ಕಾಗಿ ಆದಿ ಮಾನವನಿಂದ ಕಿಯಾಮತ್ ವರೆಗೆ ಹುಟ್ಟಿದ ಎಲ್ಲರನ್ನೂ ಒಂದೆಡೆ ಏಕಕಾಲದಲ್ಲಿ ಸೇರಿಸಬೇಕಾಗಿದೆ. ಭೂಮಿಯ ಪ್ರಚಲಿತ ಗಾತ್ರ ಅದಕ್ಕೆ ಸಾಕಾಗಲಾರದು. ಆದ್ದರಿಂದ, ಅದಕ್ಕೆ ತಕ್ಕುದಾದ

ರೀತಿಯಲ್ಲಿ ಭೂಮಿ-ಆಕಾಶಗಳನ್ನು ಪುನರ್‍ರಚಿಸಲಾಗುತ್ತದೆ. ಪ್ರಥಮ ಕಂಪನದಿಂದ ಸಮುದ್ರ, ನದಿ, ಪರ್ವತ, ಕಾಡು, ಗುಡ್ಡ ಕಂದರಗಳು ನುಚ್ಚುನೂರಾದುದನ್ನು ನಾವು ನೋಡಿದೆವು. ಈಗ ಕಾಡು-ಮೇಡು, ಗಿರಿ-ಕಂದರ, ನದಿ-ಸಮುದ್ರಗಳಿಲ್ಲದ ಸಮ ತಟ್ಟಾದ ವಿಶಾಲ ಮೈದಾನ ರೂಪುತಾಳಿದೆ. "ಭೂಮಿಯನ್ನು ಯಾವುದೇ ಓರೆಕೋರೆ, ಏರುತಗ್ಗುಗಳು ಕಾಣಿಸದಂತಹ ಬಟ್ಟ ಬಯಲನ್ನಾಗಿ ಮಾಡಿ ಬಿಡುವನು ಎಂದು ಹೇಳಿರಿ." **(ತಾಹಾ: 106-107)**

ಅದು ಸಾಕಾದೀತೇ? ಸಾಲದು! ಕೋಟ್ಯಾನುಕೋಟಿ ಜನರಿಗೆ ಏಕಕಾಲದಲ್ಲಿ ಪ್ರಭುವಿನ ಮುಂದೆ ಹಾಜರಾಗಲು ಭೂಮಿಯನ್ನು ಇನ್ನೂ ವಿಶಾಲಗೊಳಿಸಬೇಕಾಗಿದೆ. ಅದನ್ನು ಜಜ್ಜಿ ಪುನಃ ಅಗಲಗೊಳಿಸಲಾಗುವುದು. ಭೂಗರ್ಭದಲ್ಲಿರುವುದನ್ನೆಲ್ಲಾ ಹೊರ ಹಾಕಿ ತೆಳು ಚರ್ಮದಂತೆ ಅಥವಾ ತೆಳು ಲೋಹದ ತಗಡಿನಂತೆ ಹರಡಲಾಗುವುದು. "ಭೂಮಿಯು ಹರಡಲ್ಪಡುವಾಗ. ಅದು ತನ್ನೊಳಗೆ ಇರುವ ಸಕಲವನ್ನೂ ಹೊರಗೆಸೆದು ಬರಿದಾಗಿ ಬಿಡುವಾಗ." **(ಅಲ್ ಇನ್‌ಶಿಕಾಕ್: 3-4)**

ಪ್ರವಾದಿ(ಸ) ಹೇಳಿದರು, "ಕಿಯಾಮತ್ ದಿನ ಭೂಮಿಯನ್ನು ಒಂದು ಊಟದ ಹಾಸಿನಂತೆ ಹರಡಿ ವಿಸ್ತಾರಗೊಳಿಸಲಾಗುವುದು. ಅಂದು ಜನರಿಗೆ ಅದರಲ್ಲಿ ಕಾಲಿರಿಸು ವಷ್ಟು ಮಾತ್ರ ಸ್ಥಳಾವಕಾಶವಿರುವುದು." **(ಹಾಕಿಮ್)**

ಹೀಗೆ ಭೂಮಿ-ಆಕಾಶಗಳ ಪ್ರಚಲಿತ ಪ್ರಕೃತಿ ಸ್ವರೂಪ ಮತ್ತು ವ್ಯವಸ್ಥೆಯನ್ನು ಸಂಪೂರ್ಣ ಬದಲಿಸಿ ಹೊಸ ಪ್ರಕೃತಿ, ಹೊಸ ಸ್ವರೂಪ ಮತ್ತು ಹೊಸ ವ್ಯವಸ್ಥೆಯೊಂದಿಗೆ ಪುನರ್‍ರಚಿಸಲಾಗುತ್ತಿದೆ. "ಭೂಮಿ ಮತ್ತು ಆಕಾಶಗಳು ಬದಲಾಯಿಸಲ್ಪಟ್ಟು ಏನಕ್ಕೇನೋ ಮಾಡಲ್ಪಡುವ ಆ ದಿನ." **(ಇಬ್ರಾಹೀಮ್: 48)**

ಕಿಯಾಮತ್‌ನಂದು ಭೂಮಿ-ಆಕಾಶಗಳು ಸಂಪೂರ್ಣ ಅಳಿದು ಹೋಗುವುದಿಲ್ಲ, ಬದಲಾಗಿ, ಅದರ ಪುನರ್ ವ್ಯವಸ್ಥೆ ಮಾಡಲಾಗುತ್ತದೆ. ಈ ಹೊಸ ವ್ಯವಸ್ಥೆಯು ಭೂಮಿಯಲ್ಲಿ ಮಾನವರನ್ನು ಎರಡನೇ ಬಾರಿ ಜೀವಂತಗೊಳಿಸಿ ಒಟ್ಟು ಸೇರಿಸಲಾಗು ತ್ತದೆ. ವಿಚಾರಣೆ ಇತ್ಯಾದಿಗಳೂ ಅಲ್ಲಿಯೇ ನಡೆಯುತ್ತವೆ.

ಪುನರುತ್ಥಾನ

ಕಹಳೆ ಊದಿ ಸರ್ವಸಂಹಾರ ನಡೆಸಿದಂತೆಯೇ ಕಹಳೆಯನ್ನು ಇನ್ನೊಮ್ಮೆ ಊದಿ ನಿರ್ಮಾಣ ಕಾರ್ಯ ನಡೆಸಲಾಗುತ್ತದೆ. "ತರುವಾಯ ಇನ್ನೊಂದು ಕಹಳೆ ಊದಲ್ಪಡು ವುದು ಮತ್ತು ಒಮ್ಮೆಲೆ ಎಲ್ಲರೂ ಎದ್ದು ನೋಡತೊಡಗುವರು." **(ಅಝ್ಝುಮರ್: 68)**

ವಸ್ತುತಃ ಅದು ಎಲ್ಲರನ್ನೂ ಪುನಃ ಜೀವಂತ ಎದ್ದೇಳಿಸುವ ಅಲ್ಲಾಹನ ಕರೆಯಾಗಿದೆ. "ಅನಂತರ ಅಲ್ಲಾಹನು ನಿಮ್ಮನ್ನು ಭೂಮಿಯಿಂದ ಒಂದು ಬಾರಿ ಕೂಗಿ ಕರೆದ ಕೂಡಲೇ ನೀವೆಲ್ಲರೂ ಹೊರಟು ಬರುವಿರಿ." **(ಅರ್‍ರೂಮ್: 25)**

ಪ್ರಥಮ ಕಹಳೆ ಮೊಳಗಿದಾಗ ಮರಣ ಹೊಂದಿದವರೂ ಅದಕ್ಕಿಂತ ಸಹಸ್ರಾರು ವರ್ಷಗಳ ಹಿಂದೆ ಮರಣ ಹೊಂದಿದವರೂ ಈ ಎರಡನೆಯ ಕಹಳೆಗೆ ಧಿಗ್ಗನೆ ಎಚ್ಚೆತ್ತು ಕೊಳ್ಳುತ್ತಾರೆ. 'ಸುದೀರ್ಘ ನಿದ್ದೆ'ಯಿಂದ ಎಲ್ಲರೂ ಅಲ್ಲಾಹನನ್ನು ಪ್ರಕೀರ್ತಿಸುತ್ತಾ! ವಿಶ್ವಾಸಿಯು ತನ್ನ ಹಳೆಯ ಗುಣದಂತೆ ಮನಃಪೂರ್ವಕವಾಗಿಯೂ ಅವಿಶ್ವಾಸಿಯು ಆತನಲ್ಲಿ ಸುಪ್ತವಾಗಿರುವ ಶುದ್ಧಸ್ವಭಾವದ ಪ್ರೇರಣೆಯಿಂದ ಅಪ್ರಜ್ಞಾಪೂರ್ವಕವಾಗಿ!

"ಅವನು ನಿಮ್ಮನ್ನು ಕೂಗಿ ಕರೆಯುವಂದು ನೀವು ಅವನನ್ನು ಪ್ರಶಂಸಿಸುತ್ತಾ ಅವನ ಕರೆಗೆ ಓಗೊಟ್ಟು ಹೊರಟು ಬರುವಿರಿ." **(ಬನೀ ಇಸ್ರಾಈಲ್: 52)**

ಇವರು ಸಹಜವಾಗಿಯೂ ಮಣ್ಣಿನಿಂದ ಚಡಪಡಿಸಿ ಏಳುತ್ತಾರಷ್ಟೆ. "ಭೂಮಿಯು ಬಿರಿದು ಜನರು ಅದರೊಳಗಿನಿಂದ ಹೊರಟು ವೇಗವಾಗಿ ಓಡುತ್ತಿರುವ ಆ ದಿನ." **(ಕಾಫ್: 44)** "ಆಗ ತಲೆಯಿಂದ ಮಣ್ಣು ಕೊಡವುತ್ತಿದ್ದರೆ ಅಚ್ಚರಿಯಿಲ್ಲ." **(ಹದೀಸ್)**

ಅವರು ಬಹಳ ಅವಸರದಿಂದ ಸಮಾಧಿಗಳಿಂದ ಎದ್ದು ಹೊರಡುತ್ತಾರೆ. "ಅಂದು ಇವರು ತಮ್ಮ ಸಮಾಧಿಗಳಿಂದ ಹೊರಟು- ತಮ್ಮ ವಿಗ್ರಹಾಲಯಗಳ ಕಡೆಗೆ ಓಡುವಂತೆ, ಓಡಿ ಹೋಗುತ್ತಿರುವರು." **(ಅಲ್ ಮಆರಿಜ್: 43)**

ಅಪರಾಧಿಗಳು

ಅದೋ ಅವರು ಹೊರ ಬಂದ ಕೂಡಲೇ ಅತ್ತಿತ್ತ ನೋಡುತ್ತಾರೆ. ಎಲ್ಲೆಡೆ ಭಯಾನಕತೆ! ತಲೆಬೇನೆಯಿಂದ ಅಸ್ವಸ್ಥನಾಗಿ ಮಲಗಿ ನಿದ್ರಿಸಿದ್ದವನನ್ನು ಥಟ್ಟನೆ ಎಬ್ಬಿಸಿ ಕೈಕಾಲು ಕಟ್ಟಿ ಬೆಂಕಿಗೆಸೆಯಲಿಕ್ಕಾಗಿ ಅಗ್ನಿಕುಂಡದ ಬಳಿ ತಂದು ನಿಲ್ಲಿಸಿದ ಅನುಭವ. ಕೆಲಹೊತ್ತು ಒಂದೂ ಅರ್ಥವಾಗುವುದಿಲ್ಲ. "ಎಂಥ ಅನರ್ಥ! ನಮ್ಮನ್ನು ನಿದ್ದೆಯಿಂದ ಎಬ್ಬಿಸಿದವರು ಯಾರು? ಎಂದು ಅವರು ಕೇಳುತ್ತಾರೆ." **(ಯಾಸೀನ್: 52)**

ಆದರೆ, ಪರಿಸ್ಥಿತಿಯನ್ನು ಅರಿಯಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಐಹಿಕ ಜೀವನದಲ್ಲಿ ತಾನು ಸಂಪೂರ್ಣ ನಿರಾಕರಿಸಿದ್ದ ಮತ್ತು ತನಗೆ ಎಚ್ಚರಿಕೆ ನೀಡಲಾಗಿದ್ದ ಆ ದಿನ ಬಂದಿದೆಯೆಂದು ತಕ್ಷಣವೇ ಆತನಿಗೆ ಮನವರಿಕೆಯಾಗುವುದು. "ಇದುವೇ ನಿನ್ನನ್ನು ಎಚ್ಚರಿಸಲಾಗುತ್ತಿದ್ದ ದಿನ." **(ಕಾಫ್: 20)**

ಅದೂ ಸಾಲದೆಂಬಂತೆ ಸತ್ಯವಿಶ್ವಾಸಿಗಳು ಅವರೊಡನೆ ಹೇಳುತ್ತಾರೆ: ನೀವು ನಿದ್ರಿಸಿರಲಿಲ್ಲ, ಸತ್ತು ಮಲಗಿದ ನಿಮ್ಮನ್ನು ಅಲ್ಲಾಹನು ಪುನಃ ಜೀವಂತಗೊಳಿಸಿದ್ದಾನೆ. ಈ ಎಲ್ಲ ವಿಷಯಗಳನ್ನು ಆತನು ಪ್ರವಾದಿಗಳ ಮೂಲಕ ತಿಳಿಸಿದ್ದನಲ್ಲವೇ. ಅವರು ಸತ್ಯ ಹೇಳಿದ್ದರು. ಅಲ್ಲಾಹನ ಆ ವಾಗ್ದಾನ ಈಗ ಸಾಕ್ಷಾತ್ಕಾರಗೊಂಡಿದೆ. **(ಯಾಸೀನ್: 52)**

ಮಹ್‌ಶರಕ್ಕೆ

ಅದೋ ಅಲ್ಲಾಹನ ಅನುಲ್ಲಂಘನೀಯ ಕಟ್ಟಾಜ್ಞೆ ಕೇಳಿಸುತ್ತಿದೆ. ಅತಿ ಸಮೀಪದಿಂದ ಓರ್ವ ಅಧಿಕಾರಿ ಡಂಗುರ ಸಾರುತ್ತಿದ್ದಾನೆ- ವಿಚಾರಣೆಗಾಗಿ ಕೂಡಲೇ ಹೊರಡಿರಿ. ಅಲ್ಲಾಹನ ಸನ್ನಿಧಿಗೆ! "ಕೇಳಿರಿ, ಘೋಷಿಸುವವನು (ಪ್ರತಿಯೊಬ್ಬನ) ಸಮೀಪದಿಂದಲೇ ಘೋಷಿಸುವ ದಿನ." **(ಕಾಫ್: 41)**

ಜಗತ್ತಿನ ಯಾವ ಸಂದು-ಗೊಂದಿನಲ್ಲಿರುವವರಿಗೂ ನಮ್ಮನ್ನು ಬಹಳ ಹತ್ತಿರ ದಿಂದಲೇ ಕರೆಯಲಾಗುತ್ತಿದೆಯೆಂದು ಭಾಸವಾಗುವುದು (ಶಬ್ದದ ನಿಯಮವು ಅಲ್ಲಿ ಬದಲಾಗಿರುತ್ತದೆ). ಕಗ್ಗತ್ತಲೆಯಲ್ಲಿ ಉದ್ಘೋಷಕನ ಧ್ವನಿಯನ್ನು ಮಾತ್ರ ಗುರಿಯಾಗಿರಿಸಿ ಅತ್ತ ಸಾಗಲೇ ಬೇಕು. "ಅಂದು ಎಲ್ಲರೂ ಘೋಷಿಸುವವನ ಕೂಗಿಗನುಸಾರ ನೇರವಾಗಿ ಸಾಗಿ ಬರುವರು." **(ತಾಹಾ: 108)**

ತೀವ್ರ ಗಲಿಬಿಲಿ ಮತ್ತು ದಿಗ್ಭ್ರಾಂತಿಯಿಂದ ವೇಗವಾಗಿ ಹಾರುವ ಮಿಡತೆಗಳಂತೆ. "ಚದುರಿದ ಮಿಡತೆಗಳಂತೆ ಹೊರಬರುವರು." **(ಅಲ್ ಕಮರ್: 7)**

ಒಂದೇ ಸವನೆ ಓಡುವುದು, ಮುಗ್ಗರಿಸುವುದು, ಧುಮುಕುವುದು, ಧಾವಿಸು ವುದು!! ಈಗಾಗಲೇ ಒದಗಿರುವ ಭಯಾನಕ ಸ್ಥಿತಿ ಮತ್ತು ಮುಂದೆ ಬರಲಿರುವ ಮಹಾ ವಿಪತ್ತಿನ ಸ್ಮರಣೆಯು ಅವರನ್ನು ಕಂಗೆಡಿಸಿದೆ. "ಈ ಕುರಿತು ನೀನು ಸಂಪೂರ್ಣ ಅಲಕ್ಷ್ಯ ನಾಗಿದ್ದಿಯಲ್ಲವೇ. ಆದರೆ, ನಿನ್ನ ಮುಂದೆ ಬಿದ್ದಿದ್ದ ಎಲ್ಲ ಪರದೆಗಳನ್ನೂ ನಾವು ಸರಿಸಿ ದ್ದೇವೆ. ಇಂದು ನಿನ್ನ ದೃಷ್ಟಿಯು ಬಹಳ ತೀಕ್ಷ್ಣವಾಗಿದೆ" **(ಕಾಫ್: 22)** ಎಂದು ಅಲ್ಲಾಹ್ ಹೇಳುತ್ತಾನೆ. ಆಗ ಅವರಿಗೆ ಭೂಮಿಯಲ್ಲಿ ಬಾಳಿದ ಕಾಲವೂ ಮರಣಾನಂತರ ಈ ವರೆಗಿನ ಕಾಲವೂ ತೀರಾ ತುಚ್ಛವಾಗಿ ತೋರುವುದು. ಅವರು ಐಹಿಕ ಜೀವನದ ಬಗ್ಗೆ ಆಲೋಚಿಸುತ್ತಾರೆ. ಐದೋ ಹತ್ತೋ ದಿನಗಳ ಸುಖಾನಂದಕ್ಕಾಗಿ ನಾವು ಈ ಎಲ್ಲಾ ನಷ್ಟದ ಹೊರೆಯನ್ನು ಹೊರಬೇಕಾಗಿತ್ತೇ ಎಂದು ಪರಿತಪಿಸುತ್ತಾರೆ. "ಅವರು ಪರಸ್ಪರ ಪಿಸುಮಾತಿನಲ್ಲಿ, 'ನಾವು ಅಲ್ಲಿ ಕೇವಲ ಹತ್ತು ದಿನ ಬಾಳಿರಬಹುದಲ್ಲವೇ?' ಎನ್ನುವರು. ಆಗ ಅವರಲ್ಲಿ ಅತ್ಯಧಿಕ ಜಾಗರೂಕತೆಯಿಂದ ಅಂದಾಜು ಮಾಡುವವನು 'ನಿಮ್ಮ

ಭೂಲೋಕದ ಜೀವನಾವಧಿಯು ಕೇವಲ ಒಂದು ದಿನವಿತ್ತು' ಎಂದು ಹೇಳುವನು."
(ತಾಹಾ: 103-104)

ಬರ್ಝಖ್ ಜೀವನದ ಕುರಿತು ಅವರು ಆಣೆ ಹಾಕಿ ಅದು ಬಹಳ ಸ್ವಲ್ಪ ಸಮಯ- ಕೇವಲ ಕೆಲವು ಗಂಟೆಗಳ ಕಾಲವಿತ್ತೆಂದು ಹೇಳುತ್ತಾರೆ. ವಸ್ತುಶಃ ಆ ಪೈಕಿ ಹಲವರು ಸಹಸ್ರಾರು ವರ್ಷಗಳ ಹಿಂದೆ ನಿಧನರಾಗಿದ್ದಾರೆ. ಆದರೆ, ಅದು ಯಾವುದೂ ಅವರಿಗೆ ತಿಳಿಯುವುದಿಲ್ಲ, ಅವರು ಅಷ್ಟೊಂದು ಭೀತರಾಗಿದ್ದಾರೆ. "ಆದರೆ ನೈಜ ತಿಳುವಳಿಕೆ ಮತ್ತು ವಿಶ್ವಾಸವಿದ್ದ ಜನರು ಸತ್ಯವಿಶ್ವಾಸಿಗಳು, ಅವರಿಗೆ ಮನವರಿಕೆ ಮಾಡಿಸುತ್ತಾರೆ: ದೇವ ದಾಖಲೆಯ ಪ್ರಕಾರ ನೀವು ಪುನರುತ್ಥಾನ ದಿನದ ವರೆಗೂ ಬಿದ್ದುಕೊಂಡಿದ್ದಿರಿ. ಇದು ಅದೇ ಪುನರುತ್ಥಾನ ದಿನ. ಆದರೆ ನೀವು ತಿಳಿದಿರಲಿಲ್ಲ."
(ಅರ್ರೂಮ್: 56)

ಅದೇನೂ ಹರಟೆಯ ಸಮಯವಲ್ಲ, ಘೋಷಕನ ಕರೆಯತ್ತ ಧಾವಿಸುವಾಗ ಖೇದದಿಂದ ಆ ಮಾತುಗಳು ಹೊರಬಿದ್ದಿವೆ. "ಅವರು ಓಡುತ್ತಿದ್ದಾರೆ ತಮ್ಮನ್ನು ಕೂಗುತ್ತಿರುವಾತನ ಕಡೆಗೆ." (ಅಲ್ ಕಮರ್: 8) "ಓಟದ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವ ವರಂತೆ." (ಅಲ್ ಮಆರಿಜ್: 43)

ಅಲ್ಲಿ ತಲಪಿದ ಬಳಿಕವಾದರೂ ನೆಮ್ಮದಿ ದೊರೆಯುವ ನಿರೀಕ್ಷೆಯಿದೆಯೇ? ಇಲ್ಲ, ನಮ್ಮ ಮಟ್ಟಿಗೆ ಅತ್ಯಂತ ಭಯಾನಕ ಮತ್ತು ಅಹಿತಕರವಾದ ಪರಿಣಾಮದತ್ತ ಕರೆಯಲಾಗುತ್ತಿದೆಯೆಂದು ತಿಳಿದಿದೆ.

"ಕೂಗುವಾತನು ಅತ್ಯಂತ ಅಪ್ರಿಯ ವಸ್ತುವಿನ ಕಡೆಗೆ ಕೂಗುವಂದು... ಅವರ ದೃಷ್ಟಿಯು ಭಯಗ್ರಸ್ತವಾಗಿರುವುದು." (ಅಲ್ ಕಮರ್: 6-7) "ನಿಂದ್ಯತೆಯು ಅವರನ್ನು ಆವರಿಸಿರುವುದು." (ಅಲ್ ಕಲಮ್: 43) "ಅವಿಶ್ವಾಸಿಗಳು ಇದೆಂಥ ಕಠೋರ ದಿನವೆಂದು ಹೇಳುವರು." (ಅಲ್ ಕಮರ್: 8) "ತಂದೆ ಮಗನಿಗೆ ಅಥವಾ ಮಗನು ತಂದೆಗೆ ಸಹಾಯ ಮಾಡಲಾಗದ ದಿನ!" (ಲುಕ್ಮಾನ್: 33) "ಸಂಪತ್ತು ಅಥವಾ ಸಂತಾನ ಅಂದು ಪ್ರಯೋಜನಕಾರಿಯಾಗದು." (ಅಶ್ಶುಅರಾ: 88) "ವ್ಯಾಪಾರ, ಪ್ರೀತಿ, ಶಿಫಾರಸಿನ ಮೂಲಕ ಪಾರಾಗಲಾರದ ದಿನ." (ಅಲ್ ಬಕರ: 204) "ಒಟ್ಟಿನಲ್ಲಿ ಪರಸ್ಪರ ಏನನ್ನೂ ಮಾಡಲಸಾಧ್ಯವಾದ ದಿನ." (ಇನ್‌ಫಿತಾರ್: 19)

ಐಹಿಕ ಜೀವನದಲ್ಲಿ ಏನಾದರೂ ಕಷ್ಟಬಂದರೆ ಸಹಾಯ ಮಾಡಲು ಹಲವು ಮಂದಿಯಿರುತ್ತಾರೆ. ಮಾತಾಪಿತರು, ಮಕ್ಕಳು, ಸಂಬಂಧಿಕರು, ಮಿತ್ರರು, ಜಾತಿ ಬಾಂಧವರು, ಪಕ್ಷದವರು, ನಾಯಕರು, ಪೊಲೀಸರು, ಸರಕಾರ- ಹೀಗೆ ಹಲವರಿ

ರುತ್ತಾರೆ. ಆದರೆ "ಆ ಕಹಳೆ ಊದಲ್ಪಟ್ಟಾಗ ಅಂದು ಅವರ ನಡುವೆ ಯಾವುದೇ ಸಂಬಂಧ ಉಳಿಯಲಾರದು ಮತ್ತು ಅವರು ಪರಸ್ಪರರನ್ನು ವಿಚಾರಿಸಿಯೂ ನೋಡ ಲಾರರು." (ಅಲ್ ಮೂಮಿನೂನ್: 101)

ಪ್ರತಿಯೊಬ್ಬರೂ ತಂತಮ್ಮ ಅವಸ್ಥೆಯಿಂದಲೇ ಕಂಗಾಲಾಗಿರುತ್ತಾರೆ. ಅದು ಇತರರ ಬಗ್ಗೆ ಕಣ್ಣೆತ್ತಿಯೂ ನೋಡದಷ್ಟು ಕಠೋರವಾಗಿರುವುದು. "ಅವರಲ್ಲಿ ಪ್ರತಿಯೊಬ್ಬನಿಗೂ ಅಂದು, ತನ್ನ ಹೊರತು ಬೇರೆ ಯಾರ ಪ್ರಜ್ಞೆಯೂ ಇಲ್ಲದಂತಹ ಪರಿಸ್ಥಿತಿ ಬಂದೊದ ಗುವುದು." (ಅಬಸ: 37)

ಈ ಅವಸ್ಥೆ ಅಷ್ಟಕ್ಕೇ ಕೊನೆಗೊಳ್ಳುವುದಿಲ್ಲ, ನಾವು ಹಲವೊಮ್ಮೆ ನಮ್ಮ ತಂದೆ ತಾಯಿಗಳಿಗಾಗಿ, ಪತಿ ಅಥವಾ ಪತ್ನಿಗಾಗಿ, ಮಕ್ಕಳಿಗಾಗಿ ಅವರ ಅಭೀಷ್ಟದಂತೆ ಅಥವಾ ಅವರನ್ನು ಮುದಗೊಳಿಸಲಿಕ್ಕಾಗಿ (ಅತಿ ಪ್ರೀತಿಯಿಂದ ಅಥವಾ ಸುಖಾಕಾಂಕ್ಷೆಯಿಂದ) ಅಲ್ಲಾಹನು ನಿಷೇಧಿಸಿದ ಹಲವಾರು ಕೆಲಸಗಳನ್ನು ಮಾಡಿರಬಹುದು. ತಂದೆ ತಾಯಂದಿರ ಎಲ್ಲ ಕೃತ್ಯಗಳನ್ನು ಬೆಂಬಲಿಸುವುದು, ಪತ್ನಿಯನ್ನು ಸಂತುಷ್ಟಗೊಳಿಸಲಿಕ್ಕಾಗಿ, ಆಕೆಯ ದುರಭಿಲಾಷೆಗಳನ್ನು ಈಡೇರಿಸಲಿಕ್ಕಾಗಿ ನಿರಪರಾಧಿಗಳನ್ನು ಪೀಡಿಸುವುದು, ಮಕ್ಕಳನ್ನು ಇಸ್ಲಾಮೀ ರೀತಿಯಲ್ಲಿ ಬೆಳೆಸುವ ಬದಲಾಗಿ ಪುಂಡ ಪೋಕರಿಗಳಾಗಿ ಮಾರ್ಪಡಿಸುವುದು, ಅವರ ಆಡಂಬರ ಮತ್ತು ದುಂದುವೆಚ್ಚಗಳಿಗಾಗಿ ಅಕ್ರಮ ಮಾರ್ಗಗಳಿಂದ ಹಣ ಸಂಪಾದಿಸುವುದು ಇತ್ಯಾದಿಗಳು ಸಮಾಜದಲ್ಲಿ ಸರ್ವ ಸಾಮಾನ್ಯವಾಗಿದೆಯಲ್ಲವೇ. ಆದರೆ ಇಲ್ಲಿ - ಕಿಯಾಮತ್ ದಿನದಂದು, ಆ ದುಷ್ಕೃತ್ಯಗಳೆಲ್ಲವೂ ಯಥಾವತ್ತಾಗಿ ಬಹಿರಂಗವಾಗುವುದು. ಆದ್ದರಿಂದ ಅವರಿಗೆ ಪರಸ್ಪರ ಮುಖನೋಡಲು ಮುಜುಗರ ವಾಗುವುದು. ಯಾರಿಗಾಗಿ ಈ ಎಲ್ಲ ಕೃತ್ಯಗಳನ್ನು ಮಾಡಿದ್ದೆನೋ ಆ ಜನರೇ ನನ್ನ ವಿರುದ್ಧ ಸಾಕ್ಷಿ ಹೇಳುವರೆಂಬ ಭೀತಿಯಿಂದ, ಇತರರಿಗೆ ಈ ತಪ್ಪುಗಳು ತಿಳಿದು ಬಿಡುವು ದೆಂಬ ನಾಚಿಕೆಯಿಂದ! ಯಾವುದಾದರೂ ತುರ್ತು ಕೆಲಸಕ್ಕೆ ಹೊರಟಾಗ ದಾರಿಯಲ್ಲಿ ಮಿತ್ರನೊಬ್ಬ ವಿಪತ್ತಿಗೆ ಸಿಲುಕಿರುವುದನ್ನು ನೋಡಿ, ಈಗ ತತ್ಕಾಲಕ್ಕೆ ನನಗೆ ಪುರುಸೊತ್ತಿಲ್ಲ, ಆತನ ಸೇವೆಗೆ ನಿಂತರೆ ನನ್ನ ಪರಿಸ್ಥಿತಿ ಹದಗೆಟ್ಟೀತೆಂದು ಅಲ್ಲಿಂದ ಜಾರಿಕೊಳ್ಳುವುದಿಲ್ಲವಷ್ಟೆ. ಆದರೆ ಅಂದು ಕನಿಷ್ಠಪಕ್ಷ ಅಷ್ಟು ಮಾಡಲೂ ಅವರ ಪೈಕಿ ಯಾರೂ ಸಿದ್ಧರಿರುವುದಿಲ್ಲ, ಮಾತ್ರವಲ್ಲ, ತಂದೆ ತಾಯಂದಿರು, ಸಹೋದರರು, ಪತ್ನಿ, ಮಕ್ಕಳನ್ನು ಕಂಡ ಕೂಡಲೇ ಅವರಿಂದ ತಪ್ಪಿಸಿಕೊಳ್ಳಲು ಅಪರಾಧಿಗಳು ಪ್ರಯತ್ನಿಸುತ್ತಾರೆ. "ಅಂದು ಮನುಷ್ಯನು ದೂರ ಓಡುವನು- ತನ್ನ ಸಹೋದರನಿಂದ, ತನ್ನ ತಾಯಿಯಿಂದ ಮತ್ತು ತನ್ನ ತಂದೆ ಯಿಂದ. ತನ್ನ ಪತ್ನಿಯಿಂದ ಮತ್ತು ತನ್ನ ಮಕ್ಕಳಿಂದ." (ಅಬಸ: 34-36)

ಇನ್ನು ಮಿತ್ರರ ವಿಷಯವಂತೂ ಹೇಳಬೇಕಾಗಿಲ್ಲ, ಆದರೆ ಪರಿಸ್ಥಿತಿ ಅಲ್ಲಿಗೆ ಮುಗಿಯುವುದಿಲ್ಲ, ಆಪ್ತ ಮಿತ್ರರು ಪರಸ್ಪರ ನೋಡುತ್ತಾರೆ, ಸಂಕಷ್ಟಗಳನ್ನು ತಿಳಿಯುತ್ತಾರೆ. ಆದರೆ ಯಾರೂ ಯಾರ ಬಗ್ಗೆಯೂ ವಿಚಾರಿಸುವುದಿಲ್ಲ, ಇರಲಿ, ಇದು ಚಿಂತಿಲ್ಲ ಎನ್ನೋಣ. ಆದರೆ ತನ್ನ ಸ್ವಂತ ಮಕ್ಕಳು, ಪತ್ನಿ, ಸಹೋದರ, ತನ್ನ ಅಭಯವಾಗಿದ್ದ ಇಡೀ ಕುಟುಂಬವನ್ನೂ ಭೂಮಿಯಲ್ಲಿರುವ ಸರ್ವಸ್ವವನ್ನೂ ಪ್ರಾಯಶ್ಚಿತ್ತವಾಗಿ ನೀಡಿಯಾದರೂ ತನಗೆ ರಕ್ಷಣೆ ದೊರೆಯಲೆಂದು ಮಾನವನು ಹಂಬಲಿಸುವುದನ್ನು ಏನೆನ್ನೋಣ.

"ಅಪರಾಧಿಯು ಅಂದಿನ ಯಾತನೆಯಿಂದ ಪಾರಾಗಲಿಕ್ಕಾಗಿ ತನ್ನ ಮಕ್ಕಳನ್ನು, ತನ್ನ ಪತ್ನಿಯನ್ನು, ತನ್ನ ಸಹೋದರರನ್ನು, ತನಗೆ ಆಶ್ರಯ ನೀಡುತ್ತಿದ್ದ ತನ್ನ ಅತ್ಯಂತ ಆಪ್ತ ಕುಟುಂಬವನ್ನು ಮತ್ತು ಭೂಮುಖದಲ್ಲಿರುವ ಎಲ್ಲ ಜನರನ್ನೂ ಪರಿಹಾರವಾಗಿ ಕೊಡ ಬಯಸುವನು ಮತ್ತು ಈ ಪರಿಹಾರವು ತನ್ನನ್ನು ಪಾರುಗೊಳಿಸಬಹುದೆಂದು ಭಾವಿಸುವನು." (ಅಲ್ ಮಆರಿಜ್: 11-14)

ಇದು ಅಲ್ಲಿ ಅಪರಾಧಿಗಳ ಅವಸ್ಥೆ! ಪರಿಸ್ಥಿತಿ ಎಷ್ಟೊಂದು ಗಂಭೀರವಾಗಿರಬಹುದೆಂದು ಇದರಿಂದ ಊಹಿಸಬಹುದಲ್ಲವೇ? ತಂದೆ ತಾಯಿ ಮತ್ತು ಮಕ್ಕಳ ಪರಸ್ಪರ ಸಂಬಂಧವೇ ಹೀಗಿರುವಾಗ ಇತರ ವಿಷಯಗಳು ಹೇಗಿರಬಹುದು? ನ್ಯಾಯ ಅನ್ಯಾಯಗಳನ್ನು ವಿವೇಚಿಸದೆ ರಾತ್ರೆ ಹಗಲು ಬೆವರು ಸುರಿಸಿ ದುಡಿದು ಕುಟುಂಬವನ್ನು ಪೋಷಿಸುವವರೂ ರಾಜಕೀಯ ಮತ್ತು ಪಕ್ಷೀಯ ಸ್ವಾರ್ಥ ಲಾಭಗಳಿಗಾಗಿ ಯಾವ ಅಕ್ರಮವನ್ನೂ ಮಾಡಲು ಹೇಸದವರೂ ಇಲ್ಲಿ ಸ್ವಲ್ಪ ಆಲೋಚಿಸಬೇಕಾಗಿದೆ.

ತತ್ವ ಸಿದ್ಧಾಂತ, ಸ್ವಾರ್ಥ ಹಿತಾಸಕ್ತಿ, ವರ್ಗ ಪಕ್ಷ ಪಾತ, ದೇಶ ಮತ್ತು ವರ್ಣಗಳ ಹೆಸರಲ್ಲಿ ಮಾನವರು ಪರಸ್ಪರ ಮಿತ್ರರಾಗುತ್ತಾರೆ. ಆದರೆ ಆ ಮಾನದಂಡಗಳು ವಸ್ತುತಃ ಅಲ್ಲಾಹ್ ಮೆಚ್ಚದಿರುವ ಹಾಗೂ ಅನಿಸ್ಲಾಮಿಕವಾಗಿರುವಾಗ, ಅವುಗಳಿಗಾಗಿ ಇಲ್ಲಿ ಮಿತ್ರರಾದವರು ನಾಳೆ ಅಲ್ಲಿ ಪರಸ್ಪರ ವೈರಿಗಳಾಗುತ್ತಾರೆ. "ಆ ದಿನ ಬಂದಾಗ ಧರ್ಮನಿಷ್ಠರ ಹೊರತು ಇತರೆಲ್ಲ ಮಿತ್ರರೂ ಪರಸ್ಪರ ಶತ್ರುಗಳಾಗಿ ಬಿಡುವರು." (ಅಝ್ಝುಖ್‌ರುಫ್: 67)

ಮಾತ್ರವಲ್ಲ, ಅವರು ಪರಸ್ಪರ ಶಪಿಸುತ್ತಾರೆ. ಪ್ರವಾದಿ ಇಬ್ರಾಹೀಮ್‌ರು(ಅ) ತಮ್ಮ ಜನತೆಯೊಡನೆ ಒಮ್ಮೆ ಹೀಗೆ ಹೇಳಿದ್ದರು, "ನೀವು ಐಹಿಕ ಜೀವನದಲ್ಲಿ ಅಲ್ಲಾಹನನ್ನು ಬಿಟ್ಟು ವಿಗ್ರಹಗಳನ್ನು ನಿಮ್ಮ ನಡುವೆ ಸ್ನೇಹ ಸೌಹಾರ್ದ ಬೆಳೆಸುವ ಮಾರ್ಗವಾಗಿ ಮಾಡಿರುವಿರಲ್ಲವೇ. ಆದರೆ ಕಿಯಾಮತ್ ದಿನ ನೀವು ಪರಸ್ಪರ ತಿರಸ್ಕರಿಸಿ ಪರಸ್ಪರ ಶಪಿಸುವಿರಿ." (ಅಂಕಬೂತ್: 25)

ಹೌದು, ಅವರು ಕೂಗಿ ಕರೆಯುವಾತನ ಕಡೆಗೆ ಓಡುವರು. ಹಿಂದೆ ಸರಿಯಲಾಗುವುದಿಲ್ಲ. ಏಕೆ? ಏಕೆಂದರೆ ಮಾನವನು ಭೂಮಿಯಲ್ಲಿ ಜೀವಿಸುತ್ತಿರುವಾಗ ಆತನ ಇಡೀ ಜೀವನವನ್ನು ದಾಖಲಿಸಲು ಇಬ್ಬರು ದೇವಚರರನ್ನು ಅಲ್ಲಾಹನು ಮೊದಲೇ ನೇಮಿಸಿದ್ದನಲ್ಲವೇ. "ಗೌರವಾನ್ವಿತ ಬರಹಗಾರರು. ನಿಮ್ಮ ಪ್ರತಿಯೊಂದು ಕೃತ್ಯವನ್ನೂ ಬಲ್ಲವರು."

(ಅಲ್ ಇನ್‌ಫಿತಾರ್: 11-12)

ಪ್ರತಿಯೊಬ್ಬರಿಗೂ ಇಬ್ಬರು ದೇವಚರರನ್ನು ನೇಮಿಸಲಾಗಿತ್ತು. ಅವರು ಎಡ-ಬಲಗಳಲ್ಲಿ ಕುಳಿತು ಎಲ್ಲವನ್ನೂ ದಾಖಲಿಸುತ್ತಾರೆ. "ಇಬ್ಬರು ಲೇಖಕರು ಅವನ ಬಲ ಹಾಗೂ ಎಡಭಾಗಗಳಲ್ಲಿ ಕುಳಿತು ಪ್ರತಿಯೊಂದು ವಿಷಯವನ್ನು ದಾಖಲಿಸುತ್ತಿರುವರು."

(ಕಾಫ್: 17)

ಮಾನವನ ಸಾವಿನೊಂದಿಗೆ ಅವರು ಆ ಕೆಲಸವನ್ನು ನಿಲ್ಲಿಸಿದ್ದರು. ಅನಂತರ ಆತನನ್ನು ಎರಡನೇ ಬಾರಿ ಜೀವಂತಗೊಳಿಸಿ ಆತ ಗೋರಿಯಿಂದ ಹೊರ ಬಂದಾಗ ಅವರು ಆತನನ್ನು ಪುನಃ ವಶಪಡಿಸಿಕೊಳ್ಳುತ್ತಾರೆ. ಒಬ್ಬ ದೇವಚರ ಆತನನ್ನು ಅಲ್ಲಾಹನ ನ್ಯಾಯಾಲಯದತ್ತ ಸಾಗಿಸುವಾಗ ಇನ್ನೊಬ್ಬ ದೇವಚರ ಕರ್ಮದಾಖಲೆ ಹಿಡಿದು ಆತನನ್ನು ಹಿಂಬಾಲಿಸುತ್ತಾರೆ. "ಪ್ರತಿಯೊಬ್ಬನು ಒಬ್ಬ ಅಟ್ಟಿತ್ತರುವವ ಮತ್ತು ಒಬ್ಬ ಸಾಕ್ಷಿದಾರನ ಜೊತೆ ಬಂದು ಬಿಟ್ಟನು." **(ಕಾಫ್: 21)**

ಹೀಗೆ ಇಬ್ಬರು ದೇವಚರರ ಬೆಂಗಾವಲಿನಿಂದ ಸಾಗುವ ಕೈದಿಯು ಹಿಂತಿರುಗುವುದಾದರೂ ಹೇಗೆ? ಅವರು ಗುಂಪುಗುಂಪಾಗಿ ಸಾಗುತ್ತಿರುತ್ತಾರೆ. "ಕಹಳೆಯನ್ನು ಊದುವಂದು ನೀವು ತಂಡೋಪತಂಡಗಳಾಗಿ ಹೊರಟು ಬರುವಿರಿ." **(ಅನ್ನಬಾ: 18)**

ಆದಿ ಮಾನವ ಆದಮ್‌ರಿಂದ ಕೊನೆಯ ಮಾನವನ ವರೆಗಿನ ಕೋಟ್ಯಂತರ ಜನರು ಒಟ್ಟಿಗೆ ನೆರೆದಿದ್ದರೂ "ಹೆಜ್ಜೆ ಸಪ್ಪಳದ ಹೊರತು ಬೇರೆ ಯಾವ ಗದ್ದಲವೂ ಅಲ್ಲಿ ಕೇಳಿಸಲಾರದು. ಎಲ್ಲ ಧ್ವನಿಗಳೂ ರಹ್ಮಾನನಾದ ಪ್ರಭುವಿನ ಮುಂದೆ ಕ್ಷೀಣಿಸಿರುವುವು."

(ತಾಹಾ: 108)

ಆ ದೃಶ್ಯವು ಎಷ್ಟೊಂದು ಗಂಭೀರವಾಗಿರಬಹುದು!!!

ಮಹ್‌ಶರದ ಪಯಣದಲ್ಲಿ ಅಪರಾಧಿಗಳು ಹೆದರಿ ನಡುಗಿ ರಕ್ತ ಆರಿ ದೇಹವು ಮರಗಟ್ಟಿ ಬಿಳುಚಿಕೊಂಡಿರುವುದು. "ಅಪರಾಧಿಗಳ ಕಣ್ಣುಗಳು ಭಯ ಭೀತಿಯಿಂದ ನಿಶ್ಚಲವಾಗಿರುವ ಸ್ಥಿತಿಯಲ್ಲಿ ಅವರನ್ನು ಸುತ್ತುಗಟ್ಟಿ ತರುವೆವು." **(ತಾಹಾ: 102)**

ಹಾದಿ ಬದಿಯಲ್ಲಿ ಒಂದು ಅಪಾಯಕಾರಿ ಸ್ಥಳವಿದೆಯೆಂದು ಭಾವಿಸೋಣ.

ಸುತ್ತಲೂ ಪತಾಕೆ ನಾಟಿ ಗುರುತು ಹಾಕಲಾಗಿದೆ. ಬೋರ್ಡು ಇರಿಸಲಾಗಿದೆ. ಅದರ ಸಮೀಪ ಯಾತ್ರಿಕರಿಗೆ ಎಚ್ಚರಿಕೆ ನೀಡಲಿಕ್ಕಾಗಿ ಒಬ್ಬರನ್ನು ನೇಮಿಸಲಾಗಿದೆ. ಅವರು ಮಾನವ ಪ್ರೇಮಿಯಾಗಿದ್ದು ಆ ಹಾದಿಯಿಂದ ಬರುವವರಿಗೆ ಎಚ್ಚರಿಕೆ ನೀಡುತ್ತಾರೆ. ಹೀಗಿರುತ್ತಾ, ಕೆಲವರು ಈ ಎಲ್ಲ ಮುಂಜಾಗ್ರತಾ ಕ್ರಮವನ್ನು ನಿರ್ಲಕ್ಷಿಸಿ ಅಲ್ಲಿ ಹೋಗಿ ಅಪಾಯಕ್ಕೆ ಸಿಲುಕಿದರೆ! ಜನರು ಹೇಳಬಹುದು, ಕಣ್ಣು ಕಿವಿ, ಮೂಗು ಮುಚ್ಚಿ ಅಲ್ಲಿ ಹೋಗಿ ಮುಗ್ಗರಿಸಿ ಬಿದ್ದಿದ್ದಾರೆ. ಏನು ಮಾಡಲಿ. ಹಾಗೆಯೇ ಪ್ರವಾದಿಯವರ(ಸ) ಎಚ್ಚರಿಕೆಯನ್ನು ಕಡೆಗಣಿಸಿದವರನ್ನು ಅಲ್ಲಾಹನು ಕುರುಡರು, ಕಿವುಡರು ಮತ್ತು ಮೂಕರು ಎಂದು ಕರೆದಿದ್ದಾನೆ. **(ಅಲ್ ಬಕರ: 171)**

"ಅಪರಾಧಿಗಳು ಮಹ್‌ಶರಕ್ಕೆ ಕುರುಡ, ಕಿವುಡ ಮತ್ತು ಮೂಗರಾಗಿ ಮುಖ ಊರಿ ಹೋಗುತ್ತಾರೆ." **(ಬನೀ ಇಸ್ರಾಈಲ್: 97)**

ಮುಖ ಊರಿ ಹೋಗುವುದು ಹೇಗೆಂದು ಒಬ್ಬರು ಪ್ರವಾದಿಯವರೊಡನೆ(ಸ) ಕೇಳಿದಾಗ, "ಕಾಲಿನಿಂದ ನಡೆಸಿದಾತನಿಗೆ ಮುಖದಿಂದ ನಡೆಸಲು ಸಾಧ್ಯವಿದೆಯಲ್ಲವೇ" ಎಂದು ಉತ್ತರಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. **(ಬುಖಾರಿ, ಮುಸ್ಲಿಮ್)**

ಕಣ್ಣು, ಕಿವಿ, ನಾಲಗೆಯನ್ನು ಸೂಕ್ತ ರೀತಿಯಲ್ಲಿ ಬಳಸದವರು ಅನಾಹುತಕ್ಕೆ ಗುರಿಯಾಗುವುದನ್ನು ನಾವು ಸಾಮಾನ್ಯವಾಗಿ ನೋಡುತ್ತಿದ್ದೇವೆ. ಸೃಷ್ಟಿಕರ್ತ ಮತ್ತು ಪ್ರಭುವಾದ ಅಲ್ಲಾಹನನ್ನು ಕಡೆಗಣಿಸುವಾತನು ವಸ್ತುಶಃ ಕುರುಡನಾಗಿದ್ದಾನೆ. ಹಾಗೆ ಕುರುಡರಾದವರು ಕಿಯಾಮತ್ (ಪುನರುತ್ಥಾನ) ದಿನದಲ್ಲಿಯೂ ಕುರುಡರಾಗಿರುತ್ತಾರೆ ಮತ್ತು ಅತ್ಯಧಿಕ ದಾರಿಗೆಟ್ಟವರಾಗಿರುತ್ತಾರೆ. ಅರ್ಥಾತ್ ಪಥಭ್ರಷ್ಟತೆಯಿಂದ ಇಲ್ಲಿ ಸಂಭವಿಸುವ ಅನಾಹುತಗಳಿಗಿಂತ ಅಲ್ಲಿ ಸಂಭವಿಸುವ ಅನಾಹುತವು ಅತಿ ಭೀಕರವಾಗಿರುವುದು. "ಇಹಲೋಕದಲ್ಲಿ ಕುರುಡನಾಗಿ ಬಾಳಿದವನು ಪರಲೋಕದಲ್ಲೂ ಕುರುಡನಾಗಿಯೇ ಇರುವನು. ಮಾತ್ರವಲ್ಲ ಮಾರ್ಗ ಹೊಂದುವುದರಲ್ಲಿ ಕುರುಡನಿಗಿಂತಲೂ ಹೆಚ್ಚು ವಿಫಲನಾಗುವನು." **(ಬನೀ ಇಸ್ರಾಈಲ್: 72)**

"ಆತನು ಕುರುಡನಾಗಿಯೇ ಮಹ್‌ಶರಾಕ್ಕೆ ಕರೆತರಲ್ಪಡುತ್ತಾನೆ." **(ತಾಹಾ: 124)**

"ಓ ನನ್ನ ಪ್ರಭೂ ಭೂಲೋಕದಲ್ಲಿ ನಾನು ದೃಷ್ಟಿಯುಳ್ಳವನಾಗಿದ್ದೆ, ನನ್ನನ್ನು ಇಲ್ಲೇಕೆ ಕುರುಡನಾಗಿ ಎಬ್ಬಿಸಿದೆ?" ಎಂದವನು ಕೇಳುವನು. ಆಗ ಅಲ್ಲಾಹನು, "ನಮ್ಮ ವಚನಗಳು ನಿನ್ನ ಬಳಿಗೆ ಬಂದಿದ್ದಾಗ ನೀನು ಇದೇ ರೀತಿಯಲ್ಲಿ ಮರೆತು ಬಿಟ್ಟಿದ್ದೆ. ಹಾಗೆಯೇ ಇಂದು ನೀನು ಮರೆಯಲ್ಪಡುತ್ತಿರುವೆ" ಎನ್ನುವನು. **(ತಾಹಾ: 125-126)**

ಈ ಕುರುಡರು ಅಲ್ಲಿನ ಭಯಾನಕ ದೃಶ್ಯಗಳನ್ನು ಮತ್ತು ಅವರ ದುಷ್ಕೃತ್ಯಗಳ ದುರಂತ ಪರಿಣಾಮವನ್ನು ಸ್ಪಷ್ಟವಾಗಿ ಕಾಣುವರು. ಆದರೆ ಇತರ ವಿಷಯಗಳಲ್ಲಿ ಅವರು ಕುರುಡರಾಗಿರುತ್ತಾರೆ. ಅವರಿಗೆ ದಾರಿ ಕಾಣಿಸುವುದಿಲ್ಲ, ಊರಿ ನೋಡಲು ಕೋಲಿಲ್ಲ, ಕೈ ಹಿಡಿದು ನಡೆಸುವವರಿಲ್ಲ, ಪ್ರತಿಯೊಂದು ಹೆಜ್ಜೆಯಲ್ಲಿಯೂ ದುರಂತವೇ ಕಂಡು ಬರುತ್ತಿದೆ! ಅಲ್ಲಿಗೆ ಹೇಗೆ ಹೋಗಬೇಕೆಂದು ತಿಳಿದಿಲ್ಲ, ಅವಶ್ಯಕತೆ ಹೇಗೆ ಪೂರೈಸುವುದೆಂಬ ತಿಳುವಳಿಕೆಯಿಲ್ಲ, ಈ ದುರಂತ ಸ್ಥಿತಿಯಲ್ಲಿ ನನ್ನನ್ನು ಯಾಕೆ ಹೀಗೆ ಕುರುಡನಾಗಿ ಮಾಡಿದೆ ಎಂದು ಪ್ರಲಾಪಿಸಲಾಗುತ್ತದೆ! ನನ್ನ ದೃಷ್ಟಾಂತಗಳು ಏನು ಬೇಕಾದರೂ ಆಗಲಿ ಎಂದು ನೀನು ಭಾವಿಸಿದೆ. ಹಾಗೆಯೇ ನೀನು ಕೂಡಾ ಏನು ಬೇಕಾದರೂ ಆಗು, ಎಲ್ಲಾದರೂ ಹೋಗಿ ಬೀಳು, ಬೇಡಿಕೆ ಪೂರೈಸಲಾಗದೆ ತೊಳಲಾಡು, ನಾನು ಅದನ್ನು ಲೆಕ್ಕಿಸುವುದಿಲ್ಲವೆಂಬ ಉತ್ತರ ದೊರೆಯುವುದು.

ಸತ್ಯವಿಶ್ವಾಸಿಗಳು

ಮಹ್‌ಶರದಲ್ಲಿ ಅಪರಾಧಿಗಳನ್ನು ಮಾತ್ರವಲ್ಲ, ಸತ್ಯವಿಶ್ವಾಸಿಗಳನ್ನು ಒಟ್ಟು ಸೇರಿಸಲಾಗುತ್ತದೆಂದು ನಾವು ತಿಳಿದೆವು. ಅವರೂ ಅಪರಾಧಿಗಳಂತೆಯೇ ತೀವ್ರ ಸಂಕಷ್ಟ ಅನುಭವಿಸುತ್ತಾ ಸಾಗುತ್ತಿರುವರೇ? ಇಲ್ಲ, 'ಸವಿಗನಸಿನ' ಆನಂದವನ್ನು ಸವಿಯುತ್ತಾ ಸುದೀರ್ಘವಾಗಿ ನಿದ್ರಿಸಿ ಆಯಾಸ-ಆಲಸ್ಯಗಳಿಂದ ಮುಕ್ತರಾಗಿ ಪೂರ್ಣ ಲವಲವಿಕೆಯಿಂದ ಅವರು ಸಾಗುತ್ತಾರೆ. ಅವರು ಗೋರಿಯಿಂದ ಪೂರ್ವ ನಿರೀಕ್ಷಿತ ವಾತಾವರಣಕ್ಕೆ ನೇರವಾಗಿ ಪ್ರವೇಶಿಸುತ್ತಾರೆ. ಸಹಜವಾಗಿ ಈ ಪಯಣವು ನವೋತ್ಸಾಹ ಮತ್ತು ಹರ್ಷದಾಯಕವಾಗಿರುವುದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ, ಒಮ್ಮೆಯೂ ಕಂಡರಿತಿಲ್ಲದ ಹೊಸ ಬಗೆಯ ಅನುಭವ ಮತ್ತು ಪರಿಸರವನ್ನು ನೋಡಿ ಸ್ವಲ್ಪ ದಿಗಿಲಾಗಬಹುದು. ಆದರೆ ಅದು ಅಲ್ಲಿ ಅವರ ಮಟ್ಟಿಗೆ ಆನಂದದಾಯಕವಾಗಿರುವುದು. ಒಂದೊಂದೇ ಹಂತವನ್ನು ಬೇಗನೇ ದಾಟಿ ಬಿಟ್ಟರೆ ಶಾಶ್ವತವಾದ ಸ್ವರ್ಗ ತಲಪುವುದೆಂಬ ಭಾವನೆಯಿಂದ, "ಅವರ ಮುಖ ಸದಾ ಕಾಂತಿ, ಮುಗುಳ್ನಗೆಗಳಿಂದ ಪ್ರಸನ್ನವಾಗಿರುವುದು." **(ಅಬಸ: 39)**

"ಅಂದಿನ ಆ ಘನಘೋರ ಭಯಾನಕತೆಯಿಂದ ಅವರಿಗೆ ದುಃಖವಾಗುವುದಿಲ್ಲ, ಅವರು ಹೊರ ಬಂದ ಕೂಡಲೇ ದೇವಚರರು ಮುಂದೆ ಬಂದು ಅವರನ್ನು ಸ್ವಾಗತಿಸಿ 'ಇದು ನಿಮಗೆ ವಾಗ್ದಾನ ಮಾಡಲಾಗಿರುವ ದಿನವಲ್ಲವೇ' ಎಂದು ಶುಭಕೋರುವರು." **(ಅಲ್ ಅಂಬಿಯಾ: 103)** "ಹೀಗೆ ಆ ಹಂತದ ಎಲ್ಲ ಭಯಗಳಿಂದಲೂ ಅವರು ಮುಕ್ತರಾಗುತ್ತಾರೆ." **(ಅನ್ನಮ್ಲ್: 19)** ಅವರು ಅಲ್ಲಾಹನ ಸನ್ನಿಧಿಗೆ ಹೊರಡುತ್ತಾರೆ,

ಅತ್ತಕಡೆಯಲ್ಲಿ ಅಪರಾಧಿಗಳು ಮಾಡುತ್ತಿರುವ ಪ್ರಲಾಪವನ್ನು ನೋಡಿ ನಗುತ್ತಾ, ಅವರ ತಪ್ಪು ತಿಳುವಳಿಕೆಗಳನ್ನು ನಿವಾರಿಸುತ್ತಾ ಸಾಗುತ್ತಾರೆ!

"ಹೌದು, ಅದೋ ಅವರು ಪರಮ ಕರುಣಾಮಯಿಯಾದ ಅಲ್ಲಾಹನ ಬಳಿಗೆ ಅತಿಥಿಯಾಗಿ ಹೊರಟಿದ್ದಾರೆ." **(ಮರ್ಯಮ್: 85)** ಆ ಆನಂದವನ್ನು ವರ್ಣಿಸಲು ಸಾಧ್ಯವಿದೆಯೇ! ಅಲ್ಲಿ ಅವರು ವಿಶೇಷವಾಗಿ ಸಜ್ಜುಗೊಳಿಸಲಾದ ಒಂದು ಬಗೆಯ ಪ್ರಕಾಶವಾಹನದಲ್ಲಿ ಸಂಚರಿಸುವರೆಂದು ಹೇಳಿದರೆ ಅತಿಶಯೋಕ್ತಿ ಎನಿದೆ! ದಾರಿಯಲ್ಲಿ ಅಪರಾಧಿಗಳ ಕಡೆಯಿಂದ 'ಕೇವಲ ಹತ್ತು ದಿನಗಳ ಸುಖಾನಂದಕ್ಕಾಗಿ... ಕೇವಲ ಒಂದೇ ದಿನ ನಾವು ಅಲ್ಲಿ ಜೀವಿಸಿದ್ದೆವು...' ಎಂದು ಮುಂತಾಗಿ ಗುಸುಗುಸು ಕೇಳಿಸುತ್ತದೆ. ಯಾತ್ರೆಯು ಪುನಃ ಮುಂದುವರಿಯುತ್ತದೆ, ಮತ್ತಷ್ಟು ಉಲ್ಲಾಸದಿಂದ. ಹೀಗೆ, ಕೊನೆಗೆ ಅಪರಾಧಿಗಳೂ ಸತ್ಯವಿಶ್ವಾಸಿಗಳೂ ಅವಿಶ್ವಾಸಿಗಳೂ ಸಾಮೂಹಿಕವಾಗಿ ಮಹ್‌ಶರದಲ್ಲಿ ಅಲ್ಲಾಹನ ಮುಂದೆ ಹಾಜರಾಗುತ್ತಾರೆ. **(ಯಾಸೀನ್: 53)**

❖ ❖ ❖ ❖

ಅಧ್ಯಾಯ 04

ಮಹ್‌ಶರ

ಮಾನವನು ಗೋರಿಯಿಂದ ಎಚ್ಚೆತ್ತ ಬಳಿಕ ಆತನನ್ನು ವಶಪಡಿಸಿ ಕರೆತಂದ ದೇವಚರ ದೇವನ ನ್ಯಾಯಾಲಯಕ್ಕೆ ತಲಪಿದಾಗ, "ನನ್ನ ವಶದಲ್ಲಿದ್ದವನು ಇದೋ (ನಿನ್ನ ಸನ್ನಿಧಾನದಲ್ಲಿ) ಹಾಜರಿದ್ದಾನೆ" **(ಕಾಫ್: 23)** ಎಂದು ಹೇಳಿ ಆತನನ್ನು ಅಧಿಕೃತವಾಗಿಯೇ ಅಲ್ಲಿ ಒಪ್ಪಿಸುವರು.

ಇಲ್ಲಿ ಭೂಮಿಯ ರಾಜರು, ಯಜಮಾನರು, ಪಕ್ಷದ ನಾಯಕರು, ಜನ ಸಾಮಾನ್ಯರು, ಪೋಲೀಸರು ಮತ್ತು ಸೈನಿಕರೆಲ್ಲರೂ ಕೇವಲ ಗುಲಾಮರಾಗಿ ಬರುತ್ತಾರೆ. "ಭೂಮಿ-ಆಕಾಶಗಳಲ್ಲಿರುವವರೆಲ್ಲರೂ ಅಲ್ಲಾಹನ ಸನ್ನಿಧಿಯಲ್ಲಿ ದಾಸರ ನೆಲೆಯಲ್ಲಿ ಹಾಜರಾಗಲಿರುವರು. ಅಲ್ಲಾಹನು ಒಬ್ಬನನ್ನೂ ಬಿಡದೆ ಎಲ್ಲರನ್ನೂ ಎಣಿಕೆ ಮಾಡುತ್ತಾನೆ. ಪ್ರತಿಯೊಬ್ಬರೂ ಸಹಾಯಕರಿಲ್ಲದೆ ಒಂಟಿ ಯಾಗಿ ಬರುತ್ತಾರೆ." **(ಮರ್ಯಮ್: 93-95)** "ಸಾರ್ವಭೌಮನಾದ ಅಲ್ಲಾಹನ ಆಜ್ಞೆಯಂತೆ ಎಲ್ಲರೂ ಆ ತೆರೆದ ಮೈದಾನದಲ್ಲಿ ಸೇರಿರುತ್ತಾರೆ." **(ಇಬ್ರಾಹೀಮ್: 48)** "ಅವರ ಯಾವುದೇ ಅಂಶವೂ ಅಲ್ಲಾಹನಿಂದ ಮರೆಯಾಗಿರುವುದಿಲ್ಲ." **(ಮೂಮಿನ್: 16)**

ವಿಚಾರಣೆಯ ಸಿದ್ಧತೆ

ಐಹಿಕ ಜೀವನದ ವಿಚಾರಣೆ ನಡೆಸಲಿಕ್ಕಾಗಿ ಜನರನ್ನು ಮಹ್‌ಶರದಲ್ಲಿ ಸೇರಿಸಲಾಗು ವುದಷ್ಟೆ- ಯಾರೂ ಅದರಿಂದ ಮುಕ್ತರಾಗಿರಲಾರರು. **(ಅಲ್ ಕಹ್ಫ್: 87)** ಮಾನವರಲ್ಲದೆ, ಜಿನ್ನ್ ಮತ್ತು ಪಿಶಾಚಿಗಳನ್ನೂ ಅಲ್ಲಿ ಹಾಜರು ಪಡಿಸಲಾಗಿರುತ್ತದೆ. **(ಅಲ್ ಅನ್‌ಆಮ್: 128, ಮರ್ಯಮ್: 68)** ಅವರು ಆರಾಧಿಸುತ್ತಿದ್ದ ಅಲ್ಲಾಹೇತರ ವಸ್ತುಗಳೂ ಅಲ್ಲಿ ಹಾಜರುಗೊಳಿಸಲ್ಪಡುತ್ತದೆ. **(ಫುರ್ಕಾನ್: 17)** ಮಾನವರಿಗೆ ಸಂಬಂಧಿಸಿದ ದೇವಚರರನ್ನೂ **(ಸಬಾ: 40)** ಮಾನವರ ಜೀವನ ದಾಖಲೆಗಳನ್ನೂ ಹಾಜರುಗೊಳಿಸಲಾಗುತ್ತದೆ. **(ಅಲ್ ಕಹ್ಫ್: 49)** ಎಲ್ಲ ಪ್ರವಾದಿಗಳನ್ನೂ ಸಾಕ್ಷಿಗಳಾಗಿ ಒಟ್ಟು ಸೇರಿಸಲಾಗುವುದು. ಇತರೆಲ್ಲ ರೀತಿಯ ಸಾಕ್ಷಿಗಳನ್ನೂ ಅಲ್ಲಿ ಸಿದ್ಧಪಡಿಸಿಡಲಾಗುವುದು. **(ಅಝ್ಝುಮರ್: 69)**

ಭೂಮಿಯ ಧ್ವನಿಮುದ್ರಿಕೆ

ಆ ಇತರ ಸಾಕ್ಷಿಗಳು ಯಾವುವು? ಇಲ್ಲಿ ಸ್ವಲ್ಪ ವಿವರಣೆಯ ಅಗತ್ಯವಿದೆ. ಕಿಯಾಮತ್ ದಿನದಂದು ಪ್ರಭುವಿನ ಆಜ್ಞೆಯಿಂದ ಭೂಮಿಯು ಅದರ ವೃತ್ತಾಂತವನ್ನು ಹೇಳುವುದೆಂದು ಅಲ್ಲಾಹನು ತಿಳಿಸಿದ್ದಾನೆ. "ಅಂದು ಅದು ತನ್ನ (ಮೇಲೆ ಗತಿಸಿದ) ಸ್ಥಿತಿಗತಿಗಳನ್ನು ವಿವರಿಸುವುದು. ಏಕೆಂದರೆ ನಿನ್ನ ಪ್ರಭು ಅದಕ್ಕೆ (ಹಾಗೆ ಮಾಡಬೇಕೆಂದು) ಅಪ್ಪಣೆ ಕೊಟ್ಟಿರುವನು." **(ಅಝ್ಝಿಲ್‌ಝಾಲ್: 4-5)**

ಪ್ರವಾದಿಯವರು(ಸ) ಒಮ್ಮೆ ಸಹಾಬಿಗಳೊಡನೆ ಕೇಳಿದರು, "ಭೂಮಿಯು ಹೇಳುವ ವೃತ್ತಾಂತವೇನೆಂದು ತಿಳಿದಿದೆಯೇ?" ಅವರು, "ಇಲ್ಲ ಅಲ್ಲಾಹ್ ಮತ್ತು ಪ್ರವಾದಿಯವರೇ(ಸ) ಬಲ್ಲರು" ಎಂದು ಹೇಳಿದರು. ಆಗ ಪ್ರವಾದಿಯವರು(ಸ) ಹೀಗೆಂದರು, "ಗಂಡಾಗಲಿ, ಹೆಣ್ಣಾಗಲಿ, ಯಾರೆಲ್ಲ ಈ ಭೂಮಿಯಲ್ಲಿ ಏನೆಲ್ಲ ಮಾಡಿರುವರೋ ಅದೆಲ್ಲವೂ ಭೂಮಿ ಹೇಳುವ ವೃತ್ತಾಂತವಾಗಿದೆ. ಭೂಮಿಯು, ಇಂತಹ ಮಾನವ ಇಂತಹ ವೇಳೆಯಲ್ಲಿ ಇಂತಿಂತಹ ಕೆಲಸ ಮಾಡಿದ್ದಾನೆಂದು ಹೇಳುವುದು. ಭೂಮಿ ವಿವರಿಸುವ ವೃತ್ತಾಂತ ಆ ರೂಪದಲ್ಲಿರುತ್ತದೆ." **(ತಿರ್ಮಿದಿ, ಅಹ್ಮದ್)**

ಇನ್ನೊಮ್ಮೆ ಪ್ರವಾದಿಯವರು(ಸ) ಹೀಗಿಯೆ ಹೇಳಿದ್ದರು, "ಈ ಭೂಮಿಯಲ್ಲಿ ಸ್ವಲ್ಪ ಎಚ್ಚರಿಕೆಯಿಂದ ಜೀವಿಸಿರಿ. ಇದು ನಿಮ್ಮ ತಾಯಿ. ಇದರಲ್ಲಿ ಯಾರು ಏನೇ ಮಾಡಿದರೂ – ಅದು ಒಳ್ಳೆಯದಾಗಿರಲಿ, ಕೆಟ್ಟದಾಗಿರಲಿ – ಭೂಮಿ ಅದನ್ನು ಹೇಳದೆ ಬಿಡುವುದಿಲ್ಲ."

ಪ್ರವಾದಿಯವರು(ಸ) ಈ ವಿಷಯವನ್ನು ಬೇರೆ ರೀತಿಯಲ್ಲಿಯೂ ವಿವರಿಸಿದ್ದಾರೆ. ಭೂಮಿಯಲ್ಲಿ ಯಾರು ಏನೇ ಮಾಡಿದ್ದರೂ- ಅದರ ಸಾಕ್ಷಾತ್ ರೂಪದಲ್ಲಿ- ಧ್ವನಿ, ಸ್ವರೂಪ, ಚರಿತ್ರೆ, ಹಿನ್ನೆಲೆ, ಭಾವನೆ ಇತ್ಯಾದಿಗಳೆಲ್ಲವೂ ಅದರ ನೈಜ ರೂಪದಲ್ಲಿ- ಕಿಯಾಮತ್‌ನ ದಿನ ವಿವರಿಸುವುದನ್ನು ಲೌಡ್ ಸ್ಪೀಕರ್, ಟೇಪ್ ರೆಕಾರ್ಡರ್, ರೇಡಿಯೋ, ಸಿನೆಮಾ, ಟಿವಿ, ಇತ್ಯಾದಿಗಳನ್ನು ಕಂಡಿರುವ ಆಧುನಿಕ ಲೋಕಕ್ಕೆ ಸುಲಭದಲ್ಲಿ ಗ್ರಹಿಸಬಹುದಾಗಿದೆ! ಮಾನವ ಜೀವನದ ಬಗ್ಗೆ ದೇವಚರರ ರೆಕಾರ್ಡಿಂಗ್‌ನ ಹೊರತಾಗಿ ಭೂಮಿಯ ವತಿಯಿಂದ ಇನ್ನೊಂದು ರೆಕಾರ್ಡಿಂಗ್ ಕೂಡಾ ನಡೆಯುತ್ತಿದೆ, ಮಾನವನ ಪ್ರತಿಯೊಂದು ಚಟುವಟಿಕೆಯೊಂದಿಗೆ ಕಿಂಚಿತ್ ಸಂಬಂಧವಿರುವ ಪ್ರತಿಯೊಂದು ಭೂ ವಸ್ತುವೂ ಅದರಲ್ಲಿ ಸೇರಿದೆ ಮತ್ತು ಅವೆಲ್ಲವೂ ಸಾಕ್ಷಿಗಳಾಗಿ ಹಾಜರಾಗುವುದೆಂಬುದು ವ್ಯಕ್ತ. ಅದರೊಂದಿಗೆ ಮಾನವನ ಪ್ರತಿಯೊಂದು ಚಲನೆಯ ಹಿಂದೆ ವರ್ತಿಸಿದ ನೈಜ ಮನೋಭಾವಗಳನ್ನೂ ಅಂದು ಯಥಾವತ್ತಾಗಿ ಹೊರಗೆಡಹಲಾಗುವುದು. ಕಾರ್ಯಗತ

ಗೊಳಿಸಿಲ್ಲದ ಮನೋವ್ಯವಹಾರಗಳೂ ದ್ವೇಷಾಸೂಯೆ ಮುಂತಾದ ಭಾವನೆಗಳೂ ಹಿತಾಕಾಂಕ್ಷೆ, ಅನುಕಂಪ ಮುಂತಾದ ಸದ್ಭಾವನೆಗಳೂ ಅಂದು ಬಹಿರಂಗವಾಗುತ್ತವೆ. "ಹೃದಯಗಳೊಳಗೆ (ಅಡಗಿ) ಇರುವ ಎಲ್ಲವನ್ನೂ ಹೊರ ತೆಗೆದು ವಿಚಾರಣೆಗೆ ಒಳಪಡಿಸಲಾಗುವ ಆ ಸಂದರ್ಭವನ್ನು ಅವನು ಅರಿತಿಲ್ಲವೇ?" **(ಅಲ್ ಆದಿಯಾತ್: 10)**

"ಅಂದು ಯಾವ ರಹಸ್ಯವನ್ನೂ ಪರಿಶೀಲಿಸದೆ ಬಿಡುವುದಿಲ್ಲ, ಅಡಗಿರುವ ರಹಸ್ಯಗಳ ವಿಚಾರಣೆ ನಡೆಯಲಿರುವ ಆ ದಿನ." **(ಅತ್ತಾರಿಕ್: 9)**

ಇನ್ನೊಂದು ವಿಷಯವನ್ನು ಪ್ರವಾದಿಯವರು(ಸ) ಹೇಳಿದ್ದಾರೆ, "ಪ್ರತಿಯೊಬ್ಬ ವಂಚಕನ ಸೊಂಟದಲ್ಲಿ ಒಂದು ಪತಾಕೆಯನ್ನು ಏರಿಸಲಾಗುವುದು. ಇದು ಇಂಥವನ ಪುತ್ರ ಇಂಥವನ ವಂಚನೆಯೆಂದು ಅಲ್ಲಿ ಬಹಿರಂಗವಾಗಿ ಸಾರಲಾಗುವುದು."

(ಬುಖಾರಿ, ಮುಸ್ಲಿಮ್)

"ಸ್ವರ್ಗವನ್ನು ಅತಿ ಸಮೀಪಕ್ಕೆ ತರಲಾಗುವುದು." **(ಅತ್ತಕ್‌ವೀರ್: 13)**

"ನರಕವನ್ನೂ ಹಾಜರು ಪಡಿಸಲಾಗುವುದು." **(ಅಲ್ ಫಜ್ರ್: 23)**

ಪ್ರವಾದಿ(ಸ) ಹೇಳಿದರು, "ನರಕಕ್ಕೆ 70,000 ಹಗ್ಗಗಳಿರುವುವು. ಪ್ರತಿಯೊಂದು ಹಗ್ಗದ ಜತೆ ತಲಾ 70,000 ದೇವಚರರಿರುವರು. ಅವರೆಲ್ಲರೂ ಒಟ್ಟಾಗಿ ಹಿಡಿದೆಳೆಯುವ ಮೂಲಕ ಅಂದು ನರಕವನ್ನೂ ತರಲಾಗುವುದು." **(ಮುಸ್ಲಿಮ್)**

ಆ ದೃಶ್ಯವನ್ನೊಮ್ಮೆ ಊಹಿಸಿ ನೋಡಿರಿ! ಇನ್ನೂ ಅನೇಕ ಸಂಕಷ್ಟಗಳಿವೆ. ಪ್ರವಾದಿಯವರು(ಸ) ಹೀಗೆಂದಿದ್ದಾರೆ, "ಕಿಯಾಮತ್ ದಿನದಂದು ಜನರು ಚಪ್ಪಲಿ ಯಿಲ್ಲದೆ ನಗ್ನರಾಗಿ ಮತ್ತು ಮುಂಜಿ ಮಾಡದ ಸ್ಥಿತಿಯಲ್ಲಿ ಮಹ್‌ಶರದಲ್ಲಿ ಸೇರಿಸಲ್ಪಡು ವರು." ಅದನ್ನು ಕೇಳಿ ಆಯಿಶಾ(ರ) ಕೇಳುತ್ತಾರೆ, "ಮಹಿಳೆಯರು ಮತ್ತು ಪುರುಷರು ಪರಸ್ಪರ ಕಾಣಿಸುವಂತೆ ಒಟ್ಟಾಗಿರುತ್ತಾರೆಯೇ?" ಪ್ರವಾದಿ(ಸ) ಹೇಳಿದರು, "ಅಂದಿನ ಸ್ಥಿತಿಯು ಪರಸ್ಪರ ನೋಡಲಾಗದಷ್ಟು ಭಯಾನಕವಾಗಿರುವುದು." **(ಮುಸ್ಲಿಮ್)**

ಸೃಷ್ಟಿಗಳ ಪೈಕಿ ಪ್ರವಾದಿ ಇಬ್ರಾಹೀಮ್‌ರಿಗೆ(ಅ) ಪ್ರಥಮವಾಗಿ ವಸ್ತ್ರ ತೊಡಿಸಲಾಗುವುದು.

ಮತ್ತೊಮ್ಮೆ ಪ್ರವಾದಿ(ಸ) ಹೀಗೆ ಹೇಳಿದ್ದರು, "ಕಿಯಾಮತ್ ದಿನದಂದು ಸೂರ್ಯ ನನ್ನು ಜನರ ತಲೆಯ ಮೇಲೆ ಕೇವಲ ಒಂದು 'ಮೈಲು' ಸನಿಹಕ್ಕೆ ತರಲಾಗುವುದು. [ವರದಿಗಾರ ಸುಲೈಮಾನ್(ರ) ಹೇಳಿದ್ದಾರೆ: ಭೂಮಿಯ ಮಾಪನವಾಗಿರುವ ಮೈಲೋ ಅಥವಾ ಸುರ್ಮಾ ಕಡ್ಡಿಯೋ (ಮೀಲೋ) ಎಂಬುದು ತಿಳಿಯದು.] ಆಗ ಜನರು

ಅವರ ಕರ್ಮಾನುಸಾರ ಬೆವರಿನಲ್ಲಿ ಮುಳುಗಿರುತ್ತಾರೆ. ಕೆಲವರು ಮಣಿಗಂಟಿನ ವರೆಗೆ, ಕೆಲವರು ಮೊಣಕಾಲಿನ ವರೆಗೆ, ಇನ್ನು ಕೆಲವರು ಸೊಂಟದ ವರೆಗೆ, ಮತ್ತೆ ಕೆಲವರು ಕೊರಳಿನ ವರೆಗೆ ಬೆವರಿನಲ್ಲಿ ಮುಳುಗಿರುತ್ತಾರೆ." ಪ್ರವಾದಿಯವರು(ಸ) ಕೈಯಿಂದ ಬಾಯಿಯನ್ನು ಸೂಚಿಸಿದರು. **(ಮುಸ್ಲಿಮ್)**

"ಅಂದು ಅಪರಾಧಿಗಳ ಕೈ ಕಾಲುಗಳು ಸಂಕೋಲೆಗಳಿಂದ ಬಿಗಿದಿರುವುದನ್ನು ನೀವು ನೋಡಬಹುದು. ಅವರು ಟಾರಿನ ವಸ್ತ್ರ ಧರಿಸಿರುತ್ತಾರೆ. ಬೆಂಕಿಯ ಜ್ವಾಲೆಗಳು ಅವರ ಮುಖವನ್ನು ಆವರಿಸಿರುತ್ತವೆ." **(ಇಬ್ರಾಹೀಮ್: 49-50)** "ಅಂದು ಅವರ ಹೃದಯಗಳು ಗಂಟಲಿಗೇರಿ ಜನರು ಶೋಕಗ್ರಸ್ತರಾಗಿರುತ್ತಾರೆ." **(ಮೂಮಿನ್: 18)**

ಅಯ್ಯೋ! ಊಹಿಸಲೂ ಸಾಧ್ಯವಿದೆಯೇ? ಈ ಸ್ಥಿತಿಯಲ್ಲಿ ಎಷ್ಟು ಕಾಲ ಇರಬೇಕು? ಯಾರಿಗೂ ತಿಳಿದಿಲ್ಲ, ವಿಚಾರಣೆಗಾಗಿ ಒಂದುಗೂಡಿಸಲಾಗಿದೆ. ವಿಚಾರಣೆಗಾಗಿ ಅಲ್ಲಾಹನು ಇನ್ನೂ ಪ್ರತ್ಯಕ್ಷನಾಗಿಲ್ಲ, ಯಾವಾಗ ಪ್ರತ್ಯಕ್ಷನಾಗುತ್ತಾನೆ? ಇದು ಎಲ್ಲರ ಪ್ರಶ್ನೆ. ಈ ಅನಿಶ್ಚಿತತೆಯು ಮೇಲೆ ಸೂಚಿಸಿದ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸುತ್ತದೆ.

ವಿಚಾರಣೆ ಇನ್ನೂ ಆರಂಭಗೊಂಡಿಲ್ಲ, ಆ ವಿಚಾರಣೆಯ ಕ್ರಮ ಹೇಗಿರಬಹುದು? ಆಯಿಶಾ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು, "ಕಿಯಾಮತ್ ದಿನ ವಿಚಾರಣೆಗೆ ಗುರಿಯಾಗುವವರೆಲ್ಲರೂ ಆಪತ್ತಿಗೀಡಾದಂತೆಯೇ ಸರಿ." ನಾನು ಕೇಳಿದೆ, "ಸತ್ಯವಿಶ್ವಾಸಿಗಳನ್ನು ಸರಳವಾಗಿ ವಿಚಾರಣೆ ನಡೆಸಲಾಗುವುದೆಂದು ಅಲ್ಲಾಹನು ಹೇಳಿರುವನಲ್ಲವೇ?" ಪ್ರವಾದಿ(ಸ) ಹೇಳಿದರು, "ಅದು ಕೇವಲ ದಾಖಲೆಗಳ ಪರಿಶೀಲನೆ ಮಾತ್ರ. ಆದರೆ ಯಾರನ್ನಾದರೂ ವಿಚಾರಣೆಗೆ ಗುರಿಪಡಿಸಿದರೆ ಆತ ನಾಶವಾದಂತೆಯೇ."

ಆ ಕುರಿತು ಪ್ರವಾದಿವರ್ಯರು(ಸ) ಮತ್ತೊಮ್ಮೆ ವಿವರಿಸಿದ್ದರು. ಆಯಿಶಾ(ಅ) ಹೇಳಿದ್ದಾರೆ: ಪ್ರವಾದಿಯವರು(ಸ) ಕೆಲವು ನಮಾಝ್‌ಗಳಲ್ಲಿ, "ಅಲ್ಲಾಹನೇ! ಅತ್ಯಂತ ಸರಳವಾಗಿ ನನ್ನ ವಿಚಾರಣೆ ನಡೆಸು" ಎಂದು ಪ್ರಾರ್ಥಿಸುವುದನ್ನು ಆಲಿಸಿದೆ. ನಾನು ಕೇಳಿದೆ, "ಈ ಸರಳ ವಿಚಾರಣೆ ಎಂದರೇನು?" ಪ್ರವಾದಿ(ಸ) ಹೇಳಿದರು, "ಕರ್ಮ ಪತ್ರದ ಮೇಲೆ ಒಮ್ಮೆ ಕಣ್ಣು ಹಾಯಿಸಿ ಹಾಗೆಯೇ ಬಿಟ್ಟು ಬಿಡುವುದು. ಇದಕ್ಕೆ ವ್ಯತಿರಿಕ್ತವಾಗಿ ಅಂದು ಬೇರೆ ರೀತಿಯಲ್ಲಿ ಯಾರಾದರೂ ವಿಚಾರಣೆಗೆ ಗುರಿಯಾದರೆ, ಆಯಿಶಾ! ಆತ ನಾಶವಾದಂತೆಯೇ." **(ಅಹ್ಮದ್)**

ಈ ವಿಚಾರಣೆ ಮುಗಿಯುವ ತನಕ ಯಾರಿಗೆ ಸಮಾಧಾನವಿದ್ದೀತು? ಇತರ ಕೆಲವು ಪ್ರವಾದಿ ವಚನಗಳನ್ನು ನೋಡೋಣ-

“ನಿಮ್ಮಲ್ಲಿ ಪ್ರತಿಯೊಬ್ಬರೊಡನೆ ನಿಮ್ಮ ಪ್ರಭು, ಭಾಷಾಂತರಗಾರನಿಲ್ಲದೆ ಅಥವಾ ಯಾವುದೇ ಪರದೆಯಿಲ್ಲದೆ ನಿಮ್ಮೊಡನೆ ನೇರವಾಗಿ ಮಾತಾಡುತ್ತಾನೆ. ಆಗ ಆತ ಬಲಗಡೆಗೆ ನೋಡುತ್ತಾನೆ. ಅಲ್ಲಿ ಆತ ಮಾಡಿದ ಕರ್ಮಗಳ ಹೊರತು ಬೇರೇನೂ ಕಾಣಿಸದು. ಎಡಗಡೆಗೆ ನೋಡುತ್ತಾನೆ. ಅಲ್ಲಿಯೂ ಹಾಗೆಯೇ. ಮುಂದೆ ನೋಡುವಾಗ ನರಕ ಮಾತ್ರ ಕಾಣಿಸುತ್ತದೆ. ಆದ್ದರಿಂದ ಒಂದು ಒಣ ಖರ್ಜೂರದ ತುಂಡಿನಿಂದಾದರೂ ಅದನ್ನು ತಡೆಯಿರಿ.” (ಬುಖಾರಿ, ಮುಸ್ಲಿಮ್)

“ಕಿಯಾಮತ್ ದಿನದಂದು ಜನರನ್ನು ಮೂರು ಬಾರಿ ಅಲ್ಲಾಹನ ಮುಂದೆ ಹಾಜರುಗೊಳಿಸಲಾಗುವುದು. ಮೊದಲೆರಡು ಬಾರಿ ನೆಪ-ತಪ, ವಾದ-ವಿವಾದ ನಡೆಯುತ್ತದೆ. ಮೂರನೇ ಬಾರಿ ಕರ್ಮದಾಖಲೆ ಕೈ ಸೇರುತ್ತದೆ. ಕೆಲವರಿಗೆ ಬಲಗೈಯಲ್ಲಿ ಇನ್ನು ಕೆಲವರಿಗೆ ಎಡಗೈಯಲ್ಲಿ.” (ಅಹ್ಮದ್)

ವಿಚಾರಣೆಯು ನ್ಯಾಯನಿಷ್ಠವಾಗಿರಲಿಕ್ಕಾಗಿ ಅಲ್ಲಾಹನು ಇನ್ನೊಂದು ಗಮನಾರ್ಹ ಅಂಶವನ್ನೂ ಪರಿಗಣಿಸಿದ್ದಾನೆ. ಪ್ರತಿಯೊಬ್ಬ ವ್ಯಕ್ತಿಯನ್ನು ಬೇರೆಯವರ ಸಂಬಂಧವಿಲ್ಲದೇ ಪ್ರತ್ಯೇಕವಾಗಿ ವಿಚಾರಣೆ ನಡೆಸುವುದಿಲ್ಲ, ಹಾಗೆಯೇ ಒಂದು ಪೀಳಿಗೆಯ ವಿಚಾರಣೆಯ ಬಳಿಕ ಇನ್ನೊಂದು ಪೀಳಿಗೆಯನ್ನು ವಿಚಾರಣೆ ಮಾಡುವ ರೀತಿಯಲ್ಲಿಯೂ ಅಲ್ಲ, ಬದಲಾಗಿ, ಆರಂಭದಿಂದ ಕೊನೆಯ ವರೆಗಿನ ಎಲ್ಲ ಜನರನ್ನೂ ಪೀಳಿಗೆಯನ್ನೂ ಒಟ್ಟು ಸೇರಿಸಿ ಪ್ರತ್ಯೇಕವಾದರೂ ಏಕಕಾಲದಲ್ಲಿ ಪರಸ್ಪರ ಸಂಬಂಧವಿರಿಸಿ ವಿಚಾರಣೆ ನಡೆಸಲಾಗುವುದು. ಯಾಕೆ? ಪರಿಶೀಲಿಸೋಣ-

ಓರ್ವ ವ್ಯಕ್ತಿಯ ಜೀವನವನ್ನು ರೂಪಿಸುವ ನಿಟ್ಟಿನಲ್ಲಿ ಆತನ ಬುದ್ಧಿ, ಇಚ್ಛೆ ಮತ್ತು ವಿವೇಚನಾ ಶಕ್ತಿ ಮಾತ್ರವಲ್ಲ ಇತರ ಕೆಲವು ಪ್ರಮುಖ ಅಂಶಗಳೂ ಪ್ರಭಾವ ಬೀರುತ್ತದೆ ಎಂಬುದು ಒಂದು ವಾಸ್ತವಿಕತೆಯಾಗಿದೆ. ಉದಾ: ಇಲ್ಲಿ ಅನೇಕ ಧರ್ಮೀಯರಿದ್ದಾರೆ. ಅವರು ಅದನ್ನು ನೇರವಾಗಿ ಕಲಿತು, ಸತ್ಯವೆಂದು ಮನಗಂಡ ಬಳಿಕ ಅಂಗೀಕರಿಸಿದ್ದಲ್ಲ, ಬದಲಾಗಿ 90%ಕ್ಕಿಂತ ಅಧಿಕ ಮಂದಿ ತಂದೆ ತಾಯಿಗಳ ಶಿಕ್ಷಣದಿಂದ ಆ ಧರ್ಮವನ್ನು ಅಂಗೀಕರಿಸಿದವರಾಗಿರುತ್ತಾರೆ. ಹಾಗಾದರೆ ಅದರಿಂದಾದ ಒಳಿತು-ಕೆಡುಕುಗಳ ಬಗ್ಗೆ ವಿಚಾರಣೆ ನಡೆಸುವಾಗ ಅವರ ತಂದೆ ತಾಯಿಗಳನ್ನೂ ಹಾಜರುಪಡಿಸಬೇಕಾಗುತ್ತದೆ. ಇದು ಆ ತಂದೆ ತಾಯಿಗಳಿಗೂ ಅನ್ವಯವಾಗುತ್ತದಲ್ಲವೇ. ಅವರ ವಿಚಾರಣೆ ನಡೆಸುವಾಗ ಅವರ ತಂದೆ ತಾಯಿಗಳನ್ನೂ ಹಾಜರು ಪಡಿಸಬೇಕಾಗುತ್ತದೆ. ಹೀಗೆ ಈ ಸರಣಿ ಬುಡದ ತನಕ ಸಾಗುತ್ತದೆ. ತಂದೆ ತಾಯಂದಿರಿಂದ ನಾವು ಪಡೆದಂತೆಯೇ ಅನೇಕ ವಿಷಯಗಳನ್ನು ನಾವು ನಮ್ಮ ಮಕ್ಕಳಿಗೆ ನೀಡುತ್ತೇವೆ. ಹಾಗಾದರೆ ನಮ್ಮ ವಿಚಾರಣೆಯ ವೇಳೆ ನಮ್ಮ

ಸಂತಾನಗಳೂ ಇರಬೇಕಾಗಿದೆ. ಅವರ ವಿಚಾರಣೆಗೆ ಅವರ ಮಕ್ಕಳೂ. ಹೀಗೆ ಅದು ಬುಡತನಕ ಸಾಗುತ್ತದೆ.

"ಎಲ್ಲ ಮಕ್ಕಳೂ ಶುದ್ಧ ಸ್ವಭಾವದಲ್ಲಿ ಜನಿಸುತ್ತಾರೆ. ತರುವಾಯ ಆತನ ತಂದೆ ತಾಯಿಗಳು ಆತನನ್ನು ಯಹೂದಿ, ಕ್ರೈಸ್ತ ಮತ್ತು ಮಜೂಸಿಯಾಗಿ ಮಾಡುತ್ತಾರೆ" ಎಂಬ ಪ್ರವಾದಿವಚನ ಇಲ್ಲಿ ಗಮನಾರ್ಹ. ಪೀಳಿಗೆಗಳನ್ನು ನೋಡಿದರೂ ಇದೇ ಸ್ಥಿತಿ ಕಂಡು ಬರುತ್ತದೆ. ಯಾವುದೇ ಪೀಳಿಗೆಯ ಸಂಸ್ಕೃತಿಯಲ್ಲಿ ಅದರ ಹಿಂದಿನ ಪೀಳಿಗೆಯು ಪ್ರಭಾವ ಬೀರಿರುತ್ತದೆ. ಪ್ರಸಕ್ತ ಪೀಳಿಗೆಯು ಮುಂದಿನ ಪೀಳಿಗೆಯ ಮೇಲೆಯೂ ಅದೇ ರೀತಿ ಪ್ರಭಾವ ಬೀರುವುದು. ಹೀಗೆ ಮಾನವ ಕುಲವು ಭೂತ-ಭವಿಷ್ಯಗಳೊಂದಿಗೆ ಅಭೇದ್ಯ ಸಂಬಂಧ ಹೊಂದಿದೆ. ಓರ್ವ ವ್ಯಕ್ತಿ ಅಥವಾ ಸಮೂಹವು ಸಾರ್ವಜನಿಕ ಹಿತಾಸಕ್ತಿಯ ಯಾವುದಾದರೂ ಉತ್ತಮ ಕಾರ್ಯಗಳನ್ನು ಮಾಡಿದರೆ ಅದರ ಸತ್ಫಲವು ಎಷ್ಟೋ ಶತಮಾನಗಳ ತನಕ ಅಥವಾ ಅಂತ್ಯ ದಿನದ ತನಕವೂ ಉಳಿಯಬಹುದು. ದುಷ್ಕಾರ್ಯಗಳ ದುಷ್ಪರಿಣಾಮವೂ ಅಷ್ಟೆ. ಸ್ವತಃ ಮಾಡಿದ ಅಪರಾಧಗಳು ಮಾತ್ರವಲ್ಲದೇ ಆ ಪ್ರಕಾರ ವರ್ತಿಸಿದ ಎಲ್ಲ ಅಪರಾಧಿಗಳಿಗೆ ಸಮಾನವಾದ ಅಪರಾಧಗಳನ್ನೂ ವಹಿಸ ಬೇಕಾಗುವುದೆಂಬ ಪ್ರವಾದಿವಚನ ಪ್ರಸಿದ್ಧವಾಗಿದೆ. ಈ ವಿಷಯವನ್ನು ಅತ್ಯಂತ ಸ್ಪಷ್ಟ ವಾಗಿ ತಿಳಿಸುವ ಇನ್ನೊಂದು ಹದೀಸನ್ನೂ ಇಲ್ಲಿ ನೀಡುತ್ತೇನೆ: ಭೂಮಿಯಲ್ಲಿ ಯಾವನೂ ಅಕ್ರಮವಾಗಿ ವಧಿಸಲ್ಪಡುವುದಿಲ್ಲ, ಆತನ ರಕ್ತದ ಒಂದಂಶವು ಆದಮರ ಪ್ರಥಮ ಪುತ್ರನ ಮೇಲೆ ಬೀಳದೆ ಇರುವುದಿಲ್ಲ, ಏಕೆಂದರೆ, ಇಲ್ಲಿ ಆತನೇ ಪ್ರಥಮವಾಗಿ ಕೊಲೆಯ ಅಪರಾಧವನ್ನು ಮಾಡಿದ್ದಾನೆ.

ಒಟ್ಟಿನಲ್ಲಿ, ಪೂರ್ವಾಪರ ಸಂಬಂಧವಿಲ್ಲದೆ ನಡೆಸುವ ವಿಚಾರಣೆಯು ಅಪೂರ್ಣ ವಾಗಿರುವುದರಿಂದ ಎಲ್ಲ ಮಾನವರನ್ನೂ ಅವರಿಗೆ ಸಂಬಂಧಿಸಿದ ಇತರೆಲ್ಲ ವಸ್ತುಗಳನ್ನೂ ಒಟ್ಟು ಸೇರಿಸಿದ ಬಳಿಕವೇ ಅಲ್ಲಾಹ್ ವಿಚಾರಣೆ ನಡೆಸುವನು. "ಅಲ್ಲಾಹನ ವೈರಿಗಳು ನರಕದಲ್ಲಿ ಒಂದುಗೂಡಿಸುವ ದಿನ! ಮೊದಲು ಬಂದವರನ್ನು ಕೊನೆಯಾತ ಬರುವ ತನಕ ತಡೆ ಹಿಡಿಯಲಾಗುವುದು. ಹೀಗೆ ಎಲ್ಲರೂ ಬಂದು ತಲಪಿದಾಗ..." **(ಹಾಮೀಮ್ ಅಸ್ಸಜ್ದ: 19-20)** ಎಂಬ ವಾಕ್ಯವು ಅದನ್ನೇ ಸೂಚಿಸುತ್ತದೆ.

ಹಿಂಗಾಮಿಗಳು ಮುಂಗಾಮಿಗಳ ಕುರಿತು, "ಪ್ರಭೂ, ಇವರೇ ನಮ್ಮನ್ನು ದಾರಿ ತಪ್ಪಿಸಿದವರು, ಆದ್ದರಿಂದ ನೀನು ಅವರಿಗೆ ಇಮ್ಮಡಿ ಶಿಕ್ಷೆ ನೀಡು!" ಎಂದು ನರಕದಲ್ಲಿ ಪ್ರಾರ್ಥಿಸುವಾಗ ಎಲ್ಲರಿಗೂ ಇಮ್ಮಡಿ ಶಿಕ್ಷೆಯಿದೆ ಎಂದು ಅಲ್ಲಾಹನು ಉತ್ತರಿಸುವನೆಂಬ **(ಅಲ್ ಆಅ್‌ರಾಫ್: 38)** ವಾಕ್ಯವೂ ಈ ವಾಸ್ತವಿಕತೆಯನ್ನೇ ಸೂಚಿಸುತ್ತದೆ.

ಯಾಕೆ ಹೀಗೆ ವಿಚಾರಣೆ ನಡೆಸಲಾಗುತ್ತದೆ? ಪ್ರತಿಯೊಬ್ಬರ ಕುರಿತು ಅಲ್ಲಾಹನಿಗೆ ಸೂಕ್ಷ್ಮ ಜ್ಞಾನವಿದೆಯಲ್ಲವೇ? ಆ ಪ್ರಕಾರ ತೀರ್ಮಾನಿಸಿಬಿಟ್ಟರೆ ಸಾಲದೇ? ಇಷ್ಟೊಂದು ಸಿದ್ಧತೆಯೇಕೆ? ಇದು ಸಹಜ ಪ್ರಶ್ನೆಯಾಗಿದೆ. ಅಲ್ಲಾಹನಿಗೆ ಸೂಕ್ಷ್ಮ ಜ್ಞಾನವಿದೆ ಎಂಬುದು ನಿಜ. ತೀರ್ಮಾನ ಕೈಗೊಳ್ಳುವುದಕ್ಕೆ ಅಭ್ಯಂತರವಿಲ್ಲ. ಆದರೆ ಆತ ಇನ್ನೊಂದು ಕಾರ್ಯವನ್ನು ಉದ್ದೇಶಿಸಿದ್ದಾನೆ. ಅರ್ಥಾತ್, ಅಲ್ಲಾಹ್ ಕೈಗೊಂಡ ತೀರ್ಮಾನವೂ ಆ ಬಳಿಕದ ಪ್ರತಿ ಫಲಗಳೂ (ಪುರಸ್ಕಾರವಾಗಲಿ ಶಿಕ್ಷೆಯಾಗಲಿ) ಮಾನವನು ಮಾಡಿದ ಕರ್ಮಗಳ ವಾಸ್ತವಿಕ ಪರಿಣಾಮವಾಗಿದೆ. ಅನ್ಯಥಾ ಯಾರಿಗೂ ಯಾವುದೇ ಅನ್ಯಾಯವನ್ನು ಅಲ್ಲಾಹ್ ಮಾಡಿಲ್ಲವೆಂದು ಮಾನವರಿಗೆ ಸಂಪೂರ್ಣ ಮನವರಿಕೆ ಮಾಡಿಸಬೇಕಾಗಿದೆ. ಅಲ್ಲಾಹ್ ನನ್ನೊಡನೆ ಅನ್ಯಾಯ ತೋರಿದನೆಂದು ಆತ ಸರ್ವಥಾ ಹೇಳುವಂತಾಗಬಾರದು; ಮಾತ್ರವಲ್ಲ ಹಾಗೆ ತೋಚಲೂ ಬಾರದು. ಇಂತಿಂತಹ ಕಾರಣಗಳನ್ನು ನನಗೆ ಹೇಳಲಿಕ್ಕಿತ್ತು. ಅದಕ್ಕೆ ಅವಕಾಶ ದೊರೆಯಲಿಲ್ಲ ಎಂಬ ಕಾರಣವೂ ಉಳಿಯಬಾರದು. ನರಕದ ಕಠಿಣ ಶಿಕ್ಷೆ ಅನುಭವಿಸುವಾಗಲೂ ಆತನಿಗೆ ತನ್ನನ್ನೇ ಹೊರತು ಅಲ್ಲಾಹನನ್ನು ದೂರುವ ಯಾವೊಂದು ಅವಕಾಶವೂ ಇರಬಾರದು. ಆದಕ್ಕಾಗಿ ಇಷ್ಟೊಂದು ವ್ಯಾಪಕ ಏರ್ಪಾಡನ್ನು ಮಾಡಲಾಗಿದೆ. ಅಲ್ಲಾಹನ ನ್ಯಾಯಾಲಯವು ಎಷ್ಟೊಂದು ಉನ್ನತವಾಗಿರಬಹುದು!

ಸತ್ಯವಿಶ್ವಾಸಿಗಳ ಸ್ಥಿತಿ

ಗೋರಿಗಳಿಂದ ಹೊರಬಂದ ಕೂಡಲೇ ದೇವಚರರು ಅವರನ್ನು ಸ್ವಾಗತಿಸುತ್ತಾರೆ. ದೇವಚರರ ಜತೆ ಅವರು ಅತಿಥಿಗಳಂತೆ ಅಲ್ಲಾಹನ ಬಳಿಗೆ ಹೊರಡುತ್ತಾರೆ ಮತ್ತು ಎಲ್ಲ ರೀತಿಯ ವಿಪತ್ತುಗಳಿಂದ ಸುರಕ್ಷಿತರಾಗಿರುತ್ತಾರೆಂದು ಈ ಹಿಂದೆ ಹೇಳಲಾಗಿದೆ. ಆದರೆ ಮಹ್‌ಶರದಲ್ಲಿಯೂ ಅವರಿಗೆ ಎಲ್ಲ ರೀತಿಯ ಸುಖ ಸೌಕರ್ಯಗಳನ್ನು ಒದಗಿಸಲಾಗುವುದು. ಬಹಳ ಗೌರವದಿಂದ ಅವರನ್ನು ಅಲ್ಲಿ ಸತ್ಕರಿಸಲಾಗುವುದು. ಅಂದಿನ ಎಲ್ಲ ಸಂಕಷ್ಟಗಳೂ ಅಪಾಯಗಳೂ ಸತ್ಯವಿಶ್ವಾಸಿಯ ಮಟ್ಟಿಗೆ ತೀರಾ ಕ್ಷುಲ್ಲಕವಾಗಿರುವುವು. ಅವೆಲ್ಲವೂ ಇಹಲೋಕದಲ್ಲಿ ಒಂದು ಹೊತ್ತಿನ ಕಡ್ಡಾಯ ನಮಾಝ್ ನಿರ್ವಹಿಸುವುದಕ್ಕಿಂತ ಹಗುರವಾಗಿ ತೋರುವುದು. (ಅಹ್ಮದ್)

ಅದಲ್ಲದೇ, ಅವರ ಪರವಾಗಿ ವಾದಿಸಲು ಕುರ್‌ಆನ್ ಕೂಡಾ ಅಲ್ಲಿ ಹಾಜರಿರುವುದು. ಪ್ರವಾದಿ(ಸ) ಹೇಳಿದ್ದಾರೆ, "ಕಿಯಾಮತ್ ದಿನದಂದು ಕುರ್‌ಆನ್, ಅದಕ್ಕೆ ಅನುಸಾರವಾಗಿ ವರ್ತಿಸಿದವರ ಜತೆ ಹಾಜರಾಗುವುದು. ಸೂರಃ ಅಲ್ ಬಕರಃ ಮತ್ತು ಸೂರಃ ಆಲಿ ಇಮ್ರಾನ್ ಮುಂಚೂಣಿಯಲ್ಲಿರುವುದು." ನವ್ವಾಸ್ ಹೇಳುತ್ತಾರೆ: ಅವುಗಳಿಗೆ

ಪ್ರವಾದಿಯವರು(ಸ) ಹೇಳಿದ ಮೂರು ಉದಾಹರಣೆಗಳನ್ನು ನಾನು ಈಗಲೂ ಮರೆತಿಲ್ಲ. ಪ್ರವಾದಿ(ಸ) ಹೇಳಿದರು, "ಅವೆರಡೂ ಮೋಡದ ಪದರಗಳಂತೆ ಅಥವಾ ಎರಡು ಕರಿ ಕೊಡೆಗಳಂತೆ (ಎರಡರ ಮಧ್ಯೆಯೂ ಬೆಳಕಿದೆ) ಅಥವಾ ವಾಯು ಮಂಡಲದಲ್ಲಿ ದಟ್ಟವಾಗಿ ನೆರೆದ ಪಕ್ಷಿಗಳ ಎರಡು ಗುಂಪುಗಳಂತಿರುವುದು. ಅವೆರಡೂ ಇವರಿಗಾಗಿ ವಾದಿಸುವುದು." (ಮುಸ್ಲಿಮ್)

ಆದರೆ ಮಹ್‌ಶರದ ಅನಿಶ್ಚಿತತೆಯು ಸತ್ಯವಿಶ್ವಾಸಿಗಳನ್ನು ಸ್ವಲ್ಪವಾದರೂ ಕಾಡದೆ ಇರದು. ಗೋರಿಯಲ್ಲಿ ಪ್ರಶ್ನೋತ್ತರ ಮುಗಿದ ಕೂಡಲೇ ಅವರು ಈ ನಿಮಿಷವೇ ಕಿಯಾಮತ್ ಬರಲಿ, ನಾನು ನನ್ನ ಕುಟುಂಬಾದಿಗಳ ಜತೆ ಸ್ವರ್ಗದಲ್ಲಿ ಸುಖದಿಂದ ಬಾಳಬಹುದಲ್ಲವೇ ಎಂದು ಆಶಿಸುತ್ತಾರೆ. ಮಹ್‌ಶರದಲ್ಲಿ ಎಲ್ಲ ಅನುಕೂಲತೆಗಳಿದ್ದರೂ ಇದು ಆ ಮಹಾ ಗುರಿಯಾಗಿರುವ ಸ್ವರ್ಗದ ಹಾದಿಯಾಗಿದೆ. ವಿಚಾರಣೆ, ಸೇತುವೆ ದಾಟುವುದು ಇತ್ಯಾದಿ ಕೆಲವು ಮಹಾಘಟನೆಗಳು ಇನ್ನಷ್ಟೇ ನಡೆಯಬೇಕಾಗಿದೆ. ಎಷ್ಟೇ ಆತ್ಮವಿಶ್ವಾಸವಿದ್ದರೂ ಅಂತಹ ಗಂಭೀರ ಘಟನೆಗಳಲ್ಲಿ ಏನಾದೀತೆಂಬ ಭೀತಿ ಅವರನ್ನು ಕಾಡುತ್ತಿರುತ್ತದೆ. ಆಗ ಸ್ವಾಭಾವಿಕವಾಗಿ ಕಳವಳವುಂಟಾಗುತ್ತದೆ. ಅದಲ್ಲದೆ ಅತ್ತ ಕಡೆ ಸಂಭವಿಸುತ್ತಿರುವುದೆಲ್ಲವೂ ಅವರಿಗೆ ಕಾಣಿಸುತ್ತದೆ. ಹೀಗಿರುತ್ತಾ, ಏನೂ ಸಂಭವಿಸದೆ, ಅಂತ್ಯ ಕಾಣದೆ, ಮುಂದುವರಿಯುತ್ತಿರುವ ಈ ಅನಿಶ್ಚಿತತೆಯಿಂದ ಅವರೂ ತಲ್ಲಣ ಗೊಳ್ಳುತ್ತಾರೆ. ಹೀಗೆ ಸತ್ಯವಿಶ್ವಾಸಿಗಳೂ ಅಪರಾಧಿಗಳೂ ವಿವಿಧ ರೀತಿಯಿಂದ ಸಂಕಟ ಪಡುತ್ತಿದ್ದಾರೆ. ನರಕಕ್ಕೆ ಹೋದರೂ ಚಿಂತಿಲ್ಲ, ಇಲ್ಲಿಂದ ಹೇಗಾದರೂ ಬಿಡುಗಡೆಯಾದರೆ ಸಾಕೆಂದೂ ಕೆಲವರು ಹೇಳಿ ಬಿಡುತ್ತಾರೆ. ಆ ಪರಿಸ್ಥಿತಿಯು ಅಷ್ಟೊಂದು ಭಯಾನಕ ವಾಗಿರುವುದು. ಇಲ್ಲಿಂದ ಪಾರಾಗುವುದು ಹೇಗೆ? ವಿಶ್ವಾಸಿಗಳು ಗಂಭೀರವಾಗಿ ಆಲೋಚಿಸುತ್ತಿದ್ದಾರೆ. ಅದೋ ಅವರು ಸಮಾಲೋಚನೆ ನಡೆಸುತ್ತಿದ್ದಾರೆ.

ಉತ್ತಮ ಶಿಫಾರಸು

ಪ್ರವಾದಿ(ಸ) ಹೇಳಿದರು: ಕಿಯಾಮತ್ ದಿನದಂದು ಅಲ್ಲಾಹ್ ಮುಂದಿನವರನ್ನೂ ಹಿಂದಿನವರನ್ನೂ (ಎಲ್ಲರನ್ನೂ) ಒಂದೇ ಮೈದಾನದಲ್ಲಿ ಒಟ್ಟು ಸೇರಿಸುತ್ತಾನೆ. ಎಲ್ಲಿಂದ ಕರೆದರೂ ಎಲ್ಲರಿಗೂ ಕೇಳಿಸುವ, ಎಲ್ಲಿಂದ ನೋಡಿದರೂ ಎಲ್ಲರನ್ನೂ ಕಾಣುವ ರೀತಿಯಲ್ಲಿ ಸ್ಥಳವನ್ನು ವ್ಯವಸ್ಥೆಗೊಳಿಸಲಾಗಿದೆ. ಸೂರ್ಯನು ಬಹಳ ಸಮೀಪದಲ್ಲಿರುವುದು. ಸೃಷ್ಟಿಗಳು ಸಹಿಸಲಾಗದ, ತಾಳಲಾಗದ ನೋವು ಅನುಭವಿಸುತ್ತಿದ್ದಾರೆ. ಶೋಕಗ್ರಸ್ತ ರಾಗಿದ್ದಾರೆ. ಅವರು ಪರಸ್ಪರ ಹೇಳಿಕೊಳ್ಳುತ್ತಾರೆ, ಅಯ್ಯೋ, ನಾವು ಎಂತಹ ದುರಂತಕ್ಕೆ

ಈಡಾಗಿಬಿಟ್ಟಿದ್ದೇವೆ. ಎಂತಹ ಕಷ್ಟಗಳನ್ನು ಅನುಭವಿಸುತ್ತಿದ್ದೇವೆ! ಇದೆಲ್ಲವನ್ನೂ ನೀವು ನೋಡುತ್ತಿದ್ದೀರಲ್ಲವೇ. ಈ ದುರವಸ್ಥೆಯಿಂದ ನಮ್ಮನ್ನು ಪಾರುಗೊಳಿಸಲು ಯಾರಾದರೂ ಶಿಫಾರಸುದಾರರಿದ್ದಾರೆಯೇ ಎಂದು ನಮಗೆ ನೋಡಬಾರದೇ? ಆಗ ಕೆಲವರು ಹೇಳುತ್ತಾರೆ, ನಾವು ಆದಮ್‌ರ(ಅ) ಬಳಿಗೆ ಹೋಗಿ ನೋಡೋಣ.

ಹಾಗೆಯೇ ಅವರು ಆದಮ್‌ರ(ಅ) ಬಳಿ ಹೋಗಿ ಹೀಗೆ ಹೇಳುತ್ತಾರೆ: ಓ ಆದಮರೇ(ಅ)! ನೀವು ಮಾನವರ ತಂದೆಯಾಗಿರುವಿರಿ. ನಿಮ್ಮನ್ನು ಅಲ್ಲಾಹನು ತನ್ನ ಸ್ವಹಸ್ತದಿಂದ ಸೃಷ್ಟಿಸಿದನು. ಆತನ ರೂಹ್‌ನ ಒಂದಂಶವನ್ನು ನಿಮ್ಮಲ್ಲಿ ಊದಿದನು. ನಿಮಗೆ ಸಾಷ್ಟಾಂಗವೆರಗುವಂತೆ ದೇವಚರರಿಗೆ ಆಜ್ಞಾಪಿಸಿದನು. ಅವರು ನಿಮಗೆ ಸಾಷ್ಟಾಂಗವೆರಗಿದರು. (ಇಂತಹ ಶ್ರೇಷ್ಠತೆಗಳಿರುವುದರಿಂದ) ನೀವು ಪ್ರಭುವಿನ ಬಳಿ ಹೋಗಿ ನಮ್ಮ ಪರವಾಗಿ ಶಿಫಾರಸು ಮಾಡಿರಿ. ನಮ್ಮ ಈ ದುರವಸ್ಥೆ–ಸಂಕಟಗಳನ್ನು ನೀವು ನೋಡುತ್ತಿರುವಿರಲ್ಲವೇ. ಆಗ ಆದಮ್(ಅ) ಹೇಳುತ್ತಾರೆ: ನಮ್ಮ ಪ್ರಭು ಇಂದು ಅತ್ಯಂತ ಕುಪಿತನಾಗಿದ್ದಾನೆ. ಇದಕ್ಕಿಂತ ಮುಂಚೆ ಆತ ಹೀಗೆ ಕೋಪಿಸಿಕೊಂಡಿಲ್ಲ, ಅಷ್ಟೊಂದು ಕೋಪೋದ್ರಿಕ್ತನಾಗಿದ್ದಾನೆ. ಆ ಮರದ ಬಳಿ ಹೋಗಬಾರದೆಂದು ಆತ ನನ್ನನ್ನು ತಡೆದಿದ್ದ, ನಾನು ಅದಕ್ಕೆ ವಿರುದ್ಧವಾಗಿ ವರ್ತಿಸಿದೆ. ನನಗೆ ನನ್ನ ಬಗ್ಗೆಯೇ ಭೀತಿಯಿದೆ. ನನ್ನ ಸ್ಥಿತಿ ಏನಾಗಿರಬಹುದು? ಅಯ್ಯೋ ಏನಾಗಿರಬಹುದು ನನ್ನ ಸ್ಥಿತಿ! ನೀವು ಬೇರೆ ಯಾರನ್ನಾದರೂ ಕೇಳಿ ನೋಡಿರಿ, ನೂಹ್‌ರ ಬಳಿ ಹೋಗಿರಿ.

ಹಾಗೆಯೇ ಅವರು ನೂಹ್‌ರ(ಅ) ಬಳಿ ಹೋಗಿ ಹೇಳುತ್ತಾರೆ: ನೂಹ್‌ರೇ(ಅ)! ನೀವು ಭೂಮಿಗೆ ಕಳುಹಿಸಲ್ಪಟ್ಟ ಪ್ರಥಮ ಸಂದೇಶವಾಹಕರಾಗಿದ್ದೀರಿ. ಅಲ್ಲಾಹನು ನಿಮ್ಮನ್ನು ಕೃತಜ್ಞ ದಾಸನೆಂದು ವರ್ಣಿಸಿರುತ್ತಾನೆ. ಆದ್ದರಿಂದ ನಮಗಾಗಿ ಒಮ್ಮೆ ಶಿಫಾರಸ್ಸು ಮಾಡಬೇಕು. ಅವರು ಹೇಳುತ್ತಾರೆ: ಇಂದು ನನ್ನ ಪ್ರಭು ಅತ್ಯಂತ ಕೋಪಿಷ್ಠನಾಗಿದ್ದಾನೆ. ಸಾಂದರ್ಭಿಕವಾಗಿ ಒಮ್ಮೆ ಪ್ರಾರ್ಥಿಸುವ ಹಕ್ಕನ್ನು ಆತನು ನನಗೆ ನೀಡಿದ್ದಾನೆ ನಿಜ. ಆದರೆ ನಾನು ಅದನ್ನು ನನ್ನ ಜನತೆಯ ವಿರುದ್ಧ ಬಳಸಿ ಬಿಟ್ಟಿದ್ದೇನೆ! ನನಗೆ ನನ್ನ ಬಗ್ಗೆಯೇ ಹೆದರಿಕೆಯಾಗುತ್ತಿದೆ. ನೀವು ಇಬ್ರಾಹೀಮ್‌ರ(ಅ) ಬಳಿಗೆ ಹೋಗಿರಿ.

ಅವರು ಇಬ್ರಾಹೀಮ್‌ರ(ಅ) ಬಳಿ ಹೋಗಿ ಹೇಳುತ್ತಾರೆ: ನೀವು ಭೂಮಿಯಲ್ಲಿ ಅಲ್ಲಾಹನ ಪ್ರವಾದಿ ಮತ್ತು ಆತನ ಆಪ್ತ ಮಿತ್ರರಾಗಿದ್ದೀರಿ... ನಾನು ಮೂರು ಬಾರಿ (ಪ್ರತ್ಯಕ್ಷದಲ್ಲಿ ಸುಳ್ಳೆಂದು ಭಾಸವಾಗುವ) ಸುಳ್ಳು ಹೇಳಿದ್ದೇನೆ... ನನ್ನ ವಿಷಯದ ಬಗ್ಗೆಯೇ ನಾನು ಚಿಂತಿತನಾಗಿದ್ದೇನೆ. ನೀವು ಮೂಸಾರನ್ನು(ಅ) ಕೇಳಿ ನೋಡಿ. ಅಂತೆಯೇ ಅವರು ಮೂಸಾರ(ಅ) ಬಳಿ ಹೋಗಿ ಹೇಳುತ್ತಾರೆ: ನೀವು ಅಲ್ಲಾಹನ

ಪ್ರವಾದಿಯಾಗಿದ್ದೀರಿ. ಆತನ ರಾಯಭಾರ ಮತ್ತು ನೇರ ಸಂಭಾಷಣೆಯಿಂದ ಆತನು ನಿಮ್ಮನ್ನು ಇತರೆಲ್ಲರಿಗಿಂತ ಶ್ರೇಷ್ಠಗೊಳಿಸಿದ್ದಾನೆ. ಆದ್ದರಿಂದ... ನಾನೋರ್ವನನ್ನು ಅಲ್ಲಾಹನ ಆಜ್ಞೆಯಿಲ್ಲದೆ ಕೊಂದುಬಿಟ್ಟಿದ್ದೇನೆ. ನೀವು ಈಸಾರ(ಅ) ಬಳಿ ಹೋಗಿರಿ. ಅವರು ಈಸಾರ(ಅ) ಬಳಿ ಹೋಗಿ ಹೇಳುತ್ತಾರೆ: ಓ ಈಸಾ(ಅ), ನೀವು ಅಲ್ಲಾಹನ ಪ್ರವಾದಿ ಯಾಗಿದ್ದೀರಿ. ಮರ್ಯಮ್‌ರಲ್ಲಿ(ಅ) ಇರಿಸಲಾದ ಅಲ್ಲಾಹನ ವಚನ ಮತ್ತು ಆತನಿಂದ ಬಂದ ಆತ್ಮವೂ ಆಗಿದ್ದೀರಿ. ನೀವು ಜನರೊಡನೆ ತೊಟ್ಟಿಲಿ ನಲ್ಲಿಯೇ ಮಾತನಾಡಿದ್ದೀರಿ. ಆದ್ದರಿಂದ ನಮಗಾಗಿ ಶಿಫಾರಸು ಮಾಡಬಾರದೇ? ಈಸಾರಿಗೆ(ಅ) ಹೇಳುವಂತಹ ಯಾವುದೇ ವಿಶೇಷ ಘಟನೆಯಿರಲಿಲ್ಲ ನಾನು ನನ್ನ ಬಗ್ಗೆಯೇ ವ್ಯಾಕುಲನಾಗಿದ್ದೇನೆ. ನೀವು ಮುಹಮ್ಮದ್‌ರ(ಸ) ಬಳಿ ಹೋಗಿರಿ ಎಂದು ಅವರು ಹೇಳುತ್ತಾರೆ.

ಹಾಗೆಯೇ ಅವರು ನನ್ನ ಬಳಿ ಬಂದು ಹೇಳುತ್ತಾರೆ: ಓ ಮುಹಮ್ಮದ್(ಸ)ರೇ, ನೀವು ಅಲ್ಲಾಹನ ಅಂತ್ಯಪ್ರವಾದಿಯಾಗಿದ್ದೀರಿ. ಆತನು ನಿಮ್ಮ ಹಿಂದಿನ ಮತ್ತು ಮುಂದಿನ ಎಲ್ಲ ಪಾಪಗಳನ್ನೂ ಕ್ಷಮಿಸಿಬಿಟ್ಟಿದ್ದಾನೆ. ನಮಗಾಗಿ ಒಮ್ಮೆ ಶಿಫಾರಸು ಮಾಡಿ. ಆಗ ನಾನು ದಿವ್ಯ ಸಿಂಹಾಸನದ ಬಳಿ ಹೋಗಿ ಸಾಷ್ಟಾಂಗವೆರಗುತ್ತೇನೆ. ಅಲ್ಲಾಹನ ಮಹಾನತೆ ಯನ್ನು ಹೊಗಳಿ, ಆತನ ಗುಣಗಾನ ಮಾಡುವುದಕ್ಕಾಗಿ. ಈ ತನಕ ಯಾರಿಗೂ ದೊರೆ ಯದ ಒಂದು ವಿಶೇಷ ವಿಧಾನವನ್ನು ಆತನು ನನಗೆ ತೋರಿಸಿ ಕೊಡುತ್ತಾನೆ. ನಂತರ ಅಲ್ಲಾಹ್ ಹೇಳುತ್ತಾನೆ: ಓ ಮುಹಮ್ಮದ್(ಸ), ತಲೆಯೆತ್ತಿರಿ, ಕೋರಿಕೆಯನ್ನು ತಿಳಿಸಿರಿ, ನೀಡುತ್ತೇನೆ. ಶಿಫಾರಸು ಮಾಡಿರಿ, ಅಂಗೀಕರಿಸುತ್ತೇನೆ. (ಮುಸ್ಲಿಮ್) ಆಗ ನಾನು ಹೇಳು ತ್ತೇನೆ: ಪ್ರಭೂ, ಒಂದು ಶಿಫಾರಸಿನ ಹಕ್ಕನ್ನು ನೀನು ನನಗೆ ವಾಗ್ದಾನ ಮಾಡಿರುವೆ. ನಿನ್ನ ಸೃಷ್ಟಿಗಳಿಗಾಗಿ ನೀನು ಆ ಶಿಫಾರಸನ್ನು ಸ್ವೀಕರಿಸು! ಕೂಡಲೇ ಅವರ ವಿಚಾರಣೆ ನಡೆಸಿ ತೀರ್ಮಾನ ಮಾಡು! ಅಲ್ಲಾಹ್ ಹೇಳುತ್ತಾನೆ: ತೀರ್ಮಾನ ಮಾಡುತ್ತೇನೆ. ಹಾಗೆಯೇ ನಾನು ಮರಳಿ ಬಂದು ಜನರ ಜೊತೆ ಮಹ್‌ಶರದಲ್ಲಿ ನಿಲ್ಲುತ್ತೇನೆ. (ಹದೀಸುಸ್ಸೂರ್)

ಪ್ರವಾದಿವರ್ಯರು(ಸ) ಅಲ್ಲಾಹನ ಮುಂದೆ ಶಿಫಾರಸು ಸಲ್ಲಿಸಿ ಮರಳಿ ಬಂದಿದ್ದಾರೆ. ಜನರ ಜತೆ ಅವರು ನಿಂತಿದ್ದಾರೆ. ಪ್ರಭು ಇನ್ನೂ ಪ್ರತ್ಯಕ್ಷಗೊಂಡಿಲ್ಲ, ಎಲ್ಲರೂ ಅಸಹನೆಯಿಂದ ಕಾಯುತ್ತಿದ್ದಾರೆ. ಹೀಗೆ ಎಷ್ಟು ಕಾಲ ನಿಲ್ಲಬೇಕಾದೀತು? ಅಲ್ಲಾಹನೇ ಬಲ್ಲ.

ಶಿಫಾರಸಿನ ಸ್ವರೂಪ

ಶಿಫಾರಸು, ಇದು ಪ್ರಾಚೀನ ಕಾಲದಿಂದಲೇ ಜನರು ಭಾರೀ ತಪ್ಪು ತಿಳುವಳಿಕೆ ಹೊಂದಿರುವ ಸಮಸ್ಯೆಯಾಗಿದೆ. ದೇವಚರರು, ಪ್ರವಾದಿಗಳು, ಮಹಾತ್ಮರು ಮುಂತಾದ

ಅಲ್ಲಾಹನ ಸಾಮಿಪ್ಯ ಸಿದ್ಧಿಸಿದ ಯಾರದಾದರೂ ಶಿಫಾರಸ್ಸು ಪ್ರಕಾರ ಪರಲೋಕದಲ್ಲಿ ರಕ್ಷಣೆ ಪಡೆಯಬಹುದೆಂಬ ನಂಬಿಕೆಯಿಂದ ಅನೇಕ ಮಂದಿ ವಂಚನೆಗೀಡಾಗಿದ್ದಾರೆ. ಹಲವರು ದೇವ ಸಹಭಾಗಿತ್ವದತ್ತ (ಶಿರ್ಕ್‌ನತ್ತ) ಸಾಗಿದ್ದಾರೆ. ಮಹಾಧೂರ್ತರಿಂದ ಹಿಡಿದು ಮುಗ್ಧ ಮನಸ್ಸಿನ ಜನಸಾಮಾನ್ಯರ ವರೆಗೂ ಅನೇಕರು ಈ ಮೋಸದ ಬಲೆಗೆ ಬಿದ್ದಿದ್ದಾರೆ. ಆದ್ದರಿಂದ ಈ ಕುರಿತು ಕೆಲವು ಮೂಲಭೂತ ವಿಷಯಗಳನ್ನು ಇಲ್ಲಿ ಪ್ರಸ್ತಾವಿಸುವುದು ಸೂಕ್ತವೆನಿಸುತ್ತದೆ.

1. 'ನಾನು ಶಿಫಾರಸಿಗಾಗಿ ಬಂದಿದ್ದೇನೆ' ಎನ್ನುತ್ತಾ ಅಂದು ಯಾರಿಗೂ ಅಲ್ಲಾಹನ ಬಳಿಗೆ ಸ್ವಯಂ ಹೋಗುವ ಧೈರ್ಯವಿರಲಾರದು. ಅವನಿಂದ ಪೂರ್ವಾನುಮತಿ ದೊರೆತವರು ಮಾತ್ರ ಅದಕ್ಕೆ ಸಿದ್ಧರಾಗುವರು **(ಅಲ್ ಬಕರ: 255)**. ಆಗ ರಹ್ಮಾನನಿಂದ ಅನುಮತಿ ಪಡೆದುಕೊಂಡವನ ಹೊರತು ಜನರು ಯಾವ ಶಿಫಾರಸನ್ನೂ ತರಲು ಶಕ್ತರಾಗರು. **(ಮರ್ಯಮ್: 87)** ಅಲ್ಲಾಹನು ಅಲ್ಲಿ ಕೆಲವರಿಗೆ ವಿಶೇಷ ಗೌರವ ನೀಡುತ್ತಾನೆ. 'ನೀವು ಶಿಫಾರಸುದಾರರಾಗಿ ಬನ್ನಿ' ಎಂದು ಅವರಿಗೆ ಅನುಮತಿ ನೀಡುತ್ತಾನೆ. ಹೀಗೆ ಅಲ್ಲಿ ಅನುಮತಿ ಪಡೆದವರು ಮಾತ್ರ ಶಿಫಾರಸುದಾರರಾಗಿ ಬರುತ್ತಾರೆ.

2. ಯಥೇಷ್ಟವಾಗಿ ಶಿಫಾರಸು ಮಾಡುವ ಹಕ್ಕು ಅವರಿಗೆ ಇರುವುದಿಲ್ಲ. ಆ ಹಕ್ಕು ಸಂಪೂರ್ಣ ಸೀಮಿತವಾಗಿದೆ. ಅಲ್ಲಾಹನು ಮೆಚ್ಚಿದವರಿಗಾಗಿ ಮಾತ್ರ ಅವರು ಶಿಫಾರಸು ಮಾಡಬಹುದಾಗಿದೆ. ಆಗ ಮುಶ್ರಿಕರಿಗಾಗಿ ಅಥವಾ ಅಲ್ಲಾಹನು ಮೆಚ್ಚದ ಇತರರಿಗಾಗಿ ಶಿಫಾರಸು ಮಾಡಿ ಫಲವಿಲ್ಲ. "ಅಂದು ರಹ್ಮಾನನು ಯಾರಿಗೆ ಅನುಮತಿ ನೀಡುವನೋ ಮತ್ತು ಯಾರ ಮಾತನ್ನು ಕೇಳಲಿಚ್ಛಿಸುವನೋ ಅವರ ಹೊರತು ಯಾರ ಶಿಫಾರಸೂ ಫಲಕಾರಿಯಾಗದು." **(ತಾಹಾ: 109)** ದೇವಚರರ ಬಗ್ಗೆ ಅಲ್ಲಾಹನು ಹೇಳಿರುತ್ತಾನೆ, "ಯಾರ ಪರವಾಗಿ ಶಿಫಾರಸನ್ನು ಕೇಳಲು ಅಲ್ಲಾಹ್ ಸಮ್ಮತಿಸುವನೋ ಅವನ ಹೊರತು ಯಾರ ಬಗ್ಗೆಯೂ ಅವರು (ದೇವಚರರು) ಶಿಫಾರಸು ಮಾಡುವುದಿಲ್ಲ." **(ಅಲ್ ಅಂಬಿಯಾ: 28)** "ಆಕಾಶಗಳಲ್ಲಿ ಎಷ್ಟೋ ದೇವಚರರಿದ್ದಾರೆ. ಅವರ ಶಿಫಾರಸು ಸ್ವಲ್ಪವೂ ಉಪಯುಕ್ತ ವಾಗಲಾರದು. ಅಲ್ಲಾಹನೇ ಯಾರಾದರೂ ವ್ಯಕ್ತಿಯ ಪರವಾಗಿ ಮನವಿ ಕೇಳಲು ಬಯಸಿ, ಅವನ ವಿಷಯದಲ್ಲಿ ಅದನ್ನು ಅನುಮತಿಸುವ ಮತ್ತು ಅದನ್ನು ಮೆಚ್ಚಿಕೊಳ್ಳುವ ವರೆಗೆ." **(ಅನ್ನಜ್ಮ್: 26)**

3. ಶಿಫಾರಸಿನ ಅನುಮತಿ ದೊರೆತವರಿಗೂ ಏನಾದರೂ ಹೇಳಿಬಿಡಲು ಸಾಧ್ಯವಿಲ್ಲ. ಅವರಿಗೆ ಚೆನ್ನಾಗಿ ತಿಳಿದಿರುವ ಮತ್ತು ಸಂಪೂರ್ಣ ಸತ್ಯವೆಂದು ಮನಗಂಡಿರುವ ವಿಷಯವನ್ನು ಮಾತ್ರ ಹೇಳಬಹುದು. "ಸರಿಯಾದ ಮಾತನ್ನೇ ಆಡುವ ವ್ಯಕ್ತಿಯ

ಹೊರತು..." (ಅನ್ನಬಾ: 38) "ಅವನನ್ನು ಬಿಟ್ಟು ಇವರು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರಿಗೆ ಯಾವುದೇ ಶಿಫಾರಸಿನ ಅಧಿಕಾರವಿಲ್ಲ. ಯಾರಾದರೂ ಜ್ಞಾನದ ಆಧಾರದಲ್ಲಿ ಸತ್ಯದ ಸಾಕ್ಷಿ ಹೇಳು ವುದರ ಹೊರತು." (ಅಝ್ಝುಖ್‌ರುಫ್: 86) ಎಂಬುದಾಗಿ ಆ ಕುರಿತು ಹೇಳಲಾಗಿದೆ.

4. 'ಅವರು ಶಿಫಾರಸು ಮಾಡುತ್ತಾರೆ– ಇವರಿಗೆ ಶಿಫಾರಸು ದೊರೆಯುತ್ತದೆ' ಎಂದು ಸಕಾರಾತ್ಮಕ ರೂಪದಲ್ಲಿ ಹೇಳುವ ಬದಲಾಗಿ 'ಅವರ ಹೊರತು ಮಾಡುವುದಿಲ್ಲ', 'ಇವರ ಹೊರತು ದೊರೆಯುವುದಿಲ್ಲ' ಎಂಬುದಾಗಿ ನಕಾರಾತ್ಮಕ ರೂಪದಲ್ಲಿ ಶಿಫಾರಸಿನ ಕುರಿತು ಕುರ್‌ಆನ್ ಪ್ರಸ್ತಾಪಿಸಿರುವುದು ಗಮನಾರ್ಹವಾಗಿದೆ.

ಒಂದು ಶಿಫಾರಸಿನ ರೂಪವನ್ನು ನಾವು ಈಗಾಗಲೇ ಹೇಳಿದ್ದೇವೆ. ಇತರ ಕೆಲವು ರೂಪಗಳು ಮುಂದೆ ಬರಲಿವೆ. ಅವುಗಳ ನಿರೂಪಣೆಯಲ್ಲಿ ಕೆಲವು ಕಗ್ಗಂಟುಗಳಿವೆ. ಆದ್ದರಿಂದ ಆ ಕುರಿತು ಇಲ್ಲಿ ಇಮಾಮ್ ನವವಿಯವರ ಹೇಳಿಕೆಯನ್ನು ಉಲ್ಲೇಖಿಸುವುದು ಸಂದರ್ಭೋಚಿತವಾದೀತು.

ಪರಲೋಕದಲ್ಲಿ ಐದು ರೀತಿಯ ಶಿಫಾರಸು ನಡೆಯಲಿದೆ:

1. ಮಹ್‌ಶರದಲ್ಲಿ ಎಲ್ಲರನ್ನೂ ಸೇರಿಸಲಾದ ಬಳಿಕ, ವಿಚಾರಣೆ ಯಾವಾಗ ನಡೆಯುವುದೆಂದು ತಿಳಿಯದೆ, ಸೃಷ್ಟಿಗಳು ಅಸಹನೀಯ ಸಂಕಷ್ಟಕ್ಕೆ ಸಿಲುಕಿರುವ ಸಂದರ್ಭದಲ್ಲಿ, ಬೇಗನೆ ವಿಚಾರಣೆ ನಡೆಸಿ ತೀರ್ಮಾನ ಮಾಡಲಿಕ್ಕಾಗಿ ಅಲ್ಲಾಹನ ಸನ್ನಿಧಿಯಲ್ಲಿ ಮಾಡುವ ಶಿಫಾರಸು. ಇದು ಕೇವಲ ಪ್ರವಾದಿ ಮುಹಮ್ಮದ್‌ರಿಗೆ(ಸ) ಇರುವುದು.

2. ವಿಚಾರಣೆ ನಡೆಸದೆ ಅಥವಾ ಪ್ರಶ್ನಿಸದೆ ಕೆಲವು ಮಂದಿಯನ್ನು ಸ್ವರ್ಗಕ್ಕೆ ನೇರವಾಗಿ ಪ್ರವೇಶಗೊಳಿಸುವ ಬಗ್ಗೆ ಶಿಫಾರಸು. ಇದು ಕೂಡಾ ಪ್ರವಾದಿಯವರಿಗೆ(ಸ) ಸೀಮಿತವಾಗಿರುವುದು.

3. ನರಕಕ್ಕೆ ಅರ್ಹರಾದ ಕೆಲವರನ್ನು ಅದರಲ್ಲಿ ಪ್ರವೇಶಗೊಳಿಸದಂತೆ ರಕ್ಷಿಸುವ ಶಿಫಾರಸು. ಇದನ್ನು ಕೂಡಾ ಪ್ರವಾದಿ(ಸ) ಮತ್ತು ಇತರ ಕೆಲವರು ನಡೆಸುತ್ತಾರೆ.

4. ವಿಶ್ವಾಸಿಗಳಾಗಿದ್ದರೂ ಅಪರಾಧ ಕೃತ್ಯಗಳ ಹೆಚ್ಚಳದಿಂದ ನರಕಕ್ಕೆ ತಳ್ಳಲ್ಪಟ್ಟವರನ್ನು ಅದರಿಂದ ಪಾರುಗೊಳಿಸುವ ಶಿಫಾರಸು. ಅದನ್ನು ಪ್ರವಾದಿ(ಸ), ದೇವಚರರು ಮತ್ತು ಸತ್ಯವಿಶ್ವಾಸಿಗಳೆಲ್ಲರೂ ನಿರ್ವಹಿಸುತ್ತಾರೆ.

5. ಸ್ವರ್ಗವಾಸಿಗಳಿಗೆ ಅವರ ಸ್ಥಾನಮಾನಗಳನ್ನು ಉನ್ನತಗೊಳಿಸುವ ಬಗ್ಗೆ ಶಿಫಾರಸು.

(ಶರಹ್ ಮುಸ್ಲಿಮ್: 36/3)

ಇನ್ನು ನಾವು ಮೂಲ ವಿಷಯದ ಕಡೆಗೆ ಮರಳೋಣ- ಪ್ರವಾದಿ(ಸ) ಮತ್ತಿತರರು ಪ್ರಭುವಿನ ನಿರೀಕ್ಷೆಯಿಂದ ಮಹ್‌ಶರದಲ್ಲಿ ಸಹನೆ ಮೀರಿ ಕಾಯುತ್ತಿದ್ದಾರಲ್ಲವೇ.

ದೇವಚರರು ಬರುತ್ತಾರೆ

ಮೇಲ್ಭಾಗದಿಂದ ಯಾವುದೋ ಸದ್ದು! ಆಕಾಶದಿಂದ ದೇವಚರರು ತಂಡೋಪ ತಂಡವಾಗಿ ಇಳಿಯುತ್ತಾರೆ. ಅಂದು ದೇವಚರರ ತಂಡ ತಂಡಗಳೇ ಇಳಿಸಲ್ಪಡುವುವು.

(ಅಲ್ ಫುರ್ಕಾನ್: 25)

ಪ್ರವಾದಿ(ಸ) ಹೇಳಿದರು: ಹೀಗೆ ನಾವು ಅಲ್ಲಿ ನಿಂತಿರುವಾಗ ಆಕಾಶದಿಂದ ಭಾರೀ ರಭಸದ ಸದ್ದು ಕೇಳಿಸಿತು. ಅದು ಪ್ರಥಮ ಆಕಾಶದಿಂದ ದೇವಚರರು ಇಳಿದು ಬರುವ ಶಬ್ದವಾಗಿತ್ತು. ಅವರು ಮಾನವರೂ ಜಿನ್ನ್‌ಗಳೂ ಸೇರಿರುವ ಭೂ ನಿವಾಸಿಗಳಷ್ಟೇ ಸಂಖ್ಯೆಯಲ್ಲಿದ್ದರು. ಅವರು ಭೂಮಿಗೆ ಸಮೀಪಿಸಿದಾಗ ಅವರ ಪ್ರಕಾಶದಿಂದ ಭೂಮಿ ಶೋಭಿಸಿತು. ಅವರು ಭೂನಿವಾಸಿಗಳನ್ನು ಸುತ್ತುವರಿದು ನಿಂತರು. ನಮ್ಮ ಪ್ರಭು ನಿಮ್ಮ ಜೊತೆಗಿದ್ದಾನೆಯೇ ಎಂದು ನಾವು ವಿಚಾರಿಸಿದೆವು. ಇಲ್ಲ, ಇನ್ನು ಬರಬಹುದು ಎಂದು ಅವರು ಹೇಳಿದರು. ಅನಂತರ ದೇವಚರರು ಎರಡನೆಯ ಆಕಾಶದಿಂದ ಇಳಿದರು. ಇವರು ಮೊದಲನೇ ಆಕಾಶದಿಂದ ಇಳಿದು ಬಂದ ದೇವಚರರು ಹಾಗೂ ಮೊದಲೇ ಭೂಮಿಯಲ್ಲಿದ್ದ ಮಾನವರು ಮತ್ತು ಜಿನ್ನ್‌ಗಳಷ್ಟಿರುತ್ತಾರೆ. ಅವರು ಭೂಮಿಗೆ ಸಮೀಪಿಸಿದಾಗ ಅವರ ಪ್ರಕಾಶದಿಂದ ಭೂಮಿಯು ಪುನಃ ಪ್ರಕಾಶಿಸುತ್ತದೆ. ಆರಂಭದ ದೇವಚರರನ್ನೂ ಸೇರಿಸಿ ಅವರು ಎಲ್ಲರನ್ನೂ ಸುತ್ತುವರಿದು ನಿಲ್ಲುತ್ತಾರೆ. ಪ್ರಭುವಿದ್ದಾನೆಯೇ ಎಂದು ಅವರೊಡನೆ ವಿಚಾರಿಸಿದರು. ಇಲ್ಲ, ಅವನು ಬರುವನು ಎಂದು ಅವರೂ ಉತ್ತರಿಸುತ್ತಾರೆ. ತರುವಾಯ ಇನ್ನುಳಿದ ಆಕಾಶಗಳ ದೇವಚರರು ಕ್ರಮ ಪ್ರಕಾರ ಇಳಿಯುತ್ತಾರೆ. ಅನಂತರ ಬರುವವರು ಹಿಂದೆ ಬಂದವರ ಇಮ್ಮಡಿ ಇರುತ್ತಾರೆ. ಮೊದಲು ಬಂದ ಸಮೂಹವನ್ನು ಆನಂತರ ಬಂದ ಸಮೂಹವು ಸುತ್ತುವರಿದು ನಿಲ್ಲುತ್ತದೆ. ಹೀಗೆ ಎಲ್ಲ ಆಕಾಶಗಳ ದೇವಚರರೂ ಸಾಲುಸಾಲಾಗಿ ನಿಲ್ಲುತ್ತಾರೆ. ಆ ದೃಶ್ಯ ಹೇಗಿರಬಹುದೆಂದು ಇನ್ನೊಮ್ಮೆ ಆಲೋಚಿಸಿ ನೋಡಿರಿ. ಪ್ರಭು ಈಗಲೂ ಬಂದಿಲ್ಲ, ಎಲ್ಲರೂ, ಆತನು ಬರುತ್ತಾನೆ ಎಂದಷ್ಟೇ ಹೇಳುತ್ತಿದ್ದಾರೆ...

ಮಹಾಪ್ರಭು ಬರುತ್ತಾನೆ

ಈಗ ಮೇಘಛತ್ರಿ ಪ್ರತ್ಯಕ್ಷವಾಯಿತು. ಮಹಾಪ್ರಭುವಿನ ಆಗಮನವಾಗಿದೆ.

"ದೇವ ಚರರು ಸಾಲು ಸಾಲಾಗಿ ನಿಂತಿರುವ ಸ್ಥಿತಿಯಲ್ಲಿ ನಿಮ್ಮ ಪ್ರಭು

ಆಗಮಿಸುವಾಗ" (ಅಲ್ ಫಜ್ರ್: 22) "ಭೂಮಿಯು ಪ್ರಭುವಿನ ಜ್ಯೋತಿಯಿಂದ ಬೆಳಗುವುದು." (ಅಝ್ಝುಮರ್: 69)

ಪ್ರಭುವು ತನ್ನ ನ್ಯಾಯಪೀಠವನ್ನು ಭೂಮಿಯಲ್ಲಿ ಪ್ರತಿಷ್ಠಾಪಿಸುತ್ತಾನೆ. ಆತ ಉದ್ದೇಶಿಸಿದ ಸ್ಥಾನದಲ್ಲಿ! ತರುವಾಯ ಆತ ಪ್ರಥಮವಾಗಿ ಘೋಷಿಸುತ್ತಾನೆ, "ಓ ಮಾನವ ಮತ್ತು ಜಿನ್ನ್ ಸಮುದಾಯಗಳೇ! ನಿಮ್ಮನ್ನು ನಾನು ಸೃಷ್ಟಿಸಿದಂದಿನಿಂದ ಈ ತನಕ ನಿಮ್ಮ ಮಾತುಗಳನ್ನು ನಾನು ಚೆನ್ನಾಗಿ ಗಮನಿಸಿದ್ದೇನೆ. ನಿಮ್ಮ ಮಾತುಗಳನ್ನು ಆಲಿಸಿದ್ದೇನೆ, ವರ್ತನೆಗಳನ್ನು ನೋಡಿದ್ದೇನೆ. ಆದರೆ ಇಂದು ನೀವು, ನಾನು ಹೇಳುವುದನ್ನು ಚೆನ್ನಾಗಿ ಗಮನಿಸಬೇಕು. ಇದೋ ನಿಮ್ಮ ಕರ್ಮಗಳ ದಾಖಲೆಗಳು. ಇದನ್ನು ನಿಮಗೆ ಓದಿ ಹೇಳಲಾಗುವುದು. ಆಗ ಪರಿಸ್ಥಿತಿಯು ಹಿತಕರವೆಂದು ಭಾಸವಾಗುವವರು ಅಲ್ಲಾಹನನ್ನು ಸ್ತುತಿಸಲಿ. ಅಲ್ಲದವರು ತಮ್ಮನ್ನೇ ಹೊರತು ಇತರರನ್ನು ಶಪಿಸಿ ಪ್ರಯೋಜನವಿಲ್ಲ." (ಹದೀಸುಸ್ಸೂರ್)

"ಜನರ ಶಿರಗಳು ಆ ಚಿರಂತನನು ಮತ್ತು ಸ್ವಯಂ ಸ್ಥಿರನ ಮುಂದೆ ಬಾಗುವವು."

(ತಾಹಾ: 111)

"ಅಂದು ಎಲ್ಲ ಜನ ಸಮುದಾಯಗಳೂ ಭಯಭೀತರಾಗಿ ನೇರ ನಿಲ್ಲಲಾಗದೆ ಮೊಣಕಾಲೂರಿರುವುದನ್ನು ನೀವು ಕಾಣುವಿರಿ." (ಅಲ್ ಜಾಸಿಯ: 28)

ಅಪರಾಧಿಗಳನ್ನು ಪ್ರತ್ಯೇಕಿಸಲಾಗುವುದು

ಪ್ರಭುವಿಗೆ ಅಪರಾಧಿಗಳ ವಿಚಾರಣೆ ನಡೆಸಿ ಅವರಿಗೆ ಕೆಲವು ವಿಷಯಗಳನ್ನು ತಿಳಿಸಬೇಕಾಗಿದೆ. ಆಗ ಸತ್ಯವಿಶ್ವಾಸಿಗಳು ಅವರೊಂದಿಗೆ ಬೆರೆತಿರಬಾರದು. ಆದ್ದರಿಂದ ಅಪರಾಧಿಗಳನ್ನು ಬೇರ್ಪಡಿಸಬೇಕು. ಅಲ್ಲಾಹನು ಆಜ್ಞೆ ನೀಡುತ್ತಾನೆ, "ಅಪರಾಧಿಗಳೇ! ಇಂದು ನೀವು ಬೇರ್ಪಡಿರಿ." (ಯಾಸೀನ್: 59)

ವಿಗ್ರಹ, ಮರ, ಕಲ್ಲು ಇತ್ಯಾದಿ ಅನೇಕ ನಿರ್ಜೀವಿ ವಸ್ತುಗಳನ್ನು ಇವರು ಆರಾಧಿಸುತ್ತಾರೆ. ಅಂತಹ ಆರಾಧ್ಯ ವಸ್ತುಗಳನ್ನೂ ಇವರ ಜೊತೆ ಸೇರಿಸಬೇಕು. ಅದಲ್ಲದೇ, ಜನರು ಅಲ್ಲಾಹನನ್ನು ತೊರೆದು ನಮ್ಮನ್ನು ಆರಾಧಿಸಬೇಕು ಮತ್ತು ಬೇಷರತ್ತಾಗಿ ಅನುಸರಿಸಬೇಕೆಂದು ಸ್ವಯಂ ಆಗ್ರಹಿಸಿ ಅದಕ್ಕಾಗಿ ನಾನಾ ರೀತಿಯ ಕುತಂತ್ರಗಳಿಂದ ಅವರನ್ನು ವಂಚಿಸಿದ ಕೆಲವು ಮಾನವರು ಮತ್ತು ಪಿಶಾಚಿಗಳಿದ್ದಾರಲ್ಲವೇ. (ಅಲ್ಲಾಹನ ಮಾರ್ಗದಿಂದ ದೂರ ಸರಿದು ಇತರ ಮಾರ್ಗಗಳಿಗೆ ಜನರನ್ನು ಸೆಳೆಯುವವರೆಲ್ಲರೂ ಇದರಲ್ಲಿ ಸೇರುತ್ತಾರೆ) ಅವರನ್ನೂ ಈ ವಿಭಾಗಕ್ಕೆ ಸೇರಿಸಬೇಕು.

ಅದಲ್ಲದೇ ದೇವ ಸಹಭಾಗಿತ್ವದ (ಶಿರ್ಕ್) ಇಂತಹ ಅಕ್ರಮ ಚಟುವಟಿಕೆಗಳಿಗೆ ಮನಃ ಪೂರ್ವಕ ಸಹಕಾರ ನೀಡಿದ ಅವರ ಪತ್ನಿ ಮಕ್ಕಳನ್ನೂ ಇತರ ಸಂಗಡಿಗರನ್ನೂ ಅವರ ಜತೆಯೇ ಸೇರಿಸಬೇಕಾಗಿದೆ.

ಅಲ್ಲಾಹನು ಹೇಳುತ್ತಾನೆ, "ಎಲ್ಲ ಅಕ್ರಮಿಗಳನ್ನೂ ಅವರ ಜೊತೆಗಾರರನ್ನೂ ಅವರು ಅಲ್ಲಾಹನನ್ನು ಬಿಟ್ಟು ಆರಾಧಿಸುತ್ತಿದ್ದ ಆರಾಧ್ಯರನ್ನೂ ಸುತ್ತುವರಿದು ತನ್ನಿರಿ, ಅನಂತರ ಅವರೆಲ್ಲರಿಗೂ ನರಕದ ದಾರಿಯನ್ನು ತೋರಿಸಿರಿ. ಇವರನ್ನು ಸ್ವಲ್ಪ ತಡೆಯಿರಿ, ಇವರನ್ನು ಪ್ರಶ್ನಿಸಲಿಕ್ಕಿದೆ." **(ಅಸ್ಸಾಫ್ಫಾತ್: 22-24)**

ಅಪರಾಧಿಗಳೊಡನೆ ಕೆಲವು ಪ್ರಶ್ನೆಗಳು

ಎಲ್ಲ ಅಪರಾಧಿಗಳನ್ನು ಪ್ರಭುವಿನ ಮುಂದೆ ಸಾಲುಸಾಲಾಗಿ ನಿಲ್ಲಿಸಲಾಗುತ್ತದೆ. ಪ್ರಭುವು ಅವರೊಡನೆ ಹೇಳುತ್ತಾನೆ, "ಓಹೋ! ನಾವು ನಿಮ್ಮನ್ನು ಪ್ರಥಮ ಬಾರಿ ಸೃಷ್ಟಿಸಿದಂತೆಯೇ ನೀವು ನಮ್ಮ ಬಳಿಗೆ ಬಂದು ಬಿಟ್ಟಿರಲ್ಲಾ, ಪ್ರಥಮ ಬಾರಿ ಸೃಷ್ಟಿಸಿ ದಂತೆಯೇ ನಿಮ್ಮನ್ನು ಎರಡನೇ ಬಾರಿ ಸೃಷ್ಟಿಸಲಾಗುವುದೆಂದು ಪ್ರವಾದಿಗಳು ನಿಮ್ಮೊಡನೆ ಹೇಳಿದಾಗ ನೀವು ಅದನ್ನು ತಿರಸ್ಕರಿಸಿದ್ದಿರಲ್ಲವೇ? ಅವರ ಮಾತು ಸತ್ಯವೆಂದು ನಿಮಗೆ ಈಗ ಮನವರಿಕೆಯಾಯಿತಲ್ಲವೇ! ನಿಮ್ಮ ವಿಚಾರಣೆಗಾಗಿ ನನ್ನ ಮುಂದೆ ಹಾಜರು ಪಡಿಸಲಾಗುವುದೆಂದೂ ಅವರು ಹೇಳಿರಲಿಲ್ಲವೇ. ಆದರೆ ನಿಮಗಾಗಿ ಯಾವುದಾದರೂ ವಾಗ್ದಾನದ ಸಮಯವನ್ನು ನಿಶ್ಚಯಿಸಿಯೇ ಇಲ್ಲವೆಂದು ನೀವು ತಿಳಿದುಕೊಂಡಿದ್ದಿರಿ." **(ಅಲ್ ಕಹ್ಫ್: 48)**

"ಇದು ನಿಜಸ್ಥಿತಿಯಲ್ಲವೇ?" ಎಂದು ಪ್ರಭು ಕೇಳುತ್ತಾನೆ. "ಹೌದು, ನಮ್ಮ ಪ್ರಭೂ! ಇದು ನಿಜಸ್ಥಿತಿಯೇ!" ಎಂದು ಅವರು ಉತ್ತರಿಸುತ್ತಾರೆ. **(ಅಲ್ ಅನ್‌ಆಮ್:30)** ಪ್ರಭುವಿನ ಮುಂದೆ ತಂದು ನಿಲ್ಲಿಸಿ ನಡೆಯುವ ಈ ಪ್ರಶ್ನೋತ್ತರ ದೃಶ್ಯ ಅತಿ ಗಂಭೀರ ವಾಗಿರುವುದು.

"ಅಪರಾಧಿಗಳು ತಲೆಬಾಗಿಸಿ ತಮ್ಮ ಪ್ರಭುವಿನ ಮುಂದೆ ನಿಂತಿರುವ ಸಂದರ್ಭವನ್ನು ನೀವು ನೋಡುತ್ತಿದ್ದರೆ! (ಆಗ ಇವರು) 'ನಮ್ಮ ಪ್ರಭೂ, ನಾವು ಚೆನ್ನಾಗಿ ನೋಡಿ ಕೊಂಡೆವು ಮತ್ತು ಕೇಳಿದೆವು. ಇನ್ನು ನಮ್ಮನ್ನು ಸತ್ಕರ್ಮವೆಸಗಲಿಕ್ಕಾಗಿ ಮರಳಿ ಕಳುಹಿ ಸಿ ಬಿಡು. ಈಗ ನಮಗೆ ಖಾತ್ರಿಯಾಗಿ ತಿಳಿಯಿತು' (ಎನ್ನುತ್ತಿರುವರು.)" **(ಅಸ್ಸಜ್ದ: 12)**

"ಇದೇನು, ನಾವು ನಿಮ್ಮನ್ನು ಮೊದಲು ಒಬ್ಬಂಟಿಯಾಗಿ ಸೃಷ್ಟಿಸಿದಂತೆಯೇ ನೀವೀಗ ಒಬ್ಬಂಟಿಗರಾಗಿ ನಮ್ಮ ಮುಂದೆ ಹಾಜರಾಗಿದ್ದೀರಲ್ಲಾ, ನಿಮಗೆ ನಾವು ಇಹ

ಲೋಕದ ಧಾರಾಳ ಸಂಪತ್ತು ಮತ್ತು ಪ್ರಭಾವವನ್ನು ನೀಡಿದ್ದೆವಲ್ಲಾ, ಈಗ ಅದೆಲ್ಲವನ್ನೂ ಅಲ್ಲಿ ಬಿಟ್ಟು ಬಂದಿದ್ದೀರಲ್ಲವೇ? ನಿಮ್ಮ ಕಾರ್ಯವನ್ನು ನೋಡಿಕೊಳ್ಳಲಿಕ್ಕಾಗಿ ನೀವು ಏರ್ಪಡಿಸಿದ್ದ ಸಹಭಾಗಿಗಳಾರೂ ಈಗ ನಿಮ್ಮ ಪರವಾಗಿ ವಾದಿಸಲು ಇಲ್ಲಿ ನಿಮ್ಮ ಜೊತೆಗಿಲ್ಲವಲ್ಲಾ, ನಿಮ್ಮ ಪರಸ್ಪರ ಸಂಬಂಧಗಳೂ ಕಡಿದು ಹೋಗಿವೆ. ಅವರು ನಿಮ್ಮ ಕೈಬಿಟ್ಟಿದ್ದಾರಲ್ಲವೇ." **(ಅಲ್ ಅನ್‌ಆಮ್: 94)**

"ಮಾನವರೇ, ನೀವು ಈ ಪಿಶಾಚಿಯ ಹಿಂಬಾಲಕರಾಗಬೇಡಿ. ಆತನು ನಿಮ್ಮ ಪ್ರತ್ಯಕ್ಷ ಶತ್ರು. ನೀವು ಕೇವಲ ನನ್ನ ದಾಸರಾಗಿರಿ. ಇದೇ ಸರಿಯಾದ ಹಾದಿಯೆಂದು ನಾನು ಮೊದಲೇ ನಿಮಗೆ ತಿಳಿಸಿರಲಿಲ್ಲವೇ? ಹಾಗಿದ್ದರೂ ನಿಮ್ಮ ಬಹುದೊಡ್ಡ ವಿಭಾಗವನ್ನು ಆತನು ದಾರಿತಪ್ಪಿಸಿದನು. ನಿಮಗೆ ಬುದ್ಧಿಯಿರಲಿಲ್ಲವೇ?" **(ಯಾಸೀನ್: 60-62)**

ಅಲ್ಲಾಹನ ನಿದರ್ಶನಗಳನ್ನು ಸುಳ್ಳಾಗಿಸುವವರು ಎಲ್ಲ ಸಮುದಾಯಗಳಲ್ಲಿಯೂ ಧಾರಾಳವಾಗಿದ್ದಾರೆ. ಕಿಯಾಮತ್ ದಿನದಂದು ಅವರೆಲ್ಲರನ್ನೂ ಸಾಲುಸಾಲಾಗಿ ಹಾಜರು ಪಡಿಸಲಾಗುತ್ತದೆ. ಬಳಿಕ ಅವರನ್ನು ವರ್ಗೀಕರಿಸಿ ನಿಲ್ಲಿಸಲಾಗುತ್ತದೆ. ಹೀಗೆ ಎಲ್ಲರೂ ಬಂದು ತಲುಪಿದ ಬಳಿಕ ಅಲ್ಲಾಹ್ ಅವರೊಡನೆ ಕೇಳುತ್ತಾನೆ, "ನನ್ನ ನಿದರ್ಶನಗಳನ್ನು ಚೆನ್ನಾಗಿ ಅರಿತುಕೊಳ್ಳದೆಯೇ ನೀವು ಅವುಗಳನ್ನು ಸುಳ್ಳಾಗಿಸಿದಿರಲ್ಲವೇ? ಅನ್ಯಥಾ ನೀವು ಮಾಡುತ್ತಿದ್ದುದೇನು?" ಹೀಗೆ ಅವರು ಮಾಡಿದ ಅಕ್ರಮದಿಂದಾಗಿಯೇ ಅವರು ಶಿಕ್ಷೆಗೆ ಅರ್ಹರಾಗುತ್ತಾರೆ. ಅವರು ಬಾಯಿ ತೆರೆಯುವುದಿಲ್ಲ. **(ಅನ್ನಮ್ಲ್: 83-85)**

ಅಲ್ಲಾಹನು ನೇರವಾಗಿ ಕರೆದು ಕೇಳುತ್ತಾನೆ, "ನಾನು ನಿಮ್ಮ ಬಳಿಗೆ ಪ್ರವಾದಿಗಳನ್ನು ಕಳಿಸಿದ್ದೆನಲ್ಲಾ, ನೀವು ಅವರಿಗೆ ನೀಡಿದ ಉತ್ತರವೇನು?" ಆಗ ಅವರಿಗೆ ಏನು ಹೇಳಬೇಕೆಂದೇ ತೋಚುವುದಿಲ್ಲ, ಪರಸ್ಪರ ಕೇಳಿ ತಿಳಿಯಲೂ ಸಾಧ್ಯವಾಗುವುದಿಲ್ಲ.

(ಅಲ್ ಕಸಸ್: 65-66)

ಉತ್ತರ ಹೇಳಲಾಗದೆ ಪೇಚಾಡುತ್ತಿರುವಾಗ ಇನ್ನೊಂದು ಪ್ರಶ್ನೆ, ಸುಮ್ಮನಿದ್ದರೆ ಸಲ್ಲದೆಂಬ ಧಾಟಿಯಲ್ಲಿ, "(ನನ್ನ ಹೊರತು ಅನ್ಯ ಆರಾಧ್ಯರಿಲ್ಲವೆಂದು ಪ್ರವಾದಿಗಳು ನಿಮ್ಮೊಡನೆ ಹೇಳಿದಾಗ ನೀವು ಅಂಗೀಕರಿಸಲಿಲ್ಲ.) ನೀವು ನನಗೆ ಕೆಲವು ಸಹಭಾಗಿಗಳನ್ನು ನೇಮಿಸಿದಿರಿ. ಆದರೆ ಈಗ ಅವರೆಲ್ಲರೂ ಎಲ್ಲಿ ಹೋಗಿದ್ದಾರೆ? ಕರೆತನ್ನಿರಿ." ಉತ್ತರ ನೀಡಲಾಗದಂತಹ ಪರಿಸ್ಥಿತಿ! ಏನು ಹೇಳಬೇಕೆಂದೇ ಗೊತ್ತಿಲ್ಲ. ಕೊನೆಗೆ, "ನಮ್ಮ 'ಪ್ರಭು' ವಾದ ಅಲ್ಲಾಹನಾಣೆ! ನಾವು ಯಾರನ್ನೂ ಸಹಭಾಗಿಗಳನ್ನಾಗಿ ಮಾಡಿಲ್ಲ" ಎಂಬ ಹಸಿ ಸುಳ್ಳನ್ನು ಹೇಳುವ ಹೊರತು ಬೇರೆ ಯಾವ ಕುಯುಕ್ತಿಯೂ ಅಲ್ಲಿ ಸಾಧ್ಯವಿಲ್ಲ. ಎಂತಹ

ದುರವಸ್ಥೆ! ಅವರು ತಮ್ಮ ಬಗ್ಗೆಯೇ ಸುಳ್ಳು ಹೇಳಬೇಕಾದ ದುರ್ಗತಿಗೆ ತಲಪಿದ್ದಾರೆ. ಆದರೆ ಅವರ ಸುಳ್ಳುವಾದ ಅಲ್ಲಿ ಫಲಿಸಲಾರದು. **(ಅಲ್ ಅನ್‌ಆಮ್: 22-24)**

ಇಲ್ಲಿ ಸುಳ್ಳು ಹೇಳಿ ಏನು ಫಲ? ಸುಳ್ಳು ಪ್ರಮಾಣ ಇಲ್ಲಿ ನಡೆಯುವುದಿಲ್ಲ. ಭೂಲೋಕದಲ್ಲಿ ಸುಳ್ಳು ಹೇಳಿ ಸುಳ್ಳು ಪ್ರಮಾಣ ಮಾಡಿ ಹಲವು ಕಾರ್ಯಗಳನ್ನು ಸಾಧಿಸಿ ಅಭ್ಯಾಸವಾಗಿರುವುದರಿಂದ ಇಲ್ಲಿಯೂ ಅದೇ ತಂತ್ರವನ್ನು ಪ್ರಯೋಗಿಸುತ್ತಾರೆ. ಏನಾದರೂ ಪ್ರಯೋಜನವಾದರೆ ಆಗಲಿ ಎಂಬ ಭಾವನೆಯಿಂದ. ಆದರೆ ಅವರು ಹಸಿ ಸುಳ್ಳುಗಾರರೆಂದು ಅಲ್ಲಿ ತಿಳಿಯದವರು ಯಾರಿದ್ದಾರೆ? **(ಅಲ್ ಮುಜಾದಲ: 18)**

ಈಗ ಸುಳ್ಳು ಹೇಳಿ ಆಣೆ ಹಾಕಿ ಏನೂ ಸಾಗದು. ಅದರಿಂದ ನಾನೇನೂ ನಿಮ್ಮನ್ನು ಬಿಡುವುದಿಲ್ಲ. ನನಗೆ ಸಹಭಾಗಿಗಳಿದ್ದಾರೆಂದು ನೀವು ಭಾವಿಸಿದ್ದಿರಲ್ಲವೇ. ಆದರೆ ಈಗ ಅವರ ಸಹಾಯವು ಅತ್ಯವಶ್ಯಕವಾಗಿರುವ ಸಂದರ್ಭವಲ್ಲವೇ! ಆದ್ದರಿಂದ ಕರೆಯಿರಿ, ನನಗೆ ನೀವು ಮಾಡಿದ್ದ ಆ ಸಹಭಾಗಿಗಳನ್ನು! ಅವರು ಕರೆದು ನೋಡುತ್ತಾರೆ. ಆದರೆ ಆ ಸಹಭಾಗಿಗಳು ಅವರಿಗೆ ಯಾವ ಉತ್ತರವನ್ನೂ ನೀಡಲಿಲ್ಲ." **(ಅಲ್ ಕಹ್ಫ್: 52)**

ಅಲ್ಲಾಹನಿಗೆ ಸಹಭಾಗಿಗಳನ್ನಾಗಿ ಮಾಡಿದವರನ್ನೂ ಸ್ವಯಂ ಸಹಭಾಗಿಗಳಾಗಿ ನಟಿಸಿದ, ಮಾನವ ಮತ್ತು ಜಿನ್ನ್‌ಗಳಲ್ಲಿ ಸೇರಿದ ಪಿಶಾಚಿಗಳನ್ನೂ ಉದ್ದೇಶಿಸಿ ಅಲ್ಲಾಹನು ಪುನಃ ಕೇಳುತ್ತಾನೆ, "ಎಲ್ಲಿದ್ದಾರೆ, ನನ್ನ ಸಹಭಾಗಿಗಳಾಗಿ ನೀವು ಮಾಡಿಕೊಂಡವರು?" ಇದಕ್ಕೆ ಮುಶ್ರಿಕರು ಉತ್ತರ ನೀಡುವುದಕ್ಕಿಂತ ಮುಂಚಿತವಾಗಿಯೇ ಜಿನ್ನ್‌ಗಳಲ್ಲಿ ಸೇರಿದ ಪಿಶಾಚಿ ವರ್ಗವು ಆವಸರದಿಂದ ಉತ್ತರ ಹೇಳಲು ಪ್ರಯತ್ನಿಸುತ್ತಾರೆ. ಏಕೆಂದರೆ, ಎಲ್ಲರನ್ನು ಉದ್ದೇಶಿಸಿರುವ ಈ ಪ್ರಶ್ನೆ ಕೇಳಿದಾಗಲೇ ಅವರಿಗೆ ಅರ್ಥವಾಗಿ ಬಿಡುತ್ತದೆ. ನಾವು ದಾರಿ ತಪ್ಪಿಸಿದ, ನಮ್ಮ ಆಜ್ಞೆ, ಉಪದೇಶ, ತಂತ್ರ, ಒಳಸಂಚುಗಳಿಗೆ ಬಲಿಯಾಗಿ ಅಲ್ಲಾಹನ ಮಾರ್ಗವನ್ನು ತೊರೆದು ನಮ್ಮನ್ನು ಹಿಂಬಾಲಿಸಿದ, ನಮ್ಮ ಪ್ರತಿಯೊಂದು ಸಂಜ್ಞೆಗೆ ನಿಶ್ಶರ್ತವಾಗಿ ಕುಣಿದ ಆ ಬಡಪಾಯಿಗಳನ್ನು (ಅಂಧಭಕ್ತರನ್ನು) ನಾವೇ ಅವರನ್ನು ದಾರಿತಪ್ಪಿಸಿರುವೆನೆಂದು ಈಗ ಅಲ್ಲಾಹನ ಮುಂದೆ ಹೇಳುವರು. ಅವರು ಹೇಳುವುದಕ್ಕಿಂತ ಮುಂಚೆ ನಾವೇ ನಮ್ಮ ವಿಷಯ ಹೇಳಿ ಬಿಡುವುದು ಉತ್ತಮವಲ್ಲವೇ ಎಂದು ಹೇಳಲು ಧಾವತಿಪಡುತ್ತಾರೆ. ಆದರೆ ಅವರು ಹೇಳುವುದೇನು? ಅದು ಬಹಳ ಸ್ವಾರಸ್ಯಕರವಾಗಿದೆ. "ಪ್ರಭೂ! ಈ ಮಂದಿಯನ್ನು ನಾವು ದಾರಿತಪ್ಪಿಸಿರುವುದು ನಿಜ. ಆದರೆ, ನಾವು ಸ್ವಯಂ ದಾರಿತಪ್ಪಿದಂತೆ ಅವರನ್ನು ತಪ್ಪಿಸಿರುವೆವು. ಅನ್ಯಥಾ ಸನ್ಮಾರ್ಗದಲ್ಲಿ ಸಾಗಬಯಸಿದ್ದ ಅವರನ್ನು ನಾವು ಬಲಾತ್ಕಾರದಿಂದ ತಡೆದಿಲ್ಲ. ಅವರ ದೃಷ್ಟಿ, ಶ್ರವಣ

ಮತ್ತು ಬುದ್ಧಿಶಕ್ತಿಯನ್ನು ನಾವು ಕಸಿದುಕೊಂಡಿಲ್ಲ. ನಾವು ಅವರ ಇಚ್ಛೆಯ ವಿರುದ್ಧ ಅವರನ್ನು ಹಿಡಿದೆಳೆದಿಲ್ಲ. ಬಲಾತ್ಕಾರದಿಂದ ದುರ್ಮಾರ್ಗಕ್ಕೆ ಸಾಗಿಸಿರುವೆವೆಂಬ ಆರೋಪ ದಿಂದ ನಾವು ಸಂಪೂರ್ಣ ಮುಕ್ತರಾಗಿದ್ದೇವೆ. ನಾವು ಇಚ್ಛಾಪೂರ್ವಕ ದುರ್ಮಾರ್ಗವನ್ನು ಅವಲಂಬಿಸಿದಂತೆಯೇ, ನಾವು ಅದನ್ನು ಅವರ ಮುಂದಿರಿಸಿದಾಗ ಅವರೂ ಸ್ವಂತ ಇಚ್ಛೆ ಯಿಂದ ಅದನ್ನು ಅಂಗೀಕರಿಸಿದರು. ವಸ್ತುತಃ ಅವರು ನಮ್ಮ ದಾಸರಾಗಿರಲಿಲ್ಲ, ಅವರು ಸ್ವಯಂ ತಮ್ಮ ದೇಹೇಚ್ಛೆಗಳ ದಾಸರಾದರು." ಆಗ ಅಲ್ಲಾಹ್ ಹೇಳುತ್ತಾನೆ, "ಅದಿರಲಿ, ನೀವು ಆ ಸಹಭಾಗಿಗಳನ್ನೊಮ್ಮೆ ಕರೆಯಿರಿ." ಅವರು ಕರೆಯುತ್ತಾರೆ. ಆದರೆ ಅವರಿಗೆ ಯಾವ ಉತ್ತರವೂ ಸಿಗುವುದಿಲ್ಲ. ಹೀಗೆ ಅಲ್ಲಾಹನ ಶಿಕ್ಷೆಯನ್ನು ಅವರು ಸ್ಪಷ್ಟವಾಗಿ ತಿಳಿಯುತ್ತಾರೆ. ನಾವು ಮೊದಲೇ ಸನ್ಮಾರ್ಗವನ್ನು ಸ್ವೀಕರಿಸಿದ್ದರೆ! (ಎಂದು ಅವರು ಈಗ ಆಸೆ ಪಡುತ್ತಾರೆ! ಆದರೆ ಏನು ಪ್ರಯೋಜನ!) **(ಅಲ್ ಕಸಸ್: 64)**

ಶಿರ್ಕ್, ಅಲ್ಲಾಹನಿಗೆ ಅತ್ಯಧಿಕ ಅರೋಚಕವಾಗಿದೆ. ಈ ಅಪರಾಧಕ್ಕೆ ಯಾವ ವಿನಾಯಿತಿಯೂ ಇಲ್ಲವೆಂದು ಆತ ಖಚಿತವಾಗಿ ತಿಳಿಸಿದ್ದನು. ಅದಕ್ಕೆ ನೀಡಲಾಗುವ ಶಿಕ್ಷೆಯು ಅತಿ ಕಠೋರವಾಗಿರುವುದು. ಆದ್ದರಿಂದ ಆತನಿಗೆ ಸಹಭಾಗಿಗಳನ್ನು ನಿಶ್ಚಯಿಸಿ ದವರನ್ನು ಆತ ಅಷ್ಟೊಂದು ಸುಲಭದಲ್ಲಿ ಬಿಡುವುದಿಲ್ಲ. ಅವರು ಮಾಡಿದ ತಪ್ಪಿನ ತೀಕ್ಷ್ಣತೆಯನ್ನು ಅವರಿಗೆ ಮನದಟ್ಟು ಮಾಡಿಸಬೇಕಾಗಿದೆ. ಆದ್ದರಿಂದ ಆ ಮಹಾ ಸಭೆಯಲ್ಲಿಯೇ ಅವರೊಡನೆ ಆತನು ಪದೇಪದೇ ನಿಮ್ಮ ಆ ಸಹಭಾಗಿಗಳು ಎಲ್ಲಿದ್ದಾರೆ? ಎಂದು ಕೇಳುತ್ತಾನೆ. ಅವರನ್ನು ಕರೆಯಿರಿ ಎಂದು ಆಜ್ಞಾಪಿಸುತ್ತಾನೆ. ಮುಶ್ರಿಕರು ನಾನಾ ರೀತಿಯ ನೆಪಗಳನ್ನು ಮುಂದಿರಿಸಿದರೂ ಆ ಕೂಡಲೇ ಅವುಗಳ ಪೊಳ್ಳುತನವನ್ನು ಅವರಿಗೆ ಮನವರಿಕೆ ಮಾಡಿಸಲಾಗುತ್ತಿದೆ. ಆ ಬಗ್ಗೆ ಇನ್ನಷ್ಟು ನೋಡೋಣ.

ಅವರನ್ನು (ಅಪರಾಧಿಗಳನ್ನು) ಬಹಿರಂಗವಾಗಿ ಕರೆಯುವ ದಿನ! ನನ್ನ ಸಹಭಾಗಿ ಗಳು ಎಲ್ಲಿದ್ದಾರೆ? ಎಂದು ಅಲ್ಲಾಹನು ಕೇಳುವಾಗ, ಅವರು ಹೇಳುವರು, ಆ ಬಗ್ಗೆ ಸಾಕ್ಷ್ಯ ವಹಿಸಲು ಇನ್ನು ನಮ್ಮ ಜತೆ ಯಾರೂ ಇಲ್ಲವೆಂದು ನಾವು ಹೇಳಿಯಾಯಿತಲ್ಲವೇ? ಇಹಲೋಕದಲ್ಲಿ ನಾವು ನಮ್ಮನ್ನು ಯಾರಿಗೆ ಅರ್ಪಿಸಿದ್ದೆವೋ ಆ ಪೈಕಿ ಯಾರೂ ಈಗ ಕಾಣಿಸುವುದಿಲ್ಲ. ಈ ಭಯಾನಕ ಸ್ಥಿತಿಯಿಂದ ರಕ್ಷಿಸಲು, ಕನಿಷ್ಠ ಪಕ್ಷ ಯಾತನೆಯನ್ನು ಸ್ವಲ್ಪ ಕಡಿಮೆಗೊಳಿಸಲಿಕ್ಕಾದರೂ ಯಾರೂ ಬಂದಿಲ್ಲ.

"ಈ ಹಿಂದೆ ಇವರು ಪ್ರಾರ್ಥಿಸುತ್ತಿದ್ದ ಎಲ್ಲ ಆರಾಧ್ಯರೂ ಆಗ ಇವರಿಂದ ಕಳೆದು ಹೋಗುವರು. ತಮಗಿನ್ನೂ ಯಾವುದೇ ಅಭಯ ಸ್ಥಾನ ಇಲ್ಲವೆಂಬುದನ್ನು ಆಗ ಇವರು ತಿಳಿದುಕೊಳ್ಳುವರು." **(ಹಾಮ್ಮೀಮ್ ಅಸ್ಸಜ್ದ: 48)**

ಸಾಕ್ಷಿಗಳ ಮೂಲಕ ಪ್ರಶ್ನೆ

ಎಲ್ಲವನ್ನೂ ಹೇಳಿ ಆಯಿತೆಂಬುದು ನಿಜ. ಆದರೂ ಬಿಡಲು ಸಾಧ್ಯವಿಲ್ಲ. ವಸ್ತುಶಃ ಅಲ್ಲಾಹನೇ ಏಕ ಆರಾಧ್ಯ, ಇತರ ಪ್ರಸಿದ್ಧ ಸಹಭಾಗಿಗಳೆಲ್ಲವೂ ಕೇವಲ ಮಿಥ್ಯವೆಂಬ ವಿಷಯವನ್ನು ಎಲ್ಲ ಸಮುದಾಯದ ಜನರಿಗೂ ಅವರಿಗೆ ನೇಮಿಸಲಾದ ಪ್ರವಾದಿಗಳು ಅಥವಾ ಅವರ ಅನುಯಾಯಿಗಳಾದ ಸತ್ಯನಿಷ್ಠ ಮುಬಲ್ಲಿಗ್‌ಗಳು (ಪ್ರಚಾರಕರು) ಆಗಾಗ್ಗೆ ತಿಳಿಸಿದ್ದರು. ಆದ್ದರಿಂದ ಇನ್ನು ಅವರ ಮೂಲಕವೇ ವಿಚಾರಣೆ ನಡೆಯಲಿ. ಎಲ್ಲ ಸಮುದಾಯದ ಪ್ರವಾದಿಗಳನ್ನೂ ಮುಬಲ್ಲಿಗ್‌ಗಳನ್ನೂ ಸಾಕ್ಷಿಗಳಾಗಿ ಸಭೆಗೆ ಕರೆಸ ಲಾಗುವುದು. ತರುವಾಯ ಅವರ ಮೂಲಕ ಮುಶ್ರಿಕರನ್ನು ಕರೆದು ಪ್ರಶ್ನಿಸಲಾಗುವುದು. ನೀವು ಮಾಡಿದ ಆ ಸಹಭಾಗಿಗಳೆಲ್ಲಿದ್ದಾರೆ? ಅವರನ್ನು ಸಹಭಾಗಿಗಳಾಗಿಸಿರುವ ಬಗ್ಗೆ ನಿಮ್ಮ ಸಮರ್ಥನೆಗಳನ್ನು ಮಂಡಿಸಿರಿ. ಆಗ ಅವರಿಗೆ ಸತ್ಯವು ಕೇವಲ ಅಲ್ಲಾಹನ ಪರ ವಾಗಿದೆಯೆಂದು ಸ್ಪಷ್ಟವಾಗುವುದು. ನಾವು ಮಾಡಿಕೊಂಡಿದ್ದ ಎಲ್ಲವೂ ಕೈಬಿಟ್ಟಿವೆಯೆಂದೂ ಅವರಿಗೆ ಮನವರಿಕೆಯಾಗುವುದು.

"ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬ ಸಾಕ್ಷಿಯನ್ನು ಹೊರ ತೆಗೆದು, 'ಈಗ ನಿಮ್ಮ ಪುರಾವೆ ತನ್ನಿರಿ' ಎಂದು ಹೇಳುವೆವು. ಆಗ ಸತ್ಯ ಅಲ್ಲಾಹನ ಕಡೆಗಿದೆಯೆಂದು ಇವರಿಗೆ ತಿಳಿದು ಬರುವುದು. ಇವರು ಸೃಷ್ಟಿಸಿಕೊಂಡಿರುವ ಎಲ್ಲಾ ಮಿಥ್ಯಗಳೂ ಮಾಯವಾಗಿ ಹೋಗುವವು." **(ಅಲ್ ಕಸಸ್: 75)**

ಆರಾಧ್ಯರನ್ನೂ ಆರಾಧಕರನ್ನೂ ಮುಖಾಮುಖಿ ಪ್ರಶ್ನಿಸಲಾಗುವುದು

ದೇವಚರರು, ಜಿನ್ನ್‌ಗಳು, ಪ್ರವಾದಿಗಳು, ಔಲಿಯಾಗಳು, ಶಹೀದ್‌ಗಳು ಮುಂತಾ ದವರನ್ನೂ ಅವರು ಪೂಜಿಸುತ್ತಿದ್ದರು. ಆ ಮೂಲಕ ಅವರನ್ನೂ ಅಲ್ಲಾಹನ ಸಹಭಾಗಿ ಗಳಾಗಿಸಿದ್ದಾರೆ. ಅವರೆಲ್ಲರನ್ನೂ ಒಂದೆಡೆ ಪ್ರತ್ಯೇಕವಾಗಿ ನಿಲ್ಲಿಸಲಾಗಿದೆ. ಅವರು ಏನು ಹೇಳುವರೆಂದು ತಿಳಿಯಬೇಕಲ್ಲವೇ. ಎಲ್ಲರನ್ನೂ ಒಟ್ಟು ಸೇರಿಸುವ ಆ ದಿನ! ಮುಶ್ರಿಕ ರೊಡನೆ ನಾವು ಹೇಳುತ್ತೇವೆ. "ನೀವು ಮತ್ತು ನೀವು ಸ್ಥಾಪಿಸಿದ್ದ ಸಹಭಾಗಿಗಳೂ ನಿಂತಲ್ಲಿಯೇ ನಿಲ್ಲಿರಿ." ಅನಂತರ ಉಭಯ ವಿಭಾಗದವರನ್ನೂ (ಆರಾಧ್ಯರನ್ನೂ ಆರಾಧಕರನ್ನೂ) ನಾವು ಪ್ರತ್ಯೇಕಿಸುತ್ತೇವೆ. ಆಗ ಸಹಭಾಗಿಗಳು ಹೇಳುತ್ತಾರೆ, "ನೀವು ನಮ್ಮನ್ನು ಆರಾಧಿಸಿಯೇ ಇಲ್ಲ, (ಅಥವಾ ಒಂದು ವೇಳೆ ಹಾಗೆ ಮಾಡಿದ್ದರೂ) ನಾವು ಆ ಬಗ್ಗೆ ಅಜ್ಞರಾಗಿದ್ದೆವೆಂಬುದಕ್ಕೆ ಅಲ್ಲಾಹನೇ ಸಾಕ್ಷಿಯಾಗಿದ್ದಾನಲ್ಲವೇ." ಅಂದು ಪ್ರತಿ ಯೊಬ್ಬರೂ ತಂತಮ್ಮ ಕರ್ಮಗಳನ್ನು ಅನುಭವಿಸುತ್ತಾರೆ. ಎಲ್ಲರೂ ಅವರ ನೈಜ

ಒಡೆಯನ ಬಳಿಗೆ ಮರಳುತ್ತಾರೆ ಮತ್ತು ಅವರು ಮಾಡಿಕೊಂಡಿದ್ದ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. (ಯೂನುಸ್: 28-30)

ಆರಾಧ್ಯರೊಡನೆ ಪ್ರಶ್ನೆ

ಅಪರಾಧಿಗಳು ಸಹಭಾಗಿಗಳಾಗಿಸಿದವರೊಡನೆಯೂ ಆ ಮಹಾಸಭೆಯಲ್ಲಿಯೇ ಪ್ರಶ್ನಿಸಬೇಕಾಗಿದೆ. ಅಪರಾಧಿಗಳನ್ನೂ ಅವರು ಆರಾಧಿಸುತ್ತಿದ್ದವರನ್ನೂ ಒಂದುಗೂಡಿಸ ಲಾಗುವ ದಿನದಲ್ಲಿ! ಆ ಆರಾಧ್ಯರೊಡನೆ ಕೇಳಲಾಗುವುದು, “ಅಲ್ಲಾಹನ ಈ ದಾಸರನ್ನು ದಾರಿ ತಪ್ಪಿಸಿದವರು ನೀವೋ? ಅಥವಾ ಅವರು ಸ್ವಯಂ ದಾರಿತಪ್ಪಿದರೋ?” ಅವರು ಹೇಳುವರು, “ನೀನು ಪರಮ ಪಾವನನು. ನಿನ್ನ ಹೊರತು ಇತರರನ್ನು ನಮ್ಮ ರಕ್ಷಕ ಮಿತ್ರರನ್ನಾಗಿ ಮಾಡುವುದು ನಮಗೆ ಭೂಷಣವಾಗಿರಲಿಲ್ಲ, ಆದರೆ ನೀನು ಇವರಿಗೂ ಇವರ ಪೂರ್ವಿಕರಿಗೂ ಸಾಕಷ್ಟು ಜೀವನ ಸಾಧನಗಳನ್ನು ನೀಡಿದೆ. ಎಷ್ಟೆಂದರೆ, ಕೊನೆಗೆ ಇವರು ಉಪದೇಶವನ್ನು ಮರೆತುಬಿಟ್ಟರು ಮತ್ತು ದುರ್ಗತಿಗೊಳಗಾಗಿ ಬಿಟ್ಟರು.” ಈ ರೀತಿ (ನಿಮ್ಮ ಆರಾಧ್ಯರು) ನೀವಿಂದು ಹೇಳುತ್ತಿರುವ ಮಾತುಗಳನ್ನು ಸುಳ್ಳಾಗಿಸುವರು. ಅನಂತರ ನೀವು ನಿಮ್ಮ ದುರ್ಗತಿಯನ್ನೂ ನಿವಾರಿಸಲಾರಿರಿ. ಎಲ್ಲಿಂದಲೂ ಸಹಾಯವನ್ನೂ ಪಡೆಯಲಾರಿರಿ. ನಿಮ್ಮಲ್ಲಿ ಯಾರೇ ಅಕ್ರಮವೆಸಗಿದರೂ ಅವನಿಗೆ ನಾವು ಮಹಾ ಯಾತನೆಯ ಸವಿಯನ್ನು ಉಣಿಸುವೆವು. (ಅಲ್ ಫುರ್ಖಾನ್: 18-19)

ದೇವಚರರೊಡನೆ

ಪ್ರಾಚೀನ ಕಾಲದಿಂದಲೇ ಮುಶ್ರಿಕರು ದೇವಚರರನ್ನು ದೇವಿ ದೇವತೆಗಳೆಂದು ಪೂಜಿಸುತ್ತಿದ್ದಾರೆ. ಆದ್ದರಿಂದ ದೇವಚರರೊಡನೆಯೇ ಪ್ರಶ್ನೆ ಕೇಳಬೇಕಾಗಿದೆ. ಅವರೂ ಆಲಿಸಲಿ, ಅವನು ಎಲ್ಲ ಮಾನವರನ್ನೂ ಹಾಜರುಪಡಿಸುವ ದಿನ, ಅಲ್ಲಾಹನು ದೇವ ಚರರೊಡನೆ, “ಇವರು ಆರಾಧಿಸುತ್ತಿದ್ದುದು ನಿಮ್ಮನ್ನೇ?” ಎಂದು ಕೇಳುವನು. ಆಗ ಅವರು, “ನೀನು ಪರಮ ಪಾವನನು, ನಮ್ಮ ಸಂಬಂಧವು ನಿನ್ನೊಂದಿಗಿದೆ. ಇವರೊಂದಿ ಗಿಲ್ಲ. ವಾಸ್ತವದಲ್ಲಿ ಇವರು ಯಕ್ಷಗಳನ್ನು ಆರಾಧಿಸುತ್ತಿದ್ದರೇ ಹೊರತು ನಮ್ಮನ್ನಲ್ಲ, ಇವರಲ್ಲಿ ಹೆಚ್ಚಿನವರು ಅವರ ಮೇಲೆಯೇ ವಿಶ್ವಾಸವಿರಿಸಿದರು” ಎಂದು ಉತ್ತರ ಕೊಡು ವರು. (ಆಗ ನಾವು) “ಇಂದು ನಿಮ್ಮಲ್ಲಾರೂ ಯಾರಿಗೂ ಲಾಭವನ್ನಾಗಲಿ ನಷ್ಟವನ್ನಾಗಲಿ ಉಂಟು ಮಾಡಲಾರನು ಮತ್ತು ಅಕ್ರಮಿಗಳೊಡನೆ, ನೀವು ಸುಳ್ಳಾಗಿಸುತ್ತಿದ್ದ ನರಕ ಯಾತನೆಯ ರುಚಿಯನ್ನು ಈಗ ಸವಿಯಿರಿ” ಎಂದು ಹೇಳುವೆವು.

(ಸಬಾ: 40-42)

ಜಿನ್ನ್(ಯಕ್ಷ)ಗಳೊಡನೆ

ಇವರು ಯಕ್ಷರನ್ನು ನಂಬಿದ್ದರು ಮತ್ತು ಅವರನ್ನು ಪೂಜಿಸುತ್ತಿದ್ದರೆಂದು ದೇವಚರರು ಹೇಳಿದ್ದರಲ್ಲವೇ. ಯಕ್ಷರೊಡನೆಯೇ ಕೇಳಿ ನೋಡೋಣ. ಅಲ್ಲಾಹ್ ಇವರೆಲ್ಲರನ್ನು ಸುತ್ತುವರಿದು ಒಟ್ಟುಗೂಡಿಸುವ ದಿನ (ಯಕ್ಷರನ್ನುದ್ದೇಶಿಸಿ), "ಓ ಯಕ್ಷ ವರ್ಗವೇ! ನೀವಂತು ಮಾನವ ವರ್ಗವನ್ನು ಚೆನ್ನಾಗಿ ಮೋಸ ಮಾಡಿದಿರಿ" ಎಂದು ಹೇಳುವನು. ಮನುಷ್ಯರ ಪೈಕಿ ಅವರ ಆಪ್ತ ಮಿತ್ರರಾದವರು, "ಪ್ರಭೂ, ನಮ್ಮಲ್ಲಿ ಪ್ರತಿಯೊಬ್ಬನೂ ಇನ್ನೊಬ್ಬನನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾನೆ. ಈಗ ನೀನು ನಮಗಾಗಿ ನಿಶ್ಚಯಿಸಿದ್ದ ಕಾಲಘಟ್ಟಕ್ಕೆ ನಾವು ಬಂದು ತಲಪಿದ್ದೇವೆ" ಎಂದು ಹೇಳುವರು. ಆಗ ಅಲ್ಲಾಹ್, "ಈಗ ನರಕಾಗ್ನಿಯೇ ನಿಮ್ಮ ವಾಸಸ್ಥಾನವಾಗಿದ್ದು ಅದರಲ್ಲಿ ನೀವು ಸದಾ ವಾಸಿಸುವಿರಿ" ಎಂದು ಹೇಳುವನು. ಅಲ್ಲಾಹ್ ಯಾರನ್ನು ರಕ್ಷಿಸಲಿಚ್ಛಿಸುವನೋ ಅವರು ಮಾತ್ರ ಅದರಿಂದ ರಕ್ಷಣೆ ಹೊಂದುವರು. **(ಅಲ್ ಅನ್‌ಆಮ್: 128)**

ಹೊಸ ತಂತ್ರ?

ಈಸಾ, ಉರ್‌ಝೈರ್ ಮುಂತಾದ ಪ್ರವಾದಿಗಳು; ಜಿಬ್ರೀಲ್, ಮೀಕಾಈಲ್ ಮುಂತಾದ ದೇವಚರರು; ವದ್ದ್, ಸುವಾಅ್ ಮುಂತಾದ ಪೂರ್ವಜರು; ಬದ್ರ್ ಮತ್ತು ಉಹ್ದ್‌ನ ಹುತಾತ್ಮರು, ಔಲಿಯಾಗಳು ಮುಂತಾದವರನ್ನು ಕರೆದು ಪ್ರಾರ್ಥಿಸಿದವರೂ ಒಂದು ಹೊಸ ತಂತ್ರವನ್ನು ಪ್ರಯೋಗಿಸುತ್ತಿರುವಂತೆ ಭಾಸವಾಗುತ್ತದೆ. ಅವರೆಲ್ಲರೂ ದೇವನ ಪ್ರೀತಿಪಾತ್ರರಲ್ಲವೇ, ಆ ಸ್ಥಿತಿಯಿಂದ ಲಾಭಗಳಿಸಬಹುದೇ ಎಂಬ ಪ್ರಯತ್ನವಾಗಿರಬಹುದು. "ದೇವಾ, ನೀನು ಮೆಚ್ಚದ ಭೂತಪ್ರೇತಗಳನ್ನು ನಾವು ಆರಾಧಿಸಿಲ್ಲವಲ್ಲಾ, ನಿನ್ನ ಪ್ರೀತಿಗೆ ಪಾತ್ರರಾದ ಈ ಮಹಾಪುರುಷರನ್ನಲ್ಲವೇ! ಆದ್ದರಿಂದ, ನಿನಗೆ ಅವರ ಮೇಲಿರುವ ಪ್ರೀತಿಯಿಂದಲಾದರೂ..!" ಆದರೆ ಅವರ ಮಾತು ಮುಗಿಯುವುದಕ್ಕಿಂತ ಮುಂಚೆಯೇ ಆ ಮಹಾಪುರುಷರು ಬಿಸಿ ಉತ್ತರ ನೀಡುತ್ತಾರೆ, "ಏನು? ಶಿರ್ಕ್ ಎಂಬ ಮಹಾಪಾಪ ಮಾಡಿ ಈಗ ಅದನ್ನು ನಮ್ಮ ಮೇಲೆ ಹೊರಿಸುತ್ತೀರಾ? ನಾವು ಅದನ್ನು ತಿಳಿದೇ ಇಲ್ಲ, ಮಾತ್ರವಲ್ಲ ನಾವು ಹೇಳಿಕೊಟ್ಟದ್ದಕ್ಕೆ ವಿರುದ್ಧವಾಗಿ ನೀವು ವರ್ತಿಸಿದ್ದೀರಿ. ನೀವು ಹಸಿ ಸುಳ್ಳರು." ಹೀಗೆ ಆ ತಂತ್ರವೂ ವಿಫಲವಾಗುತ್ತದೆ.

ಇನ್ನು, ಸಂಪೂರ್ಣ ಶರಣೇ ಗತಿ. ಎಲ್ಲ ನಿರೀಕ್ಷೆಗಳೂ ಭಗ್ನವಾದುವು. ಮುಶ್ರಿಕರು ತಾವು ನಿಶ್ಚಯಿಸಿಕೊಂಡಿದ್ದ ಸಹಭಾಗಿಗಳನ್ನು ಕಂಡಾಗ, "ಓ ನಮ್ಮ ಪ್ರಭೂ! ನಿನ್ನನ್ನು ಬಿಟ್ಟು ನಾವು ಪ್ರಾರ್ಥಿಸುತ್ತಿದ್ದ ಸಹಭಾಗಿಗಳು ಇವರೇ!" ಎಂದು ಹೇಳುವರು. ಆಗ

ಅವರ ಆ ಆರಾಧ್ಯರುಗಳು, 'ನೀವು ಸುಳ್ಳುಗಾರರು' ಎಂದು ಉತ್ತರ ಕೊಡುವರು. ಆಗ ಇವರೆಲ್ಲರೂ ಅಲ್ಲಾಹನ ಮುಂದೆ ಶರಣು ಹೋಗುವರು ಮತ್ತು ಈ ಲೋಕದಲ್ಲಿ ಅವರು ಸೃಷ್ಟಿಸುತ್ತಿದ್ದ ಅವರ ಸುಳ್ಳೆಲ್ಲ ಮಾಯವಾಗಿ ಹೋಗುವುವು. **(ಅನ್ನಹ್ಲ್: 86-87)**

ಪ್ರವಾದಿಗಳೊಡನೆ

ಪ್ರವಾದಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸದಿರುವುದರಿಂದಾಗಿ ನಾವು ದಾರಿ ತಪ್ಪಿದೆವೆಂದು ಇವರು ಹೇಳಬಹುದೇ? ಹಾಗೆ ಹೇಳುವ ಅವಕಾಶವನ್ನೂ ಉಳಿಸುವುದಿಲ್ಲ. ಇವರೊಡನೆ ಕೇಳುವಂತೆಯೇ ಪ್ರವಾದಿಗಳೊಡನೆಯೂ ಪ್ರಶ್ನಿಸಲಾಗುವುದು. **(ಅಲ್ ಅಅ್‌ರಾಫ್: 6)**

ಎಲ್ಲ ಪ್ರವಾದಿಗಳನ್ನು ಒಂದುಗೂಡಿಸಿ ಅಲ್ಲಾಹ್ ಕೇಳುವನು, "ನಿಮಗೆ ನಿಮ್ಮ ಜನತೆಯಿಂದ ಯಾವ ಉತ್ತರ ದೊರೆಯಿತು?" ಅವರು ಹೇಳುವರು "(ನಾವು ಅವರನ್ನು ಸಂಧಿಸಿದ್ದ ಕಾಲದಲ್ಲಿ ಏನೆಲ್ಲ ಸಂಭವಿಸಿತೆಂದು ಮಾತ್ರ ನಾವು ತಿಳಿದಿದ್ದೇವೆ ಅನಂತರದ ವಿವರ) ನಮಗೇನೂ ತಿಳಿದಿಲ್ಲ, ರಹಸ್ಯವಾಗಿರುವ ಸಕಲ ಪರಮಾರ್ಥಗಳನ್ನು ನೀನೇ ಅರಿಯುವವನಾಗಿರುತ್ತೀ" ಎಂದು ನಿವೇದಿಸುವರು. **(ಅಲ್ ಮಾಇದ: 109)**

ಈ ಲೋಕದಲ್ಲಿ ಪ್ರವಾದಿ ಈಸಾರ(ಅ) ಅನೇಕ ಅನುಯಾಯಿಗಳಿದ್ದಾರೆ. ಅವರೊಡನೆ ಪ್ರತ್ಯೇಕವಾಗಿ ಕೇಳಿಬಿಡೋಣ: "ಓ ಮರ್ಯಮರ ಪುತ್ರ ಈಸಾ, ಅಲ್ಲಾಹನ ಹೊರತು ನನ್ನನ್ನೂ ನನ್ನ ಮಾತೆಯನ್ನೂ ದೇವರನ್ನಾಗಿ ಮಾಡಿಕೊಳ್ಳಿರೆಂದು ನೀವು ಜನರೊಡನೆ ಹೇಳಿದ್ದೀರಾ?" ಎಂದು ಕೇಳುವಾಗ ಅವರು ಉತ್ತರಿಸುವರು, "ನೀನು ಪರಮ ಪಾವನನು, ನನಗೆ ಹೇಳಲು ಹಕ್ಕಿಲ್ಲದಂತಹ ಮಾತುಗಳನ್ನು ಹೇಳುವ ಕಾರ್ಯ ನನ್ನದಾಗಿರಲಿಲ್ಲ, ನಾನು ಹಾಗೆ ಹೇಳಿರುತ್ತಿದ್ದರೆ ಖಂಡಿತವಾಗಿಯೂ ಅದು ನಿನಗೆ ತಿಳಿದಿರುತ್ತಿತ್ತು." **(ಅಲ್ ಮಾಇದ: 116)**

ಪ್ರವಾದಿಗಳ ಸಾಕ್ಷ್ಯ

ಆಗಲಿ, ಇನ್ನೊಂದು ಕೆಲಸವನ್ನೂ ಮಾಡುತ್ತೇನೆ. ಎಲ್ಲ ಸಮುದಾಯಗಳಿಗೂ ಕಳುಹಿಸಲಾಗಿದ್ದ ಪ್ರವಾದಿಗಳನ್ನು ಸಾಕ್ಷಿಗಳಾಗಿ ತರುತ್ತೇನೆ. ಅವರು ಕಲಿಸಿದ್ದನ್ನೇ ಇವರು ಅಂಗೀಕರಿಸಿದ್ದಾರೆಯೇ ಎಂದು ತಿಳಿಯುವುದು ಮಾತ್ರವಲ್ಲ, ಬೇರೇನಾದರೂ ಹೇಳಲಿಕ್ಕಿದ್ದರೆ ಅದನ್ನೂ ಕೇಳಿ ಬಿಡೋಣ. ಅವಕಾಶ ಕೊಡೋಣ! ಆದರೆ ಅವರು ಏನು ತಾನೇ ಹೇಳಬಹುದು! ಏನನ್ನೂ ಹೇಳಲಾಗದ ರೀತಿಯಲ್ಲಿ ಅಪರಾಧಗಳು ಈಗಾಗಲೇ ಸ್ಪಷ್ಟವಾಗಿದೆ. ಏನನ್ನಾದರೂ ಹೇಳಲು ಇನ್ನು ಅವಕಾಶ ನೀಡಬಾರದು. ಪಶ್ಚಾತ್ತಾಪ ಪಟ್ಟು

ಮರಳಿರೆಂದು ಹೇಳುವ ಸಂದರ್ಭವೂ ಗತಿಸಿದೆ. ಹೇಗಿದ್ದರೂ ಬರಲಿ. "ಎಲ್ಲ ಸಮುದಾಯದಿಂದ ನಾವು ಸಾಕ್ಷಿಗಳನ್ನು ಹಾಜರುಪಡಿಸುವ ದಿನ. ಸತ್ಯನಿಷೇಧಿಗಳಿಗೆ ಕುತರ್ಕಗಳನ್ನು ಮುಂದಿರಿಸಲಿಕ್ಕೂ ಅವಕಾಶ ಕೊಡಲಾಗಲಿಕ್ಕಿಲ್ಲ. (ಏನೂ ಹೇಳಲಾಗದಂತೆ ಸಾಬೀತಾಗಿರುವುದರಿಂದ) ಅವರಿಂದ ಪಶ್ಚಾತ್ತಾಪ ಮತ್ತು ಕ್ಷಮೆ ಯಾಚನೆಯ ತಗಾದೆಯನ್ನು ಮಾಡಲಾಗಲಿಕ್ಕಿಲ್ಲ. (ಆ ಸಂದರ್ಭ ಕಳೆದಿರುವುದರಿಂದ)" **(ಅನ್ನಹ್ಲ್: 84)**

ಅದೇನಿದ್ದರೂ ತಮ್ಮ ಧೋರಣೆಯ ಸಮರ್ಥನೆಗೆ ತಕ್ಕುದಾದ ಏನಾದರೂ ಹೇಳಲಿಕ್ಕಿದೆಯೇ ಎಂದು ಈ ಸಾಕ್ಷಿಗಳ ಮೂಲಕ ಅವರೊಡನೆ ಕೇಳಲೇ ಬೇಕು.

"ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ತರುವಾಗಲೂ ಇವರ ಮೇಲೆ [ಮುಹಮ್ಮದ್‌ರನ್ನು(ಸ)] ಸಾಕ್ಷಿಯಾಗಿ ನಿಲ್ಲಿಸುವಾಗಲೂ ಇವರೇನು ಮಾಡುವರೆಂದು ಯೋಚಿಸಿರಿ. ಆಗ ಧಿಕ್ಕರಿಸಿ ನಡೆದವರು ಹಾಗೂ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದವರು, 'ಅಕಟಾ! ಭೂಮಿ ಬಿರುಕು ಬಿಡುತ್ತಿದ್ದರೆ! ಮತ್ತು ನಾವು ಅದರೊಳಗೆ ಸೇರಿ ಹೋಗುತ್ತಿದ್ದರೆ!' ಎಂದು ಅಪೇಕ್ಷಿಸುವರು. ಅವರು ಅಲ್ಲಿ ಯಾವುದನ್ನೂ ಅಲ್ಲಾಹನಿಂದ ಅಡಗಿಸಲಾರರು." **(ಅನ್ನಿಸಾ: 41-42)**

ಸಂಪೂರ್ಣ ನ್ಯಾಯ ಪಾಲಿಸುವ ಅಲ್ಲಾಹನ ಮುಂದೆ ಇನ್ನು ಯಾವುದೇ ತಂತ್ರ ನಡೆಯದೆಂದು ಮನಗಂಡಾಗ ನಾಯಕರೂ ಅನುಯಾಯಿಗಳೂ ಪರಸ್ಪರ ಜಗಳಾಡುವರು. ಎಲ್ಲ ಪರದೆಗಳೂ ಸರಿದು ಸಕಲರೂ ಪ್ರಭುವಿನ ಮುಂದೆ ನಿಂತಿದ್ದಾರೆ. ಈ ಲೋಕದಲ್ಲಿ ಅಶಕ್ತರಾಗಿದ್ದವರು ಅಹಂಭಾವಿಗಳಾಗಿದ್ದವರೊಡನೆ, ಭೂಲೋಕದಲ್ಲಿ ನಾವು ನಿಮಗೆ ಅಧೀನರಾಗಿದ್ದೆವು. ಈಗ ನೀವು ನಮ್ಮನ್ನು ಅಲ್ಲಾಹನ ಶಿಕ್ಷೆಯಿಂದ ರಕ್ಷಿಸಲಿಕ್ಕಾಗಿ ಏನಾದರೂ ಮಾಡಬಲ್ಲಿರಾ? ಎಂದು ಕೇಳುವರು. (ಅದಕ್ಕೆ) ಅವರು (ಹೀಗೆ) ಉತ್ತರ ಕೊಡುವರು, "ಅಲ್ಲಾಹ್ ನಮಗೆ ಮೋಕ್ಷದ ದಾರಿಯನ್ನು ತೋರಿಸಿ ಕೊಡುತ್ತಿದ್ದರೆ ನಾವು ನಿಮಗೂ ಅದನ್ನು ಖಂಡಿತ ತೋರಿಸಿಕೊಡುತ್ತಿದ್ದೆವು. ಈಗ ನಾವು ಪ್ರಲಾಪಿಸಿದರೂ ಸಹಿಸಿಕೊಂಡರೂ (ಪರಿಣಾಮ) ಒಂದೇ. ಹೇಗಿದ್ದರೂ ನಮಗೆ ರಕ್ಷಣೆಯ ಯಾವ ದಾರಿಯೂ ಇಲ್ಲ." **(ಇಬ್ರಾಹೀಮ್: 21)**

ಅರ್ಥಗರ್ಭಿತ ವಾಗ್ವಾದ

ಇಂದು ನಾಯಕರು, ಪುರೋಹಿತರು, ಶೇಖ್‌ಗಳು, ಸಂತರು, ಅಕ್ರಮಿ ಮತ್ತು ಶೋಷಕ ನಾಯಕರ ಹಿಂದೆ ಕಣ್ಣು ಮುಚ್ಚಿಕೊಂಡು ಓಡಾಡುವ, ಹಿತಾಕಾಂಕ್ಷಿಗಳ ಉಪದೇಶಗಳಿಗೆ ಕಿವಿಗೊಡದೆ ತಮ್ಮ ನಾಯಕರ ದುರಾಚಾರಗಳನ್ನೆಲ್ಲ ಸಮರ್ಥಿಸುವ,

ಸತ್ಯಾಸತ್ಯ ವಿವೇಚನೆ ಅಥವಾ ನ್ಯಾಯಾನ್ಯಾಯ ಪ್ರಜ್ಞೆಯಿಲ್ಲದೆ ಕೇವಲ ಪಕ್ಷ ವಹಿಸಿ ಮಾತಾಡುವ, ಅಲ್ಲಾಹನ ಆದೇಶ ಮತ್ತು ಸಂತೃಪ್ತಿಯನ್ನೂ ಪರಿಶೀಲಿಸಬೇಕೆಂದು ಯಾವನಾದರೂ ಬಡಪಾಯಿ ಹೇಳಿಬಿಟ್ಟರೆ ನಾಯಕರ ಸಂಜ್ಞೆಯಂತೆ ಆತನ ಕತೆ ಮುಗಿಸಿಬಿಡುವಂತಹ ಈ ಅನುಯಾಯಿ ವೃಂದಕ್ಕೆ ಅಂದು ಕಿಯಾಮತ್ ದಿನ ಕಣ್ಣು ತೆರೆದಾಗ ನಾವು ಈಗ ಎಲ್ಲಿಗೆ ತಲಪಿರುವೆವೆಂದು ವ್ಯಕ್ತವಾಗುತ್ತದೆ. ಈ ನಾಯಕರು ನಮ್ಮನ್ನು ಎಂತಹ ದುರ್ಗತಿಗೆ ತಲಪಿಸಿದ್ದಾರೆ. ಅವರ ವಾಗ್ದಾನಗಳು ಎಷ್ಟೊಂದು ಪೊಳ್ಳಾಗಿದ್ದುವು ಎಂಬುದು ಮನವರಿಕೆಯಾಗುತ್ತದೆ. ಅವರು ಆ ನಾಯಕರತ್ತ ತಿರುಗಿ ಬೊಬ್ಬಿಡುತ್ತಾರೆ. "ನೀವು ನಮ್ಮನ್ನು ವಂಚಿಸಿದಿರಿ. ನಮ್ಮ ಈ ದುರ್ಗತಿಗೆ ನೀವೇ ಜವಾಬ್ದಾರರು. ಅಲ್ಲಾಹನ ಗ್ರಂಥವನ್ನು ಆಲಿಸುವುದರಿಂದ ನೀವು ನಮ್ಮನ್ನು ತಡೆದಿರಿ. ಸತ್ಯಸಂಧ ಧರ್ಮಪ್ರಚಾರಕರನ್ನು ನೀವು ಧರ್ಮದ ವೈರಿಗಳೆಂದು ಹೇಳಿ ನಮ್ಮನ್ನು ನಂಬಿಸಿದಿರಿ. ಧರ್ಮವೇ ಮೂಢತನವೆಂದೂ ಅದು ಜನರನ್ನು ಮಂಕುಗೊಳಿಸುವ ಅಫೀಮೆಂದೂ ನೀವು ಪ್ರಚಾರ ಮಾಡಿದಿರಿ. ಕೇವಲ ಲೌಕಿಕ ಸಿದ್ಧಾಂತಗಳನ್ನು ನಾನಾ ರೀತಿಯಿಂದ ನಮ್ಮ ಮಿದುಳಿನಲ್ಲಿ ತುಂಬಿಸಿದಿರಿ. ಕೇವಲ ಐಹಿಕ ಬೇಡಿಕೆಯ ಆಧಾರದಲ್ಲಿ ಎಲ್ಲ ವಿಷಯಗಳನ್ನೂ ವ್ಯಾಖ್ಯಾನಿಸಿ ನಾವು ಅದನ್ನು ಒಪ್ಪುವಂತೆ ಮಾಡಿದಿರಿ. ಪಕ್ಷ, ವರ್ಗಭೇದಗಳನ್ನು ಪದೇಪದೇ ಕೆರಳಿಸಿ ನಮ್ಮ ಗಮನ ಅತ್ತಿತ್ತ ಹರಿಯದಂತೆ ನೀವು ತಡೆದಿರಿ. 'ಲಾ ಇಲಾಹ ಇಲ್ಲಲ್ಲಾಹ್' ಎಂದು ಉಚ್ಚರಿಸಿರುವುದರಿಂದ ನೀವು ಎಂತಹ ಕಂದಾಚಾರಗಳನ್ನು ನಡೆಸಿದರೂ ಚಿಂತಿಲ್ಲ... ಆ ಪಕ್ಷ ದಲ್ಲಿ ಸೇರದಿದ್ದರಾಯಿತೆಂದು ಭಾಷಣ ಮಾಡಿದಿರಿ. ನಾವು ಅದಕ್ಕೆ ಮರುಳಾದೆವು. ನೀವು ಹೀಗೆ ಮಾಡದಿರುತ್ತಿದ್ದರೆ ನಾವು ಖಂಡಿತವಾಗಿಯೂ ಪ್ರವಾದಿಗಳನ್ನು ಅನುಸರಿಸಿ ಸಜ್ಜನರಾಗುತ್ತಿದ್ದೆವು. ಒಟ್ಟಿನಲ್ಲಿ, ನಮ್ಮನ್ನು ವಂಚಿಸಿರುವ ನೀವೇ ಇದಕ್ಕೆ ಹೊಣೆಗಾರರು."

ನಾಯಕರು ಉತ್ತರಿಸುತ್ತಾರೆ, "ನೀವು ಇದೆಂತಹ ಮೂರ್ಖತನದ ಮಾತುಗಳನ್ನು ಆಡುತ್ತಿರುವಿರಿ. ನಾಯಕರೆನಿಸಿಕೊಂಡ ನಾವು ಎಷ್ಟು ಮಂದಿ ಇದ್ದೇವೆ? ಕೇವಲ ಹತ್ತು ಅಥವಾ ನೂರು ಮಂದಿ, ಅವರಲ್ಲಿಯೂ ಮರಿನಾಯಕರಿದ್ದಾರೆ. ಲಕ್ಷಾಂತರ ಕೋಟ್ಯಂತರ ಸಂಖ್ಯೆಯಲ್ಲಿರುವ ನಿಮ್ಮನ್ನು ಬಲಾತ್ಕಾರದಿಂದ ನಮ್ಮ ಅನುಯಾಯಿಗಳಾಗಿ ಮಾಡು ವಂತಹ ಯಾವ ಆಯುಧ ನಮ್ಮಲ್ಲಿದೆ? ನೀವು ಒಂದು ವೇಳೆ ಸತ್ಯವಿಶ್ವಾಸಿಗಳಾಗುವ ತೀರ್ಮಾನ ಕೈಗೊಂಡಿದ್ದರೆ ನಮ್ಮ ನಾಯಕತ್ವ, ಪೌರೋಹಿತ್ಯ, ಅಧಿಕಾರವೆಲ್ಲವೂ ನುಚ್ಚುನೂರಾಗುತ್ತಿದ್ದುವು. ನಮ್ಮ ಪಕ್ಷದವರೂ ಸೈನಿಕರೂ ನೀವೇ ಆಗಿದ್ದಿರಲ್ಲವೇ! ನಮ್ಮ ನಾಯಕತ್ವ, ಶಕ್ತಿ ಮತ್ತು ಅಧಿಕಾರದ ಆಧಾರವು ನಿಮ್ಮ ಹಸ್ತಗಳಲ್ಲಿಯೇ ಇತ್ತು. ನೀವು

ಹರಕೆ ಉತ್ಸವಗಳನ್ನು ಜರಗಿಸದಿರುತ್ತಿದ್ದರೆ ನಮ್ಮ ಶೇಖ್-ಪುರೋಹಿತ ಸ್ಥಾನವು ಒಂದು ದಿನವಾದರೂ ನಡೆಯುತ್ತಿತ್ತೇ? ನೀವು ಜಯಕಾರ ಹಾಕದಿರುತ್ತಿದ್ದರೆ ನಮ್ಮನ್ನು ಯಾರಾದರೂ ಗಮನಿಸುತ್ತಿದ್ದರೇ? ನಮ್ಮ ಆಜ್ಞೆಯಂತೆ ನೀವು ಹಾರಾಡದಿರುತ್ತಿದ್ದರೆ ಒಬ್ಬನ ಮೇಲಾದರೂ ನಮ್ಮ ಅಧಿಕಾರ ನಡೆಯುತ್ತಿತ್ತೇ? ಪಕ್ಷದ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ ನಾಯಕರನ್ನು ನೀವು ಮಣ್ಣು ಮುಕ್ಕಿಸಿಲ್ಲವೇ? ಸತ್ಯವನ್ನು ನೇರವಾಗಿ ಹೇಳಿದ ಸಂತರನ್ನೂ ಶೇಖ್‌ರನ್ನೂ ನೀವು ಪಥಭ್ರಷ್ಟರೆಂದು ಸಾರಿ ಹೊರಹಾಕಲಿಲ್ಲವೇ? ಅಧಿಕಾರ ಹಸ್ತಗಳನ್ನು ಆಗಾಗ್ಗೆ ನೀವೇ ಬದಲಾಯಿಸಿಲ್ಲವೇ? ಹಾಗಾದರೆ ನೀವೇ ನಮ್ಮನ್ನು ನಾಯಕರಾಗಿ ಮಾಡಿದ್ದೀರಿ; ಸಂತ, ಶೇಖ್‌ರನ್ನಾಗಿ ಮಾಡಿದ್ದೀರಿ. ಈಗ ಅದೆಲ್ಲವನ್ನೂ ಕಡೆಗಣಿಸಿ, ನಮ್ಮ ಮೇಲೆ ಹರಿಹಾಯುತ್ತೀರಾ? ನಿಜ ತಿಳಿಸಲೇ! ವಸ್ತುತಃ ನೀವು ಪ್ರವಾದಿಗಳ ಮಾರ್ಗವನ್ನು ಅವಲಂಬಿಸಲು ಸಿದ್ಧರಿರಲಿಲ್ಲ, ನೀವು ಸ್ವಾರ್ಥ ಹಿತಾಸಕ್ತಿ ಮತ್ತು ಇಚ್ಛೆಗಳ ಗುಲಾಮರಾಗಿದ್ದಿರಿ. ನಿಮ್ಮ ಸ್ವೇಚ್ಛೆಗಳ ಈಡೇರಿಕೆಗೆ ಪ್ರವಾದಿಗಳಿಗಿಂತ ನಮ್ಮ ಮಾರ್ಗವೇ ಸೂಕ್ತವೆಂದು ನೀವು ಭಾವಿಸಿದಿರಿ. ನೀವು ತಪ್ಪು-ಒಪ್ಪುಗಳನ್ನು ಲೆಕ್ಕಿಸದ ಐಹಿಕ ಮೋಹಿಗಳಾಗಿದ್ದಿರಿ. ನಾವು ಅದಕ್ಕೆ ಸೂಕ್ತವಾದವರೆಂದು ನೀವು ತಿಳಿದಿರಿ. ಯಾವ ಪಾಪವನ್ನೂ ಮಾಡುವಂತಹ ಮುಕ್ತ ಸ್ವಾತಂತ್ರ್ಯ ನಿಮಗೆ ಸಿಗಬೇಕು. ತರುವಾಯ ಯಾವುದಾದರೂ ಹರಕೆ ಉತ್ಸವಗಳಿಂದ ಅವುಗಳಿಗೆ ಕ್ಷಮೆ ದೊರೆಯಬೇಕು- ಇದು ನಿಮ್ಮ ಉದ್ದೇಶವಾಗಿತ್ತು. ಅದರ ಹೊಣೆ ವಹಿಸುವ ನಾಯಕರನ್ನು ನೀವು ಹುಡುಕಿದಿರಿ. ನೀಮ ಪರಂಪರಾಗತವಾಗಿ ಮಾಡುತ್ತಿದ್ದ ಎಲ್ಲ ಶಿರ್ಕ್-ಬಿದ್‌ಅತ್, ಅನಾಚಾರ-ದುರಾಚಾಗಳು ಸತ್ಯವೆಂದು ವಾದಿಸಿ ನಿಮ್ಮನ್ನು ಒಲಿಸಿ ಸ್ವಾರ್ಥ ಲಾಭಗಳಿಸುವ ಪುರೋಹಿತರೇ ನಿಮಗೆ ಬೇಕಾಗಿತ್ತು. ನಿಮ್ಮ ಅಭೀಷ್ಟಕ್ಕನುಸಾರ ಅಲ್ಲಾಹನ ಧರ್ಮವನ್ನು ತಿರುಚುವವರು ನಿಮಗೆ ಬೇಕಾಗಿತ್ತು. ಪರಲೋಕದಲ್ಲಿ ಏನೇ ಆಗಲಿ, ಇಲ್ಲಿ ಕಾರ್ಯ ಲಾಭ ಗಳಿಸಿಕೊಡುವಂತಹ ನಾಯಕರನ್ನೇ ನೀವು ಹುಡುಕಿದಿರಿ. ನೀವು ಎಂತಹ ಭ್ರಷ್ಟಾಚಾರವನ್ನು ಮಾಡಿದರೂ ನಿಮ್ಮನ್ನು ರಕ್ಷಿಸುವಂತಹ ಅಧಿಕಾರಿಗಳನ್ನು ನೀವು ಬಯಸಿದಿರಿ. ನಾವು ಅದಕ್ಕೆ ಯೋಗ್ಯರೆಂದು ನೀವು ಮನಗಂಡಿರಿ. ವಿಶೇಷ ಪರಿಸ್ಥಿತಿಯಲ್ಲಿ ಏನೋ ಕೆಲವನ್ನು ಕಲಿತವರೆಂಬ ಹೆಸರು ನಮಗೆ ದೊರೆತಿದೆ, ನಮ್ಮ ನಾಲಗೆ ಸ್ವಲ್ಪ ಉದ್ದವಿದೆ, ಸ್ವಾರ್ಥ ಹಿತಾಸಕ್ತಿಗಳಿಗಾಗಿ ಅಗತ್ಯಬಿದ್ದರೆ ಇಡೀ ಜಗತ್ತನ್ನೇ ಸುಟ್ಟು ಬಿಡುವಂತಹ ಸಾಮರ್ಥ್ಯ ನಮ್ಮಲ್ಲಿ ಸ್ವಲ್ಪ ಅಧಿಕವಿತ್ತು ಎಂಬುದರ ಹೊರತು ನಿಮಗೂ ನಮಗೂ ಯಾವ ವ್ಯತ್ಯಾಸವಿದೆ. ಒಟ್ಟಿನಲ್ಲಿ ನಾವಿಬ್ಬರೂ ತಂತಮ್ಮ ಲಾಭಗಳಿಗಾಗಿ ಪರಸ್ಪರ ಅಲಿಖಿತ ಮೈತ್ರಿ ಮಾಡಿಕೊಂಡಿದ್ದೆವೆಂಬುದು ನಿಜ. ಹೀಗಿರುತ್ತಾ ಎಲ್ಲವನ್ನೂ

ನಮ್ಮ ಮೇಲೆ ಹೊರಿಸಿ ನೀವು ಜಾರಿಕೊಳ್ಳಲು ಪ್ರಯತ್ನಿಸುವುದೇಕೆ?"

ಅನುಯಾಯಿಗಳು ಪುನಃ ಹೇಳುತ್ತಾರೆ: ನೀವು ಮಹಾ ದುಷ್ಟರೇ ಸರಿ. ರಾತ್ರೆ ಹಗಲು ಎಡೆಬಿಡದೆ ನಮ್ಮ ಬೆನ್ನುಹತ್ತಿ ಹೊಸಹೊಸ ಕುತಂತ್ರಗಳಿಂದ ನಮ್ಮನ್ನು ಮೋಸಗೊಳಿಸಿ ಈಗ ಜಾರುತ್ತಿರುವಿರಲ್ಲಾ! ಒಹೋ! ನಾವು ಸಮಾನ ಭಾಗಿಗಳಂತೆ! ಏನು ಮಾಡೋಣ! ದುಃಖ ನೋವುಗಳನ್ನು ಅನುಭವಿಸುವುದರ ಹೊರತು ಯಾರೊಡನೆ ಹೇಳಲಿ! ಇನ್ನೊಂದು ಅವಕಾಶ ದೊರೆತಿದ್ದರೆ ಅವರಿಗೆ ಬುದ್ಧಿ ಕಲಿಸಬಹುದಾಗಿತ್ತು... ಅದೋ ಕಠಿಣ ಶಿಕ್ಷೆ ಬರಲಿದೆ. ರಾಜಾಧಿರಾಜನು ಕೇವಲ ನ್ಯಾಯವನ್ನೇ ನೋಡುತ್ತಾನೆ. ನಮ್ಮ ಕರ್ಮಗಳ ಫಲವನ್ನು ನಾವು ಅನುಭವಿಸಲೇಬೇಕು.

ನಾಯಕರ ಮತ್ತು ಅನುಯಾಯಿಗಳ ಈ ವಾಗ್ವಾದವು ಇಲ್ಲಿಗೆ ಮುಗಿಯುವುದಿಲ್ಲ. ನರಕದಲ್ಲಿ ಬಿದ್ದು ನರಳಾಡುವಾಗ ಅದು ಇನ್ನಷ್ಟು ರೂಕ್ಷವಾಗುತ್ತದೆ. ಅಕಟಾ! ಈ ಅಕ್ರಮಿಗಳು ತಮ್ಮ ಪ್ರಭುವಿನ ಮುಂದೆ ನಿಲ್ಲುವಾಗಿನ ಇವರ ಅವಸ್ಥೆಯನ್ನು ನೀವು ಕಾಣುತ್ತಿದ್ದರೆ! ಆಗ ಇವರು ಪರಸ್ಪರ ಆರೋಪ ಹೊರಿಸುವರು. ಈ ಲೋಕದಲ್ಲಿ ಮರ್ದಿತರಾಗಿದ್ದವರು ಅಹಂಕಾರಿಗಳೊಡನೆ, "ನೀವಿಲ್ಲದಿರುತ್ತಿದ್ದರೆ ನಾವು ಸತ್ಯವಿಶ್ವಾಸಿಗಳಾಗುತ್ತಿದ್ದೆವು" ಎನ್ನುವರು. ಆಗ ಆ ಅಹಂಕಾರಿಗಳು ಈ ಮರ್ದಿತರೊಡನೆ, "ನಾವು ನಿಮ್ಮ ಬಳಿಗೆ ಬಂದಿದ್ದಂತಹ ಸನ್ಮಾರ್ಗದಿಂದ ನಿಮ್ಮನ್ನು ತಡೆದಿದ್ದೇವೆಯೇ? ಇಲ್ಲ, ವಾಸ್ತವದಲ್ಲಿ ಸ್ವತಃ ನೀವೇ ಅಪರಾಧಿಗಳಾಗಿದ್ದೀರಿ" ಎಂದು ಉತ್ತರಿಸುವರು. ಆ ಮರ್ದಿತರು ಅಹಂಕಾರಿಗಳೊಡನೆ, "ಅಲ್ಲ ವಾಸ್ತವದಲ್ಲಿ ಅದು ನಿಮ್ಮದೇ ಆಹೋರಾತ್ರಿಯ ಕುತಂತ್ರವಾಗಿತ್ತು. ನಾವು ಅಲ್ಲಾಹನನ್ನು ನಿರಾಕರಿಸಬೇಕೆಂದೂ ಇತರರನ್ನು ಅವನಿಗೆ ಸರಿಸಮಾನರಾಗಿ ಪರಿಗಣಿಸಬೇಕೆಂದೂ ನೀವು ನಮ್ಮೊಡನೆ ಹೇಳುತ್ತಿದ್ದಿರಿ" ಎಂದು ಹೇಳುವರು. ಕೊನೆಗೆ ಇವರು ಯಾತನೆಯನ್ನು ಕಾಣುವಾಗ ತಮ್ಮ ಮನಸ್ಸಿನಲ್ಲಿ ಪಶ್ಚಾತ್ತಾಪ ಪಡುವರು ಮತ್ತು ನಾವು ಈ ಸತ್ಯನಿಷೇಧಿಗಳ ಕೊರಳುಗಳಿಗೆ ಸಂಕೋಲೆಗಳನ್ನು ಹಾಕಿ ಬಿಡುವೆವು. ಜನರಿಗೆ ಅವರ ಕರ್ಮಗಳಿಗೆ ತಕ್ಕುದಾದ ಫಲವನ್ನೇ ಹೊರತು ಬೇರೆ ಪ್ರತಿಫಲವನ್ನು ಕೊಡಲು ಸಾಧ್ಯವೇ? **(ಸಬಾ: 31-33)**

ಅಲ್ಲಾಹನಿಗೆ ಯಾರನ್ನೂ ಸಹಭಾಗಿಗೊಳಿಸಬಾರದೆನ್ನುವಾಗ ತೌಹೀದ್ ವಿರೋಧಿಗಳು ಎಂತಹ ಪರಾಕ್ರಮವನ್ನು ತೋರಿಸುತ್ತಾರೆಂದು ಎಲ್ಲರಿಗೂ ತಿಳಿದಿದೆಯಷ್ಟೆ. ಅಪಹಾಸ್ಯ, ದೌರ್ಜನ್ಯ ಇತ್ಯಾದಿ ಎಲ್ಲ ಕಿರುಕುಳಗಳನ್ನು ನೀಡುತ್ತಾರೆ. ಏಕದೇವವಿಶ್ವಾಸಿಗಳನ್ನು ಗೇಲಿ ಮಾಡಿ ಹೀನೈಸಲು ತಮ್ಮಿಂದ ಸಾಧ್ಯವಿರುವುದನ್ನೆಲ್ಲ ಮಾಡುತ್ತಾರೆ. ತಾವು

ಅಲ್ಲಾಹನಿಗೆ ಸಹಭಾಗಿಗಳಾಗಿಸಿದವರನ್ನು ಬೆಂಬಲಿಸಲಿಕ್ಕಾಗಿ ಹೀಗೆಲ್ಲ ಮಾಡುತ್ತಾರೆ. ಆದರೆ ಆ ಕಾರಣದಿಂದಲೇ ಅಲ್ಲಾಹನು ಅವರನ್ನು ಅಂತ್ಯ ದಿನದಂದು ಅತ್ಯಂತ ಹೀನ ರನ್ನಾಗಿ ಮಾಡುತ್ತಾನೆ. ಮುಂದೆ ಪುನರುತ್ಥಾನ ದಿನದಂದು ಅಲ್ಲಾಹ್ ಅವರನ್ನು ಅಪಮಾನಗೊಳಿಸುವನು ಮತ್ತು ಅವರೊಡನೆ, "ನನ್ನ ಯಾವ ಸಹಭಾಗಿಗಳಿಗೋಸ್ಕರ ನೀವು (ಸತ್ಯಸಂಧರೊಡನೆ) ಜಗಳ ವಾಡುತ್ತಿದ್ದಿರೋ ಅವರೀಗ ಎಲ್ಲಿದ್ದಾರೆ" ಎಂದು ಕೇಳುವನು. ಭೂಲೋಕದಲ್ಲಿ ಜ್ಞಾನ ಪ್ರಾಪ್ತವಾಗಿದ್ದವರು, ಇಂದು ನಿಶ್ಚಯವಾಗಿಯೂ ಸತ್ಯನಿಷೇಧಿಗಳಿಗೆ ಅಪಮಾನವೂ ದುರ್ದೆಸೆಯೂ ಇದೆ ಎನ್ನುವರು. **(ಅನ್ನಹ್ಲ್: 27)**

ಸ್ವಯಂ ಸಾಕ್ಷ್ಯ ವಹಿಸುತ್ತಾರೆ

ಇನ್ನಾವುದಾದರೂ ದಾರಿಯಿದೆಯೇ? ಯಾವುದೂ ಇಲ್ಲ, ಒಪ್ಪಿಕೊಳ್ಳುವುದು ಮಾತ್ರ. ಹೀಗೆ ಮಾನವರೂ ಜಿನ್ನ್‌ಗಳೂ ತಪ್ಪೊಪ್ಪಿಕೊಂಡು ತಮ್ಮ ವಿರುದ್ಧ ಸ್ವಯಂ ಸಾಕ್ಷಿಗಳಾಗುತ್ತಾರೆ. "ಓ ಯಕ್ಷ ಮತ್ತು ಮಾನವ ವರ್ಗವೇ, ನಿಮಗೆ ನನ್ನ ನಿದರ್ಶನ ಗಳನ್ನು ಕೇಳಿಸುತ್ತ ಇಂದಿನ ಪರಿಣಾಮದ ಬಗ್ಗೆ ಎಚ್ಚರಿಸಲಿಕ್ಕಾಗಿ ನಿಮ್ಮ ಬಳಿಗೆ ನಿಮ್ಮೊಳಗಿಂದಲೇ ಸಂದೇಶವಾಹಕರು ಬಂದಿರಲಿಲ್ಲವೇ?" ಎಂದು ಆ ಸಂದರ್ಭದಲ್ಲಿ ಅಲ್ಲಾಹ್ ಅವರೊಡನೆ ಕೇಳುವನು. ಅವರು, "ನಿಜ ನಮ್ಮ ವಿರುದ್ಧ ನಾವೇ ಸಾಕ್ಷ್ಯ ಹೇಳುತ್ತೇವೆ" ಎನ್ನುವರು. ಇಂದು ಲೌಕಿಕ ಜೀವನವು ಇವರನ್ನು ವಂಚನೆಗೊಳಪಡಿಸಿ ರುತ್ತದೆ. ಆದರೆ ಆಗ ಅವರು ನಾವು ಸತ್ಯನಿಷೇಧಿಗಳಾಗಿದ್ದೆವೆಂದು ತಮ್ಮ ವಿರುದ್ಧ ತಾವೇ ಸಾಕ್ಷಿ ಹೇಳುವರು. **(ಅಲ್ ಅನ್‌ಆಮ್: 130)**

ಶಾಪ ಹಾಕುತ್ತಾರೆ

ಈ ಗತಿಗೆಟ್ಟ ಜನರಿಗೆ ಅದೋ ಇನ್ನೊಂದು ವಿಪತ್ತು. ಅರ್ಥಾತ್ ಎಲ್ಲ ಸಾಕ್ಷಿಗಳ ಶಾಪ! ಅಲ್ಲಾಹನ ಮಾರ್ಗದಿಂದ ಜನರನ್ನು ತಡೆಯುವ, ಆ ಮಾರ್ಗವನ್ನು ವಕ್ರಗೊಳಿಸುವ ಮತ್ತು ಪರಲೋಕವನ್ನು ನಿರಾಕರಿಸುವಂತಹ ಅಕ್ರಮಿಗಳನ್ನು ಅಲ್ಲಾಹನ ಮುಂದೆ ಬೆಟ್ಟು ಮಾಡಿ ತೋರಿಸುವಾಗ ಎಲ್ಲ ಸಾಕ್ಷಿಗಳೂ ಒಟ್ಟಾಗಿ ಹೇಳುವರು, "ಇವರೇ ನಮ್ಮ ಪ್ರಭುವಿನ ಮೇಲೆ ಸುಳ್ಳಾರೋಪ ಹೊರಿಸಿದವರು. ಈ ಅಕ್ರಮಿಗಳ ಮೇಲೆ ಅಲ್ಲಾಹನ ಶಾಪವಿರಲಿ." **(ಹೂದ್: 18-19)**

ದಾಖಲೆ ಸಮರ್ಪಣೆ

ಎಲ್ಲ ಜನವಿಭಾಗಗಳೂ ಭಯಗ್ರಸ್ತರಾಗಿ ಅಲ್ಲಾಹನ ಮುಂದೆ ಮೊಣಕಾಲೂರಿ

ನಿಂತಿದ್ದಾರೆ. ತನ್ಮಧ್ಯೆ ಹಲವಾರು ಪ್ರಶ್ನೋತ್ತರಗಳು ನಡೆದುವು. ಒಂಟಿಯಾಗಿ, ಒಟ್ಟಾಗಿ, ವಿಭಜಿಸಿ, ಮುಖಾಮುಖಿಯಾಗಿ ಪ್ರಶ್ನಿಸಲಾಯಿತು. ಹಲವರು ಸ್ವಯಂ ತಪ್ಪೊಪ್ಪಿಕೊಂಡು ತಮ್ಮ ವಿರುದ್ಧವೇ ಸಾಕ್ಷಿಗಳಾದರು. ಇನ್ನೂ ಹಲವು ರೀತಿಯ ಸಾಕ್ಷಿಗಳು ಸಾಕ್ಷ್ಯ ನುಡಿದರು. ಇದೀಗ ಅತಿ ಗಂಭೀರವಾದ ಇನ್ನೊಂದು ಘಟನೆ ನಡೆಯಲಿದೆ. ದಾಖಲೆಗಳ ಸಮರ್ಪಣೆ. ಎಲ್ಲ ವಿಭಾಗಗಳನ್ನೂ ಅವರ ನಾಯಕರ ಜೊತೆ ಕರೆಸಲಾಗುವುದು. ಪ್ರತಿಯೊಂದು ಕೂಟವನ್ನು ತಮ್ಮ ಕರ್ಮಪತ್ರವನ್ನು ನೋಡಲಿಕ್ಕಾಗಿ ಕರೆಯಲಾಗುವುದು. ಅವರೊಡನೆ (ಹೀಗೆ) ಹೇಳಲಾಗುವುದು, "ಇಂದು ನಿಮಗೆ ನೀವು ಮಾಡುತ್ತಿದ್ದ ಕರ್ಮಗಳ ಪ್ರತಿಫಲವನ್ನು ನೀಡಲಾಗುವುದು. ಇದು ನಾವು ಸಿದ್ಧಪಡಿಸಿದ್ದ ಕರ್ಮಪತ್ರವಾಗಿದ್ದು ನೀವು ಮಾಡುತ್ತಿದ್ದ ಎಲ್ಲವನ್ನೂ ನಾವು ಬರೆಸುತ್ತಲೇ ಇದ್ದೆವು."

(ಅಲ್ ಜಾಸಿಯ: 28-29)

"ಪ್ರತಿಯೊಬ್ಬ ಮನುಷ್ಯನ ಶಕುನವನ್ನು ನಾವು ಆತನ ಕೊರಳಿಗೆ ಕಟ್ಟಿಬಿಡುತ್ತೇವೆ. ಪುನರುತ್ಥಾನ ದಿನದಂದು ನಾವು ಅವನಿಗಾಗಿ ಒಂದು ಲಿಖಿತವನ್ನು ಹೊರಡಿಸುವೆವು. ಅವನು ಅದನ್ನು ತೆರೆದ ಗ್ರಂಥದಂತೆ ಕಾಣುವನು. ನಿನ್ನ ಕರ್ಮಪತ್ರವನ್ನು ಓದು. ಇಂದು ನಿನ್ನ ಲೆಕ್ಕ ತೆಗೆಯಲು ನೀನೇ ಸಾಕು." **(ಬನೀ ಇಸ್ರಾಈಲ್: 13-14)**

"ಕರ್ಮಪತ್ರ ನೀಡಿದೊಡನೆ ಅಪರಾಧಿಗಳು ಮತ್ತಷ್ಟು ಭಯಗ್ರಸ್ತರಾಗುವರು. ಅವರು ಹೇಳುವರು, 'ಅಯ್ಯೋ ನಮ್ಮ ದುರ್ಗತಿಯೇ! ಇದೆಂತಹ ಗ್ರಂಥ! ನಮ್ಮ ಯಾವುದೇ ಚಿಕ್ಕ ಹಾಗೂ ದೊಡ್ಡ ಕೃತ್ಯವು ಇದರಲ್ಲಿ ಲಿಖಿತಗೊಳ್ಳದೇ ಬಿಟ್ಟು ಹೋಗಿಲ್ಲವಲ್ಲ.' ಹೀಗೆ ಅವರ ಎಲ್ಲ ಕರ್ಮಗಳನ್ನೂ ಅವರಿಗೆ ತೋರಿಸಲಾಗುವುದು. ನಿಮ್ಮ ಪ್ರಭು ಯಾರ ಮೇಲೂ ಕಿಂಚಿತ್ತೂ ಅಕ್ರಮವೆಸಗಲಾರನು." **(ಅಲ್ ಕಹ್ಫ್: 49)**

ಸತ್ಯವಿಶ್ವಾಸಿಯು ಉತ್ಸಾಹದಿಂದ ಬಲಗೈಯಲ್ಲಿ ಸ್ವೀಕರಿಸುತ್ತಾನೆ

ಸತ್ಯವಿಶ್ವಾಸಿಗಳು ತಮ್ಮ ಕರ್ಮಪತ್ರವನ್ನು ಸ್ವೀಕರಿಸಲಿಕ್ಕಾಗಿ ಅತಿ ಉತ್ಸಾಹದಿಂದ ಕೈ ಚಾಚಿ ನಿಲ್ಲುತ್ತಾರೆ. ಅವರಿಗೆ ಅದನ್ನು ಬಲಗೈಯಲ್ಲಿ ನೀಡಲಾಗುತ್ತದೆ. ಆಗ ಅವರು ಅತ್ಯಂತ ಸಂತೋಷದಿಂದ ತಮ್ಮ ಸಂಗಡಿಗರ ಬಳಿಗೆ ಓಡುತ್ತಾರೆ.

ಬನ್ನಿ, ಬನ್ನಿ ಇದನ್ನೊಮ್ಮೆ ಓದಿ ನೋಡಿ ಎಂದು ಕರೆಯುತ್ತಾರೆ. ಬಹಳ ಧನ್ಯತೆಯಿಂದ ಅವರು, ಇಂಥ ಘಟನೆ ನಡೆಯಲಿರುವುದೆಂದು ನಾನು ಮೊದಲೇ ತಿಳಿದಿದ್ದೆನೆನ್ನುತ್ತಾರೆ. ಇನ್ನು ಅವನ ಮಟ್ಟಿಗೆ ಸೌಮ್ಯ ವಿಚಾರಣೆ ಮಾತ್ರ ನಡೆಯಲಿದೆ. **(ಅಲ್ ಹಾಕ್ಕ, ಇನ್‌ಶಿಕಾಕ್)** – (ಸೌಮ್ಯ ವಿಚಾರಣೆಯನ್ನು ಈ ಹಿಂದೆ ವಿವರಿಸಲಾಗಿದೆ.)

ಅವರ ಕರ್ಮಪತ್ರಗಳಿಂದ ಪಾಪಗಳನ್ನು ತೆಗೆದು ಹಾಕಲಾಗುತ್ತದೆ

ಆತನ ದಾಖಲೆ ಪತ್ರದಲ್ಲಿ ಆತನು ಮಾಡಿದ ದುಷ್ಕರ್ಮಗಳಿದ್ದರೂ ಸತ್ಕರ್ಮಗಳು ಅಧಿಕವಿರುವುದರಿಂದ ಆ ಬಗ್ಗೆ ಬಹಿರಂಗವಾಗಿ ಪ್ರಶ್ನಿಸಲಾಗುವುದಿಲ್ಲ, ಅವುಗಳನ್ನು ಕೈ ಬಿಡಲಾಗುತ್ತದೆ. ಪ್ರವಾದಿಯವರು(ಸ) ಒಮ್ಮೆ ಹೀಗೆ ಹೇಳಿದ್ದರು, "ಅಲ್ಲಾಹನು ಸತ್ಯ ವಿಶ್ವಾಸಿಯನ್ನು ತನ್ನ ಬಳಿ ಕರೆದು ಅವನಿಗೆ ಸಂರಕ್ಷಣೆ ನೀಡಿ ಅವನೊಡನೆ ಗುಪ್ತವಾಗಿ (ಪ್ರೀತಿಯಿಂದ) ಕೇಳುವನು, 'ನಿನ್ನ ದಾಖಲೆಯಲ್ಲಿರುವ ಈ ಪಾಪವನ್ನು ನೀನು ತಿಳಿದಿರುವೆಯಾ?' ಹೌದು ತಿಳಿದಿದ್ದೇನೆಂದು ಆತ ಒಪ್ಪುತ್ತಾನೆ. ಹೀಗೆ ಎಲ್ಲ ಪಾಪಗಳನ್ನೂ ಒಪ್ಪಿಕೊಳ್ಳುತ್ತಾನೆ. ಆಗ ಆತನು, 'ನನ್ನ ಕಥೆ ಮುಗಿಯಿತು' ಎಂದು ಭಾವಿಸುತ್ತಾನೆ. ತರುವಾಯ ಅಲ್ಲಾಹ್ ಹೇಳುತ್ತಾನೆ, 'ಭೂಲೋಕದಲ್ಲಿ ನಾನು ಅದನ್ನು ನಿನಗಾಗಿ ಮರೆಮಾಚಿದೆ. ಇಂದು ನಾನು ಅದನ್ನು ಕ್ಷಮಿಸಿದ್ದೇನೆ.' ಅನಂತರ ಆತನಿಗೆ ಸತ್ಕರ್ಮಗಳ ಗ್ರಂಥವನ್ನು ಮಾತ್ರ ನೀಡಲಾಗುವುದು." **(ಬುಖಾರಿ, ಮುಸ್ಲಿಮ್)**

ಅಪರಾಧಿಗಳಿಗೆ ದಾಖಲೆ ಪತ್ರವನ್ನು ಎಡಗೈಯಲ್ಲಿ ನೀಡಲಾಗುವುದು

ಅಪರಾಧಿಗಳು ಸಹಜವಾಗಿ ದಾಖಲೆ ಪತ್ರಗಳನ್ನು ಸ್ವೀಕರಿಸದೆ ಜಾರಿಕೊಳ್ಳಬಯಸುತ್ತಾರೆ. ಮುಂದಕ್ಕೆ ಚಾಚುವ ಬದಲಾಗಿ ಅವರು ಕೈಗಳನ್ನು ಹಿಂದಕ್ಕೆ ಸರಿಸುತ್ತಾರೆ. ಆದ್ದರಿಂದ ಅವರಿಗೆ ಅದನ್ನು ಹಿಂಬದಿಯಿಂದ ಎಡಗೈಯಲ್ಲಿ ನೀಡಲಾಗುತ್ತದೆ. ಆಗ ಅವರು ಹೇಳುವರು, "ಅಯ್ಯೋ, ನನ್ನ ದಾಖಲೆ ಪತ್ರವನ್ನು ನನಗೆ ನೀಡದಿರುತ್ತಿದ್ದರೆ! ನನ್ನ ವಿಚಾರಣೆಯ ಬಗ್ಗೆ ನನಗೆ ತಿಳಿಯದಿರುತ್ತಿದ್ದರೆ! ಎರಡನೇ ಬಾರಿ ಜೀವಂತಗೊಳಿಸದೆ ಆ ಒಂದನೆಯ ಮರಣದಿಂದಲೇ ನನ್ನ ಕತೆ ಮುಗಿದಿದ್ದರೆ! ನನ್ನ ಸಂಪತ್ತಿನಿಂದ ಏನೂ ಪ್ರಯೋಜನವಾಗಲಿಲ್ಲ! ನನ್ನ ಅಧಿಕಾರವೆಲ್ಲ ವ್ಯರ್ಥವಾಯಿತು. ನನ್ನ ಬಳಿ ಇನ್ನು ಯಾವ ಸಮರ್ಥನೆಯೂ ಉಳಿದಿಲ್ಲ." ಹೀಗೆ ಹಿಂದಿನಿಂದ ದಾಖಲೆ ಪತ್ರ ನೀಡಲಾದ ಆತನು ಅನಂತರ ಹಾಹಾಕಾರ ಮಾಡುತ್ತಾನೆ. "ಅಯ್ಯೋ ನಾನು ಸತ್ತು ಬಿಟ್ಟಿದ್ದರೆ! ಮಣ್ಣಾಗಿ ಬಿಡುತ್ತಿದ್ದರೆ!!" **(ಅಲ್‌ಹಾಕ್ಕ, ಅಲ್‌ಇನ್‌ಶಿಕಾಕ್)**

ಅವರಿಗೆ ಶಾಪದ ಸುರಿಮಳೆ

ಪ್ರವಾದಿ(ಸ) ಹೇಳಿದ್ದಾರೆ: ಆದರೆ ಸತ್ಯನಿಷೇಧಿಗಳು ಮತ್ತು ಕಪಟವಿಶ್ವಾಸಿಗಳು ಹೇಗಿರುತ್ತಾರೆ? ಎಲ್ಲ ಸೃಷ್ಟಿಗಳ ಮುಂದೆ ಅವರ ಪ್ರಭು ಕೂಗಿ ಹೇಳುತ್ತಾನೆ, "ಇವರು ತಮ್ಮ ಪ್ರಭುವಿನ ಮೇಲೆ ಸುಳ್ಳಾರೋಪ ಹೊರಿಸಿದವರಾಗಿದ್ದಾರೆ! ಈ ಅಕ್ರಮಿಗಳಿಗೆ ಕೇವಲ ಅಲ್ಲಾಹನ ಶಾಪವಿರಲೆಂದು ಹೇಳಿರಿ!" **(ಬುಖಾರಿ, ಮುಸ್ಲಿಮ್)**

ಇನ್ನೂ ಸಮ್ಮತಿಸದವರು

ಈ ಎಲ್ಲ ಪರಿಸ್ಥಿತಿಗಳ ಬಳಿಕವೂ ಕೆಲವರು ತಮ್ಮ ತಪ್ಪನ್ನು ಇನ್ನೂ ಸಂಪೂರ್ಣವಾಗಿ ಒಪ್ಪಿಕೊಂಡಿಲ್ಲ. 'ಏನಿದ್ದರೂ ವಿನಾಶವೇ ಕಾದಿದೆ. ಆದ್ದರಿಂದ ಅದಕ್ಕೆ ಒಪ್ಪಿಗೆ ನೀಡುವುದು ಬೇಡ'ವೆಂದು ಆ ಕಲ್ಲು ಹೃದಯಿಗಳು ಭಾವಿಸಿರಬಹುದೇ? ಅಥವಾ ಇನ್ನೇನಾದರೂ ತಂತ್ರವಾಗಿರಬಹುದೇ? ಅದು ಈ ನಿರಾಕರಣೆಯು ಹೇಗಾದರೂ ಫಲಿಸಿದರೆ ಫಲಿಸಲಿ ಎಂಬ ಭಾವನೆಯಿಂದ ಪ್ರಯೋಗಿಸಿದ ಕೊನೆಯ ತಂತ್ರವೆಂಬಂತೆ ಭಾಸವಾಗುತ್ತದೆ. ಅವರು ಬಹಳ ಹೆಣಗಾಡಿ ಕೊನೆಯ ಒಂದು ವಾದವನ್ನು ಕಂಡು ಹಿಡಿದಿದ್ದಾರೆ. ಅದೇನೆಂದರೆ, 'ನಾವು ಈ ತನಕ ತಪ್ಪನ್ನು ಒಪ್ಪಿಕೊಂಡಿಲ್ಲವಲ್ಲ, ಒಪ್ಪಿದವರೂ ಸಾಕ್ಷ್ಯ ಹೇಳಿದವರೆಲ್ಲರೂ ಬೇರೆಯವರು. ದಾಖಲೆ ಪತ್ರಗಳನ್ನೂ ಬೇರೆಯವರೇ ಸಿದ್ಧಪಡಿಸಿದ್ದಾರೆ. ಬೇರೆಯವರ ವಾದದ ಆಧಾರದಲ್ಲಿ ನಮ್ಮನ್ನು ಶಿಕ್ಷಿಸುವುದು ನ್ಯಾಯವಾದೀತೇ? ಅದು ಅನ್ಯಾಯ. ಅನ್ಯಾಯ ಮಾಡುವುದಿಲ್ಲವೆಂದು ಅಲ್ಲಾಹನೇ ಹೇಳಿರುವನಲ್ಲವೇ?' ಹೀಗೆಂದು ಅವರು ವಾದಿಸುವರು.

ನ್ಯಾಯದ ತಕ್ಕಡಿಯಲ್ಲಿ ತೂಗುವುದಕ್ಕಿಂತ ಮೊದಲೇ ಈ ವಿಭಾಗದ ಬಾಯಿ ಯನ್ನು ಮುಚ್ಚಬೇಕಾಗಿದೆ. ಅಲ್ಲಾಹನೇ ಹೇಳುತ್ತಾನೆ. ಈ ಎಲ್ಲ ಸಾಕ್ಷ್ಯಗಳು ನಿಮಗೆ ಸಾಕಾಗಲಿಲ್ಲವೇ! ನಿಮ್ಮ ಜೀವನದ ದಾಖಲೆಯನ್ನು ಸಿದ್ಧಪಡಿಸಿದ ಆ ಪ್ರಾಮಾಣಿಕ ಕರಣಿಕರೂ (ದೇವಚರರು) ನಿಮಗೆ ಸಾಲದು. ವಸ್ತುಶಃ ಸಾಕ್ಷಿಗಳಾಗಿ ನೀವೇ ಸಾಕಾ ಗಿತ್ತು. ನಿಮ್ಮ ಈ ಕುಯುಕ್ತಿಯನ್ನೊಮ್ಮೆ ನಿಲ್ಲಿಸಿರಿ. ನಾನು ನಿಮ್ಮ ಬಾಯಿಗೆ ಮುದ್ರೆ ಹಾಕುತ್ತೇನೆ. ಅನಿಯಂತ್ರಿತವಾಗಿ ಏನು ಬೇಕಿದ್ದರೂ ಹೇಳುವ ಸ್ವಾತಂತ್ರ್ಯವನ್ನು ಕಿತ್ತು ಕೊಳ್ಳುತ್ತೇನೆ. ಇನ್ನು ನಿಮ್ಮ ದೇಹದ ಅಂಗಾಂಗಗಳು ಮತ್ತು ಚರ್ಮವೇ ಮಾತಾಡಲಿ. ನಿಮಗೆ ಸಾಕ್ಷಿಗಳು ಸಾಕೆನಿಸುವುದೋ ನೋಡುತ್ತೇನೆ. "ಇಂದು ನಾವು ಅವರ ಬಾಯಿಗೆ ಮುದ್ರೆಯನ್ನೊತ್ತಿಬಿಡುವೆವು. ಇವರು ಭೂಲೋಕದಲ್ಲಿ ಏನು ಸಂಪಾದಿಸುತ್ತಿದ್ದ ರೆಂದು ಇವರ ಕೈಗಳು ನಮ್ಮೊಡನೆ ಮಾತಾಡುವುವು ಮತ್ತು ಇವರ ಕಾಲುಗಳು ಸಾಕ್ಷ್ಯ ಹೇಳುವುವು." **(ಯಾಸೀನ್: 65)**

"ಅವರ ಕರ್ಮಗಳ ಕುರಿತು ಅವರ ನಾಲಗೆ ಮತ್ತು ಕೈಕಾಲುಗಳು ಸಾಕ್ಷ್ಯ ವಹಿಸುವ ದಿನ." **(ಅನ್ನೂರ್: 24)** "ಅವರ ಕರ್ಮಗಳ ಕುರಿತು ಅವರ ಕಿವಿ-ಕಣ್ಣುಗಳು ಮತ್ತು ಚರ್ಮ ಸಾಕ್ಷ್ಯ ವಹಿಸುವುವು." **(ಹಾಮೀಮ್ ಅಸ್ಸಜ್ದ: 20)**

"ಅವರು ಅಚ್ಚರಿಯಿಂದ ತಮ್ಮ ಚರ್ಮಗಳೊಡನೆ, 'ನೀವು ನಮ್ಮ ವಿರುದ್ಧ ಸಾಕ್ಷ್ಯ

ಹೇಳಿದುದೇಕೆ' ಎಂದು ಕೇಳುವರು. ಆಗ ಅವು, 'ಸಕಲ ವಸ್ತುಗಳಿಗೆ ವಾಕ್ಸಾಮರ್ಥ್ಯ ನೀಡಿರುವ ದೇವನೇ ನಮಗೂ ವಾಕ್ಸಾಮರ್ಥ್ಯವನ್ನು ನೀಡಿರುವನು' ಎಂದು ಹೇಳುವವು." (ಹಾಮ್ಮೀಮ್ ಅಸ್ಸಜ್ದ: 21)

ಆಗ ಅವರು ತಮ್ಮ ಅಂಗಾಂಗಗಳನ್ನು ನೋಡಿ ನಿಟ್ಟುಸಿರು ಬಿಡುತ್ತಾ ಕೇಳುತ್ತಾರೆ, "ನಾವು ಈ ತನಕ ವಾದಿಸಿ ತರ್ಕಿಸಿರುವುದು ನಿಮ್ಮ ಹಿತಕ್ಕಾಗಿಯೇ ಅಲ್ಲವೇ? ಆದರೂ ನೀವು ಇದಿರು ಸಾಕ್ಷಿಗಳಾದಿರಾ? ಇನ್ನು ಹೊತ್ತುಕೊಳ್ಳಿ! ದುರ್ಗತಿಯ ಹೊರೆಯನ್ನು!"

ಅನಸ್(ರ) ಹೇಳಿದ್ದಾರೆ: ನಾವು ಪ್ರವಾದಿಯವರ(ಸ) ಬಳಿ ಕುಳಿತಿದ್ದೆವು. ಆಗ ಪ್ರವಾದಿಯವರು(ಸ) ನಕ್ಕರು. ಅನಂತರ "ನಾನು ನಕ್ಕದ್ದೇಕೆಂದು ನಿಮಗೆ ತಿಳಿಯಿತೇ?" ಎಂದು ಕೇಳಿದಾಗ, ನಾವು ಇಲ್ಲವೆಂದೆವು. ಪ್ರವಾದಿ(ಸ) ವಿವರಿಸಿದರು: ದಾಸನು ತನ್ನ ಒಡೆಯನೊಡನೆ ನಡೆಸುವ ಸಂಭಾಷಣೆಯನ್ನು ನೆನೆಸಿದಾಗ ನನಗೆ ನಗು ಬಂತು. ಅವರು ಪ್ರಭುವಿನೊಡನೆ ಕೇಳುತ್ತಾರೆ, "ಪ್ರಭೂ! ನೀನು ಅಕ್ರಮದಿಂದ ನಮಗೆ ರಕ್ಷಣೆ ಒದಗಿಸಿರುವೆಯಲ್ಲವೇ?" ಅಲ್ಲಾಹ್ ಹೌದೆನ್ನುತ್ತಾನೆ. ಆಗ ಆತ ಹೇಳುತ್ತಾನೆ, "ಹಾಗಾದರೆ ನನ್ನ ಬಗ್ಗೆ ನನ್ನಿಂದಲೇ ಇರುವ ಸಾಕ್ಷ್ಯಗಳ ಹೊರತು ಬೇರೆ ನಾನು ಅಂಗೀಕರಿಸುವುದಿಲ್ಲ, (ಇತರರ ಸಾಕ್ಷ್ಯದ ಆಧಾರದಲ್ಲಿ ನನ್ನನ್ನು ಶಿಕ್ಷಿಸುವುದು ಅನ್ಯಾಯ)." ಅಲ್ಲಾಹ್ ಹೇಳುವನು, "ನಿನ್ನ ಬಗ್ಗೆ ಸಾಕ್ಷಿಯಾಗಿ ನೀನೇ ಸಾಕು." ಆ ಮಾನ್ಯ ಕರಣಿಕರೂ ಇದ್ದಾರೆ. ಅಲ್ಲಾಹ್ ಆತನ ಬಾಯಿಗೆ ಮುದ್ರೆ ಹಾಕುತ್ತಾನೆ. ಅಂಗಾಂಗಗಳಿಗೆ ಮಾತಾಡುವ ಆಜ್ಞೆ ನೀಡುತ್ತಾನೆ. ಅಂಗಾಂಗಗಳು ಆತನ ನಡತೆಯನ್ನು ಒಂದೊಂದಾಗಿ ಹೇಳಲಾರಂಭಿಸುವುವು. ತರುವಾಯ ಅಲ್ಲಾಹ್ ಆತನಿಗೆ ಮಾತಾಡುವ ಅನುಕೂಲ ಒದಗಿಸುತ್ತಾನೆ. ಆಗ ಆತ ಅಂಗಾಂಗಗಳೊಡನೆ ಹೇಳುತ್ತಾನೆ, "ನಾನು ಹೀಗೆಲ್ಲ ಕಷ್ಟಪಟ್ಟು ವಾದಿಸುತ್ತಿರುವುದು ನಿಮಗಾಗಿಯೇ ಅಲ್ಲವೇ... ಅಯ್ಯೋ ಎಂತಹ ದುರ್ಗತಿ!" (ಮುಸ್ಲಿಮ್)

❖ ❖ ❖ ❖

ಅಧ್ಯಾಯ 05

ತಕ್ಕಡಿಗಳು

ತರುವಾಯ ನ್ಯಾಯದ ತಕ್ಕಡಿಗಳನ್ನು ಸ್ಥಾಪಿಸಲಾಗುತ್ತದೆ. ಅಪರಾಧಿಗಳೇ! ನಿಮ್ಮ ಕರ್ಮಗಳನ್ನೂ ಅವುಗಳ ಪರಿಣಾಮಗಳನ್ನೂ ನೋಡಿದಿರಿ. ನಿಮಗೆ ಹೇಳುವುದನ್ನೆಲ್ಲ ಹೇಳಿಯಾಯಿತು. ನೀವು ಮಾಡಿದ ಅಪರಾಧಗಳ ಸಹಜ ಮತ್ತು ನ್ಯಾಯೋಚಿತ ಪರಿಣಾಮವೇನಾಗಿರಬೇಕೆಂಬುದೂ ನಿಮಗೆ ವ್ಯಕ್ತವಾಯಿತು. ನೀವು ಸಂಪೂರ್ಣ ಶಿಕ್ಷಾರ್ಹರೆಂಧು ಪ್ರಜ್ಞಾಪೂರ್ವಕ ಒಪ್ಪಿದ್ದೀರಿ. ಇನ್ನು ಚಕಾರವೆತ್ತಬಾರದು. ಇನ್ನು ನಿಮಗೆ ಮಾತಾಡುವ ಅನುಮತಿಯಿಲ್ಲ.

"ಅದು, ಅವರೇನೂ ಮಾತಾಡದ ದಿನವಾಗಿರುವುದು ಮತ್ತು ಅವರಿಗೆ ಅಂದು ನೆಪಗಳನ್ನೊಡ್ಡುವ ಅನುಮತಿಯನ್ನೂ ನೀಡಲಾಗದು." **(ಅಲ್ ಮುರ್ಸಲಾತ್: 35-36)**

"ಇಂದು ತೀರ್ಪು ನೀಡುವ ದಿನವಾಗಿದೆ. ಅದಕ್ಕಾಗಿ ನಿಮ್ಮನ್ನೂ ನಿಮ್ಮ ಪೂರ್ವಜರನ್ನೂ ನಾವಿಲ್ಲಿ ಸೇರಿಸಿದ್ದೇವೆ. ನನ್ನಿಂದ ತಪ್ಪಿಸಿಕೊಳ್ಳುವ ತಂತ್ರವೇನಾದರೂ ನಿಮ್ಮಲ್ಲಿದ್ದರೆ ಪ್ರಯೋಗಿಸಿ!" **(ಅಲ್ ಮುರ್ಸಲಾತ್: 38-39)**

"ಅಂದು ನಮ್ಮ ವಚನಗಳ ಮೇಲೆ ವಿಶ್ವಾಸವಿರಿಸಿದ್ದ ಮತ್ತು ಆಜ್ಞಾ ಪಾಲಕರಾಗಿದ್ದವರೊಡನೆ ಹೀಗೆ ಹೇಳಲಾಗುವುದು, ನನ್ನ ದಾಸರೇ, ಇಂದು ನಿಮಗೇನೂ ಭಯ ವಿಲ್ಲ ಮತ್ತು ನಿಮಗೆ ದುಃಖವೂ ಉಂಟಾಗದು." **(ಅಝ್ಝುಖ್ರುಫ್: 68-69)**

ಇದೋ ತಕ್ಕಡಿಗಳನ್ನು ಸ್ಥಾಪಿಸಲಾಗಿದೆ! "ಪುನರುತ್ಥಾನ ದಿನ ಎಲ್ಲವನ್ನೂ ನಿಖರವಾಗಿ ತೂಗುವ ನ್ಯಾಯದ ತಕ್ಕಡಿಗಳನ್ನು ಸ್ಥಾಪಿಸುವೆವು. (ಮಾನವನ ಸಕಲ ಕರ್ಮಗಳನ್ನು) ಸಾಸಿವೆ ಕಾಳಿನಷ್ಟಿದ್ದರೂ ನಾವು ತೂಗುತ್ತೇವೆ. ಯಾರಿಗೂ ಸ್ವಲ್ಪವೂ ಅಕ್ರಮವಾಗದು. ಲೆಕ್ಕ ಪರಿಶೋಧನೆಗೆ ನಾವೇ ಸಾಕು." **(ಅಲ್ ಅಂಬಿಯಾ: 47)**

ಆ ತಕ್ಕಡಿಯ ರೂಪ ಹೇಗಿರಬಹುದೆಂದು ನಮಗೆ ತಿಳಿದಿಲ್ಲ. ಅದು ಲೌಕಿಕ ಪದಾರ್ಥಗಳ ಬದಲಾಗಿ ಮಾನವನ ಕರ್ಮಗಳನ್ನೂ ನೈತಿಕ ಗುಣಗಳನ್ನೂ ಅವುಗಳ

ಒಳಿತು ಕೆಡುಕುಗಳನ್ನೂ ಸರಿಯಾಗಿ ಮತ್ತು ನಿಖರವಾಗಿ ತೂಗಿ ನೋಡಬಹುದಾದಂತಹ ತಕ್ಕಡಿಯೆಂದು ನಾವು ಭಾವಿಸೋಣ. ತೂಕದ ಸ್ವರೂಪ ಹೇಗಿರಬಹುದು? ಅದನ್ನು ನಾವು ಹೀಗೆ ಗ್ರಹಿಸಬಹುದು - ಮಾನವನ ಕರ್ಮಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗುವುದು. ಒಂದು ರಚನಾತ್ಮಕ ಇನ್ನೊಂದು ವಿನಾಶಾತ್ಮಕ. ರಚನಾತ್ಮಕ ಕರ್ಮವೆಂದರೆ ಸತ್ಯ ವನ್ನು ಅರಿತು ಅದನ್ನು ಅಂಗೀಕರಿಸಿ ಆ ಪ್ರಕಾರ ವರ್ತಿಸುವುದಾಗಿದೆ. ಪರಲೋಕದಲ್ಲಿ ಅವು ಮಾತ್ರ ಭಾರವಿರುವುದು. "ತೂಕವು ಅಂದು ಸಾಕ್ಷಾತ್ ಸತ್ಯವಾಗಿರು ವುದು. ಯಾರ ತೂಗುತಟ್ಟೆಯು ಭಾರವಾಗಿರುವುದೋ ಅವರೇ ಸಾರ್ಥಕ್ಯ ಹೊಂದುವ ವರಾಗುವರು." **(ಅಲ್ ಅಅ್‌ರಾಫ್: 8)**

ತದ್ವಿರುದ್ಧವಾಗಿ ಸತ್ಯವನ್ನು ನಿರ್ಲಕ್ಷಿಸಿ ಅಥವಾ ಸತ್ಯವನ್ನು ತೊರೆದು ಮಾನವನು ತನ್ನ ಇಚ್ಛೆಯ ಗುಲಾಮನಾಗಿ, ಇತರ ಮಾನವರನ್ನು ಅಥವಾ ಪಿಶಾಚಿಗಳನ್ನು ಅನು ಗಮಿಸಿ, ಅಸತ್ಯದ ಮಾರ್ಗದಲ್ಲಿ ಮಾಡುವುದೆಲ್ಲವೂ ವಿನಾಶಾತ್ಮಕವಾಗಿರು ವುವು. ಅವು ಗಳಿಗೆ ಪರಲೋಕದಲ್ಲಿ ಅಣುವಿನ ಭಾರವೂ ಇರಲಾರದು. ಮಾತ್ರವಲ್ಲ ರಚನಾತ್ಮಕ ಕರ್ಮಗಳ ಭಾರವನ್ನು ಕುಗ್ಗಿಸಲೂ ಅವು ಕಾರಣವಾಗುವುವು. "ತಮ್ಮ ಕರ್ಮಗಳಲ್ಲಿ ಅತ್ಯಧಿಕ ವಿಫಲರು ಯಾರೆಂದು ನಿಮಗೆ ತಿಳಿಸಲೇ? ಲೌಕಿಕ ಜೀವನದಲ್ಲಿ ಯಾರ ಸಕಲ ಪರಿಶ್ರಮಗಳು ಸನ್ಮಾರ್ಗದಿಂದ ತಪ್ಪಿ ಹೋಗಿದ್ದು ಯಾರು ತಾವು ಮಾಡುತ್ತಿರುವುದೆಲ್ಲವೂ ಸರಿಯೇ ಆಗಿವೆ ಎಂದು ತಿಳಿದುಕೊಂಡಿದ್ದರೋ ಅವರು ತಮ್ಮ ಪ್ರಭುವಿನ ದೃಷ್ಟಾಂತ ಗಳನ್ನೂ ಆತನ ಮುಂದೆ ಹಾಜರಾಗಲಿಕ್ಕಿದೆ ಎಂಬ ವಾಸ್ತವಿಕತೆಯನ್ನೂ ಅವರು ನಿರಾಕರಿ ಸಿದ್ದರು. ಆದ್ದರಿಂದ ಅವರ ಎಲ್ಲ ಕರ್ಮಗಳೂ ನಿಷ್ಫಲವಾದುವು. ಕಿಯಾಮತ್ ದಿನ ದಂದು ನಾವು ಅವರಿಗೆ ಯಾವ ಮಹತ್ವವನ್ನೂ ನೀಡಲಾರೆವು." **(ಅಲ್ ಕಹ್ಫ್: 103-105)**

ಈ ಮಂದಿ ಜಗತ್ತಿನಲ್ಲಿ ಎಷ್ಟೇ ದೊಡ್ಡ ಕೆಲಸವನ್ನು ಮಾಡಿದ್ದರೂ ಅವೆಲ್ಲವೂ ಜಗತ್ತಿನ ಅಂತ್ಯದೊಡನೆ ಅಥವಾ ಅದಕ್ಕಿಂತ ಮುಂಚೆಯೇ ಕೊನೆಗೊಳ್ಳುತ್ತವೆ. ದೊಡ್ಡ ದೊಡ್ಡ ಮಾಳಿಗೆ ಮನೆಗಳು, ಕೋಟೆ, ವಿದ್ಯಾಲಯ, ಲೈಬ್ರೆರಿ, ಮಾರ್ಗ, ಸೇತುವೆ, ಕಾರ್ಖಾನೆ, ವೀಕ್ಷಣಾಲಯ, ಪಕ್ಷ, ಸೇನೆ ಇತ್ಯಾದಿಗಳೆಲ್ಲವನ್ನೂ ಇಲ್ಲಿಯೇ ಬಿಟ್ಟು ಆತ ಹೋಗುತ್ತಾನೆ. ಕರ್ಮಗಳ ಗುರಿ, ಪ್ರೇರಣೆ ಮತ್ತು ಫಲಿತಾಂಶಗಳು ಮಾತ್ರ ಅಲ್ಲಿಗೆ ತಲಪುತ್ತವೆ. ಅವರ ಗುರಿಯು ಕೇವಲ ಇಲ್ಲಿಗೆ ಮಾತ್ರ ಸೀಮಿತವಾಗಿದ್ದರೆ, ಅದರ ಫಲವನ್ನು ಅವರು ಇಲ್ಲಿಯೇ ನಿರೀಕ್ಷಿಸಿದ್ದರೆ, ಇಲ್ಲಿ ಹೆಸರು, ಪ್ರಶಂಸೆ ಮತ್ತು ಅಧಿಕಾರವೇ ಪ್ರೇರಕವಾಗಿದ್ದರೆ ಅವೆಲ್ಲವೂ ಅದರ ಸ್ವರೂಪಕ್ಕೆ ತಕ್ಕಂತೆ ದೊರೆತಿರಬಹುದಲ್ಲವೇ. ಅಲ್ಲಾಹನ ಸಂಪ್ರೀತಿಯನ್ನು ಗುರಿಯಾಗಿಟ್ಟು ಆತನ ನಿರ್ದೇಶಗಳಿಗೆ ಬದ್ಧವಾಗಿ, ಅಲ್ಲಿ

ಉತ್ತಮ ಫಲ ದೊರೆಯಬೇಕೆಂದು ಬಯಸಿ ಮಾಡುವ ಕರ್ಮಗಳು ಮಾತ್ರ ಉಪಯುಕ್ತವಾಗುವುವು; ಅವುಗಳಿಗೆ ಮಾತ್ರ ಭಾರವಿರುವುದು. ಇತರ ಎಲ್ಲವೂ ಎಲ್ಲಿಗೋ ಹಾರಿ ಬಿಡುವುವು. "ಅವರು ಮಾಡಿಬಿಟ್ಟಿರುವ ಎಲ್ಲಾ ಕರ್ಮಗಳನ್ನು ನಾವು ಧೂಳಿನಂತೆ ಹಾರಿಸಿ ಬಿಡುವೆವು." **(ಅಲ್ ಫುರ್ಕಾನ್: 23)**

ಅದೋ ನ್ಯಾಯದ ತಕ್ಕಡಿಯಲ್ಲಿ ಎಲ್ಲರ ಕರ್ಮಗಳನ್ನು ತೂಗಲಾಗುತ್ತಿದೆ. "ಯಾರ ತೂಗುತಟ್ಟೆಯು ಅಂದು ಭಾರವಾಗಿರುವುದೋ ಅವರೇ ಸಾರ್ಥಕತೆ ಹೊಂದುವವರಾಗುವರು ಮತ್ತು ಯಾರ ತೂಗುತಟ್ಟೆಯು ಹಗುರವಾಗಿರುವುದೋ ಅವರೇ ತಮ್ಮನ್ನು ತಾವೇ ನಷ್ಟಕ್ಕೊಳಪಡಿಸಿಕೊಂಡವರಾಗುವರು. ಏಕೆಂದರೆ ಅವರು ನಮ್ಮ ನಿದರ್ಶನಗಳ ಬಗ್ಗೆ ಅಕ್ರಮ ನೀತಿಯನ್ನನುಸರಿಸುತ್ತಿದ್ದರು." **(ಅಲ್ ಅಅ್‌ರಾಫ್: 8-9)**

ಹೌಳುಲ್ ಕೌಸರ್

ಮೇಲಿನ ಘಟನೆಗಳು ಮುಗಿದಾಗ ಎಲ್ಲ ಜನರು ದಾಹ-ಬಳಲಿಕೆಯಿಂದ ವಿವಶರಾಗಿರುತ್ತಾರೆ. 'ದಾಹ, ದಾಹ' ಎಂದು ಬೊಬ್ಬಿಡುತ್ತಾರೆ. ಆಗ ಪ್ರವಾದಿ ಯವರಿಗೆ(ಸ) ಗೌರವ ಸೂಚಕವಾಗಿ ನೀಡಲಾದ 'ಹೌಳುಲ್ ಕೌಸರ್' (ಸರ್ವಾನುಗ್ರಹ ಸಂಪನ್ನವಾದ ಜಲಾಶಯ) ಅವರ ಸಮುದಾಯಕ್ಕೆ ಕಾಣಿಸುತ್ತದೆ. ಕೂಡಲೇ ಅವರು ಅದರತ್ತ ಸಾಗುತ್ತಾರೆ. ಆದಕ್ಕಿಂತ ಮೊದಲೇ ಪ್ರವಾದಿಯವರು(ಸ) ಅಲ್ಲಿಗೆ ಹೋಗಿ ಆದರ ಮಧ್ಯದಲ್ಲಿ ಆಸೀನರಾಗಿ ಇವರ ಸ್ವಾಗತಕ್ಕಾಗಿ ಕಾಯುತ್ತಿರುತ್ತಾರೆ. ಹಾಗೆಯೇ ಎಲ್ಲರೂ ಅದರಿಂದ ನೀರು ಕುಡಿದು ದಾಹವನ್ನು ಇಂಗಿಸುತ್ತಾರೆ. ತರುವಾಯ ಸ್ವರ್ಗ ತಲಪುವ ತನಕ ಅವರಿಗೆ ದಾಹವಾಗುವುದಿಲ್ಲ, ಆ ಪಾನೀಯ ಅಷ್ಟೊಂದು ಉತ್ತಮವಾಗಿರುವುದು. ಆದರೆ ಪ್ರವಾದಿಯವರ(ಸ) ಸಮುದಾಯದ ಕೆಲವರು ಹೌಳ್‌ನ ಬಳಿಗೆ ಹೋಗಲಾರದೆ ಕಷ್ಟಪಡುತ್ತಾರೆ. ಆಗ ಪ್ರವಾದಿವರ್ಯರು(ಸ) ಅವರನ್ನು ನೋಡಿ, "ಇಲ್ಲಿ ಬನ್ನಿ, ಇಲ್ಲಿ ಬನ್ನಿ" ಎಂದು ಕರೆಯುತ್ತಾರೆ. ಆದರೆ ಅವರನ್ನು ತಡೆಯಲಾಗಿದೆ. ಅಥವಾ ದೇವಚರರು ಅವರನ್ನು ತಡೆದು ನಿಲ್ಲಿಸಿದ್ದಾರೆ. ಅದನ್ನು ಗ್ರಹಿಸಿದ ಪ್ರವಾದಿಯವರು(ಸ) ಅಲ್ಲಾಹನೊಡನೆ ಹೇಳುತ್ತಾರೆ, "ಓ ಪ್ರಭೂ, ಅವರು ನನ್ನ ಸಮುದಾಯಕ್ಕೆ ಸೇರಿದವರಲ್ಲವೇ, ಅವರನ್ನೂ ಇಲ್ಲಿಗೆ ಬಿಡು." ಅಲ್ಲಾಹ್ ಉತ್ತರಿಸುತ್ತಾನೆ, "ನಿಮ್ಮ ಬಳಿಕ ನಿಮ್ಮ ಧರ್ಮವನ್ನು ಬದಲಾಯಿಸಿ ಇವರು ಏನೆಲ್ಲ ಅನರ್ಥ ಮಾಡಿರುವರೆಂದು ನಿಮಗೆ ತಿಳಿದಿಲ್ಲವಷ್ಟೆ, ಅವರನ್ನು ಬಿಡಲು ಸಾಧ್ಯವಿಲ್ಲ." ಹಾಗೆಯೇ ಅವರನ್ನು ಮಂದೆಯಿಂದ ತಪ್ಪಿಸಿ ತೋಟದೊಳಕ್ಕೆ ನುಗ್ಗಿದ ಒಂಟೆಯನ್ನು ಓಡಿಸುವಂತೆ ಹೊಡೆದೋಡಿಸಲಾಗುವುದು.

ಪ್ರವಾದಿಯವರೇ(ಸ) ಹೇಳಿ ಬಿಡುತ್ತಾರೆ, ನಷ್ಟ, ಸಂಪೂರ್ಣ ನಷ್ಟ, ನಿಮಗೆ ನಷ್ಟವೇ ನಷ್ಟ, ನೀವು ದೂರ ಹೋಗಿ ಅವರ ದಾಹವು ಎಂದೆಂದಿಗೂ ಶಮನವಾಗದು. (ಅಲ್ಲಾಹ್ ಇಚ್ಛಿಸದ ಹೊರತು). ಈ ಹದೀಸನ್ನು ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ 50ಕ್ಕೂ ಹೆಚ್ಚು ಸಹಾಬಿಗಳು ವರದಿ ಮಾಡಿದ್ದಾರೆ. ಅವುಗಳ ಆಧಾರದಲ್ಲಿ ನಮಗೆ ಈ ಕೆಳಗಿನ ವಿವರಣೆಯೂ ದೊರೆಯುತ್ತದೆ.

1. ಅದರ ನೀರು: ಹಾಲು, ಬೆಳ್ಳಿ ಮತ್ತು ಮಂಜಿಗಿಂತ ಶುಭ್ರವೂ ಮಂಜುಗಡ್ಡೆಗಿಂತ ಶೀತಲವೂ ಜೇನಿಗಿಂತ ಮಧುರವೂ ಆಗಿರುವುದು. ಅದರ ತಳವು ಕಸ್ತೂರಿಗಿಂತ ಸುಗಂಧವಾಗಿರುವುದು. ಅದರಲ್ಲಿ ಆಕಾಶದ ನಕ್ಷತ್ರಗಳಿಗಿಂತ ಅಧಿಕ ಚಿನ್ನದ ಲೋಟೆಗಳಿರುವುವು.

2. ಸ್ವರ್ಗದ ಕೌಸರ್ ನದಿಯ ನೀರು ಎರಡು ನಾಲೆಗಳ ಮೂಲಕ ಮಹ್‌ಶರದಲ್ಲಿರುವ ಈ ಕೊಳಕ್ಕೆ (ಹೌಳ್) ಬರುತ್ತದೆ. (ಮುಸ್ಲಿಮ್)

ಸ್ವರ್ಗದ ಕೌಸರ್‌ನಿಂದ ಈ ಕೊಳಕ್ಕೆ ಒಂದು ನದಿ ಹರಿಯುವುದೆಂಬ ವರದಿಯೂ ಇದೆ. (ಅಹ್ಮದ್)

3. ಅದರ ವಿಸ್ತಾರದ ಬಗ್ಗೆ ವಿವಿಧ ವರದಿಗಳಿದ್ದರೂ ಹೆಚ್ಚಿನ ವರದಿಗಳಲ್ಲಿ ಹೀಗೆ ಹೇಳಲಾಗಿದೆ. ಐಲದಿಂದ (ಈಗ ಇಸ್ರೇಲ್‌ನ ಬಂದರು ಆಗಿರುವ ಐಲಾತ್) ಯಮನ್‌ನ ಸನ್‌ಆ ತನಕ ಅಥವಾ ಒಮನ್‌ನಿಂದ ಏಡನ್ ತನಕ ಉದ್ದವಾಗಿರುವುದು. ಐಲಾತ್‌ದಿಂದ ಜುಹ್‌ಫಾ ತನಕ (ಜಿದ್ದಾ ಮತ್ತು ರಾಬಿಗ್‌ನ ಮಧ್ಯದ ಸ್ಥಳ) ಅಗಲವಾಗಿರುವುದು. (ಈ ವರದಿಯು ಸೂಕ್ಷ್ಮ ಅಧ್ಯಯನ ನಡೆಸಿದ ಈ ಕಾಲದ ಓರ್ವ ಮಹಾನುಭಾವರಿಗೆ ಕೆಂಪು ಸಮುದ್ರವು ಅಂದು 'ಹೌಳ್' ಆಗಿ ಮಾರ್ಪಡುವುದೆಂದು ತೋಚಿದೆ)

4. ಧರ್ಮವನ್ನು ತಿದ್ದುವ, ಧರ್ಮದ ಆದೇಶಗಳನ್ನು ತೊರೆದು ವಿವಿಧ ಮಾರ್ಗಗಳನ್ನು ಅವಲಂಬಿಸಿ ಪರಸ್ಪರ ಜಗಳಾಡುವ ಪ್ರವಾದಿಯ ಸಮುದಾಯಕ್ಕೆ ಸೇರಿದ ಅಪರಾಧಿಗಳನ್ನು ಅಂದು ಹೌಳಿನ ಬಳಿಗೆ ಬಿಡದೆ ಅಟ್ಟಲಾಗುವುದೆಂದು ಪ್ರವಾದಿಯವರು(ಸ) ತಮ್ಮ ಕಾಲದ ಅನುಯಾಯಿಗಳಿಗೆ ಎಚ್ಚರಿಕೆ ನೀಡಿದ್ದರು. ಹಾಗೆಯೇ ಪ್ರವಾದಿಯವರ(ಸ) ಬಳಿಕ ಪುನರುತ್ಥಾನದ ವರೆಗಿನ ಮುಸ್ಲಿಮರಿಗೂ ಎಚ್ಚರಿಕೆ ನೀಡಲಾಗಿದೆ.

5. ಇತರ ಸಮುದಾಯಗಳಿಂದ ಪ್ರತ್ಯೇಕವಾಗಿ ಗುರುತಿಸಲಿಕ್ಕಾಗಿ ಅಲ್ಲಿ ಪ್ರವಾದಿಯವರ(ಸ) ಸಮುದಾಯವು ವಿಶೇಷ ಚಿಹ್ನೆಯನ್ನು ಹೊಂದಿರುವುದು. 'ವುಝೂ'ವಿನ

ಪ್ರತಿಫಲವೆಂಬ ನೆಲೆಯಲ್ಲಿ ಮುಖ ಮತ್ತು ಕೈಕಾಲುಗಳು ಹೆಚ್ಚು ಶೋಭಾಯಮಾನವಾಗಿರುವುದು. ಅಂದು ಈ ವೈಶಿಷ್ಟ್ಯ ಇತರ ಯಾರಿಗೂ ಇರಲಾರದು.

6. ಅಂದು ಪ್ರವಾದಿಯವರು(ಸ) ತಮ್ಮ ಸಮುದಾಯದ ಬಾಹುಳ್ಯಕ್ಕಾಗಿ ಇತರ ಸಮುದಾಯದ ಮುಂದೆ ಹೆಮ್ಮೆಪಡುತ್ತಾರೆ. ಧರ್ಮದಲ್ಲಿ ಬದಲಾವಣೆ ಮಾಡಿ ವಿವಿಧ ಮಾರ್ಗಗಳನ್ನು ಅವಲಂಬಿಸಿ, ಪರಸ್ಪರ ಜಗಳಾಡಿದ್ದುದರಿಂದ ತನ್ನ 'ಹೌಳ್'ನ ಬಳಿಗೆ ಬರಲಾಗದೆ ಅಲ್ಲಿ ನನ್ನ ಮುಖವನ್ನು ಕಳೆಗುಂದಿಸಬೇಡಿರೆಂದು ಅತ್ಯಂತ ಹೃದಯ ಸ್ಪರ್ಶಿಯಾಗಿ ಪ್ರವಾದಿಯವರು(ಸ) ತಮ್ಮ ಸಮುದಾಯಕ್ಕೆ ಉಪದೇಶಿಸಿರುವುದನ್ನು ಇಲ್ಲಿ ವಿಶೇಷವಾಗಿ ಸ್ಮರಿಸಬೇಕಾಗಿದೆ.

7. ಅತ್ಯಂತ ಗಂಬೀರ ಮತ್ತು ವಿಧಿ ನಿರ್ಣಾಯಕವಾದ ಹಲವು ಘಟನೆಗಳಿಂದ ಬಳಲಿದ ಆ ಸಂದರ್ಭದಲ್ಲಿ ದಾಹ ತಣಿಸುವ ಮಹಾ ಭಾಗ್ಯವು ಕೇವಲ ಪ್ರವಾದಿಯವರ(ಸ) ಸಮುದಾಯಕ್ಕೆ ದೊರತರೆ ಸಾಕೇ? ಇತರರಿಗೂ ದೊರೆಯಬೇಕಲ್ಲವೇ ಎಂಬ ಅನಿಸಿಕೆ ಸಹಜವಾಗಿದೆ. ಆದರೆ ಅವರಿಗೂ ಆ ಅವಕಾಶ ದೊರೆಯುವುದೆಂದು ಕೆಲವು ವರದಿಗಳಲ್ಲಿ ಹೇಳಲಾಗಿದೆ. ಪ್ರವಾದಿ(ಸ) ಹೇಳಿದ್ದಾರೆ: ಎಲ್ಲ ಪ್ರವಾದಿಗಳಿಗೂ 'ಹೌಳ್'ಗಳಿರುವುವು. ಎಲ್ಲರೂ ತಂತಮ್ಮ ಸಮುದಾಯವನ್ನು ನೀರು ಕೊಡಲಿಕ್ಕಾಗಿ ಆಹ್ವಾನಿಸುವರು. ಆ ಪ್ರವಾದಿಗಳ ಪೈಕಿ ಕೆಲವರ ಆಮಂತ್ರಣವನ್ನು ಸ್ವೀಕರಿಸಲು ದೊಡ್ಡ ದೊಡ್ಡ ತಂಡಗಳೇ ಇರುತ್ತವೆ. ಇತರ ಕೆಲವರಿಗೆ ಸಣ್ಣ ತಂಡಗಳೂ ಕೆಲವರಿಗೆ ಐದಾರು ಮಂದಿಯ ತಂಡಗಳೂ ಕೆಲವರಿಗೆ ಒಂದೆರಡು ಮಂದಿಯೂ ಇದ್ದರೆ, ಕೆಲವರಿಗೆ ಯಾರೂ ಇರುವುದಿಲ್ಲ, ಆ ವೇಳೆ, ನೀನು ವಿಜಯಿಯಾದೆ ಎಂದು ಘೋಷಿಸಲಾಗುವುದು. ಹೌದು, ಖಂಡಿತವಾಗಿಯೂ ಪುನರುತ್ಥಾನ ದಿನದಲ್ಲಿ ನಾನೇ ಅತ್ಯಧಿಕ ಅನುಯಾಯಿಗಳನ್ನು ಹೊಂದಿರುವವನಾಗಿರುತ್ತೇನೆ. ಇತರ ಪ್ರವಾದಿಗಳ 'ಹೌಳ್'ಗಳು ಪ್ರವಾದಿಯವರ(ಸ) 'ಹೌಳ್'ಗೆ ಜೋಡಿಸಿದ ಉಪ 'ಹೌಳ್'ಗಳಾಗಿರಬಹುದೇ? (ಅಲ್ಲಾಹನೇ ಬಲ್ಲ). **(ಇಬ್ನುಮಾಜಃ, ಇಬ್ನು ಅಬಿದ್ದುನಿಯ)**

ಇನ್ನು ಒಂದೆರಡು ಹದೀಸ್‌ಗಳನ್ನು ಉಲ್ಲೇಖಿಸಿ ಈ ಭಾಗವನ್ನು ಕೊನೆಗೊಳಿಸುತ್ತೇನೆ- ಹ. ಅನಸ್(ರ) ಹೇಳುತ್ತಾರೆ: ನಾವು ಪ್ರವಾದಿಯವರ(ಸ) ಬಳಿ ಮಸೀದಿಯಲ್ಲಿ ಕುಳಿತಿದ್ದೆವು. ಪ್ರವಾದಿ(ಸ) ತಲೆ ತಗ್ಗಿಸಿ ಕುಳಿತಿದ್ದವರು ಒಮ್ಮೆಲೆ ತಲೆಯೆತ್ತಿ ನಕ್ಕರು. ತಾವೇಕೆ ನಗುತ್ತಿದ್ದೀರೆಂದು ನಾವು ಕೇಳಿದೆವು. ಪ್ರವಾದಿ(ಸ) ಹೇಳಿದರು, "ನನ್ನ ಮೇಲೆ ಒಂದು ಸೂರಃ ಅವತೀರ್ಣಗೊಂಡಿದೆ. (ಸೂರಃ ಅಲ್ ಕೌಸರ್‌ಪಠಿಸಿದರು) ತರುವಾಯ

ಕೌಸರ್ ಏನೆಂದು ಬಲ್ಲಿರಾ?" ಎಂದು ಕೇಳಿದರು. ನಾವು ಹೇಳಿದೆವು, "ಅಲ್ಲಾಹ್ ಮತ್ತು ಅವನ ಸಂದೇಶವಾಹಕರೇ ಚೆನ್ನಾಗಿ ಬಲ್ಲರು." ಪ್ರವಾದಿ(ಸ) ಹೇಳಿದರು, "ಅದು ನನ್ನ ಪ್ರಭು ನನಗೆ ವಾಗ್ದಾನ ಮಾಡಿದ ಒಂದು ಸರೋವರವಾಗಿದೆ. ಅದರಲ್ಲಿ ಬಹಳ ಒಳಿತಿದೆ. ಅದರ ಕಡೆಗೆ ನಿರ್ಣಾಯಕ ದಿನದಂದು ನನ್ನ ಸಮುದಾಯದವರು ಆಕಾಶದ ನಕ್ಷತ್ರಗಳೋಪಾದಿಯಲ್ಲಿ ಸಾಗುವರು. ಆದರೆ ಒಬ್ಬ ದಾಸನು ಹಿಂದಕ್ಕೆ ತಳ್ಳಲ್ಪಡುವನು. ನಾನು ಹೇಳುವೆನು, 'ಪ್ರಭೂ! ಇವನು ನನ್ನ ಸಮುದಾಯದವನೇ!' ಆಗ ಪ್ರಭು, -'ನಿಮ್ಮ ಬಳಿಕ ಇವನು ಎಂತಹ ನವೀನಾಚಾರಗಳನ್ನು ಜಾರಿಗೆ ತಂದನೆಂದು ನಿಮಗೆ ತಿಳಿದಿಲ್ಲ' ಎಂದು ಹೇಳುವನು." (ಮುಸ್ಲಿಮ್)

ಅಬೂಹುರೈರಾ(ರ) ಹೇಳುತ್ತಾರೆ: ಪ್ರವಾದಿಯವರು(ಸ) ಒಂದು ಕಬರಸ್ತಾನಕ್ಕೆ ಹೋಗಿ ಹೀಗೆಂದರು, "ಸಮಾಧಿಸ್ಥರಾಗಿರುವ ಸತ್ಯವಿಶ್ವಾಸಿಗಳೇ! ನಿಮ್ಮ ಮೇಲೆ ಶಾಂತಿಯಿರಲಿ, ನಾವೂ ಅಲ್ಲಾಹನಿಚ್ಛಿಸಿದರೆ ನಿಮ್ಮೊಂದಿಗೆ ಬಂದು ಸೇರುವೆವು. ನಾನು ನನ್ನ ಸಹೋದರರನ್ನು ನೋಡಲು ಆಶಿಸುತ್ತೇನೆ." ಸಹಾಬಿಗಳು ಕೇಳಿದರು, "ಅಲ್ಲಾಹನ ಸಂದೇಶವಾಹಕರೇ! ನಾವು ತಮ್ಮ ಸಹೋದರರಲ್ಲವೇ?" ಪ್ರವಾದಿ(ಸ) ಹೇಳಿದರು, "ನೀವು ನನ್ನ ಸಂಗಾತಿಗಳು. ನನ್ನ ಸಹೋದರರು ಇನ್ನೂ ಬಾರದವರಾಗಿದ್ದಾರೆ." ಆಗ ಸಹಾಬಿಗಳು ಕೇಳಿದರು, "ತಮ್ಮ ಸಮುದಾಯದ ಇನ್ನೂ ಬಾರದವರನ್ನು ತಾವು ಹೇಗೆ ಗುರುತಿಸಿಕೊಳ್ಳುವಿರಿ." ಪ್ರವಾದಿ(ಸ) ಹೇಳಿದರು, "ಒಬ್ಬನ ಹತ್ತಿರ ಬಿಳಿ ಮುಖ ಮತ್ತು ಬಿಳಿ ಕೈಕಾಲುಗಳುಳ್ಳ ಕುದುರೆಯು ಅವನ ಕಪ್ಪು ಕುದುರೆಗಳಲ್ಲಿ ಸೇರಿಕೊಂಡರೆ ಅವನು ಆ ಬಿಳಿ ಕುದುರೆಯನ್ನು ಗುರುತಿಸಲಾರನೇ?" ಸಹಾಬಿಗಳೆಂದರು, "ಖಂಡಿತ ಗುರುತಿಸುವನು." ಆಗ ಪ್ರವಾದಿ(ಸ) ಹೇಳಿದರು, "ಆ ಜನರು ನಿರ್ಣಾಯಕ ದಿನದಂದು ಬರುವಾಗ ವುಝೂವಿನ ಕಾರಣದಿಂದ ಅವರ ಹಣೆಗಳು ಕಾಂತಿಯುತವಾಗಿರುವುವು. ಅವರ ಕೈಕಾಲುಗಳು ಪ್ರಕಾಶಮಯವಾಗಿರುವುವು. ನಾನು ಕೌಸರ್ ಸರೋವರದಲ್ಲಿ ಅವರನ್ನು ಗುರುತಿಸಿಕೊಳ್ಳುವೆನು. ಆದರೆ ನನ್ನ ಸರೋವರದಿಂದ ಕೆಲವು ಮಂದಿ ಕಾಣೆಯಾದ ಒಂಟೆಯು ಓಡುವಂತೆ ದೂರ ಸರಿಯುವರು. ಎಚ್ಚರಿಕೆ! ಬನ್ನಿರಿ- ಆಗ ಹೇಳಲಾಗುವುದು- ತಮ್ಮ ಬಳಿಕ ಅವರು ಬದಲಾಯಿಸಿ ಬಿಟ್ಟರು. ಅವರು ದೂರ ಸರಿಯಲಿ! ದೂರ ಸರಿಯಲಿ!! ದೂರ ಸರಿಯಲಿ!!!" (ಮುಸ್ಲಿಮ್)

ಹೀಗೆ ಸತ್ಯವಿಶ್ವಾಸಿಗಳೆಲ್ಲರೂ ತಮಗೆ ನಿರ್ಣಯಿಸಲಾದ 'ಹೌಳ್'ಗಳಿಂದ ಸ್ವರ್ಗ ಪಾನೀಯವನ್ನು ಕುಡಿದು ಅತ್ಯಂತ ಸಂತುಷ್ಟರಾಗಿರುತ್ತಾರೆ. ಅಪರಾಧಿಗಳು ಕಠಿಣ ದಾಹದಿಂದ ಬಳಲುತ್ತಾರೆ.

ಸಿರಾತ್ ಸೇತುವೆ

ತೀರ್ಪನ್ನು ಈಗಾಗಲೇ ನೀಡಲಾಗಿದೆಯಷ್ಟೆ. ತರುವಾಯ ಜನರು ತಂತಮ್ಮ ಸ್ವಭಾವಕ್ಕೆ ತಕ್ಕಂತೆ ವಿವಿಧ ಸ್ಥಿತಿಗಳಿಗೆ ತಲುಪುತ್ತಾರೆ. ಪ್ರಮಾದವಾಗಿ ನಡೆದ ಒಂದು ದಾವೆಯ ಮಟ್ಟಿಗೆ ನಮ್ಮ ನ್ಯಾಯಾಲಯಗಳು ತೀರ್ಪು ನೀಡಿದಾಗ, ಗೆದ್ದವರ ಮತ್ತು ಸೋತವರ ಕೆಲವೊಂದು ಪ್ರತಿಕ್ರಿಯೆಗಳು ನಮಗೆ ಸಾಮಾನ್ಯವಾಗಿ ತಿಳಿದಿರುತ್ತದೆ. ಅಂತ್ಯದಿನದಲ್ಲಿ ಅಲ್ಲಾಹನ ಅಂತಿಮ ಮತ್ತು ಶಾಶ್ವತ ತೀರ್ಪಿನ ಬಳಿಕ ಸಜ್ಜನರ ಹರ್ಷೋಲ್ಲಾಸ ಮತ್ತು ಅಪರಾಧಿಗಳ ಶೋಚನೀಯ ಪ್ರಲಾಪದ ಒಂದು ಸಾಮಾನ್ಯ ಚಿತ್ರವನ್ನು ನಾವು ಈ ಹಿಂದೆ ನೋಡಿದೆವು. ಸಜ್ಜನರು ಸ್ವರ್ಗೀಯ ಪಾನೀಯಗಳನ್ನು ಸೇವಿಸಿ ದಾಹ ಬಳಲಿಕೆಗಳನ್ನು ಶಮನಿಸಿ ಆನಂದ ತುಂದಿಲರಾಗಿರುವಾಗ ಅಪರಾಧಿಗಳು ಇನ್ನಷ್ಟು ನರಕ ಯಾತನೆಗೆ ಗುರಿಯಾಗಿ ಪರಸ್ಪರ ಶಪಿಸುತ್ತಾ ಭಿನ್ನಭಿನ್ನರಾಗಿ ಹೋಗುತ್ತಾರೆ. ಅದೆಂತಹ ಚಿಂತಾಜನಕ ದೃಶ್ಯ! ಅದನ್ನು ಊಹಿಸಲೂ ಕಷ್ಟವಾಗುವುದಿಲ್ಲವೇ?

ಆರಾಧಕರು ಆರಾಧ್ಯರೊಡನೆ

ಪ್ರವಾದಿ(ಸ) ಹೇಳಿದರು: ತರುವಾಯ ಅಲ್ಲಾಹನು ಸಕಲ ಸೃಷ್ಟಿಗಳನ್ನು (ಪುನಃ) ಒಟ್ಟು ಸೇರಿಸುತ್ತಾನೆ. ಅನಂತರ ಆತನು ಕೇಳುತ್ತಾನೆ, “ಹೇ ಮಾನವರೇ! ನಿಮ್ಮನ್ನು ಸೃಷ್ಟಿಸಿ ಆಹಾರ ನೀಡಿ ಪೋಷಿಸಿದ ನಿಮ್ಮ ಪ್ರಭುವು, ನೀವು ಇಹಲೋಕದಲ್ಲಿ ಗುರಿಕಾರರನ್ನಾಗಿ ಮಾಡಿದ್ದವರೊಡನೆ ಸಂಪರ್ಕ ಬೆಳೆಸಿರೆಂದು ಈಗ ನಿಮಗೆ ಆಜ್ಞಾಪಿಸಿದರೆ ನೀವು ಅದನ್ನು ಮೆಚ್ಚುವುದಿಲ್ಲವೇ?” ಆ ಕೂಡಲೇ ಒಬ್ಬರು ಕೂಗಿ ಹೇಳುತ್ತಾರೆ, “ಎಲ್ಲಾ ಜನವಿಭಾಗಗಳೂ ತಂತಮ್ಮ ಆರಾಧ್ಯರನ್ನು ಅನುಗಮಿಸಲಿ.” (ಉರ್ಝ್ಯುರ್, ಮರ, ಕಲ್ಲು, ಇತ್ಯಾದಿ ಆರಾಧ್ಯರ ಪ್ರತಿರೂಪಗಳನ್ನು ಅಲ್ಲಿ ಮೊದಲೇ ಪ್ರದರ್ಶಿಸಲಾಗಿರುವುದು) ಆಗ ಸೂರ್ಯಾರಾಧಕರು ಸೂರ್ಯನೊಡನೆಯೂ ಚಂದ್ರನನ್ನು ಆರಾಧಿಸಿದವರು ಚಂದ್ರನೊಡನೆಯೂ ತಾಗೂತ್‌ಗಳನ್ನು ಆರಾಧಿಸಿದವರು ಅವರ ಜೊತೆಗೂ ಇರುತ್ತಾರೆ. ಶಿಲುಬೆಯವರು ಶಿಲುಬೆಯೊಂದಿಗೂ ಮೂರ್ತಿ ಪೂಜಕರು ಮೂರ್ತಿಗಳೊಂದಿಗೂ ಇತರ ಇಲಾಹ್(ಆರಾಧ್ಯರು)ಗಳನ್ನು ಪೂಜಿಸಿದವರು ಅವುಗಳ ಜತೆಯಲ್ಲಿಯೂ ಪ್ರತ್ಯೇಕವಾಗಿ ನಿಂತಿರುತ್ತಾರೆ. ಏಕದೇವ(ಅಲ್ಲಾಹ್)ನನ್ನು ಆರಾಧಿಸುತ್ತಿದ್ದ– ಈ ಉಮ್ಮತ್ ಮಾತ್ರ ಉಳಿದಿರುತ್ತದೆ. ಅವರಲ್ಲಿ ಸಜ್ಜನರೂ ದುರ್ಜನರೂ ಇದ್ದಾರೆ. ಈ ಸಮುದಾಯದ ಕಪಟವಿಶ್ವಾಸಿಗಳೂ ಜತೆಯಲ್ಲಿದ್ದಾರೆ, ಕೆಲವು ಗ್ರಂಥದವರೂ ಇದ್ದಾರೆ. (ಅವರಿಗೂ ಅಲ್ಲಾಹನೊಂದಿಗೂ ಸಂಬಂಧವಿತ್ತಲ್ಲವೇ)

ಅದೋ ನರಕವನ್ನು ಹಾಜರುಪಡಿಸಲಾಗಿದೆ. ಮರುಭೂಮಿಯ ಆ ಬದಿಯಲ್ಲಿ ಕುದಿಯುತ್ತಿರುವಂತೆ ಭಾಸವಾಗುವ ಮರೀಚಿಕೆಯಂತೆ ಅದು ಪ್ರತ್ಯಕ್ಷ ವಾಗುತ್ತದೆ. ತರುವಾಯ ಯಹೂದಿಯರೊಡನೆ ಅಲ್ಲಾಹ್ ಕೇಳುತ್ತಾನೆ:

"ನೀವು ಯಾರನ್ನು ಆರಾಧಿಸುತ್ತಿದ್ದಿರಿ?"

ಅವರು ಹೇಳುತ್ತಾರೆ, "ಅಲ್ಲಾಹನ ಪುತ್ರ ಉಝೈರ್‌ರನ್ನು."

ಆಗ ಹೇಳಲಾಗುವುದು, "ನಿಮ್ಮ ವರ್ತನೆಯು ಸಂಪೂರ್ಣ ಅಸಂಬದ್ಧವಾಗಿದ್ದಿತು. ಅಲ್ಲಾಹನಿಗೆ ಸಂಗಾತಿ ಅಥವಾ ಸಂತಾನಗಳಿರಲಿಲ್ಲವಲ್ಲಾ! ಇರಲಿ, ಈಗ ನೀವು ಏನನ್ನು ಬಯಸುತ್ತೀರಿ?"

"ಏನಾದರೂ ಕುಡಿಯಲು ದೊರೆತರಾದೀತೆಂದು ಬಯಸುತ್ತೇವೆ."

"ಹಾಗಾದರೆ ಕುಡಿಯಿರಿ" ಎನ್ನುತ್ತಾ ಅವರನ್ನು ನರಕಕ್ಕೆ ದೂಡಲಾಗುವುದು. ತರುವಾಯ ಕ್ರೈಸ್ತ ವಿಶ್ವಾಸಿಗಳೊಡನೆ ಕೇಳಲಾಗುವುದು.

"ನೀವು ಯಾರನ್ನು ಆರಾಧಿಸುತ್ತಿದ್ದಿರಿ?"

"ಅಲ್ಲಾಹನ ಪುತ್ರ ಮಸೀಹ್‌ರನ್ನು."

"ಹಸಿಸುಳ್ಳು, ಅಲ್ಲಾಹನಿಗೆ ಸಂಗಾತಿಗಳು ಅಥವಾ ಸಂತಾನವಿರಲಿಲ್ಲ, ನಿಮಗೇನು ಬೇಕು?" ಅವರು "ನೀರು" ಎನ್ನುವರು. "ಹಾಗಾದರೆ ಕುಡಿಯಿರಿ" ಎನ್ನುತ್ತಾ ಅವರನ್ನೂ ನರಕಕ್ಕೆ ದೂಡಲಾಗುವುದು. (ಹೀಗೆ ಅಲ್ಲಾಹನನ್ನು ಬಿಟ್ಟು ಇತರರನ್ನು ಆರಾಧಿಸಿದ ಎಲ್ಲ ವಿಭಾಗಗಳೂ ನರಕಕ್ಕೆ ಬೀಳುತ್ತವೆ) ಕೇವಲ ಅಲ್ಲಾಹನನ್ನು ಆರಾಧಿ ಸಿದ - ಸಜ್ಜನರ ಮತ್ತು ದುರ್ಜನರ- ಒಂದು ವಿಭಾಗ ಮಾತ್ರ ಅಲ್ಲಿ ಉಳಿದಿರುತ್ತದೆ.

(ಮುಶ್ರಿಕರ ಬಗ್ಗೆ ಕ್ರಮ ಕೈಗೊಂಡ ಬಳಿಕ ಅಲ್ಲಾಹ್ ಇವರತ್ತ ಗಮನ ಹರಿಸುತ್ತಾನೆ) ಅವರು ಒಂದು ಉನ್ನತ ಸ್ಥಾನದಲ್ಲಿ ಅಲ್ಲಾಹನನ್ನು ನಿರೀಕ್ಷಿಸುತ್ತಾ ಕಾದು ನಿಂತಿದ್ದಾರೆ. ಹೀಗಿರಲು ಅವರಿಗೆ ಅಪರಿಚಿತವಾದ ರೂಪದಲ್ಲಿ (ಮೊದಲು ನೋಡಿದ ರೂಪದಲ್ಲಲ್ಲ) ಪ್ರಭುವು ಅವರ ಬಳಿಗೆ ಬರುತ್ತಾನೆ. ತರುವಾಯ ಕೇಳುತ್ತಾನೆ, "ಜನರೆಲ್ಲರೂ ಹೋದರಲ್ಲವೇ, ನೀವೇಕೆ ಹೋಗಲಿಲ್ಲ? ನೀವು ಯಾರನ್ನು ಕಾಯುತ್ತಿರುವಿರಿ? ನೀವು ಯಾರು?"

ಅವರು ಹೇಳುತ್ತಾರೆ, "ನಾವು ಮುಸ್ಲಿಮರು. ನಮಗೆ ಜನರು ಇಂದಿಗಿಂತ ಹೆಚ್ಚು ಅಗತ್ಯವಿರುವಾಗಲೇ (ಭೂಲೋಕದಲ್ಲಿ) ನಾವು ಅವರನ್ನು ತೊರೆದಿದ್ದೇವೆ. ಅವರು

ಅಲ್ಲಾಹನನ್ನು ಬಿಟ್ಟು ಇತರರನ್ನು ಆರಾಧಿಸಿರುವುದರಿಂದ ಎಲ್ಲರೂ ತಂತಮ್ಮ ಆರಾಧ್ಯರ ಜತೆ ಸೇರಲಿ ಎಂಬ ಘೋಷಣೆ ಕೇಳಿಸಿತಲ್ಲವೇ. ಆ ಪ್ರಕಾರ ಜನರು ತಂತಮ್ಮ ಆರಾಧ್ಯರ ಜೊತೆ ಹೋದರು. ನಾವು ನಮ್ಮ ಪ್ರಭುವನ್ನು ನಿರೀಕ್ಷಿಸುತ್ತಿದ್ದೇವೆ. ನಾವು ಆತನನ್ನೇ ಆರಾಧಿಸುತ್ತಿದ್ದೆವು." "ಓಹೋ, ಹಾಗಾದರೆ ನಾನಲ್ಲವೇ ನಿಮ್ಮ ಪ್ರಭು?" "ಬೇಡ, ನಿನ್ನ ವಂಚನೆಯಿಂದ ನಾವು ಅಲ್ಲಾಹನ ಅಭಯ ಯಾಚಿಸುತ್ತೇವೆ. ಆತ ಬರುವ ತನಕ ನಾವು ಈ ಸ್ಥಾನದಿಂದ ಕದಲುವುದಿಲ್ಲ." "ಪ್ರಭು ಬಂದರೆ ನೀವು ಆತನನ್ನು ಹೇಗೆ ಗುರುತಿಸುವಿರಿ? ನಿಮ್ಮ ಬಳಿ ಏನಾದರೂ ಗುರುತಿದೆಯೇ?" "ಹೌದು, ಆತನು ಪ್ರತ್ಯಕ್ಷವಾಗುವ ದೃಶ್ಯವು ಅತಿ ಗಾಂಭೀರ್ಯದಿಂದ ತುಂಬಿರುವುದು. ಅದು ಸಾಮಾನ್ಯ ಘಟನೆಯಾಗುವುದಿಲ್ಲ, ಆತನು ಪ್ರತ್ಯಕ್ಷನಾದಾಗ ಮುಗ್ಗರಿಸಿ ಆತನಿಗೆ ಸಾಷ್ಟಾಂಗವೆರಗಲು ನಿರ್ಬಂಧಿತರಾಗುವಷ್ಟರ ಮಟ್ಟಿಗೆ ಆ ದೃಶ್ಯವು ಘನಗಂಭೀರವಾಗಿರುವುದು. ಆದ್ದರಿಂದ ಆತ ಬರುವಾಗ ಖಂಡಿತವಾಗಿಯೂ ನಾವು ಆತನನ್ನು ಗುರುತಿಸುತ್ತೇವೆ." ಆಗ ಅದೋ ಅವರಿಗೆ ಸುಪರಿಚಿತ ರೀತಿಯಲ್ಲಿ ಮುಗುಳ್ನಗುತ್ತಾ ಅಲ್ಲಾಹ್ ಪ್ರತ್ಯಕ್ಷನಾಗುತ್ತಾನೆ. ಅವರೆಲ್ಲರೂ ಆತನನ್ನು ಗುರುತಿಸಿ ಸಾಷ್ಟಾಂಗವೆರಗುತ್ತಾರೆ. ಆ ವೇಳೆ ಪ್ರವಾದಿಗಳ ಹೊರತು ಬೇರೆ ಯಾರೂ ಆತನೊಡನೆ ಮಾತಾನಾಡುವುದಿಲ್ಲ, ಆದರೆ ಭೂಲೋಕದಲ್ಲಿ ಅರೆ ಮನಸ್ಸಿನಿಂದ ಜನರಿಗಾಗಿ ಅಥವಾ ಇತರ ಉದ್ದೇಶದಿಂದ ಅಲ್ಲಾಹನಿಗೆ ಸಾಷ್ಟಾಂಗ ವೆರಗುತ್ತಿದ್ದವರಿಗೆ ಆ ವೇಳೆ ಸಾಷ್ಟಾಂಗ ಮಾಡಲಾಗುವುದಿಲ್ಲ. ಅವರು ಎಷ್ಟೇ ಪ್ರಯತ್ನಿಸಿ ದರೂ ಅವರ ಬೆನ್ನು ಬಾಗುವುದಿಲ್ಲ, ಸಾಷ್ಟಾಂಗವೆರಗಿದ ಸತ್ಯವಿಶ್ವಾಸಿಗಳು ಅನಂತರ ಅಲ್ಲಾಹನ ಅಪ್ಪಣೆಯಂತೆ ಸಾಷ್ಟಾಂಗದಿಂದ ಎದ್ದು ನಿಂತು ಆತನನ್ನು ಹಿಂಬಾಲಿಸುತ್ತಾರೆ.

ಆ ಬಳಿಕ ಅಲ್ಲಿ ಸ್ವರ್ಗ ಕಾಣಿಸುತ್ತದೆ. ಅಲ್ಲಿಗೆ ಹೋಗಬೇಕಾಗಿದೆ. ಆದರೆ ಅದನ್ನು ಇನ್ನೂ ತೆರೆದಿಲ್ಲ, ಮಾತ್ರವಲ್ಲದೇ ಅಲ್ಲಿಗೆ ತಲಪುವ ಮಾರ್ಗವೂ ಗೋಚರವಾಗಿಲ್ಲ, ಮಧ್ಯದಲ್ಲಿ ನರಕವಿದೆ. ಅದರ ಮೇಲಿಂದ ಹಾರಲು ಸಾಧ್ಯವಿಲ್ಲ, ಈಗ ಒಂದು ಹೊಸ ವಿಪತ್ತು ಬಂದೊದಗಿದೆ. ಸ್ವರ್ಗ ಕಾಣಿಸುತ್ತಿದೆ. ಮಾರ್ಗ ಎಲ್ಲಿದೆ ಎಂದು ತಿಳಿದಿಲ್ಲ, ಆಗಿನ ಅವಸ್ಥೆ ಹೇಗಿರಬಹುದು? ಕಾತರ ಮತ್ತು ತವಕ ಎಷ್ಟೊಂದು ತೀವ್ರವಾಗಿರಬಹುದು. ಇಲ್ಲಿ ನಿಲ್ಲಿಸಿ ಪುನಃ ಆಟವಾಡಿಸುವುದೇ? ಈ ಆಟದಲ್ಲಿ ಮೇಲಿನ ಲಕ್ಷಣವಿದೆ. ಆದರೂ ಅದೊಮ್ಮೆ ಬೇಗ ಮುಗಿದು ಬಿಡಲೆಂದು ಎಲ್ಲರೂ ಕಾತರಿಸುತ್ತಿದ್ದಾರೆ. ಏನು ಮಾಡು ವುದು? ಈ ಬಾರಿ ಆದಿಪಿತರೇ ಶಿಫಾರಸು ಮಾಡಲಿ. ಹೀಗೆ ಅವರು ಆದಮ್‌ರ ಬಳಿ ಹೋಗುತ್ತಾರೆ, "ಪಿತಾಮಹರೇ, ನೀವು ಅಲ್ಲಾಹನೊಡನೆ ಇದನ್ನೊಮ್ಮೆ ತೆರೆದು ನಮ್ಮನ್ನು ಕೂಡಲೇ ಒಳಬಿಡುವಂತೆ ಆತನನ್ನು ವಿನಂತಿಸಿರಿ." ಆದಮ್ ಹೇಳುತ್ತಾರೆ, "ನಿಮ್ಮ ಈ

ಪಿತನು ಹಿಂದೊಮ್ಮೆ ಪಾಪ ಮಾಡಿ ಸ್ವರ್ಗ ತೋಟದಿಂದ ಹೊರ ಹಾಕಲ್ಪಟ್ಟವನಲ್ಲವೇ? ನಾನು ಅದಕ್ಕೆ ಅರ್ಹನಲ್ಲ, ಅಲ್ಲಾಹನು ತನ್ನ ಆಪ್ತಮಿತ್ರನೆಂದು ಕರೆದ ನನ್ನ ಪುತ್ರ ಇಬ್ರಾಹೀಮನ ಬಳಿ ಹೋಗಿ ನೋಡಿ." ಹಾಗೆಯೇ ಅವರು ಇಬ್ರಾಹೀಮ್‌ರ(ಅ) ಬಳಿಗೆ ಹೋಗುತ್ತಾರೆ. ಅವರು ಹೇಳುತ್ತಾರೆ, "ನಾನೂ ಅದಕ್ಕೆ ಯೋಗ್ಯನಲ್ಲ, ನಾನು ಆಪ್ತ ಮಿತ್ರನೆಂಬುದು ನಿಜ. ಆದರೆ ಅದು ಬಹಳ ದೂರದ ವಿಷಯ. ಅಲ್ಲಾಹನು ನೇರ ಸಂಭಾಷಣೆ ನಡೆಸಿದ ಮೂಸಾರ(ಅ) ಬಳಿಗೆ ಹೋಗಿರಿ." ಮೂಸಾ ಹೇಳುತ್ತಾರೆ, "ನಾನು ಅದಕ್ಕೆ ಅರ್ಹನಲ್ಲ, ಅಲ್ಲಾಹನ ಆತ್ಮ ಮತ್ತು ವಚನವಾಗಿರುವ ಪ್ರವಾದಿ ಈಸಾರ(ಅ) ಬಳಿಗೆ ಹೋಗಿರಿ." ಈಸಾ ಹೇಳುತ್ತಾರೆ, "ನಾನು ಅರ್ಹನಲ್ಲ, ನೀವು ಮುಹಮ್ಮದ್‌ರ(ಸ) ಬಳಿ ಹೋಗಿರಿ." ಅಂತೆಯೇ ಅವರು ಪ್ರವಾದಿಯವರ(ಸ) ಬಳಿ ಹೋಗಿ ವಿನಂತಿಸುತ್ತಾರೆ, "ಪ್ರವಾದಿಯವರು ಸಮ್ಮತಿಸಿ ಅಲ್ಲಾಹನೊಡನೆ ಪ್ರಾರ್ಥಿಸುತ್ತಾರೆ. ಅಲ್ಲಾಹ್ ಅವರಿಗೆ ಅನುಮತಿ ನೀಡುತ್ತಾನೆ." (ಹದೀಸ್)

ಮಾರ್ಗವನ್ನು ತೆರೆಯಲಾಗುತ್ತದೆ

ಪ್ರವಾದಿಯವರ ಶಿಫಾರಸಿನನ್ವಯ ಅಲ್ಲಾಹನು ನರಕದ ಮೇಲೆ ಒಂದು ಸೇತುವೆ ಹಾಕಲು ಹೇಳುತ್ತಾನೆ. ಅದನ್ನು ಸಿರಾತ್ ಸೇತುವೆಯೆಂದು ಕರೆಯಲಾಗುತ್ತದೆ (ಹದೀಸ್). ಆ ಸೇತುವೆ ಹೇಗಿರಬಹುದು? ನಾವು (ಸಹಾಬಿಗಳು) ಆ ಸೇತುವೆ ಹೇಗಿರಬಹುದೆಂದು ಪ್ರವಾದಿಯವರೊಡನೆ(ಸ) ಕೇಳಿದೆವು. ಪ್ರವಾದಿ(ಸ) ಹೇಳಿದರು, "ಅತ್ಯಧಿಕ ಓಲಾಡುತ್ತಿರುವುದು. ಕಾಲಿರಿಸಿದರೆ ಅತ್ತಿತ್ತ ಸರಿಯುವುದು. ಕುಣಿಕೆ, ದೋಟಿ, ಕೊಕ್ಕೆ, ತುದಿ ಬಗ್ಗಿಸಿದ ಕಬ್ಬಿಣದ ಸಲಾಕೆಗಳು, ಚೂಪಾದ ಮುಳ್ಳುಗಳು ಅದರ ಮೇಲೆ ಹರಡಿಕೊಂಡಿವೆ. ಅವುಗಳ ಗಾತ್ರ ಮತ್ತು ಪ್ರತಾಪವನ್ನು ಅಲ್ಲಾಹನೇ ಬಲ್ಲ. ಅವು ಅಲ್ಲಾಹನಿಂದ ಆಜ್ಞಾಪಿಸಲ್ಪಟ್ಟಿವೆ ಅಥವಾ ಅಲ್ಲಾಹನ ಆಜ್ಞೆಯಂತೆ ಅವು ಮಾನವನನ್ನು ಸಿಕ್ಕಿಸಿ ಎಳೆಯುತ್ತವೆ. ಪ್ರಾಮಾಣಿಕತೆ ಮತ್ತು ಕುಟುಂಬ ಸಂಬಂಧವು ಸೇತುವೆಯ ಎಡಬಲ ಬದಿಗಳಲ್ಲಿ ನಿಂತಿರುತ್ತವೆ. 'ಪ್ರಭೂ! ರಕ್ಷಿಸು! ರಕ್ಷಿಸು!' ಎಂದು ಪ್ರಾರ್ಥಿಸುತ್ತಾ ಪ್ರವಾದಿಯವರು(ಸ) ಸೇತುವೆಯ ಬಳಿಯೇ ನಿಂತಿದ್ದಾರೆ. ಅಂದು ಇತರ ಪ್ರವಾದಿಗಳೂ, 'ಪ್ರಭೂ! ರಕ್ಷಿಸು, ರಕ್ಷಿಸು!' ಎಂದೇ ಪ್ರಾರ್ಥಿಸುವರು." (ಹದೀಸ್)

ಎಲ್ಲರೂ ಸೇತುವೆಯನ್ನು ಸಮೀಪಿಸಿದ್ದಾರೆ. ಅಲ್ಲಿ ಗಾಢಾಂಧಕಾರ ಕವಿದಿದೆ. ಅಲ್ಲಿ ಎಲ್ಲರಿಗೂ ಕಪಟವಿಶ್ವಾಸಿಗಳಿಗೂ ಬೆಳಕು ನೀಡಲಾಗುತ್ತದೆ. ಅಲ್ಲಿ ದೊರೆಯುವ ಬೆಳಕು ತಂತಮ್ಮ ಕರ್ಮಾನುಸಾರ ಹೆಚ್ಚು ಕಡಿಮೆಯಿರುವುದು. ಕೆಲವರಿಗೆ ಪರ್ವತ ಸಮಾನ

ಪ್ರಕಾಶ ದೊರೆತರೆ ಇತರ ಕೆಲವರಿಗೆ ಮಿಣುಕು ದೀಪದಂತಹ ಮಂದ ಬೆಳಕು ದೊರೆಯುವುದು. ಅತಿ ಕೊನೆಯಲ್ಲಿರುವವನಿಗೆ ಹೆಬ್ಬೆರಳಿನಲ್ಲಿ ಬೆಳಗಿ ನಂದುತ್ತಿರುವ ಒಂದು ಬೆಳಕು ಮಾತ್ರ ದೊರೆಯುವುದು. ಅದು ಬೆಳಗುವಾಗ ಅವರು ಹೆಜ್ಜೆಯಿಡುತ್ತಾರೆ, ನಂದಿದಾಗ ನಿಲ್ಲುತ್ತಾರೆ. (ಬೈಹಕಿ) ಹೀಗೆ ಎಲ್ಲರಿಗೂ ಬೆಳಕು ನೀಡಿದ ಬಳಿಕ ಅಲ್ಲಾಹ್ ಆಜ್ಞಾಪಿಸುತ್ತಾನೆ, "ಇನ್ನು ಆ ಸೇತುವೆಯನ್ನು ದಾಟಿ ಹೋಗಿರಿ." ಇದು ಪರಲೋಕದಲ್ಲಿ ಯಾರೂ ಇತರರನ್ನು ಗಮನಿಸದಂತಹ ಅತ್ಯಂತ ಭಯಾನಕವಾದ ದೃಶ್ಯಗಳಲ್ಲೊಂದಾಗಿರುವುದು.

ಇಲ್ಲಿ ಸೇತುವೆ ದಾಟಲು ಆಜ್ಞಾಪಿಸುವಾಗಲೇ ಸತ್ಯವಿಶ್ವಾಸಿಗಳನ್ನು ಮುಂಭಾಗದಲ್ಲಿ ಮತ್ತು ಕಪಟವಿಶ್ವಾಸಿಗಳನ್ನು ಹಿಂಬದಿಯಲ್ಲಿ ನಿಲ್ಲಿಸಲಾಗುತ್ತದೆ. ಪ್ರವಾದಿ(ಸ) ಹೇಳಿದ್ದಾರೆ, "ಆ ಸೇತುವೆಯನ್ನು ಪ್ರಥಮವಾಗಿ ನಾನು ದಾಟುತ್ತೇನೆ. ಅನಂತರ ನನ್ನ ಸಮುದಾಯದವರು ದಾಟುತ್ತಾರೆ." (ಹದೀಸ್)

ಇದೋ ಸತ್ಯವಿಶ್ವಾಸಿಗಳ ಪ್ರಥಮ ತಂಡವು ಎವೆಯಿಕ್ಕುವುದರೊಳಗೆ ಆ ಸೇತುವೆಯನ್ನು ದಾಟಿ ಬಿಡುತ್ತದೆ. ಆ ತಂಡದಲ್ಲಿ ಸುಮಾರು 70,000 ಮಂದಿಯಿರುತ್ತಾರೆ. ವಿಚಾರಣೆ ಮಾಡಬೇಕಾದ ಅಗತ್ಯವೂ ಇಲ್ಲದಂತಹ ಮಹಾ ಭಾಗ್ಯಶಾಲಿಗಳು. ಅವರ ಮುಖಗಳು ಹುಣ್ಣಿಮೆ ಚಂದ್ರನಂತಿರುವುದು. ಅವರು ದಾಟಿದರು. ಇನ್ನು ಅವರ ಹತ್ತಿರದ ತಂಡ. ಇವರು ಆಕಾಶದಲ್ಲಿರುವ ಅತ್ಯಂತ ಪ್ರಕಾಶಮಾನವಾದ ನಕ್ಷತ್ರದಂತೆ ಶೋಭಿಸುತ್ತಿರುವರು. ಅತ್ಯುನ್ನತರು ಶೋಭೆ ಮತ್ತು ವೇಗದಲ್ಲಿ ಪ್ರಥಮ ಪಂಕ್ತಿಯಾಗಿಯೂ ಅವರ ಹಿಂದಿನವರು ಶೋಭೆ ಮತ್ತು ವೇಗದಲ್ಲಿ ಎರಡನೇ ಪಂಕ್ತಿಯಾಗಿಯೂ ಅನಂತರವಿರುವವರು ಮೂರನೇ ಪಂಕ್ತಿಯಾಗಿಯೂ ಹೀಗೆ ಸಜ್ಜನರೆಲ್ಲರೂ ಸಾಲು ಸಾಲಾಗಿ ಹಾದು ಹೋಗುತ್ತಾರೆ. ಎವೆಯಿಕ್ಕುವ ವೇಗದಲ್ಲಿ, ಮಿಂಚಿನ ವೇಗದಲ್ಲಿ, ಗಾಳಿಯ ವೇಗದಲ್ಲಿ, ಒಂಟೆಯ ವೇಗದಲ್ಲಿ ಹೀಗೆ ತಮ್ಮ ಸುಕೃತಗಳ ಸ್ವರೂಪದನ್ವಯ ವಿವಿಧ ವೇಗಗಳಲ್ಲಿ ಅವರು ದಾಟಿ ಹೋಗುತ್ತಾರೆ. ಅವರ ಜತೆ ಅತ್ಯಂತ ಕೊನೆಯಲ್ಲಿ ಇರುವಾತನು ಬಹಳ ಪ್ರಯಾಸದಿಂದ ಕೈ ತಪ್ಪಿ, ಕಾಲು ಜಾರಿ, ಬಿದ್ದು, ತೆವಳಿ ದಾಟುತ್ತಾನೆ. ಕರ್ಮಗಳ ಸ್ವರೂಪದನ್ವಯ ಜನರನ್ನು ಹಿಡಿಯುವ ಆಜ್ಞೆ ದೊರೆತ ಕಬ್ಬಿಣದ ಸಲಾಕೆಗಳೂ ದೋಟಿಗಳೂ ಮುಳ್ಳುಗಳೂ ಸೇತುವೆಯಲ್ಲಿವೆಯೆಂದು ಹಿಂದೆ ಹೇಳಲಾಗಿದೆಯಲ್ಲವೇ. ಆದರೆ ತಕ್ಕಡಿಯಲ್ಲಿ ಕರ್ಮಗಳು ಭಾರ ಹೊಂದಿರುವವರ ಹೊರತು ಇತರ ಎಲ್ಲರನ್ನೂ ಅವು ವಿವಿಧ ರೀತಿಯಲ್ಲಿ ಪೀಡಿಸುತ್ತವೆ. ಕೆಲವರಿಗೆ ಒಂದೆರಡು ಗಾಯ

ಗಳಾಗಿದ್ದರೆ, ಇತರ ಕೆಲವರ ದೇಹವಿಡೀ ಜರ್ಝರಿತವಾಗಿರುವುದು. ಕೆಲವರನ್ನು ಸಿಕ್ಕಿಸಿ ಎಳೆದು ನರಕಕ್ಕೆ ಬೀಳಿಸಿರಬಹುದು. ಎಲ್ಲವೂ ಅವರ ಕರ್ಮಗಳಿಗೆ ತಕ್ಕಂತೆ. (ಹದೀಸ್) ಹೀಗೆ ಕಷ್ಟದಿಂದ ಪಾರಾದ ಬಳಿಕ ಅವರು ನರಕದೊಡನೆ ಹೇಳುತ್ತಾರೆ, "ನಿನ್ನನ್ನು ನಾವು ನೋಡಿದ ಬಳಿಕ ನಿನ್ನಿಂದ ನಮ್ಮನ್ನು ಪಾರುಗೊಳಿಸಿದ ಅಲ್ಲಾಹನಿಗೆ ಸರ್ವಸ್ತುತಿ ಆತನು ಯಾರಿಗೂ ನೀಡದ ಅನುಗ್ರಹವನ್ನು ನಮಗೆ ದಯಪಾಲಿಸಿದ್ದಾನೆ." (ಬೈಹಕಿ) .

ಅಲ್ಲಿ ಅತಿ ಪ್ರಾಮುಖ್ಯವಾದ ಇನ್ನೊಂದು ಘಟನೆಯೂ ನಡೆಯುತ್ತದೆ. ಎಲ್ಲರಿಗೂ ಬೆಳಕು ನೀಡಿ ಸೇತುವೆ ದಾಟುವಂತೆ ಆಜ್ಞಾಪಿಸುವಾಗ ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಮುಂಭಾಗದಲ್ಲಿಯೂ ಕಪಟವಿಶ್ವಾಸಿಗಳನ್ನು ಹಿಂಭಾಗದಲ್ಲಿಯೂ ಬೇರ್ಪಡಿಸಿ ನಿಲ್ಲಿಸು ವನೆಂದು ಹೇಳಿದೆಯಷ್ಟೆ. ಸತ್ಯವಿಶ್ವಾಸಿಗಳು ಬೆಳಕಿನ ಸಹಾಯದಿಂದ ಸೇತುವೆ ದಾಟಿ ಹೋಗುವಾಗ ಹಿಂದೆ ಇರುವ ಕಪಟವಿಶ್ವಾಸಿಗಳು ಅವರನ್ನು ಹಿಂಬಾಲಿಸಿ ಸೇತುವೆಯ ಮೇಲೇರುತ್ತಾರೆ. ಆದರೆ ಅಷ್ಟರಲ್ಲಿ ಅವರ ಬೆಳಕು ನಂದಿ ಅವರು ನರಕಕ್ಕೆ ತಳ್ಳಲ್ಪಡುತ್ತಾರೆ. ಈ ದೃಶ್ಯವನ್ನು ಕುರ್‌ಆನ್ ಹೀಗೆ ವಿವರಿಸಿದೆ,

"ಅಂದು ನೀವು ಸತ್ಯವಿಶ್ವಾಸಿಗಳನ್ನೂ ಸತ್ಯವಿಶ್ವಾಸಿನಿಯರನ್ನೂ ನೋಡುವಾಗ ಅವರ ಪ್ರಕಾಶವು ಅವರ ಮುಂದೆಯೂ ಅವರ ಬಲಭಾಗದಲ್ಲೂ ಸಾಗುತ್ತಿರುವುದು. (ಆಗ ಅವರೊಡನೆ) ಇಂದು ನಿಮಗೆ ಶುಭವಾರ್ತೆಯಿದೆ (ಎನ್ನಲಾಗುವುದು.) ತಳ ಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಿದ್ದು ಅವುಗಳಲ್ಲಿ ಅವರು ಸದಾಕಾಲ ವಾಸಿಸಿರುವರು. ಇದೇ ಮಹಾ ಯಶಸ್ಸು, ಅಂದು ಕಪಟವಿಶ್ವಾಸಿಗಳಾದ ಪುರುಷರು ಮತ್ತು ಸ್ತ್ರೀಯರು ಸತ್ಯವಿಶ್ವಾಸಿಗಳೊಡನೆ, 'ನಿಮ್ಮ ಪ್ರಕಾಶದಿಂದ ನಾವು ಒಂದಿಷ್ಟು ಪ್ರಯೋಜನ ಪಡೆಯುವಂತಾಗಲು ನೀವು ಸ್ವಲ್ಪ ನಮ್ಮ ಕಡೆಗೆ ನೋಡಿರಿ' ಎನ್ನುವರು. ಆದರೆ ಅವರೊಡನೆ, 'ಹಿಂದಕ್ಕೆ ಸರಿಯಿರಿ, ನಿಮ್ಮ ಪ್ರಕಾಶವನ್ನು ಬೇರೆಲ್ಲಾದರೂ ಹುಡುಕಿಕೊಳ್ಳಿರಿ' ಎನ್ನಲಾಗುವುದು. ತರುವಾಯ, ಅವರ ನಡುವೆ ಒಂದು ಅಡ್ಡಗೋಡೆ ಯನ್ನು ನಿರ್ಮಿಸಲಾಗುವುದು. ಅದರಲ್ಲಿ ಒಂದು ಬಾಗಿಲಿರುವುದು. ಆ ಬಾಗಿಲಿನ ಒಳಗೆ ಕರುಣೆಯೂ ಹೊರಗೆ ಯಾತನೆಯೂ ಇರುವುದು. ಅವರು ಸತ್ಯವಿಶ್ವಾಸಿಗಳನ್ನು ಕೂಗಿ ಕರೆಯುತ್ತಾ, 'ನಾವು ನಿಮ್ಮ ಜೊತೆಗಿರಲಿಲ್ಲವೇ?' ಎಂದು ಕೇಳುವರು. ಆಗ ಸತ್ಯವಿಶ್ವಾಸಿಗಳು, 'ಹೌದು. ಆದರೆ ಸ್ವತಃ ನೀವೇ ನಿಮ್ಮನ್ನು ವಂಚನೆಗೆ ಸಿಲುಕಿಸಿಕೊಂಡಿರಿ. ಸಂದರ್ಭ ಸಾಧಕತನವನ್ನು ತೋರಿದಿರಿ, ಸಂಶಯಗ್ರಸ್ತರಾದಿರಿ ಮತ್ತು ಹುಸಿ ನಿರೀಕ್ಷೆಗಳು ನಿಮ್ಮನ್ನು ಮೋಸಗೊಳಿಸುತ್ತಿದ್ದುವು. ಕೊನೆಗೆ ಅಲ್ಲಾಹನ ತೀರ್ಪು ಬಂದೇ ಬಿಟ್ಟಿತು ಮತ್ತು

ಆ ಮಹಾ ವಂಚಕನು (ಶೈತಾನನು) ಕೊನೆಯ ವರೆಗೂ ಅಲ್ಲಾಹನ ವಿಷಯದಲ್ಲಿ ನಿಮ್ಮನ್ನು ವಂಚಿಸುತ್ತಲೇ ಇದ್ದನು. ಆದುದರಿಂದ ಇಂದು ನಿಮ್ಮಿಂದಾಗಲಿ, ಸತ್ಯವನ್ನು ಬಹಿರಂಗವಾಗಿ ನಿರಾಕರಿಸಿದವರಿಂದಾಗಲಿ ಯಾವ ಪರಿಹಾರವನ್ನೂ ಸ್ವೀಕರಿಸಲಾಗದು. ನರಕವು ನಿಮ್ಮ ನಿವಾಸವಾಗಿದೆ. ಅದೇ ನಿಮ್ಮ ಮೇಲ್ವಿಚಾರಕ ಮತ್ತು ಇದು ಅತ್ಯಂತ ಕೆಟ್ಟ ಗತಿಯಾಗಿದೆ' ಎನ್ನುವರು." **(ಅಲ್ ಹದೀದ್: 12-15)**

ಸಜ್ಜನರ ವಿಶ್ವಾಸದ ಪ್ರಾಮಾಣಿಕತೆ ಮತ್ತು ಚರ್ಯೆಯ ನಿಷ್ಕಳಂಕತೆಯು ಅಲ್ಲಿ ಬೆಳಕಾಗಿ ರೂಪಾಂತರವಾಯಿತೇ? ಕರ್ಮಗಳ ಪ್ರಮಾಣದನ್ವಯ ಬೆಳಕಿನ ವ್ಯಾಪ್ತಿ ಇರುವುದೆಂದು ಸ್ಪಷ್ಟಪಡಿಸಲಾಗಿದೆಯಷ್ಟೆ. ಜಗತ್ತಿನಲ್ಲಿ ಮಾನವರು ಮಾಡಿದ ಸತ್ಕರ್ಮಗಳ ಉತ್ತಮ ಪ್ರತಿಕ್ರಿಯೆಯು ಎಷ್ಟು ದೂರ ವ್ಯಾಪಿಸಿರುವುದೋ ಅಷ್ಟು ದೂರದ ವರೆಗೆ ಬೆಳಗುವಂತಹ ಬೆಳಕು ಆತನಿಗೆ ದೊರೆಯುವುದೆಂದು ಭಾವಿಸಬಹುದೇ? ಹಾಗಿದ್ದರೆ ಕಪಟವಿಶ್ವಾಸಿಗಳಿಗೆ ಬೆಳಕು ಹೇಗೆ ದೊರೆಯುತ್ತದೆ? (ಕೆಲವು ವರದಿಗಳನ್ವಯ ಅವರಿಗೆ ಬೆಳಕೇ ದೊರೆಯುವುದಿಲ್ಲ, ಇತರ ಕೆಲವು ಪ್ರಬಲ ವರದಿಗಳನ್ವಯ ಅವರಿಗೆ ಬೆಳಕು ನೀಡಲಾಗುತ್ತದೆ) ಅದು ಕೃತಕ ಬೆಳಕಾಗಿತ್ತು. ಅವರ ಕರ್ಮಗಳು ಕೃತಕವಾಗಿರುವಂತೆ. ಆದ್ದರಿಂದ ತುರ್ತು ಸಂದರ್ಭದಲ್ಲಿ ಆ ಬೆಳಕು ನಂದಿ ಹೋಗುವುದೆಂದು ಭಾವಿಸ ಬಹುದು.

ಪ್ರವಾದಿಯವರು(ಸ) ಕೂಡಲೇ ಸ್ವರ್ಗದ ಬಾಗಿಲನ್ನು ತಟ್ಟುತ್ತಾರೆ. ಕಾವಲುಭಟರು ಹೇಳುತ್ತಾರೆ, "ನೀವು ಯಾರು?" "ಮುಹಮ್ಮದ್." "ಓಹೋ, ಹಾಗಾದರೆ ತೆರೆಯು ತ್ತೇನೆ. ನಿಮಗಿಂತ ಮುಂಚೆ ಮತ್ತಾರಿಗೂ ತೆರೆಯಬಾರದೆಂದು ನನಗೆ ಆಜ್ಞೆ ನೀಡಲಾಗಿದೆ." ತರುವಾಯ ಬಾಗಿಲು ತೆರೆಯುತ್ತದೆ.

ಅಲ್ಲಾಹನಿಗೆ ಸಹಭಾಗಿಗಳನ್ನು ಮಾಡಿಕೊಂಡವರೆಲ್ಲರೂ ನರಕಕ್ಕೆ ಬಿದ್ದರೆಂದು ಹಿಂದೆ ಹೇಳಿದೆಯಷ್ಟೆ. ಇನ್ನುಳಿದ ಕಪಟವಿಶ್ವಾಸಿಗಳು ಮತ್ತು ಕರ್ಮಗಳು ಭಾರವಾಗಿರದ ಅಪರಾಧಿಗಳೂ ಸೇತುವೆ ದಾಟುವಾಗ ನರಕಕ್ಕೆ ಬಿದ್ದರೆಂದು ಇದೀಗ ವಿವರಿಸಲಾಯಿತು. ಇನ್ನು ನರಕ-ಸ್ವರ್ಗಗಳ ಕುರಿತು ವಿವರಿಸುತ್ತೇನೆ.

❖ ❖ ❖ ❖

ಅಧ್ಯಾಯ 06

ನರಕ

ಇನ್ನು ನರಕದ ಸ್ಥೂಲ ಪರಿಚಯ ಮಾಡಿಕೊಳ್ಳೋಣ. ನರಕವು ಅಗಾಧ ತಳ ವಿರುವ ಒಂದು ಮಹಾ ಕಂದರವಾಗಿದೆ. ಸ್ವರ್ಗದ ಗಾಂಭೀರ್ಯವು ಮೇಲೇರಿದಷ್ಟು ಹೆಚ್ಚಿದರೆ, ನರಕದ ಭಯಾನಕತೆಯು ಆಳಕ್ಕಿಳಿದಷ್ಟು ಹೆಚ್ಚುತ್ತದೆ. ಆಳ ಹೆಚ್ಚಿದಂತೆಯೇ ನೋವು, ಸಂಕಷ್ಟಗಳು ಅಧಿಕವಾಗಿರುವುದೆಂದರ್ಥ. ಕಂದರ, ಹೊಂಡ ಎಂಬುದನ್ನು ಸೀಮಿತ ಅರ್ಥದಲ್ಲಿ ಗ್ರಹಿಸಿದರೆ ಸಾಲದು. ಅತ್ಯಂತ ವಿಶಾಲವಾದ ಅಗಾಧ ತಳವಿರುವ ಒಂದು ಮಹಾ ಪಾತಾಳ ಲೋಕವೆಂದೇ ಭಾವಿಸಬೇಕು (ಫಉಮ್ಮುಹು ಹಾವಿಯ), ಅಗ್ನಿ ತುಂಬಿದ ಪಾತಾಳ (ನಾರುನ್ ಹಾಮಿಯ).

ಅಬೂ ಹುರೈರಾ(ರ) ಹೇಳಿದ್ದಾರೆ: ನಾವೊಮ್ಮೆ ಪ್ರವಾದಿಯವರ(ಸ) ಬಳಿಯಿದ್ದಾಗ ಒಂದು ವಸ್ತು ಬಿದ್ದ ಸದ್ದು ಕೇಳಿಸಿತು. ಪ್ರವಾದಿಯವರು(ಸ), "ಅದು ಏನೆಂದು ತಿಳಿದಿದೆಯೇ?" ಎಂದು ಕೇಳಿದರು. ನಾವು 'ಇಲ್ಲ' ಎಂದೆವು. ಆಗ ಪ್ರವಾದಿ ಯವರು(ಸ), "ಅದು 70 ವರ್ಷಗಳ ಹಿಂದೆ ನರಕಕ್ಕೆ ಎಸೆಯಲಾದ ಒಂದು ಕಲ್ಲು, ಈಗ ತಳಭಾಗಕ್ಕೆ ತಲಪಿದಾಗ ಈ ಶಬ್ದ ಕೇಳಿಸಿತು" ಎಂದು ಹೇಳಿದರು. **(ಮುಸ್ಲಿಮ್)**

ಸ್ವರ್ಗದ ವಿಸ್ತಾರದ ಕುರಿತು ಕುರ್‌ಆನ ಮತ್ತು ಪ್ರವಾದಿವಚನಗಳಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಆದರೆ ನರಕದ ವಿಸ್ತಾರದ ಕುರಿತು ಅವೆರಡರಲ್ಲಿಯೂ ಹೆಚ್ಚೇನೂ ಕಾಣಿಸುವುದಿಲ್ಲ, ಪ್ರಸ್ತುತ ಹದೀಸ್‌ನಲ್ಲಿ ಹೇಳಿದ 70 ವರ್ಷಗಳನ್ನು ಸ್ವರ್ಗದ ವಿಸ್ತಾರಕ್ಕೆ ಹೋಲಿಸಿದಾಗ ಅದು ತೀರಾ ನಗಣ್ಯವೆನಿಸುತ್ತದೆ. ಅಷ್ಟೊಂದು ವಿಸ್ತಾರದ ಅಗತ್ಯವಿಲ್ಲ ವೆಂದು ನಿರ್ಧರಿಸಿರಬಹುದೇ? ವಸ್ತುಶಃ ನರಕವು ಒಂದು ಸೆರೆಮನೆಯಾಗಿದೆಯಷ್ಟೇ. ಸೆರೆಮನೆಯಲ್ಲಿ ಸ್ಥಳದ ಮಿತಿಯೂ ಒಂದು ಶಿಕ್ಷಾ ಕ್ರಮವಾಗಿರಬಹುದು. "ಇದೋ ಈ ತಂಡವೂ ಬಂದು ನಿಮ್ಮ ಜತೆ ಸೇರುತ್ತಿದೆ." **(ಸ್ವಾದ್: 59)** ಮತ್ತು "ಅದರ ಇಕ್ಕಟ್ಟಾದ ಜಾಗದಲ್ಲಿ ಕೈಕಾಲು ಕಟ್ಟಲ್ಪಟ್ಟಿರುವ ಅವರನ್ನು ತುರುಕಿ ಸಲ್ಪಟ್ಟಾಗ" **(ಫುರ್ಕಾನ್: 13)** ಎಂದು ಮುಂತಾದ ಕುರ್‌ಆನ್ ವಾಕ್ಯಗಳು ಅದನ್ನು ಸೂಚಿಸುತ್ತಿವೆ.

ನರಕಾಗ್ನಿ

ನರಕಾಗ್ನಿಯ ಕುರಿತು ಕುರ್‌ಆನಿನಲ್ಲಿರುವ ವರ್ಣನೆಗಳು ಎಂಥವರನ್ನೂ ನಡುಗಿಸುವಂತಿದೆ. "ನರಕಾಗ್ನಿಯ ಉಷ್ಣವು ಅತಿ ತೀಕ್ಷ್ಣವಾಗಿರುವುದು." **(ಅತ್ತೌಬ: 81)**

ಪ್ರಜ್ವಲಿಸುವ ಬೆಂಕಿ, ಧಗಧಗನೆ ಉರಿಸಲ್ಪಟ್ಟ ಬೆಂಕಿ, ಅಲ್ಲಾಹನ ಬೆಂಕಿ, ಭೂತಾಕಾರದ ಮಹಾ ಬೆಂಕಿ. ಅದಕ್ಕೆ ಬೀಳುವ ಎಲ್ಲವನ್ನೂ ಹಿಚುಕಿ ಛಿದ್ರಗೊಳಿಸುವ ಬೆಂಕಿ. ಅಪರಾಧಿಯ ತಪ್ಪು ವಿಶ್ವಾಸ, ದುರಾಗ್ರಹ ಮತ್ತು ದುರ್ಭಾವನೆಗಳ ಕೇಂದ್ರವಾಗಿರುವ ಆತನ ಹೃದಯವನ್ನು ಆಕ್ರಮಿಸುವ ಬೆಂಕಿ. ಮಾನವರೂ ವಿಗ್ರಹಗಳೂ ಸ್ವಯಂ ಆರಾಧ್ಯರಾಗಿ ವರ್ತಿಸಿದ ಇತರೆಲ್ಲ ವಸ್ತುಗಳೂ ಅದರ ಸೌದೆಯಾಗಿರುವುವು. "ನೀವು ಮತ್ತು ಅಲ್ಲಾಹ ನನ್ನು ಬಿಟ್ಟು ನೀವು ಪೂಜಿಸುವ ಆರಾಧ್ಯ ವಸ್ತುಗಳು ನರಕದ ಇಂಧನಗಳಾಗಿರುವುವು." **(ಅಲ್ ಅಂಬಿಯಾ: 98)** "ಮಾನವರೂ ಶಿಲೆಗಳೂ ನರಕದ ಇಂಧನವಾಗುವರು." **(ಅತ್ತಹ್ರೀಮ್: 6)** "ಅತ್ಯುನ್ನತ ಸೌಧಗಳಂತಹ ಅಗ್ನಿ ಕಿಡಿಗಳನ್ನು ಅದು ಉಗುಳುವುದು. ಅವು ಸಿಡಿದು ನಾನಾ ದಿಕ್ಕುಗಳಿಗೆ ಪಸರಿಸಿದಾಗ ಹಳದಿ ವರ್ಣದ ಒಂಟೆಗಳು ಜಿಗಿಯುತ್ತಿರುವಂತೆ ಭಾಸವಾಗುವುದು." **(ಅಲ್ ಮುರ್ಸಲಾತ್: 32-33)**

ಪ್ರವಾದಿ(ಸ) ಹೇಳಿದ್ದಾರೆ, "ಮಾನವನು ಉರಿಸುವ, ನಿಮ್ಮ ಈ ಬೆಂಕಿಯು ನರಕದ ಉಷ್ಣದ ಕೇವಲ ಎಪ್ಪತ್ತನೇ ಒಂದು ಅಂಶವಿದೆ." ಸಹಾಬಿಗಳು ಹೇಳಿದರು, "ಅಲ್ಲಾಹನಾಣೆ! ಇದು ಬಹಳಷ್ಟು ಬಿಸಿಯಿದೆಯಲ್ಲವೇ?" ಪ್ರವಾದಿ(ಸ) ಹೇಳಿದರು, "ನರಕದ ಬೆಂಕಿಯು ಇದಕ್ಕಿಂತ 69 ಪಟ್ಟು ಬಿಸಿಯಾಗಿರುವುದು. ಪ್ರತಿಯೊಂದು ಅಂಶವೂ ಇಷ್ಟೇ ಬಿಸಿಯಾಗಿರುವುದು." **(ಮುಸ್ಲಿಮ್)**

ಹೊಗೆಯ ನೆರಳು

ನರಕವು ವಿಶಿಷ್ಟ ರೀತಿಯ ಕರಿ ಹೊಗೆಯನ್ನು ಸೂಸುತ್ತದೆ. ಅದು ಸುಡುಗಾಳಿ, ಕಪ್ಪು ಹೊಗೆ ಅದು ತಂಪು ಅಥವಾ ಸುಖದಾಯಕ ಆಗಿರದು." **(ಅಲ್ ವಾಕಿಅ: 42-44)** ಭಯಾನಕವಾದ ಆ ಕಪ್ಪು ಹೊಗೆ, ಮೇಲೇರಿ ವಿವಿಧ ಕವಲುಗಳಾಗುತ್ತವೆ. ಅದು ಅಗ್ನಿಯ ತಾಪವನ್ನು ತಡೆಯುವಂತಿಲ್ಲ, ಅದು ತಂಪು ನೆರಳನ್ನೂ ನೀಡುವುದಿಲ್ಲ, ಅದರ ಬಿಸಿ ನೆರಳನ್ನು ನರಕವಾಸಿಗಳು ಅನುಭವಿಸಬೇಕಾಗಿದೆ. **(ಅಲ್ ಮುರ್ಸಲಾತ್: 30-31)**

ಸುಡುವ ಪಾನೀಯ

ಬಿಸಿಯಾಗಿ ಕುದಿಯುತ್ತಿರುವ ನೀರು ಅಲ್ಲಿನ ಪ್ರಮುಖ ಪಾನೀಯವಾಗಿರುವುದು.

“ಕರುಳನ್ನು ಕತ್ತರಿಸಿ ಬಿಡುವಂತಹ ಕುದಿಯುವ ನೀರು.” (ಮುಹಮ್ಮದ್: 15) “ಕೆಲವೊಮ್ಮೆ ಈ ನೀರನ್ನು ಅವರ ತಲೆಯ ಮೇಲೆ ಸುರಿಯಲಾಗುವುದು. ಆಗ ಅವರ ಚರ್ಮಗಳು ಮಾತ್ರವಲ್ಲ ಹೊಟ್ಟೆಯಲ್ಲಿರುವ ಭಾಗಗಳೂ ಕರಗಿ ಹೋಗುತ್ತವೆ.” (ಅಲ್ ಹಜ್ಜ್: 19-20)

ಹುಣ್ಣು ಇತ್ಯಾದಿಗಳಿಂದ ಒಸರುವ ದುರ್ಗಂಧಮಯ ಕೀವು ಇಲ್ಲಿನ ಇನ್ನೊಂದು ಪಾನೀಯ. ಕೊಳೆತ ಕೀವು ಮತ್ತೊಂದು. ಕುಡಿದಾಗ ಅದು ಗಂಟಲಲ್ಲಿ ಸಿಲುಕಿಕೊಳ್ಳು ವುದು. ಕೆಳಗಿಳಿಸಲು ಬಹಳಷ್ಟು ಕಷ್ಟ ಪಡಬೇಕು. ನುಂಗುವ ಪೇಚಾಟದಲ್ಲಿ ಅವರಿಗೆ ಮರಣವು ನಾನಾ ಕಡೆಗಳಿಂದ ಪೀಡಿಸಿದಂತಾಗುವುದು. ಆದರೂ ಅವರು ಸಾಯುವು ದಿಲ್ಲ, ಆ ಪಾನೀಯ ಅಷ್ಟೊಂದು ಗಡುಸಾಗಿರುವುದು. (ಇಬ್ರಾಹೀಮ್: 16-17)

ಅಲ್ಲಿ ಮಡ್ಡಿ ತೈಲದಂತಹ ಇನ್ನೊಂದು ಪಾನೀಯವೂ ಇದೆ. ಬಹಳಷ್ಟು ಕಾಡಿಬೇಡಿದ ಬಳಿಕ ಅದನ್ನು ಅವರಿಗೆ ನೀಡಲಾಗುವುದು. ಆದರೆ, ಕುಡಿದಾಗ ಅದು ಮುಖವನ್ನು ಕರಟಿ ಬಿಡುವುದು. “ಅಲ್ಲಿ ಅವರು ನೀರು ಬೇಕೆಂದು ಕೇಳಿದಾಗ ಎಣ್ಣೆಯ ಮಡ್ಡಿಯಂತಹ ಹಾಗೂ ಬಾಯಿಯನ್ನು ಸುಟ್ಟು ಬಿಡುವಂತಹ ನೀರಿನಿಂದ ಅವರನ್ನು ಸತ್ಕರಿಸಲಾಗು ವುದು.” (ಅಲ್ ಕಹ್ಫ್: 29)

ನರಕವಾಸಿಗಳ ಆಹಾರ

“ಝುಕ್ಕೂಮ್ ವೃಕ್ಷವು ಪಾಪಿಗಳ ಮುಖ್ಯ ಆಹಾರವಾಗಿರುವುದು.” (ಅದ್ದುಖಾನ್: 43-44) “ಅದು ನರಕದ ತಳದಿಂದ ಬೆಳೆದು ಬರುತ್ತಿದೆ. ಅದರ ಗೊನೆಗಳು ಶೈತಾನರ ತಲೆಯೋ ಎಂಬಂತಿರುವುದು.” (ಅಸ್ಸಾಫ್ಫಾತ್: 64-65) “ಅವರು ಅದನ್ನು ಹೊಟ್ಟೆ ತುಂಬಾ ತಿನ್ನುತ್ತಾರೆ.” (ಅಸ್ಸಾಫ್ಫಾತ್: 66)

(ತಿಹಾಮ ಪ್ರದೇಶದಲ್ಲಿ ಬೆಳೆಯುವ ಒಂದು ವರ್ಗದ ವೃಕ್ಷವನ್ನು ‘ಝುಕ್ಕೂಮ್’ ಎಂದು ಹೇಳಲಾಗುತ್ತದೆ. ಅದು ಅತ್ಯಂತ ಕಹಿಯಾಗಿದೆ ಮತ್ತು ಅದಕ್ಕೆ ಅಸಹ್ಯ ದುರ್ಗಂಧವೂ ಇದೆ. ಅದನ್ನು ತುಂಡರಿಸಿದರೆ ಒಂದು ರೀತಿಯ ರಸ ಒಸರುತ್ತದೆ. ಅದು ಮೈಗೆ ತಾಗಿದರೆ ಸುಡುತ್ತದೆ.) “ಅದು ಮಡ್ಡಿ ತೈಲದಂತಿರುವುದು. ಹೊಟ್ಟೆಗೆ ತಲಪಿದರೆ ಬಿಸಿ ನೀರಿನಂತೆ ಕುದಿ ಯುವುದು.” (ಅದ್ದುಖಾನ್: 45-46) “ತರುವಾಯ ಅದರ ಜತೆ ಕುದಿಯುವ ನೀರನ್ನು ಕುಡಿಯಲು ನೀಡಲಾಗುವುದು.” (ಅಸ್ಸಾಫ್ಫಾತ್: 67) “ದಾಹದಿಂದ ಬಳಲಿದ ಒಂಟೆಯು ಹೀರಿ ಕುಡಿಯುವಂತೆ ಅವರು ಅದನ್ನು ಕುಡಿಯುವರು.” (ಅಲ್ ವಾಕಿಅ: 55) ಒಣಗಿದ ಮುಳ್ಳುಗಂಟಿಯು (ದರೀಅ್) ಇನ್ನೊಂದು ಆಹಾರವಾಗಿರುವುದು. ಆದರೆ ಅದರಿಂದ ಪೋಷಕಾಂಶವೂ ದೊರೆಯು

ವುದಿಲ್ಲ, ಹಸಿವು ತಣಿಯುವುದೂ ಇಲ್ಲ. (ಗಾಸಿಯ: 6-7)

ಗಿಸೀಲ್ ಮತ್ತೊಂದು ಆಹಾರ. ಅದು ಕೂಡಾ ಗಾಯಗಳಿಂದ ಸುರಿಯುವ ಕೀವೆಂದು ಹೇಳಲಾಗಿದೆ. ಯಾವ ರೀತಿಯಿಂದಲೂ ಸುಖದಾಯಕ ಅಥವಾ ಹಸಿವು ನೀಗಿಸುವ ಯಾವ ಆಹಾರವೂ ಅಲ್ಲಿ ನೀಡಲ್ಪಡುವುದಿಲ್ಲ.

ಬೆಂಕಿಯ ಉಡುಪುಗಳು

ಅಲ್ಲಿ ನರಕವಾಸಿಗಳ ಉಡುಪು ಸಿದ್ಧವಾಗಿದೆ. ಆದರೆ ಅವು ಬೆಂಕಿಯದ್ದಾಗಿರುವುದು. "ಇವರಲ್ಲಿ ಸತ್ಯನಿಷೇಧಿಗಳಿಗೆ ನರಕಾಗ್ನಿಯ ಉಡುಪು ಕತ್ತರಿಸಲ್ಪಟ್ಟಿದೆ." (ಅಲ್ ಹಜ್ಜ್: 19) ಟಾರಿನ (ಮಯಣ) ಅಂಗಿ, (ಬೆಂಕಿ ಹಿಡಿದಾಗ ಅಂಟಬೇಕಲ್ಲವೇ) "ಅವರು ಟಾರಿನ ಉಡುಪು ಧರಿಸಿರುವರು." (ಇಬ್ರಾಹೀಮ್: 50) ಬೆಂಕಿಯ ಹಾಸಿಗೆ ಮತ್ತು ಹೊದಿಕೆಯೂ ಇರುವುದು. "ಅವರಿಗೆ ನರಕದ್ದೇ ಹಾಸಿಗೆ ಮತ್ತು ನರಕದ್ದೇ ಹೊದಿಕೆ ಇರುವುದು." (ಅಲ್ ಅಅ್‌ರಾಫ್: 41) ಕೆಳಗೆ ಮತ್ತು ಮೇಲೆ ಬೆಂಕಿಯ ಕೊಡೆಗಳಿರುವುದು. "ಅಗ್ನಿ ಕೊಡೆಗಳು ಅವರ ಮೇಲ್ಭಾಗದಲ್ಲಿಯೂ ಕೆಳಭಾಗದಲ್ಲಿಯೂ ಹರಡಿಕೊಂಡಿರುವುವು." (ಅಝ್ಝುಮರ್: 16)

ಇತರ ಶಿಕ್ಷಾ ಸಾಧನಗಳು

ತಾಳ್ಮೆಗೆಟ್ಟು ಹೊರ ಹಾರಲು ಪ್ರಯತ್ನಿಸಿದರೆ ಒಳಕ್ಕೆ ತಳ್ಳುವ ಭಾರವಾದ ಕಬ್ಬಿಣದ ದಂಡಗಳೂ ಅಲ್ಲಿವೆ. "ಅವರನ್ನು ಶಿಕ್ಷಿಸಲಿಕ್ಕಾಗಿ ಕಬ್ಬಿಣದ ಗದೆಗಳಿರುವುವು." (ಅಲ್ ಹಜ್ಜ್: 21) ಕೈಕಾಲುಗಳನ್ನು ಬಿಗಿಯುವ ಸಂಕೋಲೆಗಳಿರುವುವು. "ಅಂದು ಅಪರಾಧಿಗಳು ಸಂಕೋಲೆಗಳಿಂದ ಬಿಗಿಯಲ್ಪಟ್ಟಿರುವುದನ್ನು ನೀವು ನೋಡುವಿರಿ." (ಇಬ್ರಾಹೀಮ್: 49) 70 ಮೊಳ ಉದ್ದದ ಸಂಕೋಲೆಗಳು. "ಆ ಬಳಿಕ ಅವನನ್ನು 70 ಮೊಳ ಉದ್ದದ ಸಂಕೋಲೆ ಗಳಿಂದ ಬಿಗಿಯಿರಿ." (ಅಲ್ ಹಾಕ್ಕ: 32) ಕೊರಳು ಮತ್ತು ಕೈಗಳಿಗೆ ಹಾಕುವ ಕಡಗ ಗಳೂ ಇವೆ. "ಸತ್ಯನಿಷೇಧಿಗಳಿಗೆ ನಾವು ಸಂಕೋಲೆಗಳನ್ನೂ ಕಂಠ ಕಡಗಗಳನ್ನೂ ಧಗಧಗಿಸುವ ಅಗ್ನಿಯನ್ನೂ ಸಿದ್ಧಗೊಳಿಸಿಟ್ಟಿದ್ದೇವೆ." (ಅದ್ದಹ್ರ್: 4) ಅಗತ್ಯಾನುಸಾರ ಸಿಲುಕಿಸುವ ಉರುಳು ಗಳಿವೆ. "ನಮ್ಮ ಬಳಿ ಇವರಿಗಾಗಿ ಭಾರವಾದ ಬೇಡಿಗಳಿವೆ." (ಮುಝ್ಝಮ್ಮಿಲ್: 12) ಅದರಲ್ಲಿ ಎಲ್ಲವೂ ಇವೆ. "ಇತರ ಅನೇಕ ರೀತಿಯ ಶಿಕ್ಷಾ ಸಾಧನಗಳೂ ಇರುವುವು." (ಸ್ವಾದ್: 58)

ಮೆಟ್ಟಲುಗಳು

ನರಕಕ್ಕೆ ಅನೇಕ ಮೆಟ್ಟಲುಗಳಿವೆ. "ಕಪಟವಿಶ್ವಾಸಿಗಳು ನರಕದ ಅತ್ಯಂತ ತಳಭಾಗಕ್ಕೆ

ಹೋಗುವವರೆಂಬುದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ." (ಅನ್ನಿಸಾ: 145)

ಕವಾಟಗಳು

ಅಪರಾಧಿಗಳನ್ನು ಶಿಕ್ಷೆಯ ವಿವಿಧ ಹಂತಕ್ಕೆ ದೂಡಲನುವಾಗುವಂತೆ ನರಕಕ್ಕೆ ಏಳು ಕವಾಟಗಳನ್ನು ಜೋಡಿಸಲಾಗಿದೆ. "ಈ ನರಕಕ್ಕೆ ಏಳು ದ್ವಾರಗಳಿವೆ. ಪ್ರತಿಯೊಂದು ದ್ವಾರಕ್ಕೆ ಅವರಲ್ಲೊಂದು ವಿಭಾಗ ವನ್ನು ನಿಗದಿಗೊಳಿಸಲಾಗಿದೆ." (ಅಲ್ ಹಿಜ್ರ್: 44)

ಗೋಡೆಗಳು

ನರಕಕ್ಕೆ ಬಲವಾದ ಗೋಡೆಗಳೂ ಇವೆ. ನರಕವಾಸಿಗಳು ಆ ಗೋಡೆಗಳಿಂದ ಸುತ್ತುವರಿಯಲ್ಪಟ್ಟಿರುತ್ತಾರೆ. "ಅದರ ಜ್ವಾಲೆಗಳು ಅವರನ್ನು ಆವರಿಸಿಕೊಂಡಿವೆ." (ಕಹ್ಫ್: 29)

ಮುಚ್ಚಳ

ಎಲ್ಲರನ್ನೂ ಒಳಸೇರಿಸಿದ ಬಳಿಕ ನರಕವನ್ನು ಭದ್ರವಾಗಿ ಮುಚ್ಚಲಾಗುವುದು. "ಅದನ್ನು ಅವರ ಮೇಲೆ ಆವರಿಸಿ ಮುಚ್ಚಿಬಿಡಲಾಗುವುದು." (ಅಲ್ ಹುಮಝ್ಝ: 8) ಮತ್ತು ಮುಚ್ಚಳಗಳನ್ನು ಬೃಹತ್ ಹಿಡಿಕೆಗಳಿಂದ ಭದ್ರಪಡಿಸಲಾಗುವುದು. "ಅವರು ಎತ್ತರವಾದ ಸ್ತಂಭಗಳಲ್ಲಿ (ಸಿಲುಕಿಕೊಂಡಿರುವ ಸ್ಥಿತಿಯಲ್ಲಿ)." (ಅಲ್ ಹುಮಝ್ಝ: 9) ಕಠೋರ ಹೃದಯದ, ಬಲಶಾಲಿಗಳಾದ, ದೇವನ ಯಾವುದೇ ಆಜ್ಞೆಯನ್ನು ಕಾರ್ಯಗತಗೊಳಿಸುವ 19 ದೇವಚರರು ಅದರ ಕಾವಲುಗಾರರಾಗಿರುತ್ತಾರೆ. "ಅದರ ಮೇಲೆ ಹತ್ತೊಂಭತ್ತು ಕಾರ್ಯಕರ್ತರು ನಿಯುಕ್ತರಾಗಿದ್ದಾರೆ." (ಮುದ್ದಸ್ಸಿರ್: 30) "ಅದರ ಮೇಲೆ ಅತ್ಯಂತ ಕಠೋರ ಮತ್ತು ಉಗ್ರರಾದ ದೇವಚರರು ನಿಯುಕ್ತರಾ ಗುವರು. ಅವರೆಂದೂ ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವುದಿಲ್ಲ ಮತ್ತು ಅವರಿಗೆ ನೀಡಲಾಗುವ ಪ್ರತಿಯೊಂದು ಅಪ್ಪಣೆಯನ್ನು ಪಾಲಿಸುತ್ತಾರೆ." (ಅತ್ತಹ್ರೀಮ್: 6) ನರಕವು ಅತಿ ಭಯಂಕರ ವಸ್ತುವೇ ಸರಿ. "ಈ ನರಕವೂ ಮಹಾ ವಸ್ತುಗಳ ಪೈಕಿ ಒಂದಾಗಿದೆ." (ಮುದ್ದಸ್ಸಿರ್: 35)

ನರಕದ ಸ್ಥೂಲ ಚಿತ್ರವನ್ನು ಮೇಲೆ ವರ್ಣಿಸಲಾಗಿದೆ. ಅಲ್ಲಿ ಎಲ್ಲರಿಗೂ ಒಂದೇ ರೀತಿಯ ಶಿಕ್ಷೆ ದೊರೆಯುವುದಿಲ್ಲವೆಂಬುದು ವ್ಯಕ್ತ. ಅಪರಾಧದ ಸ್ಥಿತಿಯನ್ವಯ ಪ್ರತಿಯೊಬ್ಬರಿಗೂ ಅರ್ಹ ಶಿಕ್ಷೆಯನ್ನು ನೀಡಲಾಗುವುದು.

ನರಕದ ಅತಿ ಸೌಮ್ಯ ಶಿಕ್ಷೆಯೆಂದರೆ ಕಾಲಿಗೆ ಬೆಂಕಿಯ ಚಪ್ಪಲಿ ತೊಡಿಸುವುದು. ಅದರಿಂದ ವ್ಯಕ್ತಿಯ (ಅಬೂ ತಾಲಿಬ್) ಮಿದುಳು ಕುದಿಯುತ್ತಿರುವುದೆಂದು ಪ್ರವಾದಿಯವರು(ಸ) ಸ್ಪಷ್ಟಪಡಿಸಿದ್ದಾರೆ (ಬುಖಾರಿ).

ವಸ್ತುತಃ ಸತ್ಯನಿಷೇಧಿಯಾಗಿದ್ದುಕೊಂಡು ವಿಶ್ವಾಸಿಗಳ ಸೋಗು ಹಾಕಿ ಹಾನಿಯುಂಟು ಮಾಡಿದ ಕಪಟ ವಿಶ್ವಾಸಿಗಳು ನರಕದ ಅತ್ಯಂತ ತಳಭಾಗದಲ್ಲಿರುವರೆಂದು ಕುರ್‌ಆನ್ ಹೇಳಿದೆ. ವಸ್ತುಶಃ ಇವೆರಡರ ಮಧ್ಯೆ ಬಹಳಷ್ಟು ಅಂತರವಿದೆ. ಅವುಗಳ ಮಧ್ಯೆ ವಿವಿಧ ಸ್ತರಗಳಿರುವುದು ಸಹಜ. ಆದರೆ ಪ್ರತಿಯೊಂದು ಸ್ತರ ಮತ್ತು ಅದರ ಶಿಕ್ಷಾರೂಪವನ್ನು ಅಲ್ಲಾಹನು ವಿವರಿಸಿಲ್ಲ, ಅದನ್ನು ಅಸ್ಪಷ್ಟವಾಗಿರಿಸಲಾಗಿದೆ. ಅದರಿಂದ ಹೃದಯದಲ್ಲಿ ಭಯ ಮೂಡಬಹುದು.

ಹಾಗೆಯೇ ನರಕವಾಸಿಗಳು ಅಲ್ಲಿ ಪರಸ್ಪರ ಬಯ್ಯುತ್ತಾರೆ, ಶಪಿಸುತ್ತಾರೆ. "ನಮ್ಮನ್ನು ಮೋಸಗೊಳಿಸಿದವರನ್ನು ಒಮ್ಮೆ ತೋರಿಸಿ, ನಾವು ಅವರನ್ನು ತುಳಿದು ಹಾಕುತ್ತೇವೆ" ಎಂದು ಅಲ್ಲಾಹನೊಡನೆ ಹೇಳುವರು. ಭೂಮಿಯಲ್ಲಿದ್ದ ತಮ್ಮ ಕೆಲವು ಪರಿಚಿತರನ್ನು ಹುಡುಕುವರು, ಜಹನ್ನಮ್ ಮತ್ತು ಕುದಿಯುವ ನೀರಿನ ತೊರೆಯ ಮಧ್ಯೆ ತಿರುಗುವರು. ತಿನ್ನುವರು, ಕುಡಿಯುವರು, ಝುಕ್ಕೂಮ್ ತಿನ್ನಲು ಹೋಗುವರು. ಪುನಃ ಜಹನ್ನಮ್‌ಗೆ ಮರಳುವರು, ಹೊರ ಹೋಗಲು ಪ್ರಯತ್ನಿಸುವರು, ಹೀಗೆ ಹಲವು ಕ್ರಿಯೆಗಳು ಅಲ್ಲಿ ನಡೆಯುತ್ತಿರುವುದು. ಒಣಗಿದ ಮುಳ್ಳು ಕಂಟಿಯೂ ಅಲ್ಲಿ ದೊರೆಯಬೇಕಷ್ಟೆ. ಒಟ್ಟಿನಲ್ಲಿ, ಇವೆಲ್ಲವುಗಳಿಗೆ ಸೂಕ್ತವಾದ ರೀತಿಯಲ್ಲಿ ಸಜ್ಜುಗೊಳಿಸಲಾದ ಅತಿ ಅಗಾಧ ಮತ್ತು ವಿಸ್ತಾರವಾದ ಪಾತಾಳ ಲೋಕವೇ ನರಕವೆಂದು ನಾವು ಭಾವಿಸೋಣ.

ಪಾಪಿಗಳು ಈ ನರಕಕ್ಕೆ ಹೋಗಬೇಕಾಗಿದೆ. ಅಲ್ಲಾಹನ ಹೊರತು ಇತರರನ್ನು ಆರಾಧಿಸಿದ ಎಲ್ಲರೂ ನರಕಕ್ಕೆ ದೂಡಲ್ಪಡುತ್ತಾರೆ. ವಿಶ್ವಾಸಿಗಳು ಮಾತ್ರ ಉಳಿಯುವರೆಂದು ಈ ಹಿಂದೆ ವಿವರಿಸಲಾಗಿದೆ. ಆದರೆ ಅಲ್ಲಿ ಮಧ್ಯದಲ್ಲಿ ಅನುಭವಿಸಲಿರುವ ಹಲವು ಸ್ಥಿತಿಗಳನ್ನು ಬಿಟ್ಟು ಸಂಕ್ಷಿ ಪ್ತವಾಗಿ ಹೇಳಲಾಗಿತ್ತು. ಕುರ್‌ಆನ್ ವಿವರಿಸಿದ ಆ ಘಟನೆ ಗಳನ್ನೂ ನಾವು ತಿಳಿದಿರಬೇಕಾಗಿದೆ. ಅಪರಾಧಿಗಳು ಸರಾಗವಾಗಿ ನರಕಕ್ಕೆ ನಡೆದು ಹೋಗುವರೆಂದು ಭಾವಿಸಬೇಡಿರಿ. ಅಲ್ಲಾಹನ ಆಜ್ಞೆ ಪ್ರಕಾರ ದೇವಚರರು ಅವರನ್ನು ಬಲವಾಗಿ ದೂಡುತ್ತಾ ಸಾಗಿಸುತ್ತಾರೆ. "ಅವರನ್ನು ದೂಡುತ್ತಾ ನರಕಾಗ್ನಿಯ ಕಡೆಗೆ ಕೊಂಡೊಯ್ಯುವಂದು." (ಅತ್ತೂರ್: 13)

ಪಿಶಾಚಿಗಳಿಗೂ ಅವರ ಜೊತೆಯಲ್ಲಿ ಹಾಜರಾಗುವಂತೆ ಅಲ್ಲಾಹ್ ಆಜ್ಞಾಪಿಸಿದ್ದಾನೆ. ನರಕದ ಬಳಿ ತಲಪಿದರೆ ಎಲ್ಲರೂ ಅದರ ಸುತ್ತ ಮೊಣಕಾಲೂರಿ ನಿಲ್ಲಬೇಕು. ಇದು ಅಲ್ಲಾಹನ ಇನ್ನೊಂದು ಆಜ್ಞೆ: "ನಿಮ್ಮ ಪ್ರಭುವಿನಾಣೆ! ನಾವು ಇವರೆಲ್ಲರನ್ನೂ ಇವರ ಸಂಗಡ ಶೈತಾನರನ್ನೂ ಖಂಡಿತವಾಗಿಯೂ ಸುತ್ತುಗಟ್ಟಿ ಆ ಬಳಿಕ ನರಕದ ಸುತ್ತಲೂ ತಂದು ಇವರನ್ನು ಮುಗ್ಗರಿಸಿ ಬೀಳಿಸುವೆವು." (ಮರ್ಯಮ್: 68)

ನರಕವು ಅವರನ್ನು ತಾಳ್ಮೆಗೆಟ್ಟು ಕಾಯುತ್ತಿರುವುದು. "ವಾಸ್ತವದಲ್ಲಿ ನರಕವು ಒಂದು ಬೋನಾಗಿದೆ." **(ಅನ್ನಬಾ: 21)**

ಅವರನ್ನು ದೂಡುತ್ತಾ ಕರೆತರುತ್ತಿರುವುದನ್ನು ನರಕವು ದೂರದಿಂದಲೇ ನೋಡುತ್ತದೆ. ಆಗ ಅದು ಘೋರವಾಗಿ ಘರ್ಜಿಸುತ್ತದೆ. ಅವರ ಬಗ್ಗೆ ತೀವ್ರ ರೋಷವನ್ನು ವ್ಯಕ್ತಪಡಿಸುತ್ತದೆ. ಇನ್ನು ಆ ಘರ್ಜನೆಯನ್ನು ಆಲಿಸುತ್ತಾ ಅವರು ಅದರತ್ತ ಸಾಗಬೇಕಾಗುತ್ತದೆ. "ಅದು ಇವರನ್ನು ದೂರದಿಂದ ಕಂಡಾಗ ಇವರು ಅದರ ಆಕ್ರೋಶವನ್ನು ಮತ್ತು ಆವೇಶದ ಅರ್ಭಟವನ್ನು ಕೇಳುವರು." **(ಅಲ್ ಫುರ್ಕಾನ್: 12)**

ಹೀಗೆ ತಮ್ಮ ಬಗ್ಗೆ ಕೋಪೋದ್ರಿಕ್ತವಾಗಿ ಕೆರಳಿ ನಿಂತಿರುವ ಆ ನರಕದ ಸುತ್ತ ಅವರು ಮುಗ್ಗರಿಸಿ ನಿಲ್ಲಬೇಕಾಗಿದೆ. ನರಕವನ್ನು ಕಂಡಾಗಲೇ ಅವರು ಭಯಗ್ರಸ್ತರೂ ಅವಮಾನಿತರೂ ಆಗುತ್ತಾರೆ. ಅವರು ನರಕವನ್ನು ಕದ್ದು ನೋಡುತ್ತಾರೆ. "ಇವರು ನರಕಾಗ್ನಿಯ ಮುಂದೆ ತರಲ್ಪಡುವಾಗ ಅವಮಾನಿತರಾಗಿ ತಲೆ ತಗ್ಗಿಸುತ್ತಿರುವುದನ್ನೂ ಅದನ್ನು ಕುಡಿನೋಟದೊಂದಿಗೆ ಕದ್ದು ನೋಡುವುದನ್ನೂ ನೀವು ಕಾಣುವಿರಿ." **(ಅಶ್ಶೂರಾ: 45)**

ಈ ಅಕ್ರಮಿಗಳು ನರಕವನ್ನು ನೋಡಿದಾಗ ಅದರಿಂದ ತಪ್ಪಿಸಿಕೊಳ್ಳುವ ದಾರಿಯಿದೆಯೇ ಎಂದು ಹುಡುಕುತ್ತಿರುತ್ತಾರೆ. "ಈ ಅಕ್ರಮಿಗಳು ಯಾತನೆಯನ್ನು ಕಂಡಾಗ, ಇನ್ನು ಮರಳಿ ಹೋಗಲು ದಾರಿ ಯೇನಾದರೂ ಇದೆಯೇ ಎಂದು ಹೇಳುವುದನ್ನು ನೀವು ಕಾಣುವಿರಿ." **(ಅಶ್ಶೂರಾ: 44)**

ಅಲ್ಲದೆ ಇನ್ನೂ ಕೆಲವು ವಿಷಯಗಳನ್ನು ಹೇಳಿ ನೋಡುತ್ತಾರೆ. ನರಕದ ಬಳಿ ನಿಲ್ಲಿಸಿದಾಗ ಅವರು ಇನ್ನೊಮ್ಮೆ ಮರಳಿ ಹೋಗಿ ಅಲ್ಲಾಹನ ಆದೇಶಗಳನ್ನು ಧಿಕ್ಕರಿಸದೆ, ಯಥಾವತ್ತಾಗಿ ಅಂಗೀಕರಿಸಿ ಸತ್ಯವಿಶ್ವಾಸಿಗಳ ಕೂಟದಲ್ಲಿ ಸೇರುವ ಅವಕಾಶ ದೊರೆತಿದ್ದರೆ! ಎಂದು ಹೇಳುತ್ತಾರೆ.

ಆದರೆ ಹಿಂದೆ ನಿರಾಕರಿಸಿದ್ದ ವಾಸ್ತವಿಕತೆಗಳನ್ನು ಈಗ ಕಣ್ಣಾರೆ ಕಂಡಾಗ ಆ ಮಾತುಗಳು ಅವರ ಬಾಯಿಯಿಂದ ಹೊರಡುತ್ತಿದೆಯಷ್ಟೆ. ಅನ್ಯಥಾ ಮರಳಿ ಕಳಿಸಿದರೆ ನಿರಾಕರಿಸಿದ್ದ ಪೂರ್ವಸ್ಥಿತಿಯನ್ನೇ ಅವರು ತಲಪುತ್ತಾರೆ.

"ಅಕಟಾ! ಅವರು ನರಕಾಗ್ನಿಯ ಕಿನಾರೆಯಲ್ಲಿ ನಿಲ್ಲಿಸಲ್ಪಡುವಾಗ ಅವರ ಅವಸ್ಥೆಯನ್ನು ನೋಡಲು ನಿಮಗೆ ಸಾಧ್ಯವಾಗುತ್ತಿದ್ದರೆ! ಆಗ ಅವರು, ಅಕಟಾ ನಾವು ಭೂಲೋಕಕ್ಕೆ ಪುನಃ ಮರಳಿಸಲ್ಪಟ್ಟು ನಮ್ಮ ಪ್ರಭುವಿನ ನಿದರ್ಶನಗಳನ್ನು ಸುಳ್ಳಾಗಿಸದೆ, ವಿಶ್ವಾಸವಿರಿಸಿಕೊಂಡವರಲ್ಲಿ ಸೇರುವಂತಹ ದಾರಿಯೇನಾದರೂ ನಮಗೆ ಸಿಗುತ್ತಿದ್ದರೆ!

ಎಂದು ಹೇಳುವರು. ವಾಸ್ತವದಲ್ಲಿ ಅವರು ಮರೆಮಾಡಿದ್ದ ನಿಜಸ್ಥಿತಿಯು ಆಗ ಅವರ ಮುಂದೆ ಪ್ರತ್ಯಕ್ಷವಾಗಿ ಬಿಟ್ಟ ಕಾರಣದಿಂದ ಮಾತ್ರ ಅವರು ಹೀಗೆ ಹೇಳುವರು. ಅನ್ಯಥಾ ಅವರನ್ನು ಗತಜೀವನದ ಕಡೆಗೆ ಹಿಂತಿರುಗಿಸಿದರೆ ಅವರಿಗೆ ಮಾಡಬಾರದೆಂದು ವಿಧಿಸಲಾಗಿದ್ದೆಲ್ಲವನ್ನೂ ಅವರು ಪುನಃ ಮಾಡುವರು." **(ಅಲ್ ಅನ್‌ಆಮ್: 27-28)**

ಮಹ್‌ಶರದಲ್ಲಿ ಅಲ್ಲಾಹನು ಅವರ ವಿಚಾರಣೆ ನಡೆಸಿದ್ದನು. ಅಲ್ಲಾಹನ ಕ್ರಮವು ಸಂಪೂರ್ಣ ನ್ಯಾಯೋಚಿತವೆಂದು ಅವರು ಅಲ್ಲಿ ಒಪ್ಪಿದ್ದರು. ಆದರೆ ಈಗ ನರಕಕ್ಕೆ ದೂಡುವಾಗ, ಇನ್ನೊಮ್ಮೆ ಅವರು ಒಪ್ಪಿಕೊಳ್ಳುವಂತೆ ಮಾಡೋಣ. "ಅಲ್ಲಾಹ್ ಕೇಳುತ್ತಾನೆ, ಇದು ನಿಜಸ್ಥಿತಿಯಲ್ಲವೇ? ಆಗ ಅವರು 'ಹೌದು, ನಮ್ಮ ಪ್ರಭೂ ಇದು ನಿಜಸ್ಥಿತಿಯೇ' ಎಂದು ಹೇಳುವರು. ಅವನು, 'ಸರಿ ಹಾಗಾದರೆ ಈಗ ನೀವು ನಿಜಸ್ಥಿತಿಯ ನಿರಾಕರಣೆಯ ಫಲವಾಗಿ ಯಾತನೆಯ ಸವಿಯುಣ್ಣಿರಿ' ಎನ್ನು ವನು." **(ಅನ್‌ಆಮ್: 30)**

ಇಷ್ಟು ಸಾಲದು, ಇವರಿಗೆ ಇನ್ನೂ ಸ್ವಲ್ಪ ವಿವರವಾಗಿ ಹೇಳಬೇಕು. ಅವರ ನಿಲುಮೆಯನ್ನು ಚೆನ್ನಾಗಿ ಮನಗಂಡ ಬಳಿಕವೇ ನರಕಕ್ಕೆ ಹೋಗಲಿ. ಅವಿಶ್ವಾಸಿಗಳನ್ನು ನರಕದ ಮುಂದೆ ತಂದು ನಿಲ್ಲಿಸಿದಾಗ, 'ನೀವು ಜೀವನದ ಎಲ್ಲ ಸುಖಗಳನ್ನೂ ಐಹಿಕ ಜೀವನದಲ್ಲಿಯೇ ಮುಗಿಸಿದ್ದೀರಿ. ಅದನ್ನು ಅಲ್ಲಿಯೇ ನೀವು ಅನುಭವಿಸಿದ್ದೀರಿ. ನೀವು ಭೂಮಿಯಲ್ಲಿ ಯಾವೊಂದು ಅರ್ಹತೆ ಅಥವಾ ಹಕ್ಕಿಲ್ಲದೆ ಅಹಂಕಾರದಿಂದ ಅಲ್ಲಿ ಅವಿಧೇಯತೆ ತೋರಿದ್ದಕ್ಕಾಗಿ ಇಂದು ನಿಮಗೆ ಅತಿ ನೀಚವಾದ ಭಯಂಕರ ಶಿಕ್ಷೆಯನ್ನು ನೀಡಲಾಗುವುದು' ಎಂದು ಅವರೊಡನೆ ಹೇಳಲಾಗುವುದು."**(ಅಲ್ ಅಹ್‌ಕಾಫ್: 20)**

ಆ ಸಂದರ್ಭದಲ್ಲಿ ಈ ದೃಶ್ಯವನ್ನು ನೋಡುತ್ತಿರುವ ಸತ್ಯವಿಶ್ವಾಸಿಗಳು ಹೇಳುತ್ತಾರೆ, "ಪುನರುತ್ಥಾನದ ಈ ದಿನ ತಮ್ಮನ್ನೂ ತಮ್ಮ ಸಂಬಂಧಿಕರನ್ನೂ ನಷ್ಟಕ್ಕೊಳಪಡಿಸಿ ಕೊಂಡವರೇ ನಿಜವಾದ ಹಾನಿಗೊಳಗಾದವರು." **(ಅಶ್ಶೂರಾ: 45)**

ಅಲ್ಲಾಹನಿಗೆ ಮಾತ್ರವಲ್ಲದೇ ನರಕದ ಕಾವಲುಗಾರರಿಗೂ ಅವರೊಂದಿಗೆ ಕೆಲವು ಪ್ರಶ್ನೆಗಳನ್ನು ಕೇಳಲಿಕ್ಕಿದೆ. ಅವರು ಜೈಲರ್‌ಗಳಲ್ಲವೇ? ಅವರೂ ಕೈದಿಗಳ ಪೂರ್ವಾಪರಗಳ ಬಗ್ಗೆ ತಿಳಿದಿರುವುದು ಉತ್ತಮ. "ಅವರು ನರಕದ ಬಳಿಗೆ ತಲಪಿದಾಗ ನರಕದ ಎಲ್ಲ ಬಾಗಿಲುಗಳನ್ನು ತೆರೆದಿಡಲಾಗುವುದು ಮತ್ತು ಅದರ ಕಾವಲುಗಾರರು ಅವರೊಡನೆ, 'ನಿಮಗೆ ನಿಮ್ಮ ಪ್ರಭುವಿನ ವಚನಗಳನ್ನು ತಿಳಿಯ ಹೇಳುವ ಹಾಗೂ ನಿಮಗೊಮ್ಮೆ ಈ ದಿನವನ್ನೂ ಕಾಣಬೇಕಾಗುವುದೆಂದು ಎಚ್ಚರಿಸುವ ಸಂದೇಶವಾಹಕರು ನಿಮ್ಮೊಳಗಿನಿಂದಲೇ ನಿಮ್ಮ ಕಡೆಗೆ ಬಂದಿರಲಿಲ್ಲವೇ?' ಎಂದು ಕೇಳುವರು. ಅವರು, 'ಹೌದು ಬಂದಿದ್ದರು'

ಎನ್ನುವರು. ಆದರೆ ಯಾತನೆಯ ತೀರ್ಮಾನವು ಸತ್ಯನಿಷೇಧಿಗಳನ್ನು ಅಂಟಿಕೊಂಡಿತು. ಆಗ ಅವರೊಡನೆ, 'ನರಕದ ದ್ವಾರಗಳಲ್ಲಿ ಪ್ರವೇಶಿಸಿರಿ. ಇನ್ನು ನಿಮಗೆ ಇಲ್ಲೇ ಸದಾಕಾಲ ಇರಬೇಕಾಗಿದೆ. ದುರಹಂಕಾರಿಗಳಿಗಾಗಿರುವ ಅತ್ಯಂತ ಕೆಟ್ಟ ನಿವಾಸವಿದು' ಎನ್ನಲಾಗುವುದು. **(ಅಝ್ಝುಮರ್: 71-72)**

ಮಾನವ ಮತ್ತು ಜಿನ್‌ಗಳಲ್ಲಿರುವ ಎಲ್ಲ ಅಪರಾಧಿಗಳು ಈಗಲೂ ಆ ನರಕದ ಸುತ್ತ ಮುಗ್ಗರಿಸಿ ಬಿದ್ದಿದ್ದಾರೆ. ಅವರಲ್ಲಿ ನಾನಾ ರೀತಿಯವರಿದ್ದಾರೆ. ತೀವ್ರ ಧಿಕ್ಕಾರಿಗಳಾದ ಮುಖಂಡರು ಮತ್ತು ಇತರರ ಮೋಸದ ಬಲೆಗೆ ಬಿದ್ದ ದುರ್ಬಲರು. ಎಲ್ಲರಿಗೂ ಒಂದೇ ರೀತಿಯ ಶಿಕ್ಷೆ ನೀಡುವುದು ನ್ಯಾಯವಲ್ಲ, ಪ್ರತಿಯೊಬ್ಬರಿಗೂ ಅವರ ಅಪರಾಧದ ಸ್ವರೂಪಕ್ಕೆ ತಕ್ಕುದಾದ ಶಿಕ್ಷಾ ವ್ಯವಸ್ಥೆಗಳನ್ನು ಏರ್ಪಡಿಸಲಾಗಿರುವ ನರಕಕ್ಕೆ ಎಸೆಯುವುದಕ್ಕಿಂತ ಮುಂಚೆ ಅವರನ್ನು ಪ್ರತ್ಯೇಕಿಸಬೇಕಾಗಿದೆ.

"ಅನಂತರ ಎಲ್ಲ ಗುಂಪುಗಳಿಂದಲೂ ರಹ್ಮಾನನ ವಿರುದ್ಧ ಹೆಚ್ಚು ಉದ್ಧಟನಾಗಿದ್ದ ಪ್ರತಿಯೊಬ್ಬನನ್ನೂ ಹೆಕ್ಕಿ ತೆಗೆಯಲಾಗುವುದು. ನರಕದಲ್ಲಿ ತಳ್ಳಲ್ಪಡಲು ಅತಿ ಹೆಚ್ಚು ಅರ್ಹರು ಯಾರೆಂಬುದನ್ನೂ ನಾವು ಚೆನ್ನಾಗಿ ತಿಳಿದಿದ್ದೇವೆ." **(ಮರ್ಯಮ್: 69-70)**

ಪ್ರತಿಯೊಬ್ಬರನ್ನು ನರಕದ ಯಾವ ಸ್ಥಳಕ್ಕೆ ಎಸೆಯಬೇಕೆಂದು ಈ ಸಂದರ್ಭದಲ್ಲಿಯೇ ಅಲ್ಲಾಹನು ದೇವಚರರಿಗೆ ತಿಳಿಸುತ್ತಾನೆ.

ತೆರೆದಿರಿಸಿದ ಬಾಗಿಲುಗಳ ಮೂಲಕ ನರಕವಾಸಿಗಳು ಸ್ವಯಂ ದಾಟಿ ಹೋಗುವರು ಎಂದು ಭಾವಿಸಬೇಕಾಗಿಲ್ಲ. (ಪ್ರಾಯಶಃ ಆ ರೀತಿ ಹಾದು ಹೋಗುವಂತಹ ದಾರಿ ಅಥವಾ ಮೆಟ್ಟಲುಗಳಿರಲಾರದು.) ಅಷ್ಟೊಂದು ಗೌರವದಿಂದ ಹೋಗಬಾರದು. ಕೆಟ್ಟ ವಸ್ತುಗಳನ್ನು ಎಸೆಯುವಂತೆ ಅವರನ್ನು ಎಸೆಯಬೇಕಾಗಿದೆ. ಅಪರಾಧಿಗಳು ಗೋರಿಗಳಿಂದ ಎದ್ದು ನಿಂತಾಗ ಇಬ್ಬರು ದೇವಚರರು ಅವರನ್ನು ವಶಪಡಿಸಿ ಮಹ್‌ಶರಕ್ಕೆ ಕರೆತರುವರೆಂದು ಹಿಂದೆ ಹೇಳಿದೆಯಷ್ಟೆ, ಅವರು ಈಗಲೂ ಜತೆಯಲ್ಲಿದ್ದಾರೆ. ಇವರಿಗೆ ಒಂದು ಗತಿ ಕಾಣಿಸಿಯೇ ಅವರು ಮರಳುವರು.

"ಇದೋ ಅಲ್ಲಾಹ್ ಅವರಿಗೆ ಆಜ್ಞಾಪಿಸುತ್ತಾನೆ: ನರಕಕ್ಕೆ ಎಸೆದು ಬಿಡಿರಿ. ಪ್ರತಿಯೊಬ್ಬ ಕಟ್ಟಾ ಸತ್ಯನಿಷೇಧಿಯನ್ನು- ಅವನು ಸತ್ಯವನ್ನು ದ್ವೇಷಿಸುತ್ತಿದ್ದನು. ಒಳಿತನ್ನು ತಡೆಯುವವನಾಗಿದ್ದನು. ಮೇರೆ ಮೀರುವವನಾಗಿದ್ದನು. ಸಂಶಯಗ್ರಸ್ತನಾಗಿದ್ದನು ಮತ್ತು ಅಲ್ಲಾಹನೊಂದಿಗೆ ಇತರರನ್ನು ದೇವರಾಗಿ ಮಾಡಿಕೊಂಡಿದ್ದನು. ಅವನನ್ನು ಘೋರ ಯಾತನೆಯಲ್ಲಿ ಹಾಕಿಬಿಡಿರಿ." **(ಕಾಫ್: 24-26)** "ಅವರ ಜುಟ್ಟನ್ನೂ ಕಾಲುಗಳನ್ನೂ

ಹಿಡಿದು ಅವರನ್ನು ಎಳೆಯಲಾಗುವುದು." (ಅರ್ರಹ್ಮಾನ್: 41) "ಅನಂತರ ನರಕದಲ್ಲಿ ಮುಗ್ಗರಿಸಿ ಬೀಳುವಂತೆ ಅವರನ್ನು ಬಲವಾಗಿ ದೂಡಲಾಗುವುದು." (ಅನ್ನಮ್ಲ್: 90)

ಮಾನವ ಮತ್ತು ಜಿನ್ನ್‌ಗಳಲ್ಲಿರುವ ಅಪರಾಧಿಗಳು ಮಾತ್ರವಲ್ಲ, ಅಲ್ಲಾಹನ ಹೊರತು ಅವರು ಮಾಡಿಕೊಂಡಿದ್ದ ಆರಾಧ್ಯ ವಸ್ತುಗಳನ್ನೂ ಸ್ವಯಂ ಆರಾಧ್ಯರ ಸೋಗು ಹಾಕಿದ್ದವರನ್ನೂ ಹೀಗೆ ಅವರ ಜತೆ ನರಕಕ್ಕೆ ಎಸೆಯಲಾಗುವುದು. ಎಲ್ಲರನ್ನೂ ತಲೆಕೆಳಗಾಗಿಸಿ! "ತರುವಾಯ ಆ ಆರಾಧ್ಯರೂ ಪಥಭ್ರಷ್ಟ ಜನರೂ ಇಬ್‌ಲೀಸನ ಸೇನೆಯೂ ಎಲ್ಲರೂ ಅದರೊಳಗೆ ಒಂದರ ಮೇಲೊಂದರಂತೆ ತಳ್ಳಲ್ಪಡುವರು."

(ಅಶ್ಶುಅರಾ: 94-95)

ಎಲ್ಲರನ್ನು ಒಂದೇ ಬಾರಿ ಎಸೆಯುವುದಿಲ್ಲ, ಅಪರಾಧಗಳ ಪ್ರಕಾರ ವಿಂಗಡಿಸಿದ ಒಂದೊಂದೇ ವಿಭಾಗವನ್ನು ಪ್ರತ್ಯೇಕ ಎಸೆಯಲಾಗುವುದು.

"ಅಪರಾಧಿಗಳನ್ನು ಅದಕ್ಕೆ ಎಸೆಯುವಾಗ ಭಯಾನಕ ಆರ್ಭಟ ಕೇಳಿಸುವುದು. ಕ್ರೋಧಾವೇಶದಿಂದ ಸಿಡಿಯುತ್ತಿರುವಂತೆ ಘರ್ಜಿಸುತ್ತಿರುವ ನರಕವು ತೀವ್ರವಾಗಿ ಕುದಿಯುತ್ತಿರುವುದು. ಪ್ರತಿಯೊಂದು ವಿಭಾಗವೂ ಅದಕ್ಕೆ ಬೀಳುವಾಗ ಕಾವಲುಗಾರರು (ಒಳಗಿನ ಕಾವಲುಗಾರರಾಗಿರಬಹುದು) ಅವರೊಡನೆ, "ನಿಮ್ಮ ಬಳಿಗೆ ಎಚ್ಚರಿಕೆ ಕೊಡುವವನಾರೂ ಬಂದಿರಲಿಲ್ಲವೇ" ಎಂದು ಕೇಳುವರು. ಆಗ ಅವರು, "ಹೌದು, ಎಚ್ಚರಿಕೆ ಕೊಡುವವರೊಬ್ಬರು ಬಂದಿದ್ದರು. ಆದರೆ ನಾವು ಅವರನ್ನು ಸುಳ್ಳಾಗಿಸಿದೆವು ಮತ್ತು ಅಲ್ಲಾಹನು ಏನನ್ನೂ ಅವತೀರ್ಣಗೊಳಿಸಿರಲಿಲ್ಲ, ನೀವು ದೊಡ್ಡ ಪಥಭ್ರಷ್ಟತೆಯಲ್ಲಿ ಬಿದ್ದುಕೊಂಡಿರುವಿರಿ ಎಂದು ಹೇಳಿದೆವು" ಎಂದು ಉತ್ತರಿಸುವರು ಮತ್ತು ಅವರು, "ಅಯ್ಯೋ! ನಾವು ಕೇಳಿರುತ್ತಿದ್ದರೆ ಮತ್ತು ಗ್ರಹಿಸುತ್ತಿದ್ದರೆ ಇಂದು ಧಗಧಗಿಸುವ ಈ ಅಗ್ನಿಯಾತನೆಯನ್ನು ಅನುಭವಿಸುವವರಾಗುತ್ತಿರಲಿಲ್ಲ" ಎನ್ನುವರು. ಈ ರೀತಿಯಾಗಿ ಅವರು ತಮ್ಮ ಅಪರಾಧವನ್ನು ತಾವೇ ಒಪ್ಪಿಕೊಳ್ಳುವರು. (ನಾವು ಈ ನರಕ ಶಿಕ್ಷೆಗೆ ಅರ್ಹರಾಗಿದ್ದೇವೆ, ನರಕವಲ್ಲದೆ ಬೇರೆ ಯಾವುದೂ ನಮಗೆ ಸೂಕ್ತವಾಗಿಲ್ಲ, ಅಲ್ಲಾಹನು ಕೇವಲ ನ್ಯಾಯವಾದುದನ್ನೇ ಮಾಡಿದ್ದಾನೆ. ಯಾವ ರೀತಿಯ ಅನ್ಯಾಯವನ್ನೂ ಮಾಡಿಲ್ಲವೆಂದು ಅವರು ಸ್ವಯಂ ಸಂಪೂರ್ಣವಾಗಿ ಒಪ್ಪುತ್ತಾರೆ) ಆ ನರಕವಾಸಿಗಳಿಗೆ ಶಾಪವಿದೆ. (ಅಲ್ ಮುಲ್ಕ್: 8-11)

ಸ್ವಯಂ ಭ್ರಷ್ಟರಾಗಿ ಇತರರನ್ನು ಭ್ರಷ್ಟಗೊಳಿಸಿದ ಮುಖಂಡ ವಿಭಾಗಗಳನ್ನು ಮೊದಲು ನರಕಕ್ಕೆ ಎಸೆಯಲಾಗುವುದು. ಅನಂತರ ಸರದಿ ಪ್ರಕಾರ ಅನುಯಾಯಿ

ವಿಭಾಗಗಳನ್ನೂ ಎಸೆಯಲಾಗುವುದು. ಎರಡು ವಿಭಾಗಗಳಲ್ಲಿಯೂ ಅಧಿಕ ಭ್ರಷ್ಟರಾದವರನ್ನು ಮೊದಲು, ಅನಂತರ ಇತರರನ್ನು ಕ್ರಮಪ್ರಕಾರ ಸಾಲಾಗಿ ನಿಲ್ಲಿಸಲಾಗಿರುವುದು. ಮಾನವರಂತೆಯೇ ಯಕ್ಷರಿಗೂ ಈ ಎಲ್ಲ ಕ್ರಮಗಳು ಅನ್ವಯವಾಗುತ್ತದೆ.

ಹೀಗೆ ಅಪರಾಧಿಗಳೆಲ್ಲರೂ ನರಕಕ್ಕೆ ಬಿದ್ದ ಬಳಿಕ ಅಲ್ಲಾಹನು ನರಕದೊಡನೆ, ನೀನು ತುಂಬಿದೆಯಾ? ಎಂದು ಕೇಳುತ್ತಾನೆ. ಆಗ ನರಕವು, ಇನ್ನೂ ಇದೆಯೇ? ಎಂದು ಕೇಳುವುದು. (ಇಲ್ಲಿ ಎಷ್ಟು ತುಂಬಿಸಿದರೂ ಚಿಂತಿಲ್ಲ, ಅವರಲ್ಲಿ ಯಾರೊಬ್ಬರನ್ನೂ ಬಿಡಬಾರದು. ಇನ್ನೂ ಉಳಿದಿದ್ದರೆ ಅವರನ್ನೂ ದೂಡಿಬಿಡು) (ಕಾಫ್: 30)

ನೋಡಿ, ನರಕದ ಕ್ರೋಧ ಎಷ್ಟೊಂದು ಭಯಾನಕ. ಪ್ರವಾದಿವರ್ಯರು(ಸ) ಹೀಗೆ ವಿವರಿಸಿದ್ದಾರೆ, "ನರಕಕ್ಕೆ ಒಂದೊಂದೇ ವಿಭಾಗ ವನ್ನು ಎಸೆಯಲಾಗುತ್ತಿರುವುದು. 'ಇನ್ನೂ ಇದೆಯೇ?' ಎಂದು ನರಕ ಕೇಳುತ್ತಿರುವುದು. ಕೊನೆಗೆ ಅಲ್ಲಾಹನು ತನ್ನ ದಿವ್ಯಪಾದವನ್ನು ನರಕದ ಮೇಲೆ ಇರಿಸುವ ತನಕ ಈ ಪ್ರಕ್ರಿಯೆ ಮುಂದುವರಿಯುವುದು. ಆಗ ನರಕವು ಮುದುಡಿಕೊಳ್ಳುವುದು ಮತ್ತು, 'ನಿನ್ನ ಪ್ರತಾಪದಾಣೆ! ಸಾಕು ಸಾಕು' ಎಂದು ಹೇಳುವುದು."

ಎಷ್ಟೇ ದೊಡ್ಡ ವೈರಿಗಳಾಗಿದ್ದರೂ ಸಾರ್ವತ್ರಿಕ ವಿಪತ್ತಿಗೆ ಸಿಲುಕಿದಾಗ ಸಾಮಾನ್ಯವಾಗಿ ವೈರವನ್ನು ಮರೆತು ಪರಸ್ಪರ ಹತ್ತಿರವಾಗುತ್ತಾರೆ. ಆದರೆ, ನರಕವಾಸಿಗಳ ಸ್ಥಿತಿ ಹಾಗಿರುವುದಿಲ್ಲ, ಅಲ್ಲಿ ವೈರ, ವಿದ್ವೇಷ, ಹಗೆತನ ಮತ್ತಷ್ಟು ಹೆಚ್ಚುತ್ತದೆ. ಅವರು ಆ ಸಂದರ್ಭದಲ್ಲೂ ಪರಸ್ಪರ ಆರೋಪಿಸುತ್ತಾ ಶಪಿಸುತ್ತಾ ಇರುತ್ತಾರೆ. ಸಹಾನುಭೂತಿಯ ಒಂದು ಕಣ ಕೂಡಾ ಅಲ್ಲಿ ಕಾಣಲಾರದು. ಇದು ಶಿಕ್ಷೆಯು ಅತ್ಯಧಿಕ ಯಾತನಾಮಯವಾಗಲಿಕ್ಕಾಗಿ ಅಲ್ಲಾಹನು ಮಾಡಿದ ವಿಶೇಷ ಏರ್ಪಾಡಾಗಿರಬಹುದು. ನೋಡಿ, ಅವರು ಪರಸ್ಪರ ಹೇಗೆ ವರ್ತಿಸುತ್ತಿದ್ದಾರೆ: "ನಿಮಗಿಂತ ಮುಂಚೆ ಗತಿಸಿ ಹೋದ ಜಿನ್ನ್ ಮತ್ತು ಮಾನವ ಸಮುದಾಯಗಳು ಪ್ರವೇಶಿಸಿದ್ದ ನರಕಾಗ್ನಿಯಲ್ಲೇ ನೀವು ಪ್ರವೇಶಿಸಿರಿ" ಎಂದು ಅಲ್ಲಾಹ್ ಹೇಳುವನು. ಪ್ರತಿಯೊಂದು ಸಮುದಾಯವೂ ನರಕಾಗ್ನಿಯೊಳಗೆ ಪ್ರವೇಶಿಸುವಾಗ ತನಗಿಂತ ಮುಂಚಿನ ಸಮುದಾಯವನ್ನು ಶಪಿಸುತ್ತ ಪ್ರವೇಶಿಸುವುದು. ಹೀಗೆ ಎಲ್ಲರೂ ಅಲ್ಲಿಗೆ, ತಲಪಿದಾಗ ಅನಂತರ ಹೋದ ವಿಭಾಗವು ಮೊದಲು ಹೋದ ವಿಭಾಗದ ಕುರಿತು, "ಓ ನಮ್ಮ ಪ್ರಭೂ, ನಮ್ಮನ್ನು ಇವರೇ ಪಥಭ್ರಷ್ಟಗೊಳಿಸಿದ್ದರು. ಆದ್ದರಿಂದ, ಇವರಿಗೆ ನೀನು ಇಮ್ಮಡಿ ಶಿಕ್ಷೆಯನ್ನು ನೀಡು ಎಂದು ಹೇಳುವುದು." ಅಲ್ಲಾಹ್ ಹೇಳುತ್ತಾನೆ, "ಎಲ್ಲರಿಗೂ ಇಮ್ಮಡಿ ಶಿಕ್ಷೆಯೇ ಇದೆ. ಆದರೆ ನಿಮಗೆ ತಿಳಿಯು

ವುದಿಲ್ಲ." (ಇದನ್ನು ಕೇಳಿ) ಮೊದಲಿನ ಸಮೂಹವು ಅನಂತರದವರೊಡನೆ ಹೇಳುತ್ತಾರೆ, "(ನಮ್ಮ ಮೇಲೆ ಅಂತಹ ಆರೋಪ ಹೊರಿಸುವುದಿದ್ದರೆ ಚಿಂತಿಲ್ಲ, ಆದರೆ) ನಿಮಗೆ ನಮಗಿಂತ ಯಾವ ಶ್ರೇಷ್ಠತೆ ಯಿದೆ! ಏನೂ ಇಲ್ಲ, ಈಗ ನಿಮ್ಮ ಕರ್ಮಫಲದ ಶಿಕ್ಷೆಯನ್ನು ನೀವೂ ಅನುಭವಿಸಿರಿ." **(ಅಲ್ ಅಅ್‌ರಾಫ್: 38-39)**

ತಮ್ಮ ಅನುಯಾಯಿಗಳು ತಂಡೋಪತಂಡವಾಗಿ ಬರುತ್ತಿರುವುದನ್ನು ಕಂಡಾಗ ಮೊದಲೇ ಅಲ್ಲಿ ತಲಪಿದವರು ಹೇಳುತ್ತಾರೆ, "ಇದೋ ಇನ್ನೊಂದು ಮಹಾ ತಂಡ! ನಿಮ್ಮ ಬಳಿಗೆ ನುಗ್ಗಿ ಬರುತ್ತಿದೆ. (ಇಲ್ಲಿ ನಮಗೆ ಸಾಕಷ್ಟು ಸ್ಥಳವಿಲ್ಲ ಏನಿದ್ದರೂ) ಅವರಿಗೆ ಇಲ್ಲಿ ಯಾವೊಂದು ಸ್ವಾಗತವೂ ಇಲ್ಲ, (ಆದರೆ) ಖಂಡಿತವಾಗಿಯೂ ಅವರು ನರಕಕ್ಕೆ ಎಸೆಯಲ್ಪಡಬೇಕಾದವರಾಗಿದ್ದಾರೆ." (ಇದನ್ನು ಕೇಳಿ) ಅವರು ಹೀಗೆ ಉತ್ತರಿಸುತ್ತಾರೆ, "ಹಾಗಲ್ಲ, ನೀವೇ ನರಕಕ್ಕೆ ಎಸೆಯಲ್ಪಡಬೇಕಾದವರು, ನೀವೇ ಸ್ವಾಗತಕ್ಕೆ ಅನರ್ಹರಾಗಿರುವವರು. ನೀವೇ ನಮ್ಮನ್ನು ಈ ದುರ್ಗತಿಗೆ ದೂಡಿರುವಿರಿ. ಇದು ಎಂತಹ ನಿಕೃಷ್ಟ ನಿವಾಸವಾಗಿ ಬಿಟ್ಟಿದೆ!" ಅನಂತರ ಅವರು ಹೇಳುತ್ತಾರೆ, "ಪ್ರಭೂ! ನಮ್ಮನ್ನು ಈ ದುರ್ಗತಿ ಒದಗಿಸಿದವರಿಗೆ ಈ ನರಕದಲ್ಲಿ ಇಮ್ಮಡಿ ಯಾತನೆ ನೀಡು." **(ಸ್ವಾದ್: 59-61)**

ಗೊಣಗಾಟ ಇನ್ನೂ ನಿಂತಿಲ್ಲ

"ಈ ಪ್ರವಾದಿಗೆ ಯಾವ ಕೆಲಸಕ್ಕೂ ಬಾರದ ಕೆಲವು ನೀಚರು ಮತ್ತು ಮೂರ್ಖರು ಮಾತ್ರ ದೊರೆತಿದ್ದಾರೆ, ಗಣ್ಯರು ಯಾರೂ ಅವರ ಜೊತೆ ಸೇರಿಲ್ಲ, ಇವರಿಗೆ ಏನಾದರೂ ಬೆಲೆಯಿದೆಯೇ? ಇವರು ಕೇವಲ ಊಹೆಯಿಂದ ಜೀವನವನ್ನು ವ್ಯರ್ಥಗೊಳಿಸುತ್ತಿದ್ದಾರೆ. ವಸ್ತುಶಃ ಅವರೇ ಕೆಟ್ಟವರು, ಅವರೇ ನರಕವಾಸಿಗಳು!" ಎಂದು ಮುಂತಾಗಿ ಹೇಳಿ ಸತ್ಯವಿಶ್ವಾಸಿಗಳನ್ನು ಕೆಲವು ಗಣ್ಯ ನಿಷೇಧಿಗಳು ನಿಂದಿಸುತ್ತಿದ್ದರಷ್ಟೆ. ಆದರೆ, ಇವರು ನರಕಕ್ಕೆ ಬಿದ್ದಾಗ ಆ 'ನೀಚರು' ಜತೆಯಲ್ಲಿದ್ದಾರೆಯೇ ಎಂದು ಹುಡುಕುತ್ತಾರೆ. "ನಾವು ಭೂಮಿಯಲ್ಲಿ ಕೆಲವರನ್ನು ಕೆಟ್ಟವರೆಂದು ಭಾವಿಸಿದ್ದೆವಲ್ಲವೇ, ಆದರೆ ಅವರು ಇಲ್ಲೆಲ್ಲೂ ಕಾಣಿಸುವುದಿಲ್ಲವೇಕೆ? ನಾವು ಅವರನ್ನು ವೃಥಾ ಅಪಹಾಸ್ಯ ಮಾಡುತ್ತಿದ್ದೆವೋ! ಅಥವಾ ಅವರು ಇಲ್ಲಿ ನಮ್ಮಿಂದ ಕಣ್ಮರೆಯಾಗಿರುವರೋ?" **(ಸ್ವಾದ್: 62-63)**

ನಾಯಕರನ್ನು ಅನುಸರಿಸಿ ಕೆಟ್ಟೆವು

"ಅವರ ಮುಖಗಳು ನರಕದಲ್ಲಿ ಹೊರಳಾಡಿಸಲ್ಪಡುವ ದಿನ ಅವರು, 'ಅಯ್ಯೋ! ನಾವು ಅಲ್ಲಾಹ್ ಮತ್ತು ಪೈಗಂಬರರ ಅನುಸರಣೆ ಮಾಡುತ್ತಿದ್ದರೆ!' ಎನ್ನುವರು. ಪುನಃ

ಮುಂದುವರಿದು, 'ನಮ್ಮನ್ನು ಪ್ರಭೂ! ನಾವು ನಮ್ಮ ಸರದಾರರನ್ನು ಹಾಗೂ ಹಿರಿಯರನ್ನು ಅನುಸರಿಸಿದೆವು. ಅವರು ನಮ್ಮನ್ನು ದಾರಿಗೆಡಿಸಿಬಿಟ್ಟರು. ನಮ್ಮ ಪ್ರಭೂ! ಅವರಿಗೆ ಇಮ್ಮಡಿ ಯಾತನೆ ಕೊಡು ಮತ್ತು ಅವರನ್ನು ಅತ್ಯುಗ್ರವಾಗಿ ಶಪಿಸು' ಎಂದೂ ಹೇಳುವರು." **(ಅಹ್‌ಝಾಬ್: 66-68)**

"ಇಹಲೋಕದಲ್ಲಿ ಅನುಸರಿಸಲ್ಪಡುತ್ತಿದ್ದ ಆ ನಾಯಕರೇ ತಮ್ಮ ಅನುಯಾಯಿಗಳನ್ನು ನಿರ್ಲಕ್ಷಿಸುವರು! ಆದರೆ ಶಿಕ್ಷೆಯನ್ನು ಅವರು ನೋಡಿ ಆಯಿತು. ಅವರಿಗಿದ್ದ ಎಲ್ಲ ರೀತಿಯ ಆಧಾರ-ಬೆಂಬಲಗಳ ಮಾರ್ಗ ಕಡಿದು ಹೋಯಿತು. ಅನುಯಾಯಿಗಳು 'ಅಕಟ! ನಮಗೆ ಇನ್ನೊಂದು ಅವಕಾಶವನ್ನು ನೀಡಿದ್ದರೆ! ಈಗ ಅವರು ನಮ್ಮನ್ನು ನಿರ್ಲಕ್ಷಿಸುತ್ತಿರುವಂತೆಯೇ ನಾವೂ ಅವರನ್ನು ನಿರ್ಲಕ್ಷಿಸಿ ತೋರಿಸುತ್ತಿದ್ದೆವು' ಎಂದು ಹೇಳುವರು." **(ಅಲ್‌ಬಕರ: 166-167)**

"ಇವರು ನರಕದಲ್ಲಿ ಪರಸ್ಪರ ಜಗಳಾಡುತ್ತಿರುವ ಸನ್ನಿವೇಶವನ್ನೂ ಊಹಿಸಿರಿ. (ಭೂಮಿಯಲ್ಲಿ) ದುರ್ಬಲವಾಗಿದ್ದವರು ಗಣ್ಯರೆನಿಸಿಕೊಂಡಿದ್ದವರೊಡನೆ (ವ್ಯಂಗ್ಯವಾಗಿ) 'ನಾವು ನಿಮ್ಮ ಅನುಯಾಯಿಗಳಾಗಿದ್ದೆವಲ್ಲವೇ, ಈಗ ಇಲ್ಲಿ ಈ ನರಕದ ಶಿಕ್ಷೆಯಿಂದಲಾದರೂ ಸ್ವಲ್ಪ ವಿನಾಯಿತಿ ದೊರಕಿಸಿಕೊಡುವಿರಾ?' ಎನ್ನುವರು. ಆಗ ಗಣ್ಯರು, '(ಈಗ ಗೇಲಿಮಾಡಿ ಪ್ರಯೋಜನವಿಲ್ಲ) ಎಲ್ಲರೂ ಇದರಲ್ಲಿ ಬಿದ್ದಿದ್ದೇವೆ (ನೀವೂ ಶಿಕ್ಷೆಗೆ ಅರ್ಹರಾಗಿದ್ದೀರಿ) ಅಲ್ಲಾಹನು ದಾಸರ ಮಧ್ಯೆ ನ್ಯಾಯೋಚಿತ ತೀರ್ಮಾನ ಮಾಡಿಬಿಟ್ಟಿದ್ದಾನೆ' ಎಂದುತ್ತರಿಸುವರು." **(ಮೂಮಿನ್: 47-48)**

ಆರಾಧ್ಯರೂ ಆರಾಧಕರೂ ನರಕದಲ್ಲಿ ಪರಸ್ಪರ ಜಗಳಾಡುತ್ತಿರುವಾಗ ಆರಾಧಕರು ಆರಾಧ್ಯರೊಡನೆ ಹೇಳುತ್ತಾರೆ, "ಅಲ್ಲಾಹನಾಣೆ! ನಾವು ನಿಮಗೆ ಸರ್ವಲೋಕಗಳ ಪಾಲಕ ಪ್ರಭುವಿಗೆ ಸಮಾನವಾದ ಸ್ಥಾನ ನೀಡುತ್ತಿರುವಾಗ (ನೀವು ನಮ್ಮ ಪ್ರಾರ್ಥನೆಗೆ ಉತ್ತರಿಸಬಹುದು, ಶಿಫಾರಸು ಮಾಡಿ ರಕ್ಷಿಸಬಹುದು. ನಮಗೆ ಐಹಿಕ ಸುಖವನ್ನು ಗಳಿಸಿ ಕೊಡಬಹುದು. ನಮ್ಮನ್ನು ವಿಪತ್ತಿನಿಂದ ರಕ್ಷಿಸಬಹುದು ಎಂದು ಮುಂತಾಗಿ) ನಿಮ್ಮ ಬಗ್ಗೆ ಭಾವಿಸಿದಾಗ ನಾವು ಸ್ಪಷ್ಟ ಪಥಭ್ರಷ್ಟತೆಗೊಳಗಾಗಿದ್ದೆವು. ಈ ಅಪರಾಧಿಗಳೇ (ಆರಾಧ್ಯರು) ನಮ್ಮನ್ನು ಪಥಭ್ರಷ್ಟಗೊಳಿಸಿದ್ದಾರೆ. ಈಗ ನಮಗೆ ಯಾವೊಬ್ಬ ಶಿಫಾರಸುದಾರನೂ ಇಲ್ಲವಲ್ಲಾ, (ಕನಿಷ್ಠಪಕ್ಷ ಸಹಾನುಭೂತಿಯಾದರೂ ತೋರಿಸುವ) ಒಬ್ಬನಾದರೂ ಮಿತ್ರನಿಲ್ಲ! ಅಯ್ಯೋ! ಒಮ್ಮೆ ಭೂಲೋಕಕ್ಕೆ ಮರಳುವ ಅವಕಾಶ ದೊರೆತಿದ್ದರೆ ನಾವು ಸತ್ಯವಿಶ್ವಾಸಿಗಳಾಗಿಬಿಡುತ್ತಿದ್ದೆವಲ್ಲಾ! (ಇದು ಕೇವಲ ಸುಳ್ಳು ನೆಪವಾಗಿದೆ). **(ಅಶ್ಶುಅರಾ: 96-102)**

ಆರಾಧ್ಯರ ಮತ್ತು ನಾಯಕರ ವಿರುದ್ಧ ರೋಷಾಗ್ನಿ ಅಸಹನೀಯವಾಗುತ್ತದೆ. ಈಗ ಅದು ಸಿಡಿಯುತ್ತದೆ. "ಅಲ್ಲಿ ಈ ಸತ್ಯನಿಷೇಧಿಗಳು, 'ನಮ್ಮ ಪ್ರಭೂ! ನಮ್ಮನ್ನು ಪಥಭ್ರಷ್ಟಗೊಳಿಸಿದ್ದ ಜಿನ್ನ್ ಮತ್ತು ಮಾನವರನ್ನು ನಮಗೊಮ್ಮೆ ತೋರಿಸಿಬಿಡು. ಅವರು ಚೆನ್ನಾಗಿ ಅಪಮಾನಿತರಾಗುವಂತೆ ನಾವು ಅವರನ್ನು ತುಳಿದು ಬಿಡುವೆವು' ಎಂದು ಹೇಳುವರು." **(ಹಾಮ್ಮೀಮ್ ಅಸ್ಸಜ್ದ: 29)**

ನರಕದ ಕಾವಲುಗಾರರನ್ನು ಒಲಿಸುವ ಪ್ರಯತ್ನ

ಇಂತಹ ಯಾವ ತಂತ್ರವೂ ಫಲಿಸುವುದಿಲ್ಲವೆಂದು ಅವರಿಗೆ ಮನವರಿಕೆಯಾಗುತ್ತದೆ. ಅನಂತರ ಅವರು ನರಕ ಪಾಲಕರೊಡನೆ ಹೀಗೆ ಹೇಳುತ್ತಾರೆ, "ನಮ್ಮ ಯಾತನೆಯಲ್ಲಿ ಕೇವಲ ಒಂದು ದಿನದ ಕಡಿತ ಮಾಡಲಿಕ್ಕಾಗಿ ನಿಮ್ಮ ಪ್ರಭುವಿನೊಡನೆ ದಯವಿಟ್ಟು ಹೇಳಿಬಿಡಿರಿ." ಆಗ ಅವರು ಕೇಳುತ್ತಾರೆ, "ನಿಮ್ಮ ಬಳಿಗೆ ನಿಮ್ಮ ಸಂದೇಶವಾಹಕರು ಸುವ್ಯಕ್ತ ನಿದರ್ಶನಗಳೊಂದಿಗೆ ಬಂದಿರಲಿಲ್ಲವೇ?" "ಹೌದು ಬಂದಿದ್ದರು" ಎಂದು ಅವರು ಉತ್ತರಿಸುತ್ತಾರೆ. "ಹಾಗಾದರೆ ನಿಮ್ಮ ಪರವಾಗಿ ಪ್ರಾರ್ಥಿಸಲು ನಮಗೆ ಯಾವ ನ್ಯಾಯವೂ ಕಾಣಿಸುವುದಿಲ್ಲ, ಆದ್ದರಿಂದ ನೀವೇ ಪ್ರಾರ್ಥಿಸಿರಿ. ಆದರೆ ಒಂದು ವಿಷಯವನ್ನು ಹೇಳಿ ಬಿಡುತ್ತೇವೆ- ನೀವು ಎಷ್ಟೇ ಪ್ರಾರ್ಥಿಸಿದರೂ ಅದು ನಿರರ್ಥಕವಾಗಿರುವುದು." **(ಅಲ್ ಮೂಮಿನ್: 50)**

ಅದೂ ಫಲಿಸಲಿಲ್ಲ, ನಿರಾಶೆಯೇ

ಅದೂ ಫಲಿಸಲಿಲ್ಲವೆಂದು ಮನಗಂಡಾಗ ಅವರು ಕಾವಲುಗಾರನೊಡನೆ ಹೀಗೆ ಹೇಳುತ್ತಾರೆ, "ಹಾಗಾದರೆ ನಿನ್ನ ಪ್ರಭು ನಮ್ಮ ಕಥೆಯನ್ನು ಮುಗಿಸಿಬಿಡಲಿ." ಮಾಲಿಕ್ ಹೇಳುತ್ತಾರೆ, "(ಅದೇನೂ ನಡೆಯದು) ನೀವು ಹೀಗೆಯೇ ಬಿದ್ದುಕೊಂಡಿರ ಬೇಕು. ಸತ್ಯದೊಂದಿಗೆ ನಿಮ್ಮ ಬಳಿಗೆ ನಾವು ಬಂದಿದ್ದೆವು. ಆದರೆ, ನಿಮ್ಮಲ್ಲಿ ಅನೇಕ ಮಂದಿಗೆ ಸತ್ಯವು ಅಪ್ರಿಯವಾಗಿತ್ತಲ್ಲವೇ." **(ಅಝ್ಝುಖ್ರುಫ್: 77-78)**

ಸ್ವರ್ಗವಾಸಿಗಳನ್ನೇ ಕರೆದರಾಗದೇ?

ಆ ಸ್ವರ್ಗದಲ್ಲಿ ನಮ್ಮ ಊರಿನವರೂ ಪರಿಚಯದವರೂ ಸಂಬಂಧಿಕರೂ ಇದ್ದಾರೆ. ಅವರಿಗೆ ನಮ್ಮ ಈ ಶೋಚನೀಯ ಸ್ಥಿತಿಯನ್ನು ನೋಡಿ ಕನಿಕರವಾಗಲೂ ಬಹುದು! ಆದ್ದರಿಂದ ಅವರನ್ನು ಕರೆದು ನೇರವಾಗಿ ನಮ್ಮ ಸಂಕಷ್ಟವನ್ನು ಹೇಳಿ ಬಿಡೋಣ. ಹಾಗೆಯೇ ಅವರು ಕರೆಯುತ್ತಾರೆ, "ಸ್ವರ್ಗವಾಸಿಗಳೇ! ನಮಗೆ ಸ್ವಲ್ಪ ನೀರು ಅಥವಾ

ಅಲ್ಲಾಹ್ ನಿಮಗೆ ನೀಡಿದ ಸ್ವಲ್ಪ ಆಹಾರವನ್ನಾದರೂ ಇತ್ತ ಎಸೆಯುವಿರಾ?" ಆಗ ಅವರು ಉತ್ತರಿಸುತ್ತಾರೆ, "ಅಲ್ಲಾಹನ ಧರ್ಮವನ್ನು ಆಟ ವಿನೋದವೆಂದು ಪರಿಗಣಿಸಿದ್ದ ಹಾಗೂ ಐಹಿಕ ಜೀವನದ ವಂಚನೆಗೊಳಗಾಗಿದ್ದ ಸತ್ಯನಿಷೇಧಿಗಳಿಗೆ ಅಲ್ಲಾಹನು ಅವೆರಡನ್ನೂ ನಿಷೇಧಿಸಿದ್ದಾನೆ. 'ಅವರು ನಮ್ಮ ದೃಷ್ಟಾಂತಗಳನ್ನು ನಿರಾಕರಿಸಿ, ಇಂದಿನ ಭೇಟಿಯನ್ನು ಮರೆತು ಬಿಟ್ಟಂತೆಯೇ ನಾವೂ ಅವರನ್ನು ಮರೆತು ಬಿಡುವೆವು' ಎಂದು ಅಲ್ಲಾಹ್ ಹೇಳುತ್ತಾನೆ." (ಅಲ್ ಅಅ್‌ರಾಫ್: 51)

ತಪ್ಪೊಪ್ಪಿಗೆ, ಪುನರಾವರ್ತಿಸುವುದಿಲ್ಲವೆಂಬ ಭರವಸೆ

ಅಗ್ನಿಯು ಅವರ ಮುಖವನ್ನು ಸುಟ್ಟು ಚರ್ಮ ಸುಲಿದು ಬಿಡುವುದು. ಮುಖ ಸೊಟ್ಟಗಾಗಿ ದವಡೆ ಹೊರಬಂದವರಂತೆ ಅವರು ಅದರಲ್ಲಿ ಬಿದ್ದುಕೊಂಡಿರುವರು. (ಕೇವಲ ಚರ್ಮ ಸುಲಿದು ಸುಟ್ಟ ಹೋರಿಯ ತಲೆಯಂತೆ)! "ನಮ್ಮ ವಚನಗಳನ್ನು ತಿಳಿಸಿದಾಗ ಅದನ್ನು ಸುಳ್ಳೆಂದು ತಿರಸ್ಕರಿಸಿದವರು ನೀವೇ ಅಲ್ಲವೇ?" ಅವರು ಹೇಳುವರು, "ನಮ್ಮ ಪ್ರಭೂ! ದೌರ್ಭಾಗ್ಯವು ನಮ್ಮನ್ನು ಆವರಿಸಿಬಿಟ್ಟಿತು. ನಾವು ನಿಜಕ್ಕೂ ಪಥಭ್ರಷ್ಟರಾಗಿದ್ದೆವು. ಪ್ರಭೂ! ನಮ್ಮನ್ನೊಮ್ಮೆ ಇಲ್ಲಿಂದ ವಿಮೋಚಿಸಿ ಬಿಡು. ಆ ಬಳಿಕವೂ ನಾವು ಇಂತಹ ಅಪರಾಧ ಮಾಡಿದರೆ ನಾವು ಘೋರ ಅಕ್ರಮಿಗಳಾಗಿ ಬಿಡುವೆವು." ಅಲ್ಲಾಹನು ಹೇಳುತ್ತಾನೆ, "ತೊಲಗಿರಿ ಇಲ್ಲಿಂದ, ಅದರಲ್ಲಿಯೇ ಬಿದ್ದುಕೊಂಡಿರಿ. ಇನ್ನು ಯಾವ ವಿಷಯವನ್ನೂ ನನ್ನೊಡನೆ ಮಾತಾಡಬೇಡಿರಿ. (ನಿಮ್ಮನ್ನು ನಾನು ಚೆನ್ನಾಗಿ ತಿಳಿದಿದ್ದೇನೆ) ಭೂಮಿಯಲ್ಲಿ ನನ್ನ ಕೆಲವು ದಾಸರಿದ್ದರಲ್ಲವೇ, 'ನಮ್ಮ ಪ್ರಭೂ! ನಾವು ವಿಶ್ವಾಸವಿರಿಸಿದ್ದೇವೆ, ನಮ್ಮನ್ನು ಕ್ಷಮಿಸು, ನಮ್ಮ ಮೇಲೆ ದಯೆ ತೋರು, ನೀನು ಮಹಾ ಕರುಣಾಳು' ಎಂದು ಸದಾ ಪ್ರಾರ್ಥಿಸುತ್ತಿದ್ದ ದಾಸರು. ನೀವು ಅವರನ್ನು ಗೇಲಿ ಮಾಡಿದ್ದಿರಲ್ಲವೇ? ನನ್ನ ಅಸ್ತಿತ್ವವನ್ನೂ ಮರೆತ ರೀತಿಯಲ್ಲಿ ನೀವು ಅವರ ಬೆನ್ನು ಹತ್ತಿ ಗೇಲಿ ಮಾಡಿದ್ದಿರಲ್ಲವೇ? ಆದರೆ ಅದೆಲ್ಲವನ್ನೂ ಅವರು ತಾಳ್ಮೆಯಿಂದ ಸಹಿಸಿದರು. ಆದ್ದರಿಂದ ಇಂದು ನಾನಿದೋ ಅವರಿಗೆ ಸೂಕ್ತ ಪ್ರತಿಫಲವನ್ನು ನೀಡಿರುತ್ತೇನೆ. ನಿಶ್ಚಯವಾಗಿಯೂ ಅವರು ಯಶಸ್ಸು ಪಡೆದವರಾಗಿದ್ದಾರೆ." ತರುವಾಯ ಅಲ್ಲಾಹ್ ಕೇಳುತ್ತಾನೆ, "ನೀವು ಭೂಮಿಯಲ್ಲಿ ಎಷ್ಟು ವರ್ಷ ವಾಸಿಸಿದ್ದಿರಿ?" ಅವರು ಹೇಳುತ್ತಾರೆ, "ಒಂದು ದಿನ ಅಥವಾ ದಿನದ ಒಂದಂಶ ನಾವು ಅಲ್ಲಿ ವಾಸಿಸಿದ್ದೆವು. (ಈಗ ಅಷ್ಟು ಕ್ಲಪ್ತವಾಗಿ ಹೇಳಲು ನಮಗೆ ಸಾಧ್ಯವಿಲ್ಲ) ಅದೆಲ್ಲವನ್ನೂ ಎಣಿಕೆ ಮಾಡಿದವರೊಡನೆ ಕೇಳಿ ನೋಡು." ಅಲ್ಲಾಹ್ ಹೇಳುತ್ತಾನೆ, "ಸರಿ, ಸ್ವಲ್ಪ ಹೊತ್ತಾದರೂ ತಂಗಿದ್ದಿರಲ್ಲವೇ?

(ಅಂದು ನನ್ನ ಪ್ರವಾದಿಗಳು, ನೀವು ಎದುರಿಸಲಿರುವ ಈ ಹಂತಗಳ ಬಗ್ಗೆ ಎಚ್ಚರಿಕೆ ನೀಡಿದ್ದರು) ಅಂದು ಇದನ್ನು ನೀವು ಚೆನ್ನಾಗಿ ಅರಿತಿದ್ದರೆ! (ಈ ಆಪತ್ತಿಗೆ ಸಿಲುಕುತ್ತಿರಲಿಲ್ಲ, ಇನ್ನು ಚಿಂತಿಸಿ ಏನು ಪ್ರಯೋಜನ) ನಾವು ನಿಮ್ಮನ್ನು ನಿರರ್ಥಕವಾಗಿ ಕೇವಲ ವಿನೋದ ವಾಗಿ ಸೃಷ್ಟಿಸಿರುವೆವೆಂದೂ ನಿಮ್ಮನ್ನು ನನ್ನ ಬಳಿಗೆ ಮರಳಿ ಕರೆತರುವ ಪ್ರಮೇಯವೇ ಇಲ್ಲವೆಂದೂ ನೀವು ಭಾವಿಸಿದ್ದೀರಲ್ಲವೇ?" **(ಅಲ್ ಮೂಮಿನೂನ್: 104-115)**

ಮಹಾ ನಾಯಕ ಮಹಾ ವಂಚಕ

ಯಾವೊಂದು ಭದ್ರತೆಯೂ ಇಲ್ಲ, ಎಲ್ಲ ವಿನಂತಿಗಳಿಗೂ ದೊರೆಯುವ ಉತ್ತರ ಒಂದೇ, ಭಯಂಕರವಾದ ಅಗ್ನಿಜ್ವಾಲೆಗಳು. ನೆಮ್ಮದಿದಾಯಕವಾದ ಯಾವುದೂ ಎಲ್ಲಿಂದಲೂ ದೊರೆಯುವುದಿಲ್ಲ, ಇನ್ನೇನಿದೆ ಮಾರ್ಗ? ನಮ್ಮ ಮಹಾನಾಯಕನ ಬಳಿ ಏನಾದರೂ ತಂತ್ರವಿರಬಹುದೇ ಎಂದು ಯೋಚಿಸುತ್ತಾರೆ. ಒಮ್ಮೆ ಕೇಳಿ ನೋಡೋಣ. ವಿಶ್ವಾಸಿಗಳು ಗಂಭೀರ ಸಮಸ್ಯೆಗೆ ಸಿಲುಕಿದಾಗ ತಮ್ಮ ನಾಯಕರ ಬಳಿ ಹೋಗಿ ಅಲ್ಲಾಹ ನಲ್ಲಿ ಶಿಫಾರಸು ಮಾಡಿಸುತ್ತಾರಲ್ಲವೇ! ನಾವು ಕೂಡಾ ಹಾಗೆಯೇ ಮಾಡೋಣವೇ! ಆದರೆ ಆ ಮೂರ್ಖ ನಮಗೆ ಮೋಸ ಮಾಡಿದ. ಆತ ಹೇಳಿದಂತೆ ಇಲ್ಲಿ ಏನೂ ನಡೆಯಲಿಲ್ಲ, ಮಾತ್ರವಲ್ಲ, ತದ್ವಿರುದ್ಧವಾಗಿ ನಡೆಯುತ್ತಿದೆ. ಹೀಗಿರುತ್ತಾ, ಅವರ ಬಳಿ ಹೋಗಿ ಏನು ಪ್ರಯೋಜನ. ಆದರೂ ಎಲ್ಲ ಕೆಡುಕುಗಳಿಗೂ ಅವರೇ ಕಾರಣರಲ್ಲವೇ. ಆ ಕುರಿತು ಸ್ಪಷ್ಟವಾಗಿ ಹೇಳಿದ್ದರೂ ಇನ್ನೊಮ್ಮೆ ಅಲ್ಲಾಹನ ಬಳಿ ಹೋದರಾಗದೇ? ಹೀಗೆ ಆಲೋಚಿಸುತ್ತಿರುವಾಗ ಪರಿಸ್ಥಿತಿಯನ್ನು ಊಹಿಸಿದ ಆ ಮಹಾನಾಯಕ (ಇಬ್ಲೀಸ್) ಅದೋ ಭಾಷಣಕ್ಕಾಗಿ ಎದ್ದು ನಿಂತಿದ್ದಾನೆ. ಗಮನವಿಟ್ಟು ಆಲಿಸೋಣ, "ಹೇ ಮೂಢರೇ, ಪರಿಸ್ಥಿತಿಯು ನೀವು ಭಾವಿಸಿರುವಷ್ಟು ಸುಲಭವಿಲ್ಲ, ವಾಸ್ತವಿಕತೆಯನ್ನು ನೀವು ಚೆನ್ನಾಗಿ ಅರಿಯಬೇಕು. ಆ ಬಳಿಕ ಏನು ಮಾಡಬೇಕೆಂದು ತೀರ್ಮಾನಿಸಬೇಕಾಗಿದೆ. ನಾನು ನಿಮಗೆ ಮೋಸ ಮಾಡಿದೆನೆಂದು ಹೇಳುತ್ತಿರುವಿರಲ್ಲಾ, ಸರಿ, ನಾನು ಒಪ್ಪುತ್ತೇನೆ. ಅಲ್ಲಾಹನ ಮಾರ್ಗದಿಂದ ನಿಮ್ಮನ್ನು ತಪ್ಪಿಸಲಿಕ್ಕಾಗಿ ನಾನಾ ರೀತಿಯಿಂದ ನಾನು ನಿಮ್ಮ ಹಿಂದೆ ಬಿದ್ದಿದ್ದೆ, ಸುಂದರ ವಾಗ್ದಾನಗಳನ್ನು ನೀಡಿ, ಆಶೆಯ ಮಾಯಾಜಾಲದಲ್ಲಿ ಸಿಲುಕಿಸಿ, ಪರಲೋಕವನ್ನು ಅತಿ ಸರಳವಾಗಿ ಚಿತ್ರಿಸಿ ಅಥವಾ ಒಂದು ವೇಳೆ ಅಷ್ಟೊಂದು ಗಂಭೀರವಾಗಿದ್ದರೂ ಅದರಿಂದ ಪಾರಾಗಲು ಶಿಫಾರಸು ಮುಂತಾದ ಅಡ್ಡಹಾದಿಗಳನ್ನು ತೋರಿಸಿ, ಹೀಗೆ ನಾನಾ ರೀತಿಯಿಂದ ನಿಮ್ಮನ್ನು ವಂಚಿಸಲು ನಾನು ಪ್ರಯತ್ನಿಸಿದ್ದೆ ನಿಜ. ನನ್ನ ಎಲ್ಲಾ ವಾಗ್ದಾನಗಳೂ ಸುಳ್ಳೆಂದು ಇಲ್ಲಿ ಈಗಾಗಲೇ ಸ್ಪಷ್ಟಗೊಂಡಿದೆ. ಹಾಗೆಯೇ

ಅಲ್ಲಾಹನ ವಾಗ್ದಾನ ಮತ್ತು ಎಚ್ಚರಿಕೆಗಳು ಸಂಪೂರ್ಣ ಸತ್ಯವೆಂದೂ ವ್ಯಕ್ತವಾಯಿತು. ಆದರೆ ಒಂದು ವಿಷಯವಿದೆ. ನಾನು ನಿಮ್ಮನ್ನು ಬಲಾತ್ಕಾರಿಸಿಲ್ಲ, ಅಂತಹ ಸಾಮರ್ಥ್ಯವೂ ನನಗಿರಲಿಲ್ಲ. ನನ್ನ ದುರ್ಬೋಧನೆಯನ್ನು ನಾನು ನಿಮ್ಮ ಮುಂದಿರಿಸಿದೆ. ನಿಮ್ಮನ್ನು ಅದರಲ್ಲಿ ಸಿಲುಕಿಸಲಿಕ್ಕಾಗಿ ಎಲ್ಲ ಕಪಟ ತಂತ್ರಗಳನ್ನೂ ನಾನು ಪ್ರಯೋಗಿಸಿದ್ದೆ ಅಷ್ಟೆ. ನನ್ನನ್ನು ನೀವು ತಿರಸ್ಕರಿಸಬಹುದಾಗಿತ್ತು. ಆದರೆ ನೀವು ಹಾಗೆ ಮಾಡಲಿಲ್ಲ ಅಥವಾ ನಿಮ್ಮ ದುರ್ಬುದ್ಧಿಯು ಅದಕ್ಕೆ ಅವಕಾಶ ನೀಡಲಿಲ್ಲ. ನನ್ನ ಬೋಧನೆಯು ನಿಮ್ಮ ದುರ್ಬುದ್ಧಿಗಳಿಗೆ ತಕ್ಕುದಾಗಿದೆಯೆಂದು ನೀವು ತಿಳಿದಿರಿ. ಆದ್ದರಿಂದ, ನೀವು ಸ್ವಯಂ ನನ್ನನ್ನು ಹಿಂಬಾಲಿಸಿದಿರಿ. ಅದಕ್ಕೆ ನಾನು ಹೊಣೆಯೇ? ನೀವೇ ಹೊಣೆಯಲ್ಲವೇ? ನನ್ನನ್ನು ದೂಷಿಸುವುದೇಕೆ? ನಿಮ್ಮನ್ನೇ ದೂಷಿಸಿಕೊಳ್ಳಿರಿ. ನಿಮ್ಮನ್ನು ಪ್ರೇರೇಪಿಸುವ ಅಪರಾಧವನ್ನು ನಾನು ಮಾಡಿದ್ದೇನೆ. ಅದರ ಶಿಕ್ಷೆಯನ್ನು ನಾನು ಅನುಭವಿಸುತ್ತಿದ್ದೇನೆ. ಅದರಿಂದ ನನ್ನನ್ನು ಪಾರುಗೊಳಿಸಲು ನಿಮ್ಮಿಂದ ಸಾಧ್ಯವಿಲ್ಲ. ನೀವು ನನ್ನನ್ನು ಅನುಗಮಿಸುವ ತಪ್ಪನ್ನೂ ಮಾಡಿರುವಿರಿ. ಅದರ ಶಿಕ್ಷೆಯನ್ನು ನೀವೂ ಅನುಭವಿಸಬೇಕು. ನಿಮಗೆ ನೆರವಾಗಲು ನನ್ನಿಂದ ಸಾಧ್ಯವಿಲ್ಲ. ಹಿಂದೆ ನೀವು ನನ್ನನ್ನು ದೇವತ್ವದಲ್ಲಿ ಸಹಭಾಗಿಗೊಳಿಸಿದ್ದಿರಲ್ಲವೇ? ಆದರೆ ನಾನು ಅದನ್ನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ನನಗೆ ಅಂತಹ ಯಾವೊಂದು ದೇವತ್ವವೂ ಇರಲಿಲ್ಲ. ನಿಮ್ಮಂತಹ ಅಕ್ರಮಿಗಳಿಗೆ ಯಾತನಾಮಯ ಶಿಕ್ಷೆಯ ಹೊರತು ಇನ್ನೇನು ತಾನೇ ಯೋಗ್ಯ?" **(ಇಬ್ರಾಹೀಮ್: 22)**

ಭೀಕರ ಶಿಕ್ಷೆಗಳು

ಎಲ್ಲ ಕಡೆಯಿಂದಲೂ ಅವರು ಸಂಪೂರ್ಣ ನಿರಾಶರಾಗಿದ್ದಾರೆ. ಶಿಕ್ಷೆ ಅನುಭವಿಸದೆ ಗತ್ಯಂತರವಿಲ್ಲ. ಅದಾದರೋ ಬಹಳ ಭಯಾನಕ! ಈ ಶಿಕ್ಷೆಗಳು ಕಿಂಚಿತ್ತೂ ಕಡಿಮೆಯಾಗದೆ ನಿರಂತರ ಮುಂದುವರಿಯುವುದೇ? ಕುರ್‌ಆನಿನಲ್ಲಿ ಅದರ ಭೀಕರತೆಯನ್ನು ಚೆನ್ನಾಗಿ ವರ್ಣಿಸಲಾಗಿದೆ. ಕೆಲವು ಉದಾಹರಣೆಗಳು:

1. ಚರ್ಮವು ಬೆಂಕಿಯಿಂದ ಉರಿದು ಕರಟಿದಾಗ ಬೇರೆ ಚರ್ಮವನ್ನು ಹೊದಿಸಲಾಗುವುದು- ಶಿಕ್ಷೆಯನ್ನು ಚೆನ್ನಾಗಿ ಸವಿಯಲಿಕ್ಕಾಗಿ. **(ಅನ್ನಿಸಾ: 56)**

2. ಅವನನ್ನು ಹಿಡಿಯಿರಿ, ಕೊರಳಿಗೆ ಕಂಠಕಡಗ ಹಾಕಿರಿ, ತರುವಾಯ ನರಕಕ್ಕೆ ತಳ್ಳಿರಿ. ತರುವಾಯ 70 ಮೊಳ ಉದ್ದದ ಸಂಕೋಲೆಯಿಂದ ಬಿಗಿಯಿರಿ. ಮಹಿಮಾವಂತನಾದ ಅಲ್ಲಾಹನಲ್ಲಿ ಆತ ವಿಶ್ವಾಸವಿರಿಸುತ್ತಿರಲಿಲ್ಲ, ದರಿದ್ರರಿಗೆ ಆಹಾರ ನೀಡಲು ಪ್ರೇರೇಪಿಸುತ್ತಿರಲಿಲ್ಲ, ಆದುದರಿಂದ ಆತನಿಗೆ ಯಾವೊಬ್ಬ ಮಿತ್ರನೂ ಇಲ್ಲ, ಪಾಪಿಗಳು

ಸೇವಿಸುವ ಕೀವಿನ ಹೊರತು ಯಾವ ಆಹಾರವೂ ಆತನಿಗೆ ದೊರೆಯದು.

(ಅಲ್ ಹಾಕ್ಕ: 30-37)

3. ಅದು ಧಗಧಗಿಸುವ ಅಗ್ನಿಜ್ವಾಲೆಯಾಗಿರುವುದು. ಚರ್ಮ ಮತ್ತು ಮಾಂಸವನ್ನು ನೆಕ್ಕಿ ಬಿಡುವಂತಹ ಬೆಂಕಿ. (ಸತ್ಯದಿಂದ) ವಿಮುಖನಾಗಿ ಹಿಂದೆ ಸರಿದ (ಸತ್ಯಾಸತ್ಯ ಭೇದವಿಲ್ಲದೆ ಎಲ್ಲ ರೀತಿಯಿಂದಲೂ) ಹಣ ಸಂಪಾದಿಸಿ ಶೇಖರಿಸಿದವರನ್ನು ಆ ಬೆಂಕಿಯು (ನನ್ನತ್ತ ಬಾರೋ ಎಂದು) ಕೂಗಿ ಕರೆಯುವುದು.

(ಅಲ್ ಮಆರಿಜ್: 15-18)

4. ಅದು ಯಾವುದನ್ನೂ ಉಳಿಸುವುದಿಲ್ಲ, ಬಿಡುವುದೂ ಇಲ್ಲ. (ಮುದ್ದಸ್ಸಿರ್:28)

5. ಮಾನವನು ಅದರಲ್ಲಿ ಸಾಯಲಿಕ್ಕೂ ಇಲ್ಲ, ಬದುಕಲಿಕ್ಕೂ ಇಲ್ಲ.

(ಅಲ್ ಅಅ್‌ಲಾ: 13)

6. ಅಲ್ಲಿ ತಂಪು ಅಥವಾ ಕುಡಿಯಲರ್ಹವಾದ ಯಾವೊಂದು ಪಾನೀಯವನ್ನೂ ಅವರು ಸವಿಯುವುದಿಲ್ಲ. ಕುದಿಯುವ ನೀರು ಮತ್ತು ಹುಣ್ಣುಗಳಿಂದ ಸುರಿಯುವ ಕೀವು ಮಾತ್ರ. (ಅನ್ನಬಾ: 24-25)

7. ಇವರು ನರಕದಲ್ಲಿ ಅಧೋಮುಖಿಗಳಾಗಿ ಎಳೆಯಲ್ಪಡುವ ದಿನ.

(ಅಲ್ ಕಮರ್: 48)

8. ಅಪರಾಧಿಗಳು ಅಲ್ಲಿ ತಮ್ಮ ಮುಖ ಲಕ್ಷಣಗಳಿಂದಲೇ ಗುರುತಿಸಲ್ಪಡುವರು ಮತ್ತು ಅವರ ಜುಟ್ಟನ್ನೂ ಕಾಲುಗಳನ್ನೂ ಹಿಡಿದು ಅವರನ್ನು ಎಳೆಯಲಾಗುವುದು. ಅಪರಾಧಿಗಳು ಸುಳ್ಳೆಂದು ನಿರಾಕರಿಸುತ್ತಿದ್ದುದು ಇದೇ ನರಕವನ್ನು ಎಂದು ಆಗ ಹೇಳಲಾಗುವುದು. ಅದೇ ನರಕ ಮತ್ತು ಕುದಿಯುತ್ತಿರುವ ನೀರಿನ ಮಧ್ಯೆ ಅವರು ಸುತ್ತುತ್ತಿರುವರು. (ದಾಹದ ತೀಕ್ಷ್ಣತೆಯಿಂದ ಅವರು ಅಲ್ಲಿ ಕಾಣುವ ಕುದಿಯುವ ನೀರಿನ ಒರತೆಯ ಬಳಿಗೆ ಓಡುವರು. ಬಹಳ ಕಷ್ಟದಿಂದ ಕುಡಿದಾಗ ದಾಹ ತಣಿಯುವುದಿಲ್ಲ. ಪುನಃ ದಾಹದ ತೀವ್ರತೆಯು ಅವರನ್ನು ಮತ್ತೊಮ್ಮೆ ಕುಡಿಯುವಂತೆ ಪ್ರೇರೇಪಿಸುವುದು. ಹೀಗೆ ಆ ಒರತೆ ಮತ್ತು ನರಕದ ಮಧ್ಯೆ ಸುತ್ತುತ್ತಿರುವರೆಂದರ್ಥ.)

(ಅರ್ರಹ್ಮಾನ್: 41-44)

9. ಅವರು ಸುಡುಗಾಳಿಯ ಉರಿಯಲ್ಲೂ ಕುದಿಯುತ್ತಿರುವ ನೀರಲ್ಲೂ ತಂಪು ಅಥವಾ ಸುಖ ನೀಡದ ಕಪ್ಪು ಹೊಗೆಯ ನೆರಳಲ್ಲಿಯೂ ಇರುತ್ತಾರೆ.

(ಅಲ್ ವಾಕಿಅ: 42-44)

10. ಸತ್ಯನಿಷೇಧಿಗಳಿಗೆ ನರಕಾಗ್ನಿಯಿದೆ. ಅಲ್ಲಿ ಮರಣ ಹೊಂದಲೆಂದು ಅವರ ಕತೆ ಮುಗಿಸಿ ಬಿಡುವುದಿಲ್ಲ, ಶಿಕ್ಷೆಯಲ್ಲಿ ಯಾವೊಂದು ಕಡಿತವನ್ನೂ ಮಾಡುವುದಿಲ್ಲ, ಪ್ರತಿಯೊಬ್ಬ ಸತ್ಯನಿಷೇಧಿಗೂ ನಾವು ಹೀಗೆಯೇ ಪ್ರತಿಫಲ ನೀಡುತ್ತೇವೆ. ಅವರು ಅದರಲ್ಲಿ ಚೀರಾಡುತ್ತಾ ಕೂಗಿ ಹೇಳುವರು, "ಪ್ರಭೂ! ನಮ್ಮನ್ನು ಒಮ್ಮೆ ಇಲ್ಲಿಂದ ಹೊರಗೆ ಬಿಡು. ನಾವು ಹಿಂದೆ ಮಾಡುತ್ತಿದ್ದಂತಹ ಕರ್ಮಗಳಿಗಿಂತ ಭಿನ್ನವಾದ ಸತ್ಕರ್ಮಗಳನ್ನು ಮಾಡುತ್ತೇವೆ." ಹೀಗೆ ಉತ್ತರಿಸಲಾಗುವುದು, "ಉಪದೇಶ ಪಡೆಯಲಿಚ್ಛಿಸುವವರಿಗೆ ಉಪದೇಶ ಸ್ವೀಕರಿಸಲು ಸಾಕಾಗುವಷ್ಟು ಆಯುಷ್ಯವನ್ನೂ ನಾವು ನಿಮಗೆ ನೀಡಿರಲಿಲ್ಲವೇ. ಎಚ್ಚರಿಕೆ ಕೊಡುವವನೂ ನಿಮ್ಮ ಬಳಿಗೆ ಬಂದಿರಲಿಲ್ಲವೇ. (ಈಗ ಚೀರಿ ಪ್ರಯೋಜನವಿಲ್ಲ) ಶಿಕ್ಷೆ ಅನುಭವಿಸಿರಿ, ಅಕ್ರಮಿಗಳಿಗೆ ಇಲ್ಲಿ ಯಾರೂ ಸಹಾಯಕರಿಲ್ಲ."

(ಫಾತಿರ್: 36-38)

11. ಸದ್ಯವೇ ಇವರಿಗೆ ಗೊತ್ತಾಗಲಿದೆ. ಆಗ ಕಂಠಕಡಗಗಳು ಮತ್ತು ಸಂಕೋಲೆಗಳು ಅವರ ಕೊರಳುಗಳಲ್ಲಿರುವುದು. ಆ ಸಂಕೋಲೆಗಳಿಂದ ಅವರನ್ನು ಕುದಿಯುವ ನೀರಿನೆಡೆಗೆ ಎಳೆಯಲಾಗುವುದು. ತರುವಾಯ ನರಕಾಗ್ನಿಯಲ್ಲಿ ಉರಿಸಲ್ಪಡುವರು.

(ಮೂಮಿನ್: 70-72)

12. ಅವರು ನೀರು ಕೇಳಿದರೆ ತೈಲ ಮಡ್ಡಿಯಂತಹ ನೀರನ್ನು ಅವರಿಗೆ ನೀಡಲಾಗುವುದು. ಅದು ಅವರ ಮುಖಗಳನ್ನು ಕರಟಿಸಿ ಬಿಡುವುದು. **(ಅಲ್ ಕಹ್ಫ್: 29)**

13. ಸತ್ಯನಿಷೇಧಿಗಳಿಗೆ ಅಗ್ನಿಯ ಉಡುಪುಗಳು ಕತ್ತರಿಸಲ್ಪಟ್ಟಿರುವುದು. ಕುದಿಯುವ ನೀರನ್ನು ಅವರ ತಲೆಯ ಮೇಲೆ ಸುರಿಯಲಾಗುವುದು. ಅದರಿಂದ ಅವರ ಚರ್ಮಗಳು ಮಾತ್ರವಲ್ಲ ಹೊಟ್ಟೆಯೊಳಗಿರುವ ಭಾಗಗಳೂ ಕರಗಿ ಹೋಗುವುವು. ಅವರನ್ನು ದಂಡಿಸಲು ಕಬ್ಬಿಣದ ಗದೆಗಳಿರುವುವು. ಅವರು ಆ ನರಕದಿಂದ ಬಯ ಭೀತರಾಗಿ ಹೊರ ಹೋಗಲು ಪ್ರಯತ್ನಿಸಿದಾಗಲೆಲ್ಲಾ ಅವರನ್ನು ಪುನಃ ಅದರೊಳಗೇ ದೂಡಿ ಹಾಕಲಾಗುವುದು. ಸುಡುವ ಶಿಕ್ಷೆಯ ರುಚಿಯನ್ನು ಸವಿಯಿರಿ (ಬೇರೆ ದಾರಿಯಿಲ್ಲ) ಎಂದು ಹೇಳಲಾಗುವುದು. **(ಅಲ್ ಹಜ್ಜ್: 19-22)**

14. ಅವರ ಕೈ ಕಾಲುಗಳನ್ನು ಸಂಕೋಲೆಗಳಿಂದ ಬಿಗಿದು ನರಕದ ಇಕ್ಕಟ್ಟಾದ ಸ್ಥಳಕ್ಕೆ ತುರುಕಿಸಲ್ಪಟ್ಟಾಗ, ಅವರು ಅಯ್ಯೋ! ನಮಗೆ ಮರಣ ಬಂದಿದ್ದರೆ ಎಂದು ಮೊರೆಯಿಡುವರು. ಆಗ ಅವರೊಡನೆ ಹೇಳಲಾಗುವುದು, ಒಂದು ಮರಣವಲ್ಲ ಅನೇಕ ಮರಣಗಳಿಗಾಗಿ ಮೊರೆಯಿಡಿರಿ. **(ಅಲ್ ಫುರ್ಕಾನ್: 13-14)**

15. ವಸ್ತುಶಃ ನರಕವು ಈ ಸತ್ಯನಿಷೇಧಿಗಳನ್ನು ಸುತ್ತುವರಿದು ಬಿಟ್ಟಿದೆ, (ಅವರಿಗೆ) ತಿಳಿದೀತು, ಯಾತನೆಯು ಇವರನ್ನು ಮೇಲ್ಭಾಗದಿಂದಲೂ ಕಾಲಿನಡಿಯಿಂದಲೂ ಆವರಿಸುವ ದಿನ. ನೀವು ಮಾಡುತ್ತಿದ್ದ ಕೃತ್ಯಗಳ ಸವಿಯುಣ್ಣಿರಿ ಎಂದು ಹೇಳಲಾಗುವುದು. **(ಅಲ್ ಅಂಕಬೂತ್: 54-55)**

16. 'ಝುಕ್ಕೂಮ್' ವೃಕ್ಷವು ಪಾಪಿಗಳ ಆಹಾರವಾಗಿರುವುದು. ಅದು ಎಣ್ಣೆಯ ಮಡ್ಡಿಯಂತಿರುವುದು. ಅದು ಹೊಟ್ಟೆಯೊಳಗೆ ಬಿಸಿನೀರಿನಂತೆ ಕುದಿಯುತ್ತಿರುವುದು. ಇವನನ್ನು ಹಿಡಿಯಿರಿ. ಕಠಿಣ ತಾಪವಿರುವ ಆ ಅಗ್ನಿಕುಂಡದ ಮಧ್ಯಕ್ಕೆ ಕೊಂಡೊಯ್ಯಿರಿ. ತರುವಾಯ ಆ ಕುದಿಯುವ ನೀರನ್ನು ಆತನ ತಲೆಗೆ ಸುರಿದು ಶಿಕ್ಷಿಸಿರಿ. ಇದರ ರುಚಿಯನ್ನು ಸವಿದುಕೋ, ನೀನು ಮಹಾ ಪ್ರತಾಪಶಾಲಿ ಮತ್ತು ಮರ್ಯಾದಸ್ತನೆಂದು ಭಾವಿಸಿದ್ದಿಯಲ್ಲವೇ. **(ಅದ್ದುಖಾನ್: 43-49)**

17. ಬೆಂಕಿಯ ಹಾಸಿಗೆ ಮತ್ತು ಹೊದಿಕೆಯಿರುವುದು. **(ಅಅ್‌ರಾಫ್: 41)**

18. ಮೇಲೆ ಮತ್ತು ಕೆಳಗೆ ಬೆಂಕಿಯ ಕೊಡೆಗಳೂ ಇರುವುದು. **(ಅಝ್ಝುಮರ್:16)**

19. ದಾಹ ಮತ್ತು ಉಗ್ರತಾಪದಿಂದ ಏದುಸಿರು ಬಿಡುತ್ತಲೂ ರೋಧಿಸುತ್ತಲೂ ಇರುವರು. **(ಹೂದ್: 106)**

20. ಈ ಆಕ್ರಂದನದ ಶಬ್ದ ಕೋಲಾಹಲದಿಂದ ಬೇರೇನೂ ಕೇಳಿಸಲಾರದು. **(ಅಲ್ ಅಂಬಿಯಾ: 100)**

21. ನಾನಾ ರೀತಿಯ ಘನಘೋರ ಶಿಕ್ಷೆಯನ್ನು ನಿರ್ದಾಕ್ಷಿಣ್ಯದಿಂದ ನೀಡಲಾಗುವ ಆ ನರಕದಲ್ಲಿ ಅಪರಾಧಿಗಳು ಯಾತನೆಯಲ್ಲಿ ಕಿಂಚಿತ್ತೂ ಕಡಿತವಿಲ್ಲದೆ, ಸಂಪೂರ್ಣ ನಿರಾಶೆಯಿಂದ ಸದಾಕಾಲ ಇರಬೇಕಾಗುತ್ತದೆ. **(ಅಝ್ಝುಖ್‌ರುಫ್: 74-75)**

ಆ ನರಕದಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ- ಆಮೀನ್.

❖ ❖ ❖ ❖

ಅಧ್ಯಾಯ 07

ಸ್ವರ್ಗ

ಸ್ವರ್ಗವನ್ನು (ಜನ್ನತ್) ಪರಲೋಕದಲ್ಲಿ ಸತ್ಯವಿಶ್ವಾಸಿಗಳ ಶಾಶ್ವತ ಜೀವನಕ್ಕಾಗಿ ಸಜ್ಜುಗೊಳಿಸಲಾಗಿದೆ. ಈ ಜನ್ನತ್ ಎಂದರೇನು? ಸ್ವಲ್ಪ ವಿವರಿಸುತ್ತೇನೆ. ಇದಕ್ಕೆ ತೋಟ, ಉದ್ಯಾನ ಎಂಬ ಅರ್ಥಗಳಿವೆ. ಈ ಪದಗಳನ್ನು ಕೇಳಿದಾಗ ವಿಶಾಲವಾಗಿ ಹರಡಿಕೊಂಡಿರುವ ಈ ಭೂಮಿಯಲ್ಲಿ ಕೆಲವು ಸೆಂಟ್ಸ್ ಅಥವಾ ಹೆಚ್ಚೆಂದರೆ ಒಂದೆರಡು ಮೈಲು ವ್ಯಾಪ್ತಿಯಲ್ಲಿ ನಾವು ನೆಟ್ಟು ಬೆಳೆಸುವ ತೋಟಗಳ ಚಿತ್ರ ನಮ್ಮ ಮನದಲ್ಲಿ ಮೂಡಬಹುದು. ಆದರೆ ಈ ಭಾವನೆಯು ಸ್ವರ್ಗದ ಮಟ್ಟಿಗೆ ತೀರಾ ಅಪರ್ಯಾಪ್ತವಾಗಿರುವುದು. ಏಕೆಂದರೆ ಅಲ್ಲಾಹ್ ಹೇಳಿದ್ದಾನೆ, "ಅದರ ವಿಸ್ತಾರವು ಆಕಾಶ-ಭೂಮಿಗಳ ವಿಸ್ತಾರಕ್ಕೆ ಸಮಾನವಾಗಿರುವುದು." **(ಅಲ್ ಹದೀದ್: 21)** ಇನ್ನೊಂದೆಡೆ ಹೀಗೆ ಹೇಳಿದ್ದಾನೆ, "ಅದರ ವಿಸ್ತಾರವು ಭೂಮಿ- ಆಕಾಶಗಳಷ್ಟಿದೆ." **(ಆಲಿ ಇಮ್ರಾನ್: 133)**

ಭೂಮಿ-ಆಕಾಶಗಳೆನ್ನುವಾಗ ಇಡೀ ವಿಶ್ವವೆಂದೇ ಅರ್ಥವಾಗುತ್ತದೆ. ಇಂದು ಭೂಮಿಯ ವಿಸ್ತಾರವು ಸಾಮಾನ್ಯವಾಗಿ ತಿಳಿದಿದೆಯೆನ್ನಲಾಗುತ್ತಿದೆ. ಆದರೆ ಆಕಾಶದ ವಿಸ್ತಾರ? ಅದರ ಅಂದಾಜು ಈ ತನಕ ಯಾರಿಗೂ ದೊರೆತಿಲ್ಲ, ಕೆಲವು ನಕ್ಷತ್ರಗಳಿಗಿರುವ ದೂರವನ್ನೇ ಹಲವು ಕೋಟಿ ಜ್ಯೋತಿರ್ವರ್ಷಗಳೆಂದು ಹೇಳಲಾಗುತ್ತಿದೆಯಷ್ಟೆ. ಹಾಗಾದರೆ ಈ ಹಿನ್ನೆಲೆಯಲ್ಲಿ ವಿಶ್ವದ ವಿಸ್ತಾರದ ಬಗ್ಗೆ ಆಲೋಚಿಸಿರಿ. ಅದಕ್ಕೆ ಯಾವುದಾದರೂ ಮಿತಿಯಿದೆಯೇ? ಇಲ್ಲ, ಹಾಗಾದರೆ ಸ್ವರ್ಗದ ವಿಸ್ತಾರವನ್ನೂ ನಾವು ಹಾಗೆಂದೇ ತಿಳಿಯೋಣ.

ನಮ್ಮ ಎಲ್ಲ ಅಂದಾಜುಗಳನ್ನೂ ಮೀರಿದ ವಿಸ್ತಾರವಿರುವ ಮಹಾತೋಟ. ಹೌದು, ಆ ಸ್ವರ್ಗವು ತೋಟಗಳ ಒಂದು ಮಹಾ ವಿಶ್ವವಾಗಿದೆ. ಸಜ್ಜನರನ್ನು ನೆಲೆಗೊಳಿಸಲಿಕ್ಕಾಗಿ ಸಜ್ಜುಗೊಳಿಸಿದ ಈ ಮಹಾ ಉದ್ಯಾನವನ್ನು ಕುರ್‌ಆನಿನ ಕೆಲವೆಡೆಗಳಲ್ಲಿ ಜನ್ನತ್ (ತೋಟ) ಎಂದು ಏಕವಚನದಲ್ಲಿ ಹೇಳಲಾಗಿದೆ. ಈ ಮಹಾ ಲೋಕವೇ ಒಂದು ತೋಟವೆಂಬರ್ಥದಲ್ಲಿ ಕೆಲವೆಡೆ ಜನ್ನಾತ್ (ತೋಟಗಳು) ಎಂದು ಬಹು ವಚನ

ದಲ್ಲಿ ಹೇಳಲಾಗಿದೆ. ಅನೇಕ ಸಣ್ಣ ತೋಟಗಳಿರುವ ಆ ಮಹಾ ತೋಟವೆಂಬ ಅರ್ಥ ದಲ್ಲಿ ಹೇಳಲಾಗಿದೆ. ಬದ್ರ್ ಯುದ್ಧದಲ್ಲಿ ಅಜ್ಞಾತ ವ್ಯಕ್ತಿಯೊಬ್ಬನ ಬಾಣದಿಂದ ಹುತಾತ್ಮರಾದ ಹಾರಿಸ್‌ರ ಕುರಿತು ಅವರ ತಾಯಿಯು ಪ್ರವಾದಿಯವರೊಡನೆ(ಸ) ವಿಚಾರಿಸಿದಾಗ ಹೀಗೆ ಹೇಳಿದ್ದರು, "ಹಾರಿಸ್(ರ)ನ ಮಾತೆಯೇ ಸ್ವರ್ಗದಲ್ಲಿ ಅನೇಕ ತೋಟಗಳಿವೆ. ನಿನ್ನ ಪುತ್ರನು ಅತ್ಯುನ್ನತವಾದ 'ಫಿರ್‌ದೌಸ್' ಗಳಿಸಿದ್ದಾನೆ." (ಬುಖಾರಿ)

ಅಲ್ಲಾಹ್ ಹೇಳಿರುವನು, "ತನ್ನ ಪ್ರಭುವಿನ ಸನ್ನಿಧಾನದಲ್ಲಿ ಹಾಜರಾಗುವ ಭಯ ವಿಟ್ಟುಕೊಂಡಿರುವ ಪ್ರತಿಯೊಬ್ಬನಿಗೆ ಎರಡು ಸ್ವರ್ಗೋದ್ಯಾನಗಳಿವೆ." (ಅರ್ರಹ್ಮಾನ್: 46) "ಈ ಎರಡು ಉದ್ಯಾನಗಳಲ್ಲದೆ ಇನ್ನೂ ಎರಡು ಉದ್ಯಾನಗಳಿರುವುವು." (ಅರ್ರಹ್ಮಾನ್:62)

ಪ್ರವಾದಿಯವರು(ಸ) ವಿವರಿಸಿದ್ದಾರೆ: ಪಾತ್ರೆ, ಆಭರಣ ಇತ್ಯಾದಿಗಳೆಲ್ಲವೂ ಚಿನ್ನ ದಿಂದ ನಿರ್ಮಿಸಿದಂತಹ ಎರಡು ತೋಟಗಳು. ಅವೆಲ್ಲವನ್ನೂ ಬೆಳ್ಳಿಯಿಂದ ನಿರ್ಮಿಸಿದ ಇನ್ನೆರಡು ತೋಟಗಳು ಅರ್ಥಾತ್, ಪ್ರತಿಯೊಬ್ಬ ಸಜ್ಜನನಿಗೂ ಒಂದಕ್ಕಿಂತ ಅಧಿಕ ತೋಟಗಳಿರುವುದು. ಹೂರ್, ಸೇವಕರು ಇತ್ಯಾದಿ ಅವರಿಗೆ ದೊರೆತ ಎಲ್ಲ ಅನುಗ್ರಹ ಸಾಧನಗಳೂ ಅಲ್ಲಿಯೇ ಇರುತ್ತವೆ. ಅವರ ಶಾಶ್ವತ ನಿವಾಸವೂ ಅದೇ ಆಗಿರುವುದು. ಆದರೆ, ಅದೇ ವೇಳೆ ಆ ಇಡೀ ಸ್ವರ್ಗಲೋಕವು ಅವರ ವಿಹಾರ ಸ್ಥಳವಾಗಿರುವುದು; ಅವರ ಸ್ವಚ್ಛಂದ ತಿರುಗಾಟಕ್ಕೆ ಯಾವ ಅಡ್ಡಿಯೂ ಇರಲಾರದು. ಇಲ್ಲಿ ಭೂಮಿಯಿಂದ ಚಂದ್ರನ ಬಳಿಗೆ ಹೋಗಬಯಸಿದರೆ, ಅದರ ಕಷ್ಟವನ್ನು ನಾವು ತಿಳಿದಿದ್ದೇವೆ. ಅಲ್ಲಿ ಕೋಟಿಗಟ್ಟಲೆ ಮೈಲು ದೂರದ ಪ್ರಯಾಣವನ್ನು ಕ್ಷಣಮಾತ್ರದಲ್ಲಿ ನಿರಾಯಾಸದಿಂದ ಮಾಡಬಹುದು. ಸಂಕ್ಷಿಪ್ತದಲ್ಲಿ, ಸ್ವಂತ ತೋಟದಲ್ಲಿ ಮಾತ್ರವಲ್ಲ, ಇಡೀ ಸ್ವರ್ಗಲೋಕದಲ್ಲಿ ಅವರು ಇಷ್ಟಬಂದಂತೆ ವಿಹರಿಸಬಹುದು.

ಎಲ್ಲ ಸ್ವರ್ಗವಾಸಿಗಳು ಒಂದೇ ಮಟ್ಟದವರಾಗಿರುವುದಿಲ್ಲ. ಪ್ರವಾದಿಗಳಿಗೆ ಇತರರಿಗಿಂತ, ಅಲ್ಲಾಹನ ಮಾರ್ಗದಲ್ಲಿ ಹೋರಾಡಿದವರಿಗೆ ಅನ್ಯರಿಗಿಂತ, ಮಕ್ಕಾ ವಿಜಯಕ್ಕಿಂತ ಮುಂಚೆ ಇಸ್ಲಾಮ್‌ಗಾಗಿ ಹಣ ವ್ಯಯಿಸಿ ಹೋರಾಡಿದವರಿಗೆ ಅವರ ನಂತರ ಹಣ ವ್ಯಯಿಸಿದವರಿಗಿಂತ (ಹೀಗೆ ವಿವಿಧ ಆಧಾರಗಳಲ್ಲಿ ಕೆಲವರಿಗೆ ಇತರ ಕೆಲವರಿಗಿಂತ) ಎಷ್ಟೋ ಪಟ್ಟು ಶ್ರೇಷ್ಠತೆಯಿರುವುದು. ಆ ಪ್ರಕಾರ ಸ್ವರ್ಗದಲ್ಲಿ ಅವರಿಗೆ ದೊರೆಯುವ ಶ್ರೇಷ್ಠತೆಯೂ ಬಹಳಷ್ಟು ಭಿನ್ನವಾಗಿರುವುದು. ಈ ವಾಸ್ತವಿಕತೆಯನ್ನು ಗಮನದಲ್ಲಿರಿಸಿ ಸ್ವರ್ಗವನ್ನು ಸಜ್ಜುಗೊಳಿಸಲಾಗಿದೆ.

ಪ್ರವಾದಿ(ಸ) ಹೇಳಿದ್ದಾರೆ, "ಸ್ವರ್ಗದಲ್ಲಿ ನೂರು ಮೆಟ್ಟಿಲುಗಳಿವೆ. (ಆರೋಹಣ

ಕ್ರಮದಲ್ಲಿರುವ ಸ್ತರಗಳು) ಅವುಗಳನ್ನು ಅಲ್ಲಾಹನ ಮಾರ್ಗದಲ್ಲಿ ಹೋರಾಡುವವರಿಗಾಗಿ ಸಜ್ಜುಗೊಳಿಸಲಾಗಿದೆ. ಪ್ರತಿಯೊಂದು ಮೆಟ್ಟಿಲುಗಳ ಮಧ್ಯೆಯೂ ಭೂಮಿ-ಆಕಾಶಗಳ ಅಂತರವಿದೆ. ನೀವು ಅಲ್ಲಾಹನೊಡನೆ ಕೇಳುವುದಿದ್ದರೆ 'ಫಿರ್‌ದೌಸ್' ಕೇಳಿರಿ. ಅದು ಸ್ವರ್ಗದ ಮಧ್ಯದಲ್ಲಿದೆ. ಅದು ಅತ್ಯುನ್ನತ ಸೋಪಾನವಾಗಿದೆ. ಅದರಾಚೆ ರಹ್ಮಾನನ ಗದ್ದುಗೆಯಿದೆ. (ಗದ್ದುಗೆಯೂ ಸೇರಿರುವ ಸ್ವರ್ಗವೆಂದರ್ಥ)" (ಬುಖಾರಿ)

ಹೋರಾಡಿದವರಿಗಾಗಿ ನೂರು ಮೆಟ್ಟಿಲುಗಳನ್ನು ಏರ್ಪಡಿಸಲಾಗಿದೆಯೆಂದು ಇಲ್ಲಿ ಹೇಳಲಾಗಿದೆಯೇ ವಿನಾ ಇಡೀ ಸ್ವರ್ಗದಲ್ಲಿ ಕೇವಲ 100 ಮೆಟ್ಟಿಲುಗಲಿರುವುದೆಂದು ಹೇಳಿಲ್ಲ, ಕುರ್‌ಆನ್ ಕಂಠಪಾಠ ಮಾಡಿದವರು ಸ್ವರ್ಗ ಪ್ರವೇಶಿಸುವಾಗ, ಇದೋ ಕುರ್‌ಆನ್ ಓದುತ್ತಾ ಮೇಲೇರಿರಿ ಎಂದು ಅವರೊಡನೆ ಹೇಳಲಾಗುವುದು. ಹಾಗೆಯೇ ಪ್ರತಿಯೊಂದು ವಚನಕ್ಕೂ ಒಂದು ಮೆಟ್ಟಿಲಿನಂತೆ, ಕಲಿತ ಎಲ್ಲ ವಚನಗಳೂ ಮುಗಿಯುವ ತನಕ ಅವರು ಮೇಲೇರುತ್ತಿರುತ್ತಾರೆಂದೂ ವರದಿಯಾಗಿದೆ. (ಮುಸ್ನದ್ ಅಹ್ಮದ್)

ಇತರ ಕೆಲವು ವರದಿಗಳಲ್ಲಿಯೂ ಈ ಕುರಿತು ಸೂಚಿಸಲಾಗಿದೆ. ಸಂಕ್ಷಿಪ್ತದಲ್ಲಿ ಸ್ವರ್ಗೋದ್ಯಾನದ ಆ ಮಹಾ ಲೋಕದಲ್ಲಿ ಸಜ್ಜನರಿಗೆ ನೀಡುವ ತೋಟಗಳು ವಿವಿಧ ಮಟ್ಟಧಲ್ಲಿರುವುದು ಮತ್ತು ಶ್ರೇಷ್ಠತೆಯನುಸಾರ ಉನ್ನತ ಸ್ತರಗಳಾಗಿರುವುದೆಂದು ನಮಗೆ ವ್ಯಕ್ತವಾಗುತ್ತದೆ. ಅಲ್ಲಾಹನ ಮಾರ್ಗದ ಹೋರಾಟಗಾರರಿಗಾಗಿ ಸಜ್ಜುಗೊಳಿಸಲಾದ ಆ ನೂರು ಸ್ತರಗಳನ್ನೊಮ್ಮೆ ಆಲೋಚಿಸಿ ನೋಡಿರಿ. ಒಂದನೇ ಸ್ತರದಿಂದ ಎರಡನೇ ಸ್ತರವು ಭೂಮಿ-ಆಕಾಶಗಳಷ್ಟು ದೂರದಲ್ಲಿದೆ. ಅಲ್ಲಿಂದ ಮೂರನೇ ಸ್ತರವೂ ಅಷ್ಟೇ ಎತ್ತರದಲ್ಲಿದೆ! ಹೀಗೆ ಮೂರನೇ ಸ್ತರಕ್ಕೆ ತಲಪುವಾಗ ಎತ್ತರ ಎಷ್ಟಾಗುತ್ತದೆ. ಇನ್ನೂ ಸ್ತರಗಳಿವೆಯಲ್ಲವೇ. ಅವು ಇವುಗಳ ಮಧ್ಯದಲ್ಲಿಯೇ ಇರುವುದೇ ಅಥವಾ ಬೇರೆಡೆಗಳಲ್ಲಿ ಹಂತಹಂತಗಳಾಗಿ ನಿರ್ಮಿಸಲ್ಪಟ್ಟಿರಬಹುದೇ ಅಥವಾ ಆ ನೂರು ಸ್ತರಗಳು ಅತಿ ಉನ್ನತಿಯಲ್ಲಿಯೂ ಉಳಿದ ಸ್ತರಗಳು ಅದರ ಕೆಳಗೆ ಇರುವುವೇ? ಅಲ್ಲಾಹನೇ ಬಲ್ಲ, ಅದೇನಿದ್ದರೂ ಸ್ಥಳಾಭಾವದಿಂದ ಕಷ್ಟಪಡಬೇಕಾಗಿಲ್ಲವೆಂದು ನಮಗೆ ಮೊದಲೇ ತಿಳಿಯಿತಷ್ಟೆ.

ಇನ್ನೊಂದು ಪ್ರವಾದಿ ವಚನ ಹೀಗಿದೆ: ಪ್ರವಾದಿ(ಸ) ಹೇಳಿದರು - ಮೂಸಾ (ಅಲ್ಲಾಹನೊಡನೆ) ಕೇಳಿದರು, "ಪ್ರಭೂ! ಸ್ವರ್ಗವಾಸಿಗಳಲ್ಲಿ ಅತ್ಯಂತ ಕೆಳಸ್ತರದಲ್ಲಿರುವವರ ಬಗ್ಗೆ ತಿಳಿಸಬಹುದೇ?" ಅಲ್ಲಾಹ್ ಹೇಳಿದನು, "ತಿಳಿಸುತ್ತೇನೆ. ಜನರು ಸ್ವರ್ಗದಲ್ಲಿ ತಂತಮ್ಮ ಸ್ಥಾನಗಳಿಗೆ ತಲಪಿ ಅವರಿಗೆ ವಿಧಿಸಿದ್ದೆಲ್ಲವೂ ದೊರೆತ ಬಳಿಕ ಒಬ್ಬನು ಬರುತ್ತಾನೆ. ಆಗ ಆತನೊಡನೆ, 'ಸ್ವರ್ಗದಲ್ಲಿ ಪ್ರವೇಶಿಸು' ಎಂದು ಹೇಳಲಾಗುವುದು. ಆತ

ಕೇಳುತ್ತಾನೆ, 'ಪ್ರಭೂ! ನಾನು ಅದರಲ್ಲಿ ಹೇಗೆ ಪ್ರವೇಶಿಸಲಿ. ಜನರೆಲ್ಲರೂ ತಂತಮ್ಮ ಸ್ಥಾನಗಳಲ್ಲಿ ನೆಲೆಸಿ ಅವರ ಪಾಲಿನದೆಲ್ಲವನ್ನೂ ಪಡೆದುಕೊಂಡಿರುವರಲ್ಲವೇ.' ಅಲ್ಲಾಹ್ ಕೇಳುತ್ತಾನೆ, 'ಭೂಮಿಯಲ್ಲಿ ಓರ್ವ ರಾಜನಿಗೆ ದೊರೆತಷ್ಟು ನಿನಗೆ ಇಲ್ಲಿ ದೊರೆತರೆ ನಿನಗೆ ತೃಪ್ತಿಯಾದೀತೇ? ಆತ ಹೇಳುತ್ತಾನೆ, 'ಪ್ರಭೂ, ನಾನು ತೃಪ್ತನಾಗುತ್ತೇನೆ.' ಅಲ್ಲಾಹ್ ಹೇಳುತ್ತಾನೆ, 'ನಿನಗೆ ಅಷ್ಟು, ಪುನಃ ಅಷ್ಟು, ಪುನಃ ಅಷ್ಟು, ಪುನಃ ಅಷ್ಟು, ಪುನಃ ಅಷ್ಟು ಇದೆ!' ಆತ ಹೇಳುತ್ತಾನೆ, 'ಪ್ರಭೂ ನಾನು ತೃಪ್ತನಾದೆ!' ಅಲ್ಲಾಹ್ ಹೇಳುತ್ತಾನೆ, 'ನಿಶ್ಚಯವಾಗಿ ಇದೆಲ್ಲವೂ ನಿನಗಾಗಿದೆ. ಅದಲ್ಲದೇ ನಿನ್ನ ಹೃದಯ ಬಯಸುವ ಮತ್ತು ಕಣ್ತಣಿಸುವ ಇನ್ನೂ ಧಾರಾಳವಿದೆ.' ಆಗ ಆತ, 'ಪ್ರಭೂ! ನಾನು ಸಂಪೂರ್ಣ ಸಂತೃಪ್ತನಾದೆ' ಎಂದು ಹೇಳುತ್ತಾನೆ." ಮೂಸಾ ಕೇಳಿದರು, "ಪ್ರಭೂ, ಇನ್ನು ಸ್ವರ್ಗದ ಅತ್ಯುನ್ನತ ಸ್ಥಾನದವರ ಬಗ್ಗೆ ಹೇಳುವೆಯಾ?" ಅಲ್ಲಾಹ್ ಹೇಳುತ್ತಾನೆ, "ಹೌದು, ಅವರ ಬಗ್ಗೆಯೂ ನಿನಗೆ ತಿಳಿಸ ಬಯಸುತ್ತೇನೆ. ಅವರನ್ನು ಸನ್ಮಾನಿಸುವ ಸಾಧನಗಳನ್ನು ನಾನೇ ನನ್ನ ಕೈಯಾರೆ ನೆಟ್ಟು ಬೆಳೆಸಿದ್ದೇನೆ. ನಾನು ಅದರ ಮೇಲೆ ಮುದ್ರೆ ಹಾಕಿರುತ್ತೇನೆ. ಈ ತನಕ ಯಾವ ಕಣ್ಣೂ ನೋಡಿಲ್ಲದ, ಯಾವ ಕಿವಿಯೂ ಆಲಿಸಿಲ್ಲದ, ಯಾವ ಮಾನವ ಮನಸ್ಸಿಗೂ ಮೂಡದ (ಅಷ್ಟೊಂದು ಶ್ರೇಷ್ಠವಾಗಿರುವುದು)." ಪ್ರವಾದಿ(ಸ) ಹೇಳಿದರು, "ಅವರ ಕರ್ಮದ ಫಲವಾಗಿ ಅವರಿಗೆ ಗುಪ್ತವಾಗಿರಿಸಲಾದ ಕಣ್ತಣಿಸುವ ಸಾಧನಗಳ ಬಗ್ಗೆ ಯಾವ ಮಾನವನಿಗೂ ತಿಳಿದಿಲ್ಲ ಎಂಬ ಕುರ್‌ಆನ್ ವಾಕ್ಯ ಅದಕ್ಕೆ ಆಧಾರವಾಗಿದೆ." (ಮುಸ್ಲಿಮ್)

ವಸೀಲ

ಸ್ವರ್ಗದಲ್ಲಿ ಅಲ್ಲಾಹನ ಸೃಷ್ಟಿಗಳಲ್ಲಿ ಕೇವಲ ಒಬ್ಬನಿಗೆ ಮಾತ್ರ ದೊರೆಯುವ ಒಂದು ಉನ್ನತ ಸ್ಥಾನವಿದೆ. ಅದರ ಹೆಸರು 'ವಸೀಲ' ಎಂದಾಗಿದೆ. ಪ್ರವಾದಿ(ಸ) ಹೇಳಿದರು, "ನನಗೆ 'ವಸೀಲ'ವನ್ನು ನೀಡಲಿಕ್ಕಾಗಿ ನೀವು ಅಲ್ಲಾಹನೊಡನೆ ಪ್ರಾರ್ಥಿಸಿರಿ. ಅದು ಸ್ವರ್ಗದ ಅತ್ಯಂತ ಮಹತ್ವದ ಸ್ಥಾನವಾಗಿದೆ. ಅದು ಅಲ್ಲಾಹನ ದಾಸರ ಪೈಕಿ ಒಬ್ಬರಿಗೆ ಮಾತ್ರ ದೊರೆಯುತ್ತದೆ. ನಾನೇ ಆ ವ್ಯಕ್ತಿಯಾಗಿರಬೇಕೆಂದು ನಾನು ಆಶಿಸುತ್ತೇನೆ. ಆದ್ದರಿಂದ ಅದು ನನಗೆ ದೊರೆಯಲಿಕ್ಕಾಗಿ ಅಲ್ಲಾಹನೊಡನೆ ಪ್ರಾರ್ಥಿಸುವವರಿಗೆ ಅಲ್ಲಿ ಶಿಫಾರಸು ದೊರೆಯುವುದು." (ಮುಸ್ಲಿಮ್)

ದೇವ ಸಿಂಹಾಸನ

ಈ ಎಲ್ಲಕ್ಕಿಂತ ಉನ್ನತಿಯಲ್ಲಿ ಪರಮ ದಯಾಮಯನಾದ ದೇವನ ರಾಜಗದ್ದುಗೆ ಇರುತ್ತದೆ. ಅಲ್ಲಾಹನ ಮಾರ್ಗದ ಹೋರಾಟಗಾರರಿಗೆ ಸಜ್ಜುಗೊಳಿಸಲಾದ ನೂರು

ಸ್ತರಗಳಲ್ಲಿ 'ಫಿರ್‌ದೌಸ್' ಅತ್ಯಂತ ಉನ್ನತಿಯಲ್ಲಿದೆ ಮತ್ತು ಅದರ ಎತ್ತರವು ಊಹಾತೀತ ವಾಗಿರುವುದೆಂದು ಈ ಹಿಂದೆ ಹೇಳಿದೆಯಷ್ಟೆ. ಆದರೆ ಈ 'ಫಿರ್‌ದೌಸ್' ರಾಜಗದ್ದುಗೆಯು ಸೇರಿರುವ ಇಡೀ ಸ್ವರ್ಗದ ಮಧ್ಯದಲ್ಲಿರುವ ರೀತಿಯಲ್ಲಿ ಗದ್ದುಗೆಯ ಎತ್ತರವು ಅಲ್ಲಿಂದಾಚೆ ಮುಂದುವರಿಯುತ್ತದೆನ್ನುವಾಗ, ಅದು ನಮಗೆ ಊಹೆಗೂ ಎಟಕುವುದಿಲ್ಲ. ಪ್ರವಾದಿ(ಸ) ಹೇಳಿರುವರು, "ಆ ನೂರು ಸ್ತರಗಳಲ್ಲಿ 'ಫಿರ್‌ದೌಸ್' ಅತ್ಯುನ್ನತಿಯಲ್ಲಿದೆ. ಅದೇ ವೇಳೆ ಅದು ಸ್ವರ್ಗದ ಮಧ್ಯದಲ್ಲಿದೆ. (ಏಕೆಂದರೆ) ರಹ್ಮಾನನ ಗದ್ದುಗೆಯು ಅದರ ಮೇಲೆಯೇ ಸ್ಥಾಪನೆಗೊಂಡಿದೆ." (ಬುಖಾರಿ)

ಗಿಡ-ಮರ-ಬಳ್ಳಿ, ಹಣ್ಣುಹಂಪಲು, ನೆರಳು

ತೋಟ, ಉದ್ಯಾನವೆನ್ನುವಾಗ ಗಿಡ-ಮರ, ಬಳ್ಳಿಗಳು, ಫಲ-ಪುಷ್ಪಗಳು ಸಮೃದ್ಧ ವಾಗಿ ಬೆಳೆದು ನೆರಳು ಚೆಲ್ಲಿರುವ ಪ್ರದೇಶವೆಂದು ಊಹಿಸಬಹುದಾಗಿದೆ. ಖರ್ಜೂರ (ನಖ್ಲ್), ದಾಳಿಂಬೆ (ರುಮ್ಮಾನ್), ಬುಗರಿ (ಶದ್ರ್), ಬಾಳೆ (ತಲ್‌ಅ್) ಇತ್ಯಾದಿ ಕೆಲವು ಹೆಸರುಗಳನ್ನು ಕುರ್‌ಆನ್ ತಿಳಿಸಿದೆ. ಸ್ವರ್ಗದ ಅತ್ಯುನ್ನತ ಸ್ತರವನ್ನು 'ಫಿರ್‌ದೌಸ್' ಎಂದು ಕರೆದಿರುವಂತೆಯೇ ಇಡೀ ಸ್ವರ್ಗವನ್ನೂ 'ಫಿರ್‌ದೌಸ್' ಎಂದು ವರ್ಣಿಸಲಾಗಿದೆ. ವೃಕ್ಷ-ಲತೆಗಳಿಂದ, ವಿಶೇಷತಃ ದ್ರಾಕ್ಷೆ ಬಳ್ಳಿಗಳಿಂದ ತುಂಬಿದ ತೋಟಗಳನ್ನು ಅರಬಿಯಲ್ಲಿ 'ಫಿರ್‌ದೌಸ್' ಎನ್ನಲಾಗುತ್ತದೆ. ಸ್ವರ್ಗವಾಸಿಗಳಿಗೆ ಎಲ್ಲ ರೀತಿಯ ಫಲಗಳು ದೊರೆಯ ಬೇಕಿದ್ದರೆ ಅಲ್ಲಿ ಅವು ಬೆಳೆಯುವ ವೃಕ್ಷ-ಲತಾದಿಗಳೂ ಇರಬೇಕಾಗಿದೆ. ಗಿಡ-ಮರ ಹಣ್ಣುಗಳಿರುವಾಗ ಹೂಗಳಿಲ್ಲದಿರುವುದೇ? ಸ್ವರ್ಗದಲ್ಲಿ ಎಷ್ಟು ಹುಡುಕಿದರೂ ಒಂದು ಹೂ ಕಾಣಸುವುದಿಲ್ಲವೆಂದರೇನು? ವರ್ಣವೈವಿಧ್ಯ, ಸೌರಭ, ನೈರ್ಮಲ್ಯ, ಮಾರ್ದವ, ಲಾವಣ್ಯ ಇತ್ಯಾದಿ ಆಕರ್ಷಕ ಅಂಶಗಳು ಹೂವಿನಲ್ಲಿ ಸಮ್ಮಿಳಿತವಾಗಿರುತ್ತದೆ. ಆದರೆ ಪ್ರಸ್ತುತ ಆಕರ್ಷಕ ಗುಣಗಳು ಸ್ವರ್ಗದ ಅಪ್ಸರೆಯರಲ್ಲಿ ಅದಕ್ಕಿಂತ ಅಧಿಕವಾಗಿ ಕಂಡು ಬರುತ್ತಿರುವುದರಿಂದ ಹೂಗಳ ಸ್ಥಾನವನ್ನು ಅವರು ಪಡೆದಿರಬಹುದೇ? ಸ್ವರ್ಗವನ್ನು ವರ್ಣಿಸುವಾಗ ಕವಿಗಳು ಹೂವಿನ ಬದಲಾಗಿ ಹೂರ್‌ಗಳನ್ನು ವರ್ಣಿಸುತ್ತಾರೆ. (ಅಲ್ಲಾಹನೇ ಬಲ್ಲ) ಸ್ವರ್ಗದ ಅನಂತ ದೂರಕ್ಕೆ ವ್ಯಾಪಿಸಿರುವ ನೆರಳುಗಳು ಅಲ್ಲಿನ ವೃಕ್ಷ-ಲತಾದಿಗಳ ಆಧಿಕ್ಯ ಮತ್ತು ಗಾಂಭೀರ್ಯವನ್ನು ಸೂಚಿಸುತ್ತದೆ. ಖರ್ಜೂರದ ಮರ ಮತ್ತು ಬಾಳೆ ಗಿಡ ಎನ್ನುವಾಗ ಭೂಮಿಯಲ್ಲಿ ನಮಗೆ ನೋಡಿ ಪರಿಚಯವಿರುವ ಆಕಾರ, ಗಾತ್ರವೆಂದು ಭಾವಿಸಬೇಡಿರಿ. ಪ್ರವಾದಿ(ಸ) ಒಮ್ಮೆ ಹೇಳಿದ್ದರು, "ಸ್ವರ್ಗದಲ್ಲಿ ಒಂದು ರೀತಿಯ ಮರವಿದೆ. ಅತಿ ವೇಗದಿಂದ ಸಂಚರಿಸುವ ಓರ್ವ ಕುದುರೆ

ಸವಾರನು ನೂರು ವರ್ಷ ನಿರಂತರ ಓಡಿದರೂ ಅದರ ನೆರಳನ್ನು ದಾಟಲು ಸಾಧ್ಯವಿಲ್ಲ."
(ಮುತ್ತಫಕುನ್ ಅಲೈಹಿ)

'ಝಿಲ್ಲಿನ್ ಮಮ್ದೂದ್' (ಬಹುದೂರದ ವರೆಗೆ ಹಬ್ಬಿರುವ ನೆರಳು) ಎಂದು ಅಲ್ಲಾಹ್ ಹೇಳಿರುವುದನ್ನು ಗಮನಿಸಿರಿ. ಊಹಿಸಿ ನೋಡಿರಿ. ಆ ಮರ ಎಷ್ಟು ದೊಡ್ಡದಿರಬಹುದು! ಇತರ ವೃಕ್ಷ-ಲತೆಗಳ ಸ್ವಭಾವವೂ ಸಾಮಾನ್ಯವಾಗಿ ಇದೇ ರೀತಿ ಇರಬಹುದಲ್ಲವೇ. ಇವುಗಳ ರೆಂಬೆಕೊಂಬೆ ಎಲೆಗಳು ಸಮೃದ್ಧವಾಗಿ ಹರಡಿಕೊಂಡಿದ್ದರೆ! ಸ್ವರ್ಗವು ಹಚ್ಚ ಹಸುರಿನಿಂದ ತುಂಬಿರುವುದು ಸಹಜ. "ದಟ್ಟವಾದ ಸಂಪನ್ನ ಹಸಿರು ಉದ್ಯಾನಗಳು." (ಅರ್ರಹ್ಮಾನ್: 64)

ವೃಕ್ಷ-ಲತಾದಿಗಳಿಂದ ದೊರೆಯುವ ದಟ್ಟ ನೆರಳು ಸ್ವರ್ಗವಾಸಿಗಳಿಗೆ ದೊರೆಯುವ ಮಹಾ ಅನುಗ್ರಹವೆಂದು ಅಲ್ಲಾಹ್ ಒತ್ತಿ ಹೇಳಿದ್ದಾನೆ. "ನಾವು ಅವರನ್ನು ದಟ್ಟವಾದ ನೆರಳಲ್ಲಿರಿಸುವೆವು." (ಅನ್ನಿಸಾ) "ಅಲ್ಲಿ ನೆರಳು ಅವರ ಮೇಲೆ ಬಾಗಿ ಹರಡಿರುವುದು." (ಅದ್ದಹ್ರ್: 14) "ಅವರೂ ಅವರ ಪತ್ನಿಯರೂ ದಟ್ಟ ನೆರಳುಗಳಲ್ಲಿ ಪೀಠಗಳ ಮೇಲೆ ಒರಗಿಕೊಂಡಿರುವರು." (ಯಾಸೀನ್: 56) ಎಂಬುದಾಗಿ ಕುರ್‌ಆನ್ ವರ್ಣಿಸಿದೆ. ಋತು ಭೇದವಿಲ್ಲದೆ ಆ ನೆರಳು ಸದಾ ಇರುವುದು. (ಹಣ್ಣುಗಳಂತೆಯೇ) "ಅದರ ಫಲಗಳಿಗೂ ನೆರಳಿಗೂ ಅಳಿವಿಲ್ಲ." (ಅರ್ರಅ್‌ದ್: 35)

ಒಟ್ಟಿನಲ್ಲಿ, ವಿಶ್ವ ವಿಶಾಲವಾದ ಆ ಮಹಾ ಸ್ವರ್ಗಲೋಕದಾದ್ಯಂತ ನೆರಳು ಒದಗಿಸುವ ರೀತಿಯಲ್ಲಿ ಅದರ ವೃಕ್ಷ ಲತಾದಿಗಳು ದಟ್ಟವಾಗಿ ವ್ಯಾಪಿಸಿರುವುದು.

ಹಣ್ಣುಗಳು

ಅವುಗಳಿಂದ ಕೇವಲ ನೆರಳು ಮಾತ್ರವಲ್ಲ, ಹಣ್ಣುಗಳೂ ದೊರೆಯುವ ರೀತಿಯಲ್ಲಿ ಸಜ್ಜುಗೊಳಿಸಲಾಗಿದೆ. ಸ್ವರ್ಗವಾಸಿಗಳಿಗೆ ಎಲ್ಲ ರೀತಿಯ ಹಣ್ಣುಗಳೂ ದೊರೆಯಬೇಕು. "ಅದರಲ್ಲಿ ಅವರಿಗಾಗಿ ಎಲ್ಲ ಬಗೆಯ ಫಲಗಳಿರುವುವು." (ಮುಹಮ್ಮದ್: 15)

ಅವು ಧಾರಾಳವಾಗಿ ದೊರೆಯಬೇಕು. "ಎಂದೂ ಮುಗಿದು ಹೋಗದ ಹಾಗೂ ಅಡೆತಡೆ ಯಿಲ್ಲದೆ ಧಾರಾಳವಾಗಿ ಸಿಗುತ್ತಲಿರುವ ಹಣ್ಣು ಹಂಪಲುಗಳ ನಡುವೆ."
(ಅಲ್ ವಾಕಿಅ: 32-33)

ವೃಕ್ಷಗಳು ಅತಿ ಎತ್ತರವಿರುವುದರಿಂದಲೂ ಮುಳ್ಳು, ಇರುವೆ, ಪಾಚಿ ಇತ್ಯಾದಿ ಅನೇಕ ಕಾರಣಗಳಿಂದಲೂ ಇಲ್ಲಿ ಹಣ್ಣುಗಳನ್ನು ಕೆಲವೊಮ್ಮೆ ಕೀಳಲಾಗುವುದಿಲ್ಲ, ಆದರೆ

ಅಲ್ಲಿ ಯಾವ ರೀತಿಯಿಂದಲೂ ಅಂತಹ ಅಡ್ಡಿಯಿರಬಾರದು. ಕುಳಿತಲ್ಲಿಂದಲೇ ಬೇಕಾದರೂ ಕೀಳಲು ಸಾಧ್ಯವಾಗಬೇಕು. "ಯಥೇಚ್ಛವಾಗಿ ಕೊಯ್ಯಬಹುದಾದಂತೆ ಅದರ ಫಲಗಳು ಸದಾ ಅವರಿಗೆ ಎಟಕುತ್ತಿರುವುವು." **(ಅದ್ದಹ್ರ್: 14)** "ಬಯಸಿದ ಎಲ್ಲ ಹಣ್ಣುಗಳೂ ದೊರೆಯಬೇಕು." **(ಅಲ್ ಮುರ್ಸಲಾತ್: 42)**

ಇಷ್ಟವಾದುದನ್ನು ಆರಿಸಿ ತೆಗೆಯಲನುಕೂಲವಾಗುವ ರೀತಿಯಲ್ಲಿ ಎಲ್ಲ ವರ್ಗದ ಹಣ್ಣುಗಳು ಯಾವಾಗಲೂ ಸಿದ್ಧವಾಗಿರಬೇಕು. "ಆ ಬಾಲಕರು ಅವರ ಮುಂದೆ ತರ ತರದ ಹಣ್ಣು ಹಂಪಲುಗಳನ್ನು- ಅವರಿಗೆ ಇಷ್ಟವಿದ್ದುದನ್ನು ಆಯ್ದುಕೊಳ್ಳಲಿಕ್ಕಾಗಿ- ತಂದಿರಿಸುವರು." **(ಅಲ್ ವಾಕಿಅ: 20)**

ಮುಗಿದು ಬಿಡುವುದೇ, ಹೆಚ್ಚು ಖರ್ಚಾದೀತೇ, ಬೆಲೆ ಹೆಚ್ಚೀತೇ ಎಂಬ ಯಾವ ರೀತಿಯ ಭೀತಿಯೂ ಇಲ್ಲದೆ, ಸಂಪೂರ್ಣ ಸಂತೃಪ್ತಿಯಿಂದ ಎಲ್ಲ ರುಚಿಕರ ಫಲಾಹಾರಗಳನ್ನೂ ಬೇಕಾದಷ್ಟು ಅಪೇಕ್ಷಿಸುವ ಸೌಲಭ್ಯವಿರಬೇಕು. "ಅಲ್ಲಿ ಅವರು ನಿಶ್ಚಿಂತರಾಗಿ ಎಲ್ಲ ತರದ ರುಚಿಕರವಾದ ವಸ್ತುಗಳನ್ನು ತರಿಸಿಕೊಳ್ಳುವರು." **(ಅದ್ದುಖಾನ್: 55)**

ಎಲ್ಲಕ್ಕಿಂತ ಮಿಗಿಲಾಗಿ, ಭೂಮಿಯಲ್ಲಿ ಪರಿಚಯವಿದ್ದ ಹಣ್ಣುಗಳ ಹೊರತಾಗಿ ತೀರಾ ಪರಿಚಯವಿಲ್ಲದ ಹೊಸ ಬಗೆಯ ಹಣ್ಣುಗಳೂ ಅಲ್ಲಿ ಅವರಿಗೆ ದೊರೆಯಬೇಕು. "ಅವೆರಡರಲ್ಲೂ ಪ್ರತಿಯೊಂದು ಫಲದ ಎರಡು ವರ್ಗಗಳಿರುವುವು." **(ಅರ್ರಹ್ಮಾನ್: 52)**

ಪಕ್ಷಿಗಳು

ಅಲ್ಲಿ ಪಕ್ಷಿಗಳಿವೆಯೇ? ಪರಿಚಿತ ಮತ್ತು ಅಪರಿಚಿತವಾದ ನಾನಾ ರೀತಿಯ ಹಕ್ಕಿಗಳಿರುವುರಿಂದ ಸ್ವರ್ಗದ ಶೋಭೆ ಹೆಚ್ಚಬಹುದೆಂದು ಕೆಲವರು ಭಾವಿಸಬಹುದು. ಆದರೆ ಕುರ್‌ಆನ್ ಮತ್ತು ಪ್ರವಾದಿಚರ್ಯೆಯು ಅದಕ್ಕೆ ಅಷ್ಟೊಂದು ಪ್ರಾಮುಖ್ಯ ನೀಡಿಲ್ಲ. ಸ್ವರ್ಗದ ಕೌಸರ್ ನದಿಯಲ್ಲಿ ಒಂಟೆಯಂತಹ ಉದ್ದ ಕತ್ತಿನ ಪಕ್ಷಿಗಳಿವೆ. ಅವು ಸ್ವರ್ಗದ ಮರಗಳಲ್ಲಿ ಸುತ್ತಾಡುತ್ತಿರುವುದೆಂದು ಇತರ ಕೆಲವು ಹದೀಸ್‌ಗಳಲ್ಲಿವೆ. ಆದರೆ ಅವುಗಳು ಪ್ರಬಲ ವರದಿ ಎನ್ನುವಂತಿಲ್ಲ. ಆದರೂ ರುಚಿಕರವಾದ ಎಲ್ಲ ರೀತಿಯ ಪಕ್ಷಿ ಮಾಂಸಗಳೂ ಸ್ವರ್ಗವಾಸಿಗಳಿಗೆ ನೀಡಲಾಗುವುದೆಂದು ಕುರ್‌ಆನ್ ಹೇಳಿದೆ. "ಅವರು ತಮಗೆ ಇಷ್ಟಬಂದುದನ್ನು ಉಪಯೋಗಿಸಿಕೊಳ್ಳುವಂತೆ ಪಕ್ಷಿಗಳ ಮಾಂಸವನ್ನು ಮುಂದಿರಿಸಲಾಗುವುದು." **(ಅಲ್ ವಾಕಿಅ: 21)**

ಇದು ಅಲ್ಲಿಯೇ ದೊರೆಯುವ ಪಕ್ಷಿಗಳ ಮಾಂಸವಾಗಿರಬಹುದು. ಹೊರಗಿನಿಂದ

ತರಿಸುವುದು ಸೂಕ್ತವಲ್ಲವೆಂದು ಅವರ ಅಭಿಮತ. ಕೊಯ್ದು ಪಾಕ ಮಾಡುವ ಸಮಸ್ಯೆಯು ಇತರ ಕೆಲವರಿಗೆ ಕಿರಿಕಿರಿಯೆನಿಸುತ್ತದೆ. ಪಕ್ಷಿ ಮಾಂಸ ಮಾತ್ರವಲ್ಲ, ಸ್ವರ್ಗ ವಾಸಿಗಳು ಬಯಸುವ ಎಲ್ಲ ತರದ ಮಾಂಸಗಳೂ ಅಲ್ಲಿ ದೊರೆಯುವುದೆಂದು ಅವರು ಹೇಳುತ್ತಾರೆ. ಕುರ್‌ಆನ್ ಹೀಗೆ ಹೇಳಿದೆ, "ನಾವು ಅವರಿಗೆ ಎಲ್ಲ ತರದ ಫಲವನ್ನೂ ಮಾಂಸವನ್ನೂ ಅವರ ಮನಸ್ಸು ಇಷ್ಟಪಡುವಂತಹದೆಲ್ಲವನ್ನೂ ಧಾರಾಳವಾಗಿ ಕೊಡುತ್ತಲೇ ಇರುವೆವು." (ಅತ್ತೂರ್: 22)

ಹಾಗಾದರೆ, ಅದಕ್ಕೆ ಬೇಕಾದ ಪಕ್ಷಿಗಳೂ ಮೃಗಗಳೂ ಅಲ್ಲಿವೆ, ಅವುಗಳನ್ನು ಕೊಯ್ದು ಪಾಕ ಮಾಡಿ ನೀಡಲಾಗುತ್ತದೆಯೆಂದೇ ಭಾವಿಸಬೇಕಾಗಿಲ್ಲ. ದೊಡ್ಡ ದೊಡ್ಡ ಕಸಾಯಿಖಾನೆ, ಪಾಕಶಾಲೆಗಳ ವ್ಯವಸ್ಥೆ ಅಲ್ಲಿ ಇಲ್ಲವೆಂದು ಭಾವಿಸುವುದರಿಂದ ಹೆಚ್ಚು ಸಂತೋಷವೆನಿಸುತ್ತದೆ. ಸ್ವರ್ಗದಲ್ಲಿ ಮದ್ಯ, ಹಾಲು ಮತ್ತು ಜೇನಿನ ಹೊಳೆಗಳು, ಹಣ್ಣುಗಳಿಂದಲೋ ಕೆಚ್ಚಲುಗಳಿಂದಲೋ ಅಥವಾ ನೊಣಗಳಿಂದಲೋ ಹಿಂಡಿ ತೆಗೆದುದಲ್ಲವೆಂದು ಹದೀಸ್‌ಗಳಲ್ಲಿ ಹೇಳಲಾಗಿದೆ. ಹಾಗೆಯೇ ಸ್ವರ್ಗಭೂಮಿಯ ಧಾತುಗಳಿಂದ ಅತಿ ರುಚಿಕರವಾದ ಮಾಂಸಗಳನ್ನು ವಿಶಿಷ್ಟ ರೀತಿಯಿಂದ ಅಲ್ಲಾಹ್ ಉತ್ಪಾದಿಸುತ್ತಾನೆಂದು ಭಾವಿಸಿದರಾಗದೇ? ಆದರೆ, ಪ್ರವಾದಿಯವರು(ಸ) ಓರ್ವ ಯಹೂದಿಯೊಂದಿಗೆ ಮಾತಾಡುತ್ತಾ, "ಸ್ವರ್ಗವಾಸಿಗಳಿಗೆ ಪ್ರಥಮವಾಗಿ ನೀಡುವ ಆಹಾರವು ಮೀನು ಮತ್ತು ಸ್ವರ್ಗದ ಬಯಲುಗಳಲ್ಲಿ ಮೇಯುತ್ತಿರುವ ಹೋರಿಯನ್ನು ಕೊಯ್ದು ಮಾಂಸವಾಗಿರುವುದು" ಎಂದು ಹೇಳಿರುವುದಾಗಿ ಮುಸ್ಲಿಮ್‌ನಲ್ಲಿ ಉದ್ಧರಿಸಲಾಗಿದೆ.

ಹಾಗಾದರೆ ಸಮಸ್ಯೆ ಇಲ್ಲಿಗೆ ಮುಗಿಯಲಿಲ್ಲ, ಮಾತ್ರವಲ್ಲ ಮೀನಿನ ಸಮಸ್ಯೆ ಉದ್ಭವಿಸಿತು! ಕೆಲವು ಮುಂಗಾಮಿಗಳು, ಇಲ್ಲಿ ಆಧುನಿಕ ವಿದ್ಯುತ್ ವ್ಯವಸ್ಥೆಯನ್ನು ಅಂದಾಜಿಸಿದ್ದರೆಂಬುದು ಸ್ವಾರಸ್ಯಮಯವೆನಿಸುವುದಿಲ್ಲವೇ.

ನದಿಗಳು

ಕೆಳಭಾಗದಲ್ಲಿ ನದಿಗಳು ಹರಿಯುವ ಉದ್ಯಾನಗಳನ್ನು ಸ್ವರ್ಗದ ವೈಶಿಷ್ಟ್ಯವೆಂದು ಕುರ್‌ಆನ್ ಪದೇಪದೇ ಎತ್ತಿ ಹೇಳಿದೆ. (ಅಲ್ ಬಕರ: 25)

ಕುರ್‌ಆನ್‌ನಲ್ಲಿ ನಾಲ್ಕು ರೀತಿಯ ನದಿಗಳನ್ನು ವರ್ಣಿಸಲಾಗಿದೆ.

1. ಮಣ್ಣು, ಕೆಸರು ಅಥವಾ ಇನ್ನಾವುದೇ ಮಿಶ್ರಣವಿಲ್ಲದ, ರುಚಿ, ಬಣ್ಣ ಅಥವಾ ಗುಣವ್ಯತ್ಯಾಸವಾಗದ ಶುದ್ಧ ಜಲಧಾರೆಗಳು.

2. ಆಹಾರದ ಸ್ವಭಾವ ಅಥವಾ ಆರೋಗ್ಯ ನೀತಿಯನ್ವಯ ಅಥವಾ ಇನ್ನಾವುದೇ ಕಾರಣಗಳಿಂದ ನಮ್ಮ ಹಾಲಿಗೆ ಸಾಮಾನ್ಯವಾಗಿ ಸಂಭವಿಸುವ ಯಾವುದೇ ವಾಸನೆ, ರುಚಿಭೇದವಿಲ್ಲದ ನೈಜ ಕ್ಷೀರ ನದಿಗಳು. ಪ್ರವಾದಿಯವರು(ಸ) ಹೀಗೆ ಹೇಳಿದ್ದಾರೆ, "ಅದು ಪ್ರಾಣಿಗಳ ಕೆಚ್ಚಲಿನಿಂದ ಹಿಂಡಿ ತೆಗೆದದ್ದಲ್ಲ!"

3. ಕುಡಿಯುವವರಿಗೆ ಆನಂದದಾಯಕವಾದ ರುಚಿಕರಪಾನೀಯಗಳು. ಇಲ್ಲಿನ ಮದ್ಯದಂತೆ ಅದಕ್ಕೆ ಮುಖ ಮುರಿಯದೆ ಕುಡಿಯಲಾಗದಂತಹ ದುರ್ಗಂಧ ಅಥವಾ ಅರುಚಿ ಇರುವುದಿಲ್ಲ, ತಲೆ ಸುತ್ತುವಿಕೆ, ತಲೆನೋವು ಇತ್ಯಾದಿ ಆರೋಗ್ಯಕ್ಕೆ ಹಾನಿಕರವಾದ ಯಾವೊಂದು ಅಂಶವೂ ಅದರಲ್ಲಿ ಇರುವುದಿಲ್ಲ, "ಅದರಿಂದ ಅವರ ದೇಹಕ್ಕೆ ಹಾನಿಯಾಗದು." **(ಅಸ್ಸಾಫ್ಫಾತ್: 47)** "ಅದು ಬುದ್ಧಿಯನ್ನು ಕೆಡಿಸುವುದಿಲ್ಲ, ಅದರಿಂದ ಅವರ ಬುದ್ಧಿಯೂ ಪ್ರಭಾವಿತವಾಗದು." **(ಅಸ್ಸಾಫ್ಫಾತ್: 47)** ಅದು ಮಾನವನನ್ನು ಅಸಭ್ಯ ಮತ್ತು ಅಶ್ಲೀಲ ಮಾತು ಕೃತ್ಯಗಳಿಗೆ ಪ್ರೇರೇಪಿಸುವು ದಿಲ್ಲ, "ಅಸಂಬದ್ಧ ಮಾತಾಗಲಿ, ದುರ್ನಡತೆಯಾಗಲಿ ಅಲ್ಲಿರಲಾರದು." **(ಅತ್ತೂರ್:23)** "ಪಾನ ಮಾಡುವವರಿಗೆ ಅತ್ಯಂತ ರುಚಿಕರವಾಗಿರುವುದು." **(ಮುಹಮ್ಮದ್: 15)** ಪ್ರವಾದಿ(ಸ) ಹೇಳಿದ್ದಾರೆ, "ಅದು ಹಣ್ಣುಗಳನ್ನು ತುಳಿದು ಹಿಂಜಿದ ಮದ್ಯವಾಗಿರಲಾರದು."

4. ತಿಳಿ ಜೇನಿನ ಹೊಳೆಗಳು: ಮೇಣ, ನೊಣದ ಮರಿ ಅಥವಾ ಇನ್ನಾವುದೇ ಅಂಶಗಳು ಕಲಬೆರಕೆಯಾಗಿಲ್ಲದ, ಹೂಗಳ ಭೇದದನ್ವಯ ರುಚಿ ಬದಲಾವಣೆಯಾಗಿಲ್ಲದ ಶುದ್ಧ ಮತ್ತು ಸ್ವಚ್ಛ ಜೇನಾಗಿರುವುದು. ಪ್ರವಾದಿ(ಸ) ಹೇಳಿದ್ದಾರೆ, "ಅದು ಜೇನ್ನೊಣ ಗಳಿಂದ ಹಿಂಜಿದ್ದಲ್ಲ."

ಕುರ್‌ಆನ್ ಹೇಳುತ್ತದೆ, "ಧರ್ಮನಿಷ್ಠರಿಗೆ ವಾಗ್ದಾನ ಮಾಡಲಾಗಿರುವ ಆ ಸ್ವರ್ಗದ ವಿಶೇಷತೆಯೇನೆಂದರೆ ಅದರಲ್ಲಿ ತಿಳಿ ನೀರಿನ ಕಾಲುವೆಗಳು ಹರಿಯುತ್ತಿರುವುವು. ಸ್ವಲ್ಪವೂ ರುಚಿ ಬದಲಾಗಿರದಂತಹ ಹಾಲಿನ ಕಾಲುವೆಗಳು ಹರಿಯುತ್ತಿರುವುವು. ಕುಡಿಯುವವರಿಗೆ ಅತ್ಯಂತ ರುಚಿಕರವಾಗಿರುವ ಮದಿರೆಯ ಕಾಲುವೆಗಳು ಹರಿಯು ತ್ತಿರುವುವು. ಅತ್ಯಂತ ತಿಳಿಯಾದ ಜೇನಿನ ಕಾಲುವೆಗಳು ಹರಿಯುತ್ತಿರುವುವು."

(ಮುಹಮ್ಮದ್: 15)

ಅಲ್ಲಿ ಇನ್ನೊಂದು ವಿಧದ ನದಿಯೂ ಇದೆ. ಕರ್ಪೂರ ರಸವು ಅದರ ನೀರು. ಆದರೆ ಕರ್ಪೂರ ಬೆರೆಸಿದ ನೀರಲ್ಲ, ಸಹಜವಾಗಿ ಸ್ವಚ್ಛ, ಶೀತಲ ಮತ್ತು ಪರಿಮಳ ಯುಕ್ತವಾದ ಕರ್ಪೂರದ ರುಚಿಯನ್ನು ಹೊಂದಿರುವುದು. "ಸಜ್ಜನರು ಕರ್ಪೂರ

ಜಲಮಿಶ್ರಿತ ಪಾನಪಾತ್ರೆಯಿಂದ ಕುಡಿಯುವರು." (ಅದ್ದಹ್ರ್: 5)

ಅಲ್ಲಿ ಇನ್ನೊಂದು ವಿಧದ ಚಿಲುಮೆಯೂ ಇದೆ. ಆ ನೀರಿಗೆ ಶುಂಠಿಯ ಸ್ವಾದವಿರುವುದು. ಆದರೆ ಶುಂಠಿಯನ್ನು ಅರೆದು ಸೇರಿಸಿದ್ದಲ್ಲ, ಅದು ಆ ನೀರಿನ ಸಹಜ ಸ್ವಾದವಾಗಿರುವುದು. 'ಝುಂಜಬೀಲ್' ಎಂದು ಅದರ ಹೆಸರು. "ಅಲ್ಲಿ ಅವರಿಗೆ ಶುಂಠಿ ಬೆರೆತಿರುವಂತಹ ಮದಿರೆಯನ್ನು ಕುಡಿಸಲಾಗುವುದು." (ಅದ್ದಹ್ರ್: 17)

ಇನ್ನೊಂದು ವಿಧದ ಮದಿರೆಯೂ ಇದೆ. ಅತ್ಯುತ್ತಮ ಮದಿರೆ! ಮಣ್ಣು ಅಥವಾ ಮೇಣದ ಬದಲಾಗಿ ಕಸ್ತೂರಿಯಿಂದ ಮೊಹರು ಮಾಡಿದ ಪಾತ್ರೆಗಳಲ್ಲಿ ಅದನ್ನು ಇರಿಸಲಾಗಿದೆ ಅಥವಾ ಕುಡಿದಾಗ ಕಸ್ತೂರಿಯ ಸುಗಂಧ ಮತ್ತು ಸವಿಯ ಅನುಭವವಾಗುತ್ತದೆ. ಅದನ್ನು ಕೂಡಾ ಯಾವುದಾದರೂ ನದಿಯಿಂದ ತೆಗೆಯುವುದಾಗಿರಬಹುದೆ? "ಅವರಿಗೆ ಅತ್ಯಂತ ಸ್ವಚ್ಛವಾದ, ಮುದ್ರೆ ಹಾಕಲಾದ ಮದಿರೆಯನ್ನು ಕುಡಿಸಲಾಗುವುದು ಅದರ ಮೇಲೆ ಕಸ್ತೂರಿಯ ಮೊಹರು ಇರುವುದು." (ಅಲ್ ಮುತಫ್ಫಿಫೀನ್: 25-26)

ಸ್ವರ್ಗದಲ್ಲಿ ಸರ್ವಶ್ರೇಷ್ಠವಾದ ಕೌಸರ್ ನದಿಯಿದೆಯಷ್ಟೆ, ಅಲ್ ಕೌಸರ್ ಅಧ್ಯಾಯ ಅವತೀರ್ಣವಾದ ಬಳಿಕ ಪ್ರವಾದಿ(ಸ) ಕೇಳಿದರು, "ನಿಮಗೆ ಕೌಸರ್ ಏನೆಂದು ತಿಳಿದಿದೆಯೇ?" ಸಹಾಬಿಗಳು, 'ಇಲ್ಲ' ಎಂದರು. ಪ್ರವಾದಿ(ಸ) ಹೇಳಿದರು, "ಅದು ಸ್ವರ್ಗದಲ್ಲಿ ಅಲ್ಲಾಹನು ನನಗೆ ವಾಗ್ದಾನ ಮಾಡಿರುವ ನದಿ." (ಮುಸ್ಲಿಮ್)

ಅದರ ಎರಡು ತೀರಗಳೂ ತೆರೆದ ಮುತ್ತುಗಳಿಂದ ನಿರ್ಮಿಸಿದ ದೊಡ್ಡ ಗುಂಬಜಗಳಾಗಿವೆ. ತಳಭಾಗವು ಅಪ್ಪಟ ಕಸ್ತೂರಿಯಾಗಿದೆ. ಅದರ ಮಣ್ಣು ಕಸ್ತೂರಿಗಿಂತ ಪರಿಮಳವೂ ನೀರು ಜೇನಿಗಿಂತ ಮಧುರವೂ ಮಂಜಿಗಿಂತ ಶುಭ್ರವು ಆಗಿರುವುದು. ಹೀಗೆ ಸ್ವರ್ಗದಲ್ಲಿ ಅನೇಕ ನದಿಗಳಿವೆ. ಅದರಲ್ಲಿ ಕೆಲವು ಹರಿಯುತ್ತಿರುವವವುಗಳಾಗಿದ್ದರೆ (ಅರ್ರಹ್ಮಾನ್: 50) ಇತರ ಕೆಲವು ನೀರಿನ ಕಾರಂಜಿಯಂತಿರುವುವು. (ಅರ್ರಹ್ಮಾನ್: 66)

ಈ ಎಲ್ಲ ನದಿಗಳ ಉಗಮ ಸ್ಥಾನವೆಲ್ಲಿ? ಪ್ರವಾದಿ(ಸ) ಹೇಳಿದ್ದಾರೆ, "ಸ್ವರ್ಗದ ಅತ್ಯುನ್ನತ ಸ್ತರವಾಗಿರುವ ಫಿರ್‌ದೌಸ್‌ನಿಂದ ಈ ನದಿಗಳು ಹುಟ್ಟಿ ಹರಿಯುತ್ತವೆ." (ಬುಖಾರಿ) ತರುವಾಯ ಸ್ವರ್ಗದ ಅತಿ ಕೆಳಗಿನ ಸ್ತರದ ಎಲ್ಲ ಮೂಲೆಗೂ ತಲಪಿ ಬಯಸಿದೆಡೆ ತಿರುಗಿಸಬಹುದಾದ ರೀತಿಯಲ್ಲಿ ಉಕ್ಕಿ ಹರಿಯುತ್ತಿರುವುದು. (ಅದ್ದಹ್ರ್:6)

ಮಾಳಿಗೆಗಳು

ಈ ತೋಟ(ಸ್ವರ್ಗ ಧಾಮ)ಗಳಲ್ಲಿ ಎಲ್ಲವೂ ಇದೆ. "ಅತ್ಯುನ್ನತವಾದ ಭವ್ಯ

ಬಂಗಲೆಗಳಿವೆ. ಸ್ವರ್ಗವಾಸಿಗಳು ಅಲ್ಲಿ ಸ್ವಚ್ಛಂದವಾಗಿ ಆನಂದಪಡುತ್ತಿದ್ದಾರೆ." (ಸಬಾ:37)

ಪ್ರವಾದಿ(ಸ) ಹೇಳಿದರು, "ಸ್ವರ್ಗವಾಸಿಗಳು, ಶ್ರೇಷ್ಠತೆಯ ವ್ಯತ್ಯಾಸದಿಂದಾಗಿ ಕೆಲವರು ಇತರ ಕೆಲವರಿಗಿಂತ ಮೇಲೆ ವಾಸಿಸುತ್ತಾರೆ. ಆಕಾಶದಲ್ಲಿ ಪೂರ್ವ ಅಥವಾ ಪಶ್ಚಿಮದಲ್ಲಿ ಪ್ರಜ್ವಲಿಸುವ ನಕ್ಷತ್ರವನ್ನು ಕಾಣುತ್ತಿರುವಂತೆ ಕೆಳಗಿನವರು ಮೇಲಿನವರನ್ನು ನೋಡುವರು. ಸ್ವರ್ಗದ ಸ್ತರ ಮತ್ತು ಮಾಳಿಗೆಗಳು ಮೇಲ್ಭಾಗದಲ್ಲಿ ನೇರವಾಗಿರುವ ಬದಲಾಗಿ ಸ್ವಲ್ಪ ವಾಲಿ ಇಳಿಜಾರಾಗಿರುವುದೆಂದು ಇದರಿಂದ ವ್ಯಕ್ತವಾಗುತ್ತದೆ."

(ಬುಖಾರಿ, ಮುಸ್ಲಿಮ್)

ಸಹಾಬಿಗಳು ಕೇಳಿದರು, "ಅದು ಕೇವಲ ಪ್ರವಾದಿಗಳಿಗೆ ಮಾತ್ರವೇ? ಅಥವಾ ಇತರರಿಗೂ ದೊರೆಯುವುದೇ?" ಪ್ರವಾದಿ(ಸ) ಹೇಳಿದರು, "ಹೌದು, ನನ್ನ ಆತ್ಮ ಯಾರ ಹಸ್ತದಲ್ಲಿದೆಯೋ ಆತನಾಣೆ! ಅಲ್ಲಾಹನಲ್ಲಿ ವಿಶ್ವಾಸವಿರಿಸಿ ಪ್ರವಾದಿಗಳನ್ನು ಅಂಗೀಕರಿಸಿದ ಎಲ್ಲರೂ ಅದನ್ನು ಪಡೆಯಬಹುದು." (ಬುಖಾರಿ)

ದಿಗಂತದಲ್ಲಿರುವ ನಕ್ಷತ್ರಗಳನ್ನು ನೋಡುವಂತೆಯೇ ಸ್ವರ್ಗವಾಸಿಗಳು ಅಲ್ಲಿ ಮಾಳಿಗೆಗಳನ್ನು ನೋಡುವರೆಂದು ವರದಿಗಳಿವೆ. (ಬುಖಾರಿ, ಮುಸ್ಲಿಮ್)

"ಅವುಗಳನ್ನು ಯಾವುದರಿಂದ ನಿರ್ಮಿಸಲಾಗಿದೆ? ಅದರ ಇಟ್ಟಿಗೆ- ಚಿನ್ನ ಮತ್ತು ಬೆಳ್ಳಿಯದ್ದು, ಗಾರೆ- ಶುದ್ಧ ಕಸ್ತೂರಿಯದ್ದು, ಜಲ್ಲಿ - ಮುತ್ತು ಮತ್ತು ಮಾಣಿಕ್ಯದ್ದು ಮಣ್ಣು-ಕುಂಕುಮದ್ದು." (ಅಹ್ಮದ್)

ಡೇರೆಗಳು

ಅಲ್ಲಿ ಮಾಳಿಗೆಗಳಲ್ಲದೇ ಸಣ್ಣಸಣ್ಣ ಡೇರೆಗಳಿರುವುವು. ಪ್ರತಿಯೊಬ್ಬರಿಗೂ ದೊರೆಯುವ ತೋಟದಲ್ಲಿಯೂ ಒಂದೊಂದು ಡೇರೆಯಿರುವುದು. ಅದರ ಒಳಭಾಗ ವನ್ನು ತೆರೆದ ಮುತ್ತಿನಿಂದ ನಿರ್ಮಿಸಲಾಗಿದೆ. ಅದು 60 ಮೈಲು ವಿಸ್ತಾರವಿದೆ. ವಿಶ್ವಾಸಿಯ ಬಹುಪತ್ನಿಯರು (ಹೂರ್‌ಗಳು) ಅದರಲ್ಲಿರುತ್ತಾರೆ. ಅವನು ಅದರಲ್ಲಿ ಎಲ್ಲರನ್ನೂ ಸಂಪರ್ಕಿಸುತ್ತಾನೆ. ಆದರೆ ಅವರು ಪರಸ್ಪರ ಕಾಣಿಸುವುದಿಲ್ಲ. (ಬುಖಾರಿ)

ಅತ್ಯುನ್ನತ ಭವ್ಯ ಮಾಳಿಗೆಗಳ ಮಧ್ಯೆ ಒಂದೇ ಮುತ್ತಿನಿಂದ ನಿರ್ಮಿಸಿದ 60 ಮೈಲು ವಿಸ್ತಾರದ ಈ ಪುಟ್ಟ ಡೇರೆಗಳ ಶೋಭೆಯು ಎಷ್ಟೊಂದು ರಮಣೀಯ ವಾಗಿರಬಹುದು. ಅವುಗಳನ್ನು ಸ್ವರ್ಗದ ತೋಟಗಳಲ್ಲಿಯೂ ನದಿ ಕಿನಾರೆಯಲ್ಲಿಯೂ ಇತರ ವಿಹಾರ ಕೇಂದ್ರಗಳಲ್ಲಿಯೂ ನಿರ್ಮಿಸಲಾಗಿದೆ.

ಪಾತ್ರೆಗಳು

ಸ್ವರ್ಗವಾಸಿಗಳಿಗೆ ಪಾನೀಯ ಕುಡಿಸಲು ಮತ್ತು ಇತರ ಉಪಯೋಗಕ್ಕಾಗಿ ವಿವಿಧ ರೀತಿಯ ಉತ್ಕೃಷ್ಟ ಪಾತ್ರೆ ಮತ್ತಿತರ ಉಪಕರಣಗಳನ್ನೂ ಅಲ್ಲಿ ಸಜ್ಜುಗೊಳಿಸಲಾಗಿದೆ.

"ಲೋಟೆಗಳು, ಹೂಜಿಗಳು, ಪಾನ ಪಾತ್ರೆಗಳು." **(ಅಲ್ ವಾಕಿಅ: 18)** "ವಿಶಿಷ್ಟ ರೀತಿಯ ಬೆಳ್ಳಿ ಪಾತ್ರೆಗಳಿರುವುವು." **(ಅದ್ದಹ್ರ್: 15)** "ಬೆಳ್ಳಿಯದ್ದಾಗಿದ್ದರೂ ಸ್ಫಟಿಕ ಸದೃಶ ಲೋಟೆ ಗಳು." **(ಅದ್ದಹ್ರ್: 15-16)** "ಬಂಗಾರದ ದೊಡ್ಡ ತಟ್ಟೆಗಳು ಮತ್ತು ಲೋಟೆಗಳು." **(ಝುಖ್‌ರುಫ್: 71)** "ಎಲ್ಲವನ್ನೂ ಅವಶ್ಯಾನುಸಾರ ಏರ್ಪಡಿಸಲಾಗಿದೆ." **(ಅದ್ದಹ್ರ್: 16)**

ಚಿನ್ನ ಮತ್ತು ಬೆಳ್ಳಿಯ ಬಾಚಣಿಗೆಗಳಿರುವುವು. ಪರಿಮಳಕ್ಕಾಗಿ ಗಂಧದ ಬದಲಿಗೆ ಲೋಬಾನ (ಸುಗಂದ ಬೀರುವ ಒಂದು ರೀತಿಯ ಕೊರಡು) ಇರುವುದು.

ಮಂಚಗಳು

ಮಾಳಿಗೆ ಮತ್ತು ಡೇರೆಗಳಲ್ಲಿ ಮಾತ್ರವಲ್ಲ ಅಂಗಳ, ತೋಟ ಮತ್ತಿತರ ವಿಹಾರ ಕೇಂದ್ರಗಳಲ್ಲಿಯೂ ನಾನಾ ರೀತಿಯ ಮಂಚಗಳನ್ನು ಇರಿಸಲಾಗಿರುವುದು. ಅವುಗಳನ್ನು ಒರಗಲು, ವಾಲಲು, ಓಲಾಡಲು ಅನುಕೂಲವಾಗುವ ರೀತಿಯಲ್ಲಿ ಇರಿಸಲಾಗಿದೆ. ಸ್ವರ್ಗವಾಸಿಗಳ ಹಿತಾನುಸಾರ ಅದು ಎತ್ತರವಾಗಿರುವುದು. ಹಾಸಿಗೆ ಪರದೆಗಳಿಂದ ರಾಜ ವೈಭವವನ್ನು ಹೊಂದಿರುವುವು. ಪ್ರತಿಯೊಬ್ಬ ಸ್ವರ್ಗವಾಸಿಯೂ ರಾಜಪೀಠದಲ್ಲಿ ಕುಳಿತಂತೆ ಆಸೀನನಾಗುವನು. ಅವುಗಳನ್ನು ಪತ್ನಿಯರು, ಅಪ್ಸರೆಯರು (ಹೂರ್), ಮಿತ್ರರೊಂದಿಗೆ ಕುಳಿತು ಸರಸ ಸಲ್ಲಾಪ ನಡೆಸಲು ಮತ್ತು ದೃಶ್ಯಗಳನ್ನು ನೋಡಲನುಕೂಲ ವಾಗುವಂತೆ ಸಜ್ಜೀಕರಿಸಲಾಗಿದೆ.

"ಅವರು, ಅವರ ಪತ್ನಿಯರೂ ದಟ್ಟ ನೆರಳುಗಳಲ್ಲಿ ಪೀಠಗಳ ಮೇಲೆ ಒರಗಿಕೊಂಡಿರುವರು." **(ಯಾಸೀನ್: 56)** "ರತ್ನ ಖಚಿತ ಪೀಠಗಳ ಮೇಲೆ ದಿಂಬುಗಳಿಗೆ ಒರಗಿ ಎದುರು ಬದುರಾಗಿ ಕುಳಿತುಕೊಳ್ಳುವರು." **(ಅಲ್ ವಾಕಿಅ: 15-16)** "ಅದರೊಳಗೇ ಉನ್ನತ ಪೀಠಗಳಿರುವುವು. **(ಅಲ್ ಗಾಶಿಯ: 13)** "ಅದರಲ್ಲಿ ಒರಗುವ ದಿಂಬುಗಳನ್ನು ಸಾಲಾಗಿರಿಸಲಾಗಿರುವುದು ಮತ್ತು ನುಣುಪಾದ ಹಾಸಿಗೆಗಳನ್ನು ಹಾಸಲಾಗಿರುವುದು." **(ಅಲ್‌ಗಾಶಿಯಃ: 15-16)** "ರೇಷ್ಮೆ ತುಂಬಿದ ಹಾಸಿಗೆಗಳಿರುವುವು. ಆ ಸ್ವರ್ಗವಾಸಿಗಳು ಹಸಿರು ರತ್ನ ಕಂಬಳಿಗಳ ಹಾಗೂ ನುಣುಪಾದ ಅಮೂಲ್ಯ ಹಾಸುಗಳ ಮೇಲೆ ದಿಂಬಿಗೊರಗಿ ಕುಳಿತಿರುವರು." **(ಅರ್ರಹ್ಮಾನ್: 76)**

ಬಾಲಕರು

ಅಲ್ಲಿ ಸ್ವರ್ಗವಾಸಿಗಳಿಗೆ ಹಣ್ಣು ಹಂಪಲು, ಪಾನೀಯ ಇತ್ಯಾದಿಗಳನ್ನು ಸರಬರಾಜು ಮಾಡುವ ಅನೇಕ ಬಾಲಕರಿದ್ದಾರೆ. "ಅವರ ಸೇವೆಗಾಗಿ ಬಾಲಕರು ಓಡಾಡುತ್ತಿರುವರು." (ಅದ್ದಹ್ರ್: 19) "ಅವರು ಸದಾ ಬಾಲಕರಾಗಿಯೇ ಇರುತ್ತಾರೆ." (ಅದ್ದಹ್ರ್: 19) "ಸ್ವರ್ಗವಾಸಿಗಳಿಗಾಗಿ ನೇಮಿಸಲಾದ ಆ ಬಾಲಕರು ಹವಳದಲ್ಲಿ ಬಚ್ಚಿಟ್ಟ ಮುತ್ತಿನಂತಿರುವರು." (ಅತ್ತೂರ್: 24) "ಸೇವಾಕಾಂಕ್ಷೆಯಿಂದ ಓಡಾಡುವ ಈ ಬಾಲಕರನ್ನು ಕಂಡರೆ ಹರಡಿರುವ ಮುತ್ತುಗಳಂತೆ ತೋರುವುದು." (ಅದ್ದಹ್ರ್: 19)

ಈ ಬಾಲಕರು ಯಾರು? ಅವರ ಕುರಿತು ಎರಡು ಪ್ರಮುಖ ಅಭಿಪ್ರಾಯಗಳಿವೆ.

1. ಸ್ವರ್ಗ ಗಳಿಸಲು ಸಾಧ್ಯವಾಗದ ತಂದೆ-ತಾಯಂದಿರ, ಚಿಕ್ಕಂದಿನಲ್ಲಿಯೇ ಮರಣ ಹೊಂದಿದ ಮಕ್ಕಳು.

2. ಸ್ವರ್ಗವಾಸಿಗಳ ಸೇವೆಗಾಗಿ ಅಲ್ಲಾಹನು ಪ್ರತ್ಯೇಕವಾಗಿ ಸೃಷ್ಟಿಸಿದ ಮಕ್ಕಳು.

ಉಡುಪು ಮತ್ತು ಆಭರಣಗಳು

ಸ್ವರ್ಗವಾಸಿಗಳ ಉಡುಪುಗಳು ರೇಷ್ಮೆಯದ್ದಾಗಿರುವುದು. (ಫಾತಿರ್: 33) ಅವು ಆಕರ್ಷಕ ಬಣ್ಣ ಮತ್ತು ವಿನ್ಯಾಸಗಳನ್ನು ಹೊಂದಿರುವುದು. "ತೆಳ್ಳಗಿನ ರೇಷ್ಮೆ, ಜರತಾರಿ ಹಸಿರು ಬಟ್ಟೆಗಳನ್ನು ಧರಿಸುವರು." (ಅಲ್‌ಕಹ್ಫ್: 31) "ಅವರಿಗೆ ಬೆಳ್ಳಿಯ ಕಂಕಣ ತೊಡಿಸಲಾಗುವುದು." (ಅದ್ದಹ್ರ್: 21) "ಬಂಗಾರದ ಕಂಕಣದಿಂದಲೂ ಮುತ್ತುಗಳಿಂದಲೂ ಅಲಂಕರಿಸಲಾಗುವುದು."(ಫಾತಿರ್: 33)

ಉಕೈದಿರ್ ರಾಜನು ಪ್ರವಾದಿಯವರಿಗೆ(ಸ) ತೆಳು ರೇಶ್ಮೆಯ ಒಂದು ಅಂಗಿಯನ್ನು ಸನ್ಮಾನಿಸಿದನು. ಅದರ ಸೌಂದರ್ಯವನ್ನು ನೋಡಿ ಜನರು ಆಶ್ಚರ್ಯಚಕಿತರಾದರು. ಪ್ರವಾದಿ(ಸ) ಹೇಳಿದರು, "ಇದನ್ನು ನೋಡಿ ಆಶ್ಚರ್ಯವಾಗುತ್ತಿದೆಯೇ? ಸ್ವರ್ಗದಲ್ಲಿ ಸಅದ್ ಬಿನ್ ಮುಆದ್‌ರ ಕರವಸ್ತ್ರಗಳು ಇದಕ್ಕಿಂತ ಎಷ್ಟೋ ಸುಂದರವಾಗಿರುವುದು." (ಬುಖಾರಿ) ಒಟ್ಟಿನಲ್ಲಿ, ಪೀಠ, ವಸ್ತ್ರ, ಬಾಚಣಿಗೆ, ಆಭರಣಗಳೆಲ್ಲವೂ ರಾಜವೈಭವದಿಂದ ತುಂಬಿರುವುದು.

ಪತ್ನಿಯರು

"ಅಲ್ಲಿ ಪರಿಶುದ್ಧರಾದ ಪತ್ನಿಯರಿರುತ್ತಾರೆ." (ಅಲ್ ಬಕರ: 25) ಇಲ್ಲಿನ ಸ್ತ್ರೀಯರಲ್ಲಿ

ದೈಹಿಕ ಅಥವಾ ವರ್ತನೆಯಲ್ಲಿ ಕಂಡುಬರುವ ಯಾವೊಂದು ಲೋಪದೋಷಗಳೂ ಅವರಲ್ಲಿ ಇರಲಾರದು. ಸಮಾನ ವಯಸ್ಕ ತರುಣಿಯರಾಗಿರುತ್ತಾರೆ. (ಅನ್ನಬಾ: 33) "ಅತಿ ಸುಂದರಿಯರು, ಕಾಲಿನ ಎಲುಬಿನೊಳಗಿನ ಮಜ್ಜೆಯು (ಸ್ಫಟಿಕದ ಸೀಸೆಯಲ್ಲಿರುವ ವಸ್ತುಗಳು ಹೊರಗಿನಿಂದ ಕಾಣಿಸುವಂತೆ) ಮಾಂಸದ ಹೊರಗಿನಿಂದ ಕಾಣಿಸುವಂತಹ ಸ್ಫಟಿಕ ಸಮಾನ ಸೌಂದರ್ಯವಿರುವವರು. ಪ್ರತಿಯೊಬ್ಬರಿಗೂ ಈರ್ವ ರಂತೆ." (ಬೈಹಕಿ)

ಹೂರ್‌ಗಳು

ಅಲ್ಲಿ ಪತ್ನಿಯರ ಹೊರತು ಹೂರ್‌ಗಳೂ ಇರುತ್ತಾರೆ. ಸುಂದರಿಯರು, ಕೋಮಲೆಯರು ಮತ್ತು ಶುಭ್ರಾಂಗನೆಯರು. ಕಣ್ಣಿನ ಕೃಷ್ಣಮಣಿ ಅತಿಕಪ್ಪು, ಉಳಿದ ಭಾಗ ಅಚ್ಚ ಬಿಳಿ, ಸುಂದರವಾದ ಆ ನಯನಗಳು ವಿಶಾಲವಾಗಿರುವುವು. "ಭದ್ರವಾದ ಬಚ್ಚಿಡಲಾದ ಮುತ್ತುಗಳಂತಿರುವವರು." (ಅಲ್ ವಾಕಿಅ: 23) "ಅಥವಾ ಸುರಕ್ಷಿತವಾಗಿರಿಸಿದ ಮೊಟ್ಟೆಗಳಂತಿರುವವರು." (ಅಸ್ಸಾಫ್ಫಾತ್: 49) "ವಜ್ರ ಮತ್ತು ಮುತ್ತುಗಳಂತೆ ಸೌಂದರ್ಯವಿರುವವರು." (ಅರ್ರಹ್ಮಾನ್: 58) "ಈ ಸ್ವರ್ಗವಾಸಿಗಳಿಗಿಂತ ಮುಂಚೆ ಯಾವ ಮಾನವನಾಗಲಿ, ಜಿನ್ನ್ ಆಗಲಿ ಅವರನ್ನು ಎಂದೂ ಸ್ಪರ್ಶಿಸಿಲ್ಲ." (ಅರ್ರಹ್ಮಾನ್: 74)

ಪತಿಯ ಹೊರತು ಬೇರೆ ಯಾರನ್ನೂ ನೋಡದ ಲಜ್ಜಾಪೂರ್ಣ ನಯನೆಯರು, ನಾಚಿಕೆಯಿಂದ ಕಣ್ಣು ಅರ್ಧ ಮಾತ್ರ ತೆರೆಯುತ್ತಾರೆ. "ಡೇರೆಗಳಲ್ಲಿ ವಿನಮ್ರರಾಗಿ ತಂಗಿರುತ್ತಾರೆ." (ಅರ್ರಹ್ಮಾನ್)

"ಪ್ರತಿಯೊಬ್ಬ ಸ್ವರ್ಗವಾಸಿಗೂ ಅನೇಕ ಹೂರ್‌ಗಳಿರು ತ್ತಾರೆ." (ಬುಖಾರಿ)

ಸ್ವರ್ಗವಾಸಿಗಳಲ್ಲದ ತಂದೆ ತಾಯಂದಿರ, ಶೈಶವದಲ್ಲಿ ಮರಣ ಹೊಂದಿದ ಬಾಲಕಿಯರು ಹೀಗೆ ಹೂರ್‌ಗಳಾಗಿ ರೂಪಾಂತರಗೊಂಡಿರಬಹುದೇ? ಅಥವಾ ಅವರನ್ನು ಪ್ರತ್ಯೇಕವಾಗಿ ಸೃಷ್ಟಿಸಿರಬಹುದೇ. ದೇವನೇ ಬಲ್ಲ.

ಉಮ್ಮು ಸಲಮ ಪ್ರವಾದಿಯವರೊಡನೆ(ಸ) ಒಮ್ಮೆ ಕೇಳಿದರು, "ಭೂಲೋಕದಿಂದ ಹೋದ ಮಹಿಳೆಯರು ಶ್ರೇಷ್ಠರೋ ಅಥವಾ ಹೂರ್‌ಗಳು ಶ್ರೇಷ್ಠರೋ?" ಪ್ರವಾದಿ(ಸ) ಹೇಳಿದರು, "ಭೂಲೋಕದಿಂದ ಹೋದ ಸ್ತ್ರೀಯರಿಗೆ ಹೂರ್‌ಗಳಿಗಿಂತ ಒಂದು ಹಾಸಿನ ಅಡಿ ಭಾಗಕ್ಕಿಂತ ಮೇಲ್ಭಾಗಕ್ಕಿರುವ ಶ್ರೇಷ್ಠತೆಯಿದೆ." ಉಮ್ಮುಸಲಮರು, "ಯಾಕಾಗಿ?" ಎಂದು ಕೇಳಿದರು. ಅದಕ್ಕೆ ಪ್ರವಾದಿ(ಸ) ಹೇಳಿದರು, "ಅವರು ಅಲ್ಲಾಹನಿಗಾಗಿ ನಮಾಝ್, ಉಪವಾಸ ಇತ್ಯಾದಿ ಆರಾಧನೆಗಳನ್ನು ಮಾಡಿರುವುದರಿಂದ." (ಅತ್ತಬ್ರಾನಿ)

ಹಾಗಾದರೆ ಭೂಲೋಕದ ಸುಶೀಲೆಯರಾದ ಸ್ತ್ರೀಯರು, ಸ್ವರ್ಗವಾಸಿಗಳ ನೈಜ ಪತ್ನಿಯರಾಗಿರುತ್ತಾರೆ. ಅವರು ತಮ್ಮ ವಿಶ್ವಾಸ ಸತ್ಕರ್ಮಗಳಿಂದಾಗಿ ಸ್ವರ್ಗ ಪ್ರವೇಶಿಸಿದ್ದಾರೆ. ಆದ್ದರಿಂದ ಸ್ವರ್ಗದ ಎಲ್ಲ ಅನುಗ್ರಹಗಳಿಗೂ ಅವರು ಸ್ವಯಂ ಅರ್ಹರಾಗಿರುತ್ತಾರೆ. ಅವರ ಹಿಂದಿನ ಪತಿಯಂದಿರು ಸ್ವರ್ಗವಾಸಿಗಳಾಗಿದ್ದರೆ ಅವರು ಸ್ವಇಚ್ಛೆಯಿಂದ ಅವರನ್ನೇ ಪತಿಯರಾಗಿ ಸ್ವೀಕರಿಸುವರು ಅಥವಾ ಅವರು ಮೆಚ್ಚುವ ಇತರ ಪತಿಯರನ್ನು ಅವರಿಗೆ ಅಲ್ಲಾಹ್ ನೀಡುವನು. ಸ್ವರ್ಗವಾಸಿಗಳ ಶಾಶ್ವತ ನಿವಾಸವಾಗಿರುವ ಮಾಳಿಗೆಗಳಲ್ಲಿ ಅವರು ವಾಸಿಸುವರು. ಅವರೇ ನೈಜ ಪತ್ನಿಯರಾಗಿರುತ್ತಾರೆ. ಹಾಗಾದರೆ ಹೂರ್‌ಗಳು? ಸ್ವರ್ಗದ ಹಣ್ಣು ಹಂಪಲು, ಪಾನೀಯ ಇತ್ಯಾದಿ ಸಾಧನಗಳಂತೆಯೇ ಅಲ್ಲಿ ಆನಂದಕ್ಕಾಗಿ ನೀಡಲಾಗುವ ಸಾಧನವಾಗಿದ್ದಾರೆ. ಅವರು ವಿಹಾರ ಕೇಂದ್ರಗಳಲ್ಲಿ ನಿರ್ಮಿಸಲಾದ ಡೇರೆಗಳಲ್ಲಿ ಬಹುವಂಶ ತಂಗಿರುತ್ತಾರೆ. ಅಲ್ಲಾಹನೇ ಬಲ್ಲ.

ಪ್ರವಾದಿ(ಸ) ಹೇಳಿದರು, "ಸ್ವರ್ಗದಲ್ಲಿರುವ ಯಾವಳಾದರೊಬ್ಬ ಸ್ತ್ರೀಯು ಭೂಮಿಗೆ ಒಂದು ವೇಳೆ ಇಣುಕಿದರೆ, ಅದು ಸ್ವರ್ಗ ಮತ್ತು ಭೂಮಿಯ ನಡುವಿನ ಎಲ್ಲ ಪ್ರದೇಶವನ್ನೂ ಪರಿಮಳ ಭರಿತ ಮತ್ತು ಪ್ರಕಾಶಮಾನಗೊಳಿಸುವುದು."(ಬುಖಾರಿ)

ಇದಕ್ಕಿಂತ ಹೆಚ್ಚಿನ ವರ್ಣನೆಯ ಅಗತ್ಯವಿದೆಯೇ?

ಹವಾಮಾನ

"ಅಲ್ಲಿ ತೀವ್ರ ಉಷ್ಣ ಅಥವಾ ಮೈ ಕೋರೈಸುವ ಚಳಿಯಿರಲಾರದು. ಅಲ್ಲಿನ ಸ್ತರಗಳನ್ನೂ ಮಾಳಿಗೆ, ನದಿ, ವೃಕ್ಷ ಮತ್ತು ನೆರಳುಗಳನ್ನೂ ಶೀತೋಷ್ಣವು ಸದಾ ಹಿತಕರವಾಗಿರುವ ರೀತಿಯಲ್ಲಿ ವ್ಯವಸ್ಥೆಗೊಳಿಸಲಾಗಿರುವುದು. ಅಲ್ಲಿ ಬಿಸಿಲಿನ ಧಗೆಯಾಗಲಿ ಚಳಿಯ ತೀವ್ರತೆಯಾಗಲಿ ಅವರನ್ನು ಬಾಧಿಸಲಾರದು." (ಅದ್ದಹ್ರ್: 13)

ಸಾಮೂಹಿಕ ವಾತಾವರಣ

ಅಲ್ಲಿನ ಸಾಮೂಹಿಕ ವಾತಾವರಣವು ಶುದ್ಧ, ಸುಸಂಸ್ಕೃತ ಮತ್ತು ಆಪ್ಯಾಯಮಾನವಾಗಿರುವುದು. ಸುಳ್ಳು, ಅಸಭ್ಯ ಅಥವಾ ಕೆಟ್ಟ ಮಾತುಗಳು ಅಲ್ಲಿ ಕೇಳಿಸಲಾರವು. ಚಾಡಿ, ನಿಂದನೆ, ಸುಳ್ಳಾರೋಪ, ಬೆದರಿಕೆ, ಅಪಸ್ವರಗಳಿಲ್ಲ, ತಲೆ ಹರಟೆಯ ಸದ್ದು ಗದ್ದಲಗಳಿಲ್ಲ, ನಿರರ್ಥಕವಾದ ಯಾವುದೂ ಇಲ್ಲ. ಅದು ಪರಸ್ಪರ ಬಯ್ದು ಜಗಳಾಡುವ ಅನಾಗರಿಕ ಜನರ ಲೋಕವಲ್ಲ, ಉತ್ತಮ ಗುಣನಡತೆಯ ಸುಸಂಸ್ಕೃತ ಜನರ ಲೋಕವಾಗಿದೆ. ಅಲ್ಲಿ ಸಂತೋಷದಾಯಕ ಮಾತು-ಕೃತಿಗಳು ಮಾತ್ರ ಕಂಡುಬರುತ್ತದೆ.

"ಅಲ್ಲಿ ಅವರು ಯಾವುದೇ ನಿರರ್ಥಕ ಅಥವಾ ಪಾಪದ ಮಾತನ್ನು ಕೇಳಲಾರರು. ಪ್ರತಿ ಯೊಂದು ಮಾತೂ ಸರಿಯಾದ ಮಾತೇ ಆಗಿರುವುದು." (ಅಲ್ ವಾಕಿಅ: 25-26)

ದ್ವಾರಗಳು

ಸ್ವರ್ಗಕ್ಕೆ ಎಂಟು ದ್ವಾರಗಳಿವೆ. ಎರಡು ದ್ವಾರಗಳ ಮಧ್ಯೆ ಮಕ್ಕಾದಿಂದ ಬಸ್ರಾಕ್ಕೆ ಅಥವಾ ಮಕ್ಕಾದಿಂದ ಹಜ್ರ್‌ಗಿರುವಷ್ಟು ದೂರವಿರುವುದು. ಅದು ಓರ್ವ ನುರಿತ ಕುದುರೆ ಸವಾರನು ನಿರಂತರ ವೇಗವಾಗಿ ಸಾಗಿದರೆ ಒಂದು ದಿನದಲ್ಲಿ ತಲಪ ಬಹುದಾದಷ್ಟು ದೂರವಿರುವುದು. ಸಾಮಾನ್ಯ ವೇಗದಲ್ಲಾದರೆ 3 ದಿನದ ದೂರವಿರುವುದು.

"ನಿನ್ನ ಸಮುದಾಯದಲ್ಲಿ ವಿಚಾರಣೆಯ ಅಗತ್ಯವಿಲ್ಲದ ಆ ವಿಭಾಗವು 'ಬಾಬುಲ್ ಅಮೀನ್' ಮೂಲಕ ಪ್ರವೇಶಿಸಲಿ ಎಂದು ಅಲ್ಲಾಹನು ಪ್ರವಾದಿಯವರಿಗೆ(ಸ) ಆದೇಶಿಸುತ್ತಾನೆ." (ಬುಖಾರಿ, ಮುಸ್ಲಿಮ್) ಅವರು ಬೇಕಿದ್ದರೆ ಇತರ ದ್ವಾರಗಳ ಮೂಲಕವೂ ಪ್ರವೇಶಿಸಬಹುದು. ಅಲ್ಲಿ 'ರಯ್ಯಾನ್' ಎಂಬ ದ್ವಾರವಿರುವುದು. ಉಪವಾಸಿಗರು (ವ್ರತಾನುಷ್ಠಾನದಲ್ಲಿ ನಿಷ್ಠೆ ತೋರಿದವರು) ಆ ಮೂಲಕ ಪ್ರವೇಶಿಸುತ್ತಾರೆ. (ಬೈಹಕಿ) ಹಾಗೆಯೇ ನಮಾಝ್‌ನ ವೈಶಿಷ್ಟ್ಯವಿರುವವರಿಗೆ ಬಾಬುಸ್ಸಲಾತ್, ಜಿಹಾದ್‌ನ ವೈಶಿಷ್ಟ್ಯವಿರುವವರಿಗೆ 'ಬಾಬುಲ್ ಜಿಹಾದ್' ದಾನಧರ್ಮದ ವೈಶಿಷ್ಟ್ಯವಿರುವವರಿಗೆ 'ಬಾಬುಸ್ಸದಕ'ಗಳು ಪ್ರತ್ಯೇಕವಾಗಿವೆ.

ಕೀಲಿ ಕೈ

ವಹಬ್ ಬಿನ್ ಮುನಬ್ಬಿಹ್‌ರೊಂದಿಗೆ ಓರ್ವರು ಕೇಳಿದರು, "ಲಾ ಇಲಾಹ ಇಲ್ಲಲ್ಲಾಹ್ ಸ್ವರ್ಗದ ಕೀಲಿಕೈಯಲ್ಲವೇ?" ಅವರು ಹೇಳಿದರು, "ಹೌದು, ಯಾವ ಕೀಲಿಕೈಗಾದರೂ ಹಲ್ಲುಗಳು ಬೇಕು. ಹಲ್ಲುಗಳಿರುವ ಕೀಲಿಕೈಯನ್ನು ಕೊಂಡೊಯ್ದರೆ ಮಾತ್ರ ನಿನಗೆ ಅದನ್ನು ತೆರೆಯಬಹುದು. ಇಲ್ಲದಿದ್ದರೆ ತೆರೆಯಲಾರದು." (ಬುಖಾರಿ)

ಕೇವಲ ವಿಶ್ವಾಸ ಸಾಲದು. ಸತ್ಕರ್ಮಗಳೂ ಇರಬೇಕೆಂದರ್ಥ. ಪ್ರವಾದಿ ಯವರು(ಸ) ಹಲ್ಲುಗಳಿರುವ ಕೀಲಿಯೊಂದಿಗೆ ತಲಪಿರುವರಲ್ಲವೇ!

ಸ್ವರ್ಗದ ಸಂಕ್ಷಿಪ್ತ ಮಾಹಿತಿ ದೊರೆಯಿತು. ಸ್ವರ್ಗದ ದ್ವಾರಗಳನ್ನು ಪ್ರವಾದಿ ಯವರ(ಸ) ಅಪೇಕ್ಷೆಯಂತೆ ತೆರೆದಿಡಲಾಗಿದೆ. ಇನ್ನು ನಾವು ಅದರ ಒಳಗೆ ಹೋಗಿ ನೋಡೋಣ.

ಸ್ವರ್ಗದ ಕಡೆಗೆ

ಸ್ವರ್ಗದ ದ್ವಾರಗಳನ್ನು ತೆರೆದು ಪ್ರವೇಶಾನುಮತಿ ನೀಡಲಾಗಿದೆಯೆಂದು ತಿಳಿಯುತ್ತಲೇ ಭಕ್ತಜನರೆಲ್ಲರೂ ಅಲ್ಲಿಗೆ ಸಾಗುತ್ತಿದ್ದಾರೆ. "ನಾವು ಧರ್ಮನಿಷ್ಠರನ್ನು ರಹ್ಮಾನನ ಸನ್ನಿಧಿಯಲ್ಲಿ ಅತಿಥಿಗಳಂತೆ ಮುಂದೆ ತರುತ್ತೇವೆ." **(ಮರ್ಯಮ್: 85)**

ಮುಂಚೂಣಿ

ಸತ್ಯವನ್ನು ಅಂಗೀಕರಿಸಿ, ಅಲ್ಲಾಹ್ ಮತ್ತು ಪ್ರವಾದಿಯ ಕರೆಯನ್ನು ಸ್ವಾಗತಿಸಿ, ಧರ್ಮದ ಮಾರ್ಗದಲ್ಲಿ ಹೋರಾಡಿ, ಜನಸೇವೆ, ಸತ್ಯಪ್ರಚಾರ, ನ್ಯಾಯಪಾಲನೆ ಇತ್ಯಾದಿ ಸತ್ಕರ್ಮಗಳನ್ನು ನಿರ್ವಹಿಸುವ ಹಾಗೂ ಅಪರಾಧ, ಅನ್ಯಾಯ, ಅನೀತಿಯ ನಿರ್ಮೂಲನ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದು ಅಲ್ಲಾಹನ ಸಂಪ್ರೀತಿ ಸಂಪಾದಿಸಿದವರು ಇಲ್ಲಿ ಸ್ವರ್ಗಕ್ಕೆ ಹೋಗುವಾಗ ಮುಂಚೂಣಿಯಲ್ಲಿದ್ದಾರೆ. "ಅಗ್ರಗಣ್ಯರಂತು ಅಗ್ರಗಣ್ಯರೇ ಆಗಿರುತ್ತಾರೆ. ನಿಕಟವರ್ತಿಗಳು ಅವರೇ ತಾನೇ." **(ಅಲ್ ವಾಕಿಅ: 10-11)**

ತರುವಾಯ ಅವರ ಹತ್ತಿರದವರು, ಹೀಗೆ ಅನುಕ್ರಮವಾಗಿ ಸಾಲುಸಾಲಾಗಿ ಅವರು ಸಾಗುತ್ತಿದ್ದಾರೆ. ಪ್ರವಾದಿಗಳು, ಸತ್ಯಸಂಧರು, ಹುತಾತ್ಮರು, ಸಜ್ಜನರು ಹೀಗೆ ವಿವಿಧ ತಂಡಗಳಾಗಿ ಆ ಭಕ್ತ ಜನರನ್ನು ಸ್ವರ್ಗಕ್ಕೆ ಬರಮಾಡಿಕೊಳ್ಳಲಾಗುತ್ತಿದೆ.

"ತಮ್ಮ ಪ್ರಭುವಿನ ಆಜ್ಞೋಲ್ಲಂಘನೆಯಿಂದ ದೂರವಿರುತ್ತಿದ್ದವರನ್ನು ಗುಂಪು ಗುಂಪುಗಳಾಗಿ ಸ್ವರ್ಗದ ಕಡೆಗೆ ಒಯ್ಯಲಾಗುವುದು. ಅವರು ಅಲ್ಲಿಗೆ ತಲಪುವಾಗ ಅದರ ದ್ವಾರಗಳನ್ನು ಮೊದಲೇ ತೆರೆದಿರಿಸಲ್ಪಟ್ಟಿರುವುದು. ಆಗ ಅದರ ವ್ಯವಸ್ಥಾಪಕರು ಅವರೊಡನೆ, 'ನಿಮಗೆ ಶಾಂತಿ ಇರಲಿ. ಬಹಳ ಚೆನ್ನಾಗಿದ್ದಿರಿ. ಇದರೊಳಗೆ ಸದಾ ಕಾಲಕ್ಕಾಗಿ ಪ್ರವೇಶಿಸಿಕೊಳ್ಳಿರಿ' ಎನ್ನುವರು. **(ಅಝ್ಝುಮರ್: 73)**

"ಸಂಪೂರ್ಣ ನಿರ್ಭಯರಾಗಿ, ಭದ್ರತೆಯ ಪ್ರಜ್ಞೆಯಿಂದ ಇದರಲ್ಲಿ ಪ್ರವೇಶಿಸಿರೆಂದು ದೇವಚರರು ಅವರಿಗೆ ಸಾಂತ್ವನ ನೀಡುವರು." **(ಅಲ್‌ಹಿಜ್ರ್: 46)** "ನೀವು ವಿಜಯಿಗಳಾದಿರಿ, ಶಾಶ್ವತ ರಕ್ಷಣೆ ಪಡೆದಿರಿ, ಶಾಂತಿ, ಶಾಂತಿ ಎಂಬ ಅಭಿನಂದನೆಗಳು ಎಲ್ಲ ವಲಯಗಳಿಂದಲೂ ಅವರಿಗೆ ದೊರೆಯುತ್ತಲಿರುವುದು." **(ಯೂನುಸ್: 10)** "ಎಲ್ಲಕ್ಕಿಂತ ಮಿಗಿಲಾಗಿ ಅಲ್ಲಾಹನನ್ನು ಅಲ್ಲಿ ಕಾಣುವಾಗಲೂ 'ಸಲಾಮ್' ದೊರೆಯುವುದು." **(ಅಹ್‌ಝಾಬ್: 44)** "ಹೌದು ಕರುಣಾಮಯನಾದ ಪ್ರಭುವಿನಿಂದಲೇ 'ಸಲಾಮ್' ದೊರೆಯುವುದು." **(ಯಾಸೀನ್: 58)**

ಸಾಲದೇ, ಇದಕ್ಕಿಂತ ದೊಡ್ಡ ಭಾಗ್ಯ ಬೇರೇನಿದೆ? ಆ ಸಂದರ್ಭದ ಆನಂದ ಹೇಗಿರಬಹುದು!

ಇಲ್ಲಿ ಈ ಸ್ವರ್ಗ ಪ್ರವೇಶದ ವೇಳೆ ಇನ್ನೊಂದು ಸ್ವಾರಸ್ಯಕರ ಘಟನೆಯೂ ನಡೆಯುವುದು. ನಮಾಝ್, ಉಪವಾಸ ಇತ್ಯಾದಿಗಳಲ್ಲಿ ವಿಶೇಷ ನಿಷ್ಠೆ ತೋರಿಸಿದ್ದ ಸ್ವರ್ಗವಾಸಿಗಳನ್ನು ಆಯಾ ದ್ವಾರಗಳಲ್ಲಿ ನಿಂತಿರುವ ದೇವಚರರು, ಇದೋ ಇಲ್ಲಿಗೆ ಬನ್ನಿ, ಇದನ್ನು ನಿಮಗಾಗಿ ಸಿದ್ಧಪಡಿಸಲಾಗಿದೆ, ಇಲ್ಲಿಗೆ ಬನ್ನಿ ಎಂಬುದಾಗಿ ಆಹ್ವಾನಿ ಸುತ್ತಾರೆ. ಹಾಗಾದರೆ, ಎಲ್ಲ ಸತ್ಕರ್ಮಗಳಲ್ಲಿ ಏಕಪ್ರಕಾರ ನಿಷ್ಠೆ ತೋರಿದವರಾಗಿದ್ದರೆ? ಅವರನ್ನು ಎಲ್ಲದ್ವಾರಗಳಲ್ಲಿ ನಿಂತಿರುವ ದೇವಚರರೂ 'ಇಲ್ಲಿ ಬನ್ನಿ ಇಲ್ಲಿ ಬನ್ನಿ' ಎಂದು ಸ್ವಲ್ಪ ಪೈಪೋಟಿಯಿಂದಲೇ ಆಮಂತ್ರಿಸುತ್ತಾರೆ. ಅಬೂಬಕರ್ ಸಿದ್ದೀಕ್(ರ) ಆ ಪ್ರಕಾರ ಎಲ್ಲ ದ್ವಾರಗಳಿಂದಲೂ ಆಮಂತ್ರಿಸಲ್ಪಡುವವರಲ್ಲಿ ಸೇರಿದ್ದಾರೆ.

"ಪ್ರವಾದಿ ಮುಹಮ್ಮದ್‌ರ(ಸ) ಸಮುದಾಯವು ಸ್ವರ್ಗದಲ್ಲಿ ಮೊದಲು ಪ್ರವೇಶಿಸುವುದು. ಅವರನ್ನು ವಿವಿಧ ವಿಭಾಗಗಳಾಗಿ ಪ್ರವೇಶಿಸಲಾಗುತ್ತದೆ. ಪ್ರಥಮ ವಿಭಾಗದವರ ವದನವು ಹುಣ್ಣಿಮೆಯ ಚಂದ್ರದಂತೆ ಪ್ರಸನ್ನವಾಗಿರುವುದು. ಅನಂತರದ ವಿಭಾಗದವರ ವದನವು ಆಕಾಶದಲ್ಲಿ ಅತ್ಯಧಿಕ ಪ್ರಕಾಶಿಸುವ ನಕ್ಷತ್ರದಂತಿರುವುದು. (ಅದರ ಹಿಂದಿನ ಪ್ರತಿಯೊಂದು ವಿಭಾಗವು ಪ್ರಕಾಶದ ಸಮೀಪ ಹಂತದಲ್ಲಿ ಎಂಬ ಕ್ರಮದಲ್ಲಿರುವುದು.)" **(ಮುಸ್ಲಿಮ್)**

"ಅವರ ಪಾತ್ರೆ, ಬಾಚಣಿಗೆ ಇತ್ಯಾದಿಗಳು ಚಿನ್ನ-ಬೆಳ್ಳಿಗಳದ್ದಾಗಿರುವುದು. ಅವರ ಬೆವರು ಕಸ್ತೂರಿಯಾಗಿರುವುದು. (ಸೇವಿಸಿದ್ದೆಲ್ಲವೂ ಕಸ್ತೂರಿಯ ಬೆವರಾಗಿ ಹೊರ ಹೋಗುವುದು) ಲೋಬಾನವು ಊದು ಕಡ್ಡಿಯಾಗಿರುವುದು." **(ಬೈಹಕಿ)**

"ಪ್ರತಿಯೊಬ್ಬರಿಗೂ ಇಬ್ಬರು ಪತ್ನಿಯರು! ಅವರ ಕಾಲಿನ ಮಜ್ಜೆಯು ಮಾಂಸದ ಹೊರಗೆ ಕಾಣಿಸುವಂತಹ ಸ್ಫಟಿಕ ಸುಂದರಿಯಾಗಿರುತ್ತಾರೆ! ಹೂರ್‌ಗಳೂ ಪತ್ನಿಯ ರಾಗಿದ್ದಾರೆ." **(ಬೈಹಕಿ, ಮುಸ್ಲಿಮ್)**

"ಅವರ ಮಧ್ಯೆ ಯಾವುದೇ ಭಿನ್ನತೆಯಿಲ್ಲ, ಪರಸ್ಪರ ಕೋಪವಿಲ್ಲ, ಎಲ್ಲರಿಗೂ ಒಂದೇ ಮಾನವ ಹೃದಯ. ತಂದೆ ಆದಮರ ರೂಪ. 60 ಮೊಳ ಎತ್ತರ. ಅವರು ಪ್ರಭಾತ ಪ್ರದೋಷಗಳಲ್ಲಿ ಅಲ್ಲಾಹನ ಪ್ರಕೀರ್ತನೆ ಮಾಡುತ್ತಲಿರುತ್ತಾರೆ." **(ಬೈಹಕಿ)**

ಒಮ್ಮೆ ಪ್ರವಾದಿಯವರು(ಸ) ಹೇಳಿದರು: ಹಿಂದಿನ ಸಮುದಾಯಗಳನ್ನು ನನಗೆ ತೋರಿಸಲಾಯಿತು. ಓರ್ವ ಪ್ರವಾದಿಯೊಂದಿಗೆ ಜನರ ಗುಂಪೊಂದು ಹೋಗುತ್ತಿದೆ.

ಇನ್ನೋರ್ವ ಪ್ರವಾದಿಯ ಜತೆ ಇನ್ನೊಂದು ಸಣ್ಣ ಗುಂಪು ಹೋಗುತ್ತಿದೆ. ಮತ್ತೋರ್ವ ಪ್ರವಾದಿಯ ಜತೆ ಹತ್ತು ಮಂದಿ ಹೋಗುತ್ತಿದ್ದಾರೆ. ಬೇರೊಬ್ಬ ಪ್ರವಾದಿಯ ಜತೆ 5 ಮಂದಿ ಹೋಗುತ್ತಿದ್ದಾರೆ. ಓರ್ವ ಪ್ರವಾದಿಯು ಒಂಟಿಯಾಗಿಯೇ ಹೋಗುತ್ತಿದ್ದಾರೆ. ಅನಂತರ ನೋಡಿದಾಗ ದೊಡ್ಡ ಜನಸ್ತೋಮ ಕಾಣಿಸಿತು. ನಾನು ಜಿಬ್ರೀಲ್‌ರೊಡನೆ ಕೇಳಿದೆ, "ಅದು ನನ್ನ ಸಮುದಾಯವಲ್ಲವೇ?" ಜಿಬ್ರೀಲ್ ಹೇಳಿದರು, "ಅಲ್ಲ, ಮೇಲೆ ನೋಡಿರಿ." ಆಗ ಅಲ್ಲಿ ಒಂದು ದೊಡ್ಡ ಜನ ಸಂದಣಿ ಕಾಣಿಸಿತು. ಜಿಬ್ರೀಲ್ ಹೇಳಿದರು, "ಅದು ನಿಮ್ಮ ಸಮುದಾಯ. ಆದರ ಮುಂದಿನ ಸಾಲಿನಲ್ಲಿ 70,000 ಮಂದಿಯಿದ್ದಾರೆ. ಅವರಿಗೆ ವಿಚಾರಣೆಯಿಲ್ಲ, ಶಿಕ್ಷೆಯಿಲ್ಲ" ಯಾಕೆಂದು ಕೇಳಿದೆ. ಜಿಬ್ರೀಲ್ ಹೇಳಿದರು, "ಅವರು ಅಗ್ನಿಮುದ್ರೆ ಅಥವಾ ಮಾಟಮಂತ್ರ ಮಾಡದೆ, ಕಣಿ ಕೇಳದೆ, ಎಲ್ಲ ವಿಷಯಗಳಲ್ಲೂ ಸಂಪೂರ್ಣವಾಗಿ ಅಲ್ಲಾಹನ ಮೇಲೆ ಭರವಸೆಯಿರಿಸಿದ ವರಾಗಿದ್ದಾರೆ." ಇದನ್ನು ಕೇಳಿದ ಸಭೆಯಲ್ಲಿದ್ದ ಉಕಾಸ ಎದ್ದು ನಿಂತು ಹೇಳಿದರು, "ಅಲ್ಲಾಹನ ಸಂದೇಶವಾಹಕರೇ(ಸ)! ನನ್ನನ್ನೂ ಆ ವಿಭಾಗದಲ್ಲಿ ಸೇರಿಸುವಂತೆ ಪ್ರಾರ್ಥಿಸಿರಿ." ಪ್ರವಾದಿಯವರು(ಸ) ಪ್ರಾರ್ಥಿಸಿದರು. ಇದನ್ನು ನೋಡಿ ಇನ್ನೊಬ್ಬರು 'ನನ್ನನ್ನೂ!' ಎಂದರು. ಪ್ರವಾದಿ(ಸ) ಹೇಳಿದರು, "ಇನ್ನೂ ಸಾಧ್ಯವಿಲ್ಲ, ಆ ಅವಕಾಶವನ್ನು ಉಕಾಸ ಪಡೆದು ಬಿಟ್ಟರು." (ಬುಖಾರಿ)

ಈ 70,000 ಮಂದಿ, ಮೊದಲು ಸ್ವರ್ಗ ಪ್ರವೇಶಿಸುವ ತಂಡವೆಂದು ಈ ಹಿಂದೆ ಹೇಳಿದವರೇ ಆಗಿದ್ದಾರೆ.

"ಅವರು ಪರಸ್ಪರ ಕೈ ಹಿಡಿದು ಸ್ವರ್ಗ ಪ್ರವೇಶಿಸುವರು." (ಬುಖಾರಿ)

ತರುವಾಯ ಪ್ರತಿಯೊಂದು ತಂಡವೂ ಅನುಕ್ರಮವಾಗಿ ಪ್ರವೇಶಿಸುತ್ತಿರುವುದು.

ಅಅ್‌ರಾಫ್‌ನವರು

ಸ್ವರ್ಗ ಮತ್ತು ನರಕದ ನಡುವೆ ಒಂದು ಮಹಾ ಗೋಡೆಯಿದೆ. ಕೆಲವರು ಏನೋ ಮಾಡಿ ಅದರ ಮೇಲೇರಿದ್ದಾರೆ. ಅವರಲ್ಲಿ ಸ್ವರ್ಗಕ್ಕೆ ಪ್ರವೇಶಿಸುವಷ್ಟು ಸತ್ಕರ್ಮಗಳಿಲ್ಲ, ನರಕಕ್ಕೆ ಬೀಳುವಷ್ಟು ದುಷ್ಕರ್ಮಗಳನ್ನೂ ಅವರು ಮಾಡಿಲ್ಲ, ಆದರೂ ಅಲ್ಲಾಹನು ನಮ್ಮನ್ನು ಸ್ವರ್ಗಕ್ಕೆ ಕಳುಹಿಸಬಹುದೆಂದು ಅವರು ಭಾವಿಸುತ್ತಿದ್ದಾರೆ. ಆದರೆ ಈ ತನಕ ಪ್ರವೇಶ ದೊರೆತಿಲ್ಲ, ಆ ಗೋಡೆಯ ಮೇಲಿಂದ ಅವರಿಗೆ ಸ್ವರ್ಗ ಮತ್ತು ನರಕದಲ್ಲಿ ರುವವರು ಸ್ಪಷ್ಟವಾಗಿ ಕಾಣಿಸುತ್ತಿದ್ದಾರೆ. ಎಲ್ಲರನ್ನೂ ಮುಖ ಚಹರೆಯಿಂದ ಅವರು ಗುರುತಿಸುತ್ತಿದ್ದಾರೆ. ಅವರನ್ನು ಅಅ್‌ರಾಫ್‌ನವರೆಂದು ಕರೆಯಲಾಗುತ್ತದೆ.

ಅವರು ಸ್ವರ್ಗವಾಸಿಗಳನ್ನು ಕರೆದು 'ಅಸ್ಸಲಾಮು ಅಲೈಕುಮ್' (ನಿಮಗೆ ಶುಭವಾಗಲಿ) **(ಅಲ್ ಅಅ್‌ರಾಫ್: 46)** ಎಂದು ಹೇಳುತ್ತಾರೆ. ಈ ಸಲಾಮ್ ಬಹಳ ಅರ್ಥಗರ್ಭಿತವಾಗಿದೆ. (ನೀವು ಪಾರಾದಿರಿ. ನಾವು ಇಲ್ಲಿ ಸಿಲುಕಿದ್ದೇವೆ. ಪ್ರಭುವಿನ ಅಪಾರ ಕರುಣೆ ಮಾತ್ರ ನಮಗೆ ಆಧಾರವಾಗಿದೆ. ನಮ್ಮ ವಿಷಯವೂ ನಿಮ್ಮ ಜ್ಞಾಪಕದಲ್ಲಿರಲಿ ಎಂಬುದು ಅವರ ಇಂಗಿತವಾಗಿರಬಹುದು.)

"ಅವರ ದೃಷ್ಟಿಗಳು ನರಕದವರ ಕಡೆಗೆ ತಿರುಗಿದಾಗ, 'ಓ ನಮ್ಮ ಪ್ರಭೂ! ನಮ್ಮನ್ನು ಈ ಅಕ್ರಮಿಗಳೊಡನೆ ಸೇರಿಸಬೇಡ' ಎಂದು ಹೇಳುವರು." **(ಅಲ್ ಅಅ್‌ರಾಫ್: 47)**

ಅಅ್‌ರಾಫ್‌ನವರು ನರಕದ ಕುಖ್ಯಾತರನ್ನು ಅವರ ಮುಖ ಲಕ್ಷಣಗಳಿಂದಲೇ ಗುರುತಿಸುವರು. ಅನಂತರ ಅವರೊಡನೆ ಕೂಗಿ ಹೇಳುವರು, "ಹೇಗಿದೆ? ನಿಮ್ಮ ಜನಬಲ, ನೀವು ಅಹಂಕಾರ ಪಡುತ್ತಿದ್ದ ಸಾಧನ ಸಾಮಗ್ರಿಗಳಾವುವೂ ಇಂದು ನಿಮಗೆ ಪ್ರಯೋಜನವಾಗಲಿಲ್ಲ. ನೀವು ಈ ಸ್ವರ್ಗವಾಸಿಗಳ ಬಗ್ಗೆ ಅತಿ ನೀಚರು ಮತ್ತು ಅಲ್ಲಾಹನ ಯಾವ ಅನುಗ್ರಹವೂ ದೊರೆಯದವರೆಂದು ಹೇಳುತ್ತಿದ್ದಿರಲ್ಲವೇ? ಆದರೆ ಇಂದು ಅಲ್ಲಾಹನು, 'ಸ್ವರ್ಗದಲ್ಲಿ ಪ್ರವೇಶಿಸಿರಿ. ನಿಮಗೆ ಯಾವ ಭಯವೂ ಇಲ್ಲ, ವ್ಯಥೆಯೂ ಇಲ್ಲ' ಎಂದು ಹೇಳಿರುವುದು ಇವರೊಡನೆಯೇ ಅಲ್ಲವೇ?"

(ಅಲ್ ಅಅ್‌ರಾಫ್: 49)

ಸೂಕ್ತ ಸಂದರ್ಭದಲ್ಲಿ ಅಲ್ಲಾಹನು ಇವರನ್ನೂ ಸ್ವರ್ಗಕ್ಕೆ ಪ್ರವೇಶಗೊಳಿಸುತ್ತಾನೆ.

ಶಿಫಾರಸುಗಳು

ಹೀಗೆ, ಸೇತುವೆ ದಾಟಿದವರೆಲ್ಲರೂ ಸ್ವರ್ಗ ಸೇರಿದರು. ಆದರೆ ಯಾವುದೋ ಒಂದು ಕಳವಳ ಇನ್ನೂ ಉಳಿದಿದೆ. ನಮ್ಮ ಕೆಲವು ಸ್ವಂತ ಸಹೋದರರು ಸೇತುವೆ ದಾಟುವಾಗ ಹಾಗೂ ಇತರ ಸಂದರ್ಭಗಳಲ್ಲಿ ನರಕಕ್ಕೆ ಬಿದ್ದಿದ್ದಾರಲ್ಲವೇ. ಅವರ ನೆನಪು ಈಗ ಕಾಡುತ್ತಿದೆ. ಅದೋ ಅವರು ಅಲ್ಲಾಹನೊಡನೆ ಹೇಳುತ್ತಾರೆ, "ನಮ್ಮ ಪ್ರಭೂ! ಅವರು ನಮ್ಮಂತೆಯೇ ನಮಾಝ್, ಉಪವಾಸ, ಹಜ್ಜ್ ಇತ್ಯಾದಿಗಳನ್ನು ನಿರ್ವಹಿಸುತ್ತಿದ್ದರು. ಅವರು ನಮ್ಮ ಸಹೋದರರು..." ಆ ಸಹೋದರರನ್ನು ಕಾಪಾಡಲಿಕ್ಕಾಗಿ ಅವರು ಬಹಳ ಬಲವಾಗಿ ವಾದಿಸುತ್ತಾರೆ. ಆ ಕುರಿತು ಪ್ರವಾದಿ(ಸ) ಹೀಗೆ ಹೇಳಿದ್ದಾರೆ, "ಇಂದು ಬಯಕೆಯ ಈಡೇರಿಕೆಗಾಗಿ ನೀವು ಅಲ್ಲಾಹನೊಡನೆ ಪ್ರಾರ್ಥಿಸುವುದಕ್ಕಿಂತ ಎಷ್ಟೋ ಪ್ರಬಲವಾಗಿ ಅಂದು ಕಿಯಾಮತ್ ದಿನ ವಿಶ್ವಾಸಿಗಳು, ನರಕದಲ್ಲಿ ಬಿದ್ದ ತಮ್ಮ ಸಹೋದರರಿಗಾಗಿ ಅಲ್ಲಾಹನೊಡನೆ ಪ್ರಾರ್ಥಿಸುವರು." **(ಮುಸ್ಲಿಮ್)**

ಆಗ ಅಲ್ಲಾಹನಿಂದ ನಿಮಗೆ ಪರಿಚಯವಿರುವವರನ್ನು ನರಕದಿಂದ ಹೊರ ಹಾಕಿ ಕೊಳ್ಳಿರಿ ಎಂಬ ಆಜ್ಞೆ ದೊರೆಯುತ್ತಿದೆ. ಅಷ್ಟರಲ್ಲಿ, ಆ ನರಕದಲ್ಲಿ ಬಿದ್ದವರ ರೂಪಗಳು ಬೆಂಕಿಯಿಂದ ಸುರಕ್ಷಿತವಾಗುತ್ತವೆ... ಹೀಗೆ ಅನೇಕ ಮಂದಿಯನ್ನು ಅವರು ಹೊರ ಹಾಕುತ್ತಾರೆ. ಅವರ ಮೊಣಕಾಲಿನ ಅರ್ಧದ ವರೆಗೂ ಮೊಣಗಂಟಿ ನವರೆಗೂ ಬೆಂಕಿ ಹಿಡಿದಿರುವುದು. ಅನಂತರ ಅವರು ಪ್ರಭುವಿನ ಬಳಿ ಹೋಗಿ ಹೇಳುತ್ತಾರೆ, "ನೀನು ಅನುಮತಿ ನೀಡಿದವರ ಪೈಕಿ ಯಾರೂ ಅಲ್ಲಿ ಉಳಿದಿಲ್ಲ." ಆಗ ಅಲ್ಲಾಹ್ ಹೇಳುತ್ತಾನೆ, "ನೀವು ಪುನಃ ಅಲ್ಲಿಗೆ ಹೋಗಿ ಹೃದಯದಲ್ಲಿ ಒಂದು ದೀನಾರಿನಷ್ಟು ಒಳಿತಿರುವ ಎಲ್ಲರನ್ನೂ ಹೊರ ಹಾಕಿರಿ." ಅವರು ಹೋಗಿ ಪುನಃ ಅನೇಕ ಮಂದಿಯನ್ನು ಹೊರ ಹಾಕಿ ಪ್ರಭುವಿನ ಬಳಿ ಹೋಗಿ ಹೇಳುತ್ತಾರೆ, "ಪ್ರಭೂ! ಇನ್ನು ಅಲ್ಲಿ ನೀನು ಬಯಸಿರುವಂತಹ ಯಾರೂ ಇಲ್ಲ." ಪುನಃ ಪ್ರಭು ಹೇಳುತ್ತಾನೆ, "ನೀವು ಅಲ್ಲಿಗೆ ಮರಳಿ ಹೋಗಿರಿ. ಅನಂತರ ಹೃದಯದಲ್ಲಿ ಅರ್ಧ ದೀನಾರಿನಷ್ಟಾದರೂ ಒಳಿತಿರುವವ ರನ್ನು ಹೊರ ಹಾಕಿರಿ." ಅವರು ಪುನಃ ಹೋಗಿ ಅನೇಕ ಮಂದಿಯನ್ನು ಹೊರ ಹಾಕಿ, ಅಲ್ಲಾಹನ ಬಳಿ ಮರಳಿ ಹೇಳುತ್ತಾರೆ, "ನೀನು ಸೂಚಿಸಿದಂತಹ ಯಾರೊಬ್ಬರೂ ಈಗ ಅಲ್ಲಿ ಉಳಿದಿಲ್ಲ." ಪ್ರಭು ಹೇಳುತ್ತಾನೆ, "ನೀವು ಪುನಃ ಹೋಗಿ ಹೃದಯದಲ್ಲಿ ಅಣು ಗಾತ್ರದಷ್ಟು ಒಳಿತಿರುವವರನ್ನು ಹೊರ ಹಾಕಿರಿ." ಹೀಗೆ ಪುನಃ ಅನೇಕ ಮಂದಿಯನ್ನು ಹೊರ ಹಾಕಿ ಅವರು ಹೇಳುತ್ತಾರೆ, "ಪ್ರಭೂ! ಇನ್ನು ಯಾವೊಂದು ರೀತಿಯ ಒಳಿತನ್ನೂ ನಾವು ಅಲ್ಲಿ ಉಳಿಸಿಲ್ಲ, (ನಾನು ಹೇಳಿದ ಈ ವಾರ್ತೆಯಿಂದ ನಿಮಗೆ ನಂಬಿಕೆಯಾಗ ದಿದ್ದರೆ, ನಿಶ್ಚಯವಾಗಿಯೂ ಅಲ್ಲಾಹ್ ಅಣುವಿನಷ್ಟೂ ಅನ್ಯಾಯವೆಸಗುವುದಿಲ್ಲ, ಅಣುಗಾತ್ರ ಒಳಿತಿದ್ದರೂ ಅವನು ಅದನ್ನು ಇಮ್ಮಡಿಗೊಳಿಸುತ್ತಾನೆ. ತನ್ನ ವತಿಯಿಂದ ಶ್ರೇಷ್ಠವಾದ ಪ್ರತಿಫಲವನ್ನು ಆತನು ನೀಡುತ್ತಾನೆ ಎಂಬ ಕುರ್‌ಆನ್ ವಾಕ್ಯವನ್ನು ಓದಿ ನೋಡಿರೆಂದು ಅಬೂ ಸಈದ್ ಹೇಳುತ್ತಿದ್ದರು.) (ಮುಸ್ಲಿಮ್)

ಇವರು ಈ ತನಕ ತಮಗೆ ಪರಿಚಯವಿರುವವರನ್ನು ಮಾತ್ರ ಹೊರ ತಂದಿರುವರು ಎಂಬುದು ಗಮನಾರ್ಹ. ನರಕದಲ್ಲಿ ಇನ್ನೂ ಧಾರಾಳ ಮಂದಿಯಿದ್ದಾರೆ. ಸಹೋದರರು ನರಕದಲ್ಲಿರುವ ಬಗ್ಗೆ ಪ್ರವಾದಿ(ಸ) ಅತ್ಯಧಿಕ ಕಳವಳಗೊಳ್ಳುವರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ. ಅದೋ ಪ್ರವಾದಿಯವರು(ಸ) ಅಲ್ಲಾಹನ ಮುಂದೆ ಸಾಷ್ಟಾಂಗ ವೆರಗುತ್ತಾರೆ. ಎಷ್ಟು ಕಾಲ? ಅಲ್ಲಾಹನೇ ಬಲ್ಲ, ತರುವಾಯ ಆಜ್ಞೆಯಾಗುತ್ತದೆ. "ಮುಹಮ್ಮದ್! ತಲೆಯೆತ್ತಿರಿ, ಹೇಳಿರಿ ಆಲಿಸುತ್ತೇನೆ, ಕೇಳಿರಿ ಕೊಡುತ್ತೇನೆ, ಶಿಫಾರಸು ಮಾಡಿರಿ ಸ್ವೀಕರಿಸುತ್ತೇನೆ." ಅನಂತರ ನಾನು ತಲೆಯೆತ್ತುತ್ತೇನೆ. ಪ್ರಭು ಆಗ ನನಗೆ

ಕಲಿಸಿದ ರೀತಿಯಲ್ಲಿ ನಾನು ಆತನನ್ನು ಪ್ರಶಂಸಿಸುತ್ತೇನೆ. ಅನಂತರ ನಾನು ಶಿಫಾರಸು ಮಾಡುತ್ತೇನೆ. ಆಗ ಆತನು ನನಗೊಂದು ಮಿತಿಯನ್ನು ನಿರ್ಣಯಿಸುತ್ತಾನೆ. ಅದಕ್ಕೆ ಒಳಪಟ್ಟವರೆಲ್ಲರನ್ನೂ ನಾನು ನರಕದಿಂದ ವಿಮೋಚಿಸಿ ಸ್ವರ್ಗಕ್ಕೆ ಪ್ರವೇಶಗೊಳಿಸುತ್ತೇನೆ. ಆ ಬಳಿಕ ನಾನು ಪುನಃ ಹೋಗಿ ಅಲ್ಲಾಹನ ಮುಂದೆ ಸಾಷ್ಟಾಂಗವೆರಗುತ್ತೇನೆ. ಆತನಿಚ್ಛಿಸುವ ಕಾಲದ ತನಕ ನಾನು ಸಾಷ್ಟಾಂಗದಲ್ಲಿಯೇ ಇರುತ್ತೇನೆ. ತರುವಾಯ ಹೇಳಲಾಗುತ್ತದೆ, "ತಲೆಯೆತ್ತಿರಿ, ಮುಹಮ್ಮದ್‌ರೇ ಹೇಳಿರಿ ಆಲಿಸುತ್ತೇನೆ, ಕೇಳಿರಿ ಕೊಡುತ್ತೇನೆ, ಶಿಫಾರಸು ಮಾಡಿರಿ ಸ್ವೀಕರಿಸುತ್ತೇನೆ." ನಾನು ತಲೆಯೆತ್ತಿ ಆತ ಕಲಿಸಿದ ರೀತಿಯಲ್ಲಿ ಆತನನ್ನು ಹೊಗಳಿ ಪ್ರಶಂಸೆ ಮಾಡುತ್ತೇನೆ. ಆಗಲೂ ಅತ ನನಗೊಂದು ಮಿತಿ ನಿರ್ಣಯಿಸುತ್ತಾನೆ. ಆ ಮಿತಿಯೊಳಗಿರುವ ಎಲ್ಲರನ್ನೂ ನಾನು ನರಕದಿಂದ ವಿಮೋಚನೆಗೊಳಿಸಿ ಸ್ವರ್ಗಕ್ಕೆ ಕಳುಹಿಸುತ್ತೇನೆ. ಹೀಗೆ ಮೂರನೆಯ ಅಥವಾ ನಾಲ್ಕನೆಯ ಬಾರಿ ನಾನು ಹೇಳುತ್ತೇನೆ, "ಪ್ರಭೂ! ಕುರ್‌ಆನಿನಲ್ಲಿ ತಡೆಹಿಡಿದಿರುವವರ ಹೊರತು, ಅರ್ಥಾತ್ ಶಾಶ್ವತ ವಾಸಕ್ಕೆ ವಿಧಿಸಿದವರ ಹೊರತು ಇನ್ನು ಯಾರೂ ಅಲ್ಲಿ ಉಳಿದಿಲ್ಲ."

(ಮುಸ್ಲಿಮ್)

ತನ್ಮಧ್ಯೆ, ಇತರ ಪ್ರವಾದಿಗಳೂ ದೇವಚರರೂ ಶಿಫಾರಸು ಮಾಡಿದ್ದಾರೆ. (ಲಾ ಇಲಾಹ ಇಲ್ಲಲ್ಲಾಹ್ ಎಂಬ ಪರಮ ಸತ್ಯವನ್ನು ಅಂಗೀಕರಿಸಿದ್ದರೂ ಅನೇಕ ಪಾಪ ಕೃತ್ಯಗಳನ್ನು ಮಾಡಿರುವುದರಿಂದ ನರಕಕ್ಕೆ ಬಿದ್ದಿರುವವರನ್ನು ಹೀಗೆ ಪಾರುಗೊಳಿಸ ಲಾಗುತ್ತಿದೆಯೆಂದು ಕೆಲವು ವರದಿಗಳಲ್ಲಿ ತಿಳಿಸಲಾಗಿದೆ.)

ಎಲ್ಲ ಮುಗಿದ ಬಳಿಕ ಅಲ್ಲಾಹ್ ಹೇಳುತ್ತಾನೆ: ದೇವಚರರು, ಪ್ರವಾದಿಗಳು ಮತ್ತು ವಿಶ್ವಾಸಿಗಳೆಲ್ಲರೂ ಶಿಫಾರಸು ಮಾಡಿ ಆಯಿತು. ಇನ್ನು ಕರುಣಾಳುಗಳಲ್ಲಿ ಮಹಾ ಕರುಣಾಳುವಾಗಿರುವವನ ಶಿಫಾರಸು ಮಾತ್ರ ಉಳಿದಿದೆ. ಅಂತೆಯೇ ಆತನು ನರಕದಿಂದ ಒಂದು ಹಿಡಿಯಷ್ಟು ಎತ್ತಿಕೊಳ್ಳುತ್ತಾನೆ. ಆ ಮೂಲಕ ಒಮ್ಮೆಯೂ ಯಾವೊಂದು ಒಳಿತನ್ನೂ ಮಾಡಿರದ ಅನೇಕ ಮಂದಿಯನ್ನು ಅಲ್ಲಿಂದ ಹೊರ ತೆಗೆಯುತ್ತಾನೆ. ಅವರು ಕಲ್ಲಿದ್ದಲಿನಂತಾಗಿ ಬಿಟ್ಟಿದ್ದಾರೆ. ಅನಂತರ ಅವರನ್ನು ಸ್ವರ್ಗದ ಮುಂಭಾಗದಲ್ಲಿರುವ 'ಜೀವನದಿ' ಎಂದು ಕರೆಯಲಾಗುವ ನದಿಗೆ ಹಾಕುತ್ತಾನೆ. ಆಗ ಅವರು ಪ್ರವಾಹದಿಂದ ಬಂದು ಸೇರಿದ ಕೆಸರಿನಲ್ಲಿ ಗಿಡ ಬೆಳೆಯುವಂತೆ ಮೇಲೇಳುತ್ತಾರೆ. (ಉತ್ತಮ ಸಾರವಿರುವುದರಿಂದ ಕ್ಷಿಪ್ರವಾಗಿ ಬೆಳೆಯುವುದೆಂದು ತಾತ್ಪರ್ಯ) ಬಂಡೆಕಲ್ಲು ಅಥವಾ ಮರದ ಬದಿಯಲ್ಲಿ ನೀವು ಅದನ್ನು ನೋಡಿರಬಹುದಲ್ಲವೇ. ಬಿಸಿಲು ಚೆನ್ನಾಗಿ ಬೀಳುವ ಸ್ಥಳದಲ್ಲಿ ಹಸಿರು ತುಂಬಿರುವುದು, ನೆರಳಿನಲ್ಲಿರುವುದು ಬಿಳಿಯಾಗಿರುತ್ತದೆ. (ಸಹಾಬಿಗಳು

ಹೇಳಿದರು, "ಪ್ರವಾದಿಗಳೇ! ನೀವು ಯಾವುದೋ ಕಣಿವೆಯಲ್ಲಿ ಸಂಚರಿಸುವಂತಿದೆ ಯಲ್ಲವೇ?") ಅವರು ಮುತ್ತುಗಳಂತೆ ಶುದ್ಧವಾಗಿ ಬೆಳೆಯುವರು. ಅವರ ಬೆನ್ನಿನಲ್ಲಿ ಮೊಹರುಗಳಿರುವುದು. ಸ್ವರ್ಗವಾಸಿಗಳು ಅದರಿಂದ ಅವರನ್ನು ಗುರುತಿಸುತ್ತಾರೆ. ಅವರು ಹೇಳುತ್ತಾರೆ: ಇವರು ಅಲ್ಲಾಹನ ವಿಶೇಷ ಅನುಗ್ರಹದಿಂದ (ಇತ್‌ಕಾ) ವಿಮೋಚನೆ ಪಡೆದವರಾಗಿದ್ದಾರೆ. ಮುಂಚಿತವಾಗಿ ಯಾವೊಂದು ಒಳಿತನ್ನೂ ಮಾಡದೆ, ಯಾವೊಂದು ಕರ್ಮವನ್ನೂ ಪಾಲಿಸದೆ ಅಲ್ಲಾಹನು ಸ್ವರ್ಗದಲ್ಲಿ ಪ್ರವೇಶಗೊಳಿಸಿದ ವಿಮೋಚಿತರು. ಅಲ್ಲಾಹ್ ಅವರೊಡನೆ ಹೇಳುತ್ತಾನೆ, "ನೀವು ಸ್ವರ್ಗದಲ್ಲಿ ಪ್ರವೇಶಿಸಿರಿ. ನೀವು ನೋಡಿದ್ದೆಲ್ಲವೂ ನಿಮಗಾಗಿದೆ." ಆಗ ಅವರು ಹೇಳುತ್ತಾರೆ, "ಪ್ರಭೂ! ಲೋಕದಲ್ಲಿ ನೀನು ಬೇರೆ ಯಾರಿಗೂ ನೀಡಿಲ್ಲದವುಗಳನ್ನು ನಮಗೆ ನೀಡಿರುವೆಯಲ್ಲಾ?" ಅಲ್ಲಾಹ್ ಹೇಳುತ್ತಾನೆ, "ಇದಕ್ಕಿಂತ ಎಷ್ಟೋ ಶ್ರೇಷ್ಠವಾದುದು ನನ್ನ ಬಳಿಯಿದೆ." "ಇದಕ್ಕಿಂತ ಶ್ರೇಷ್ಠವಾದುದೇ? ಅದೇನಾಗಿರಬಹುದು?" "ನನ್ನ ಕ್ಷಮೆ. ಇನ್ನು ನಾನು ನಿಮ್ಮೊಂದಿಗೆ ಎಂದೂ ಕೋಪಿಸುವುದಿಲ್ಲ." **(ಮುಸ್ಲಿಮ್)**

ಕಟ್ಟಕಡೆಗೆ ಸ್ವರ್ಗ ಪ್ರವೇಶಿಸುವವ

ಇನ್ನೊಂದು ಪ್ರವಾದಿ ವಚನ ಹೀಗಿದೆ: ಕಟ್ಟ ಕಡೆಗೆ ಸ್ವರ್ಗ ಪ್ರವೇಶಿಸುವ ವ್ಯಕ್ತಿಯ ಬಗ್ಗೆ ಹೇಳುತ್ತೇನೆ. ಆತ ಎಡವಿ ಬೀಳುತ್ತಾ ತೆವಳುತ್ತಾ ನಡೆದು ಬರುತ್ತಿದ್ದಾನೆ. ಕೆಲವೊಮ್ಮೆ ಮುಗ್ಗರಿಸಿ ಬೀಳುತ್ತಾನೆ. ಕೆಲವೊಮ್ಮೆ ಬೆಂಕಿಯು ಅವನನ್ನು ಕರಟಿಸುತ್ತಿದೆ. ಹೀಗೆ ಆ ಸೇತುವೆಯನ್ನು ದಾಟಿ, ಆ ಬದಿಗೆ ತಲಪಿದಾಗ ಅದರತ್ತ (ನರಕ) ತಿರುಗಿ ನೋಡಿ ಹೇಳುತ್ತಾನೆ, "ನಿನ್ನಿಂದ ನನ್ನನ್ನು ರಕ್ಷಿಸಿದ ಅಲ್ಲಾಹ್ ಮಹಾ ಅನುಗ್ರಹ ಸಂಪನ್ನನೇ ಸರಿ. ಮುಂಗಾಮಿಗಳಿಗೂ ಹಿಂಗಾಮಿಗಳಿಗೂ ನೀಡಿದ ಮಹಾ ಅನುಗ್ರಹವನ್ನು ಆತನು ನನಗೆ ದಯಪಾಲಿಸಿದ್ದಾನೆ." ಆಗ ಆತನಿಗೆ ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಮರ ಬೆಳೆದಿರುವಂತೆ ತೋರಿಸಲಾಗುವುದು. ಆತ ಹೇಳುತ್ತಾನೆ, "ಪ್ರಭೂ! ನನ್ನನ್ನು ಆ ಮರದ ಬಳಿಗೆ ತಲಪಿಸು. ನಾನು ಅದರ ನೆರಳಿನಲ್ಲಿ ವಿಶ್ರಮಿಸಿ ಅದರ ರಸ ಕುಡಿಯಬಹುದಲ್ಲವೇ?" ಅಲ್ಲಾಹ್ ಹೇಳುತ್ತಾನೆ, "ಮಾನವಾ, ನಾನು ಹಾಗೆ ಮಾಡಿದರೆ ನೀನು ಬೇರೆಯೂ ಕೇಳುವುದಿಲ್ಲವೇ?" ಆತ ಹೇಳುತ್ತಾನೆ, "ಇಲ್ಲ ಪ್ರಭೂ! ಬೇರೇನನ್ನೂ ಕೇಳುವುದಿಲ್ಲ" ಎಂದು ಆತ ಪ್ರಭುವಿಗೆ ಮಾತು ಕೊಡುತ್ತಾನೆ. ಆದರೆ ಅದಕ್ಕಿಂತ ವಿಶೇಷವಾದುದನ್ನು ಆತ ನೋಡಲಿದ್ದಾನೆ. ಆದ್ದರಿಂದ ಈ ಮಾತು ಪಾಲಿಸಲು ಸಾಧ್ಯವಿಲ್ಲವೆಂದು ಅಲ್ಲಾಹನಿಗೆ ತಿಳಿದಿದೆ. ಅಂತೆಯೇ ಆತನನ್ನು ಆ ಮರದ ಬುಡಕ್ಕೆ

ತಲಪಿಸಲಾಗುವುದು. ಆತ ನೆರಳಿನಲ್ಲಿ ವಿಶ್ರಮಿಸಿ ಅದರ ರಸ ಕುಡಿಯುತ್ತಾನೆ.

ಅದೋ ಆಗ ಇದಕ್ಕಿಂತ ಉತ್ತಮವಾದ ಇನ್ನೊಂದು ಮರ ದೂರದಲ್ಲಿ ಗೋಚರಿಸುತ್ತದೆ. ಅದನ್ನು ನೋಡಿ ಆತ ಹೇಳುತ್ತಾನೆ, "ನನ್ನನ್ನು ಒಮ್ಮೆ ಅಲ್ಲಿಗೆ ತಲಪಿಸು. ನಾನು ನೀರು ಕುಡಿದು ನೆರಳು ಅನುಭವಿಸುತ್ತೇನೆ. ಬೇರೇನನ್ನೂ ನಾನು ಕೇಳುವುದಿಲ್ಲ." ಅಲ್ಲಾಹ್ ಹೇಳುತ್ತಾನೆ, "ನೀನು ಬೇರೇನನ್ನೂ ಕೇಳುವುದಿಲ್ಲವೆಂದು ಈ ಮೊದಲೇ ಮಾತು ಕೊಟ್ಟಿರುವೆಯಲ್ಲವೇ?" ಆ ಮರದ ಬುಡಕ್ಕೆ ತಲಪಿಸಿದರೂ ನೀನು ಬೇರೆ ಏನನ್ನಾದರೂ ಕೇಳಬಹುದು. ಏನನ್ನೂ ಕೇಳುವುದಿಲ್ಲವೆಂದು ಆತ ಪುನಃ ಮಾತು ಕೊಡುತ್ತಾನೆ. ಇದು ಹುಸಿ ಮಾತು. ಆತ ಅದಮ್ಯವಾದ ದೃಶ್ಯವನ್ನು ನೋಡಲಿರುವನೆಂದು ಅಲ್ಲಾಹ್ ಹೇಳುತ್ತಾನೆ. ಅಂತೆಯೇ ಆತನನ್ನು ಆ ಮರದ ಬಳಿಗೆ ತಲಪಿಸುತ್ತಾನೆ. ಆತ ನೆರಳಿನಲ್ಲಿ ಕುಳಿತು ನೀರು ಕುಡಿದು ಸಂತೋಷಪಡುತ್ತಿರುವಾಗ ಅದೋ ಸನಿಹದಲ್ಲಿ ಇನ್ನೊಂದು ಮರ. ಮೊದಲಿನದ್ದಕ್ಕಿಂತ ಉತ್ತಮವಾಗಿದೆ. ಮಾತ್ರವಲ್ಲ ಸ್ವರ್ಗದ ದ್ವಾರದ ಬಳಿಯಲ್ಲಿಯೇ ಬೆಳೆದು ನಿಂತಿದೆ. ಆತ ಪುನಃ ಹೇಳುತ್ತಾನೆ, "ಪ್ರಭೂ! ಅಲ್ಲಿಗೆ ಕಳುಹಿಸು. ಆ ನೆರಳಿನಲ್ಲಿ ಇರುತ್ತೇನೆ... ಬೇರೇನೂ ಕೇಳುವುದಿಲ್ಲ." ಆಗ ಅಲ್ಲಾಹ ಕೇಳುತ್ತಾನೆ. "ಬೇರೇನನ್ನೂ ಕೇಳುವುದಿಲ್ಲವೆಂದು ನೀನು ಹೇಳಿರುವೆಯಲ್ಲಾ!" ಆತ ಹೇಳುತ್ತಾನೆ, "ಹೌದು, ಹೇಳಿದ್ದೆ ಪ್ರಭೂ! ಆದರೆ ಇದೊಂದೇ... ಬೇರೇನನ್ನೂ ಕೇಳುವುದಿಲ್ಲ..."

ಮಾತು ಕೊಡುವುದೆಲ್ಲಾ ವ್ಯರ್ಥ. ಆತ ಅದಕ್ಕಿಂತ ವಿಶೇಷವಾದುದನ್ನು ನೋಡಲಿದ್ದಾನೆ. ಹಾಗೆಯೇ ಆತನನ್ನು ಆ ಮರದ ಬಳಿಗೆ ತಲಪಿಸಲಾಗುವುದು. ಅಲ್ಲಿಗೆ ತಲಪಿದಾಗ ಆತನಿಗೆ ಸ್ವರ್ಗವಾಸಿಗಳ ಧ್ವನಿ ಕೇಳಿಸುತ್ತದೆ. ಆಗ ಆತ ವಿನಂತಿಸುತ್ತಾನೆ, "ಪ್ರಭು! ನನ್ನನ್ನೊಮ್ಮೆ ಅದರೊಳಗೆ ಕಳುಹಿಸು." ಆಗ ಅಲ್ಲಾಹ್ ಹೇಳುತ್ತಾನೆ, "ಮಾನವಾ! ನಿನ್ನ ಈ ಅಪೇಕ್ಷೆಗಳಿಂದ ಮುಕ್ತನಾಗಲು ಇನ್ನೇನು ಮಾಡಬೇಕು? ಭೂಲೋಕವನ್ನೂ ಅದರೊಂದಿಗೆ ಪುನಃ ಅಷ್ಟೇ ನೀಡಿದರೆ ನಿನಗೆ ತೃಪ್ತಿಯಾದೀತೇ?" ಅದನ್ನು ಕೇಳಿ ಆತ ಹೇಳುತ್ತಾನೆ, "ಪ್ರಭೂ! ನೀನು ನನ್ನನ್ನು ಗೇಲಿ ಮಾಡುತ್ತಿರುವೆಯಾ? ನೀನು ಸರ್ವಲೋಕಗಳ ಪ್ರಭುವಾಗಿರುವೆ!"

ಈ ಕತೆ ಹೇಳಿ ಇಬ್ನ್ ಮಸ್‌ಊದ್ ನಕ್ಕು ಬಿಟ್ಟರು. "ನಾನು ನಕ್ಕದ್ದೇಕೆಂದು ನೀವು ಪ್ರಶ್ನಿಸಿಲ್ಲವೇಕೆ?" ಎಂದು ಅವರು ಸಭಿಕರೊಡನೆ ಕೇಳಿದರು. "ಸರಿ, ನೀವು ನಕ್ಕಿದ್ದೇಕೆ?" ಸಭಿಕರು ಕೇಳಿದರು. ಇಬ್ನು ಮಸ್‌ಊದ್ ಹೇಳಿದರು: ಈ ಕತೆ ಹೇಳಿ ಪ್ರವಾದಿ

ಯವರಿಗೆ(ಸ) ನಗು ಬಂತು. ನೀವು ನಕ್ಕದ್ದೇಕೆಂದು ಸಹಾಬಿಗಳು ಕೇಳಿದರು. ಪ್ರವಾದಿ(ಸ) ಹೇಳಿದರು, "ನೀನು ನನ್ನನ್ನು ಗೇಲಿ ಮಾಡುತ್ತಿರುವೆಯಾ?" ಎಂದು ಕೇಳಿದಾಗ ಸರ್ವ ಲೋಕಗಳ ಪ್ರಭು ನಕ್ಕ. ನನಗೂ ನಗು ಬಂತು. ತರುವಾಯ ಪ್ರಭು ಉತ್ತರಿಸುತ್ತಾನೆ, "ನಾನು ನಿನ್ನನ್ನು ಗೇಲಿ ಮಾಡಿಲ್ಲ, ನಾನು ಇಚ್ಛಿಸಿದ್ದನ್ನೆಲ್ಲ ಮಾಡುವ ಶಕ್ತಿವಂತನಲ್ಲವೇ." **(ಮುಸ್ಲಿಮ್)**

ಇನ್ನು ಸ್ವರ್ಗ ಪ್ರವೇಶಕ್ಕೆ ಯಾರೂ ಉಳಿದಿಲ್ಲ, ಅಲ್‌ರಾಫ್‌ನವರೂ ಈಗಾಗಲೇ ಪ್ರವೇಶಿಸಿರಬಹುದು. ಕೊನೆಗೆ ನೋಡುವಾಗ ಸ್ವರ್ಗದಲ್ಲಿ ಅರ್ಧಾಂಶ, ಪ್ರವಾದಿ ಮುಹಮ್ಮದ್‌ರ(ಸ) ಅನುಯಾಯಿಗಳೇ ತುಂಬಿರುವಂತೆ ಭಾಸವಾಗುತ್ತದೆ. ಪ್ರವಾದಿ(ಸ) ಒಮ್ಮೆ ಕೇಳಿದರು, "ನೀವು ಸ್ವರ್ಗದವರಲ್ಲಿ ಕಾಲುಭಾಗವಿದ್ದರೆ ನಿಮಗೆ ತೃಪ್ತಿಯಾದೀತೇ?" ಆಗಲೂ ನಾವು ಸಾಮೂಹಿಕವಾಗಿ 'ತಕ್ಬೀರ್' ಹೇಳಿದೆವು. ಪುನಃ ಕೇಳಿದರು, "ನೀವು 1/3 ಭಾಗವಿದ್ದರೆ?" ಆಗಲೂ ನಾವು 'ತಕ್ಬೀರ್' ಹೇಳಿದೆವು. ತರುವಾಯ ಪ್ರವಾದಿ(ಸ) ಹೇಳಿದರು, "ನೀವು ಅರ್ಧಾಂಶವಿರಬಹುದೆಂದು ನಾನು ನಿರೀಕ್ಷಿಸುತ್ತೇನೆ. ಏನಿದ್ದರೂ ಈ ಬಗ್ಗೆ ನಾನು ಅನಂತರ ಹೇಳುತ್ತೇನೆ. ಆದರೆ ಸತ್ಯನಿಷೇಧಿಗಳಿಗೆ ಹೋಲಿಸಿದರೆ, ಮುಸ್ಲಿಮರು ಒಟ್ಟಾರೆ ಒಂದು ಬಿಳಿ ಹೋರಿಯ ಮೇಲಿರುವ ಕಪ್ಪು ರೋಮದಂತಿರುತ್ತಾರೆ ಅಥವಾ ಕಪ್ಪು ಹೋರಿಯಲ್ಲಿರುವ ಬಿಳಿ ರೋಮದಂತೆ."

ಕುಟುಂಬ ಸಮ್ಮಿಲನ

ಉನ್ನತ ಸುಖ ಸೌಲಭ್ಯಗಳು ದೊರೆತಾಗ ಮಾನವರು ತಮ್ಮ ಮಾತಾಪಿತರು, ಪತ್ನಿ ಮಕ್ಕಳನ್ನು ಸ್ಮರಿಸುವುದು ಸಹಜ. ಸ್ವರ್ಗ ಪ್ರವೇಶದಿಂದ ಅದೋ ಆ ಸ್ಮರಣೆ ಮರುಕಳಿಸುತ್ತದೆ. ಆದರೆ ಕರುಣಾಮಯನಾದ ಅಲ್ಲಾಹನು ಈ ವಿಷಯವನ್ನೂ ಮೊದಲೇ ಗಮನಿಸಿದ್ದಾನೆ. ಅವರೆಲ್ಲರನ್ನು ಒಟ್ಟುಗೂಡಿಸಲಾಗುವುದೆಂದು ಆತ ನಮಗೆ ತಿಳಿಸಿದ್ದಾನೆ. ಚಿರವಾಸದ ಆ ಸ್ವರ್ಗದಲ್ಲಿ ಅವರು ಮಾತ್ರವಲ್ಲದೇ ಅವರ ಮಾತಾಪಿತರು, ಪತ್ನಿ-ಮಕ್ಕಳಲ್ಲಿ ಉತ್ತಮವಾಗಿ ಬಾಳಿದವರೂ ಅವರ ಜತೆಯಲ್ಲಿರುತ್ತಾರೆ.

"ಸ್ವತಃ ಅವರೂ ಅವರ ಪೂರ್ವಿಕರೂ ಅವರ ಪತ್ನಿಯರ ಹಾಗೂ ಅವರ ಸಂತತಿಗಳ ಪೈಕಿ ಸಜ್ಜನರಾಗಿರುವವರೂ ಅವುಗಳಲ್ಲಿ ಪ್ರವೇಶಿಸುವರು." **(ಅರ್‌ರಅ್‌ದ್: 23)**

ಸಂತಾನಗಳಿಗೆ ಅಲ್ಲಿ ವಿಶೇಷ ಉಪಚಾರವೂ ದೊರೆಯುವುದು. ತಂದೆಯಂದಿರನ್ನು ಸಂತಾನಗಳು ವಿಶ್ವಾಸದಲ್ಲಿ ಕಿಂಚಿತ್ತಾದರೂ ಅನುಗಮಿಸಿದ್ದರೆ ತಂದೆಯಂದಿರ ಜೊತೆ ಅವರನ್ನೂ ಉನ್ನತಗೊಳಿಸಲಾಗುವುದು. ವಿಶ್ವಾಸ ಮತ್ತು ಕರ್ಮಗಳ ಆಧಾರದಲ್ಲಿ

ತಂದೆಯಂದಿರಿಗೆ ದೊರೆತ ಉನ್ನತ ಸ್ಥಾನಕ್ಕೆ ಈ ಸಂತಾನಗಳು ಅರ್ಹರಾಗಿಲ್ಲದಿದ್ದರೂ ಅಲ್ಲಾಹನು ವಿಶೇಷ ಔದಾರ್ಯದಿಂದ ಸಂತಾನಗಳನ್ನು ಆ ಉನ್ನತಿಗೆ ತಲಪಿಸುತ್ತಾನೆ, ತಂದೆಯಂದಿರ ಸಂತೋಷಕ್ಕಾಗಿ. (ಇದು ಪ್ರೌಢ ಮಕ್ಕಳಿಗೆ ಸಂಬಂಧಿಸಿದ್ದೆಂಬುದು ಗಮನಾರ್ಹ. ಇತರರು ಎಲ್ಲ ರೀತಿಯಿಂದಲೂ ಸ್ವರ್ಗವಾಸಿಗಳಾದ ತಂದೆ ತಾಯಂದಿರ ಜತೆಯಿರುತ್ತಾರೆ.) "ಸತ್ಯವಿಶ್ವಾಸಿಗಳನ್ನು ವಿಶ್ವಾಸದ ಯಾವ ಮಟ್ಟದಲ್ಲಾದರೂ ಅವರನ್ನು ಅನುಸರಿಸಿದ ಅವರ ಸಂತಾನಗಳನ್ನೂ ನಾವು ಸ್ವರ್ಗದಲ್ಲಿ ಅವರೊಂದಿಗೆ ಸೇರಿಸುವೆವು ಮತ್ತು ಅವರ ಕರ್ಮದಲ್ಲೇನೂ ಅವರಿಗೆ ಕೊರತೆ ಮಾಡಲಾರೆವು." **(ಅತ್ತೂರ್: 21)**

ಅಂತೆಯೇ ದೇವಚರರು ಎಲ್ಲ ದ್ವಾರಗಳಿಂದಲೂ ಗುಂಪುಗುಂಪಾಗಿ ಬಂದು ಆ ಎಲ್ಲ ಕುಟುಂಬಗಳನ್ನು, "ನಿಮಗೆ ರಕ್ಷಣೆಯಿರಲಿ, ಇನ್ನು ಹೆದರಬೇಕಾಗಿಲ್ಲ, ನಿಮಗೆ ರಕ್ಷಣೆಯೇ ಇರುವುದು, ಇದು ಭೂಲೋಕದಲ್ಲಿ ನೀವು ಸಹನೆಯಿಂದ ವರ್ತಿಸಿದ್ದರ ಫಲ. ಈ ಲೋಕ ಎಷ್ಟು ಉತ್ತಮವಾಗಿದೆ" ಎಂದು ಅಭಿನಂದಿಸುತ್ತಾರೆ. **(ಅರ್ರಅ್‌ದ್: 24)**

ವಿಶ್ವಾಸಿಗಳನ್ನು ಅವರ ಕುಟುಂಬವನ್ನೂ ಹೀಗೆ ಒಟ್ಟು ಸೇರಿಸಲಿಕ್ಕಾಗಿ, ಅಲ್ಲಾಹನ ಗದ್ದುಗೆಯನ್ನು ಹೊತ್ತ ದೇವಚರರು ಅಲ್ಲಾಹನೊಡನೆ ನಿರಂತರ ಪ್ರಾರ್ಥಿಸುತ್ತಲಿದ್ದಾರೆಂಬ ಸತ್ಯವನ್ನು ಇಲ್ಲಿ ಮರೆಯಬಾರದು. "ನಮ್ಮ ಪ್ರಭೂ, ನೀನು ಅವರಿಗೆ ವಾಗ್ದಾನ ಮಾಡಿ ರುವ ಶಾಶ್ವತವಾದ ಸ್ವರ್ಗೋದ್ಯಾನ ಗಳಲ್ಲಿ ಅವರನ್ನು ಪ್ರವೇಶಗೊಳಿಸು. ಅವರ ಪಿತರ, ಪತ್ನಿಯರ ಮತ್ತು ಮಕ್ಕಳ ಪೈಕಿ ಸಜ್ಜನರಾದವರನ್ನು ಕೂಡಾ ಅವರೊಂದಿಗೆ ಅಲ್ಲಿಗೆ ತಲಪಿಸು. ನಿಶ್ಚಯವಾಗಿಯೂ ನೀನು ಪ್ರಬಲನೂ ಯುಕ್ತಿವಂತನೂ ಆಗಿರುವೆ."

(ಅಲ್ ಮೂಮಿನ್: 8)

ಹೃದಯ ಶುದ್ಧೀಕರಣ

ಇನ್ನೊಂದು ಪ್ರಮುಖ ವಿಷಯ. ಭೂಲೋಕ ಜೀವನದಲ್ಲಿ ಅವರ ಮಧ್ಯೆ ಏನಾದರೂ ತಪ್ಪು ತಿಳುವಳಿಕೆ, ವಿರಸ, ಸ್ವಲ್ಪ ಮಟ್ಟಿನ ಅಸೂಯೆ ದ್ವೇಷಗಳಿದ್ದಿರಬಹುದು. ಹೀಗಿರುತ್ತಾ ತನ್ನನ್ನು ಟೀಕಿಸಿದ, ತನ್ನ ಮೇಲೆ ಆರೋಪ ಹೊರಿಸಿದ, ತನ್ನ ತೇಜೋವಧೆಗೆ ಪ್ರಯತ್ನಿಸಿದ, ತನ್ನೊಡನೆ ಜಗಳಾಡಿದ ಆ ಜನರ ಜತೆ ನಾನು ಹೇಗೆ ತಾನೇ ಸ್ವರ್ಗದಲ್ಲಿ ರುವುದು? ಇದು ಮನಸ್ಸಿಗೆ ಚುಚ್ಚುವುದಿಲ್ಲವೇ? ಎಂದು ಕೆಲವರಾದರೂ ಭಾವಿಸ ಬಹುದು. ಆದರೆ ಅಲ್ಲಾಹ್ ಅದಕ್ಕೆ ಪರಿಹಾರ ಹುಡುಕಿದ್ದಾನೆ. ಸ್ವರ್ಗದಲ್ಲಿ ಪ್ರವೇಶಿಸು ವುದರೊಂದಿಗೆ ಎಲ್ಲರ ಹೃದಯಗಳಲ್ಲಿದ್ದ ಇಂತಹ ಎಲ್ಲ ಕೊಳೆಗಳನ್ನೂ ತೊಲಗಿಸಿ, ನಿರ್ಮಲ ಮತ್ತು ಪರಿಶುದ್ಧವಾದ ಸಹೋದರ ಭಾವವನ್ನು ಸ್ಥಾಪಿಸುತ್ತಾನೆ.

“ಅವರ ಹೃದಯಗಳಲ್ಲಿರಬಹುದಾದ ಅಲ್ಪ ಸ್ವಲ್ಪ ಕೇಡನ್ನು ನಾವು ತೆಗೆದು ಬಿಡುವೆವು. ಅವರು ಪರಸ್ಪರ ಸಹೋದರರಾಗಿ ಅಭಿಮುಖರಾಗಿ ಆಸನಗಳಲ್ಲಿ ಕುಳಿತು ಕೊಳ್ಳುವರು.” (ಅಲ್ ಹಿಜ್ರ್: 47)

ಈ ವಾಕ್ಯವನ್ನು ಓದಿದಾಗ ಒಮ್ಮೆ ಹ. ಅಲೀ(ರ) ಹೀಗೆ ಹೇಳಿದರು, “ಉಸ್ಮಾನ್, ತಲ್ಹಾ, ಝುಬೈರ್ ಮತ್ತು ನನ್ನ ಮಧ್ಯೆಯೂ ಅಲ್ಲಾಹನು ಈ ಶುದ್ಧೀಕರಣ ನಡೆಸುವನೆಂದು ನಾನು ನಿರೀಕ್ಷಿಸುತ್ತೇನೆ.” ಹೌದು ನಾವು ಕೂಡಾ ನಿರೀಕ್ಷಿಸೋಣ. ನಮ್ಮ ಸಾಮೂಹಿಕ ಜೀವನದಲ್ಲಿ ಅಲ್ಲಲ್ಲಿ ಅಂಟಿಕೊಂಡಿರುವ ಎಲ್ಲ ರೀತಿಯ ಕೊಳೆಗಳನ್ನೂ ಅಲ್ಲಾಹ್ ತೊಲಗಿಸಿ ನಿಷ್ಕಳಂಕ ಪ್ರೇಮ ಮತ್ತು ಸಹೋದರತೆಯನ್ನು ತುಂಬುವಂತಾಗಲಿ.

ಮಹಾ ಆಧಿಪತ್ಯ

ಹೀಗೆ ಅವರು ಸ್ವರ್ಗದಲ್ಲಿ ಪ್ರವೇಶಿಸಿ ಸ್ವರ್ಗದ ಕಾವಲುಗಾರರು ಹಾಗೂ ಇತರ ದೇವಚರರಿಂದ ಪ್ರಶಂಸೆ, ಅಭಿನಂದನೆ, ಶುಭಾಶಯಗಳನ್ನು ಪಡೆದ ಬಳಿಕ- ಅನೇಕ ಜೀವಂತ ಮುತ್ತುಗಳು, ಸ್ವರ್ಗ ಬಾಲಕರು ಅವರನ್ನು ಸುತ್ತುವರಿಯುತ್ತಾರೆ. ರೇಷ್ಮೆಯ ವರ್ಣಾಲಂಕೃತ ಉಡುಪು, ಸ್ವರ್ಣಾಭರಣ ಇತ್ಯಾದಿಗಳು ಅವರ ಕೈಗಳಲ್ಲಿವೆ. ಸೇವಾ ಸನ್ನದ್ಧರಾಗಿ ಅವರು ವಿನಯದಿಂದ, “ಇದನ್ನೊಮ್ಮೆ ಧರಿಸೋಣವಲ್ಲವೇ?” ಎಂದು ಕೇಳುತ್ತಾರೆ. ಧರಿಸಿದ ಕೂಡಲೇ ಅವರು ಪುನಃ, “ಅದೋ ಒಮ್ಮೆ ಅಲ್ಲಿಗೆ ಹೋಗೋಣ ವಲ್ಲವೇ?” ಎಂದು ಭಿನ್ನವಿಸುತ್ತಾರೆ. ಹೀಗೆ ಅವರನ್ನು ಆ ಬಾಲಕರ ಬೆಂಗಾವಲಿನಲ್ಲಿ ಅವರ ಸ್ವಂತ ಸ್ಥಳಗಳಿಗೆ ಕರೆ ತರಲಾಗುತ್ತದೆ. ಸ್ವಂತ ಸ್ಥಳಗಳನ್ನು ಗುರುತಿಸಲು ಅವರಿಗೆ ಸ್ವಲ್ಪವೂ ಕಷ್ಟವಾಗುವುದಿಲ್ಲ. ಹಿಂದೆ ನೋಡಿಲ್ಲದಿದ್ದರೂ ಸ್ವರ್ಗದ ಬಗ್ಗೆ ಅವರಿಗೆ ಅಷ್ಟೊಂದು ಪರಿಚಯವಿದೆ. ಪ್ರವಾದಿ(ಸ) ಹೇಳಿದ್ದಾರೆ, “ಅವರು ಸ್ವರ್ಗದಲ್ಲಿರುವ ತಮ್ಮ ಮನೆಯ ಬಗ್ಗೆ ಭೂಮಿಯಲ್ಲಿರುವ ತಮ್ಮ ಮನೆಯನ್ನು ಅರಿತಿರುವುದಕ್ಕಿಂತ ಹೆಚ್ಚಾಗಿ ಅರಿತಿರುತ್ತಾರೆ.” (ಬುಖಾರಿ)

ಅದೋ ಪತ್ನಿಯರು ಅಸಹನೆಯಿಂದ ಕಾಯುತ್ತಿದ್ದಾರೆ. ಅವರ ಹಿಂದೆ ಹೂರ್‌ಗಳೂ ಕಾಯುತ್ತಿದ್ದಾರೆ. ಪ್ರವೇಶಿಸಿದ ಕೂಡಲೇ ಬಾಲಕರು ಶುದ್ಧ ನೀರು, ಜೇನು, ಹಾಲು, ಮದಿರೆ, ಸಲ್‌ಸಬೀಲ್, ಕಸ್ತೂರಿಮಣಿ ಇತ್ಯಾದಿಗಳನ್ನು ಲೋಟೆ, ಹೂಜಿ, ಪಾತ್ರೆ, ಬಾಟ್ಲಿ ಗಳಲ್ಲಿ ಸಿದ್ಧಪಡಿಸಿ ಆಗಿದೆ. ದಾಳಿಂಬೆ, ದ್ರಾಕ್ಷೆ ಇತ್ಯಾದಿ ಪರಿಚಿತ ಮತ್ತು ಅಪರಿಚಿತವಾದ ನಾನಾ ರೀತಿಯ ಫಲಗಳನ್ನೂ ಮೀನು, ಪಕ್ಷಿ –ಮೃಗಾದಿಗಳ ಮಾಂಸ ಇತ್ಯಾದಿಗಳನ್ನೂ ಸಿದ್ಧಪಡಿಸಿದ್ದಾರೆ.

ವಿಸ್ಮಯಕಾರಿ ಹಾಸಿನ ಮೇಲೆ ಪರದೆ ಹಾಕಿದ ರಾಜ ಮಂಚಗಳನ್ನೂ ವಿವಿಧ ರೀತಿಯ ಪೀಠಗಳನ್ನೂ ಸಜ್ಜುಗೊಳಿಸಲಾಗಿದೆ. ವಿವಿಧ ಬಣ್ಣದ ಹಾಸಿಗೆಗಳು, ದಿಂಬುಗಳು, ಕಂಬಳಿಗಳು, ತೆರೆಗಳನ್ನೂ ಸಾಲುಸಾಲಾಗಿ ಅಣಿಗೊಳಿಸಲಾಗಿದೆ. ಎಲ್ಲೆಡೆ ಲೋಬಾನದ ಪರಿಮಳ ಸೂಸುತ್ತಿದೆ. ಫಲ ಸಮೃದ್ಧವಾದ ವೃಕ್ಷ-ಲತಾದಿಗಳು ಅತ್ತಿತ್ತ ಓಲಾಡುತ್ತಿವೆ. ಕೆಳಭಾಗದಲ್ಲಿ ಹರಿಯುತ್ತಿರುವ ವಿವಿಧ ನದಿಗಳ ಮರ್ಮರ ಸದ್ದು, ಕೆಲವು ನದಿಗಳಿಂದ ಚಿಮ್ಮುವ ನೀರ ಹನಿಗಳು ವಾತಾವರಣದ ಕಳೆಯನ್ನು ಹೆಚ್ಚಿಸುತ್ತಿದೆ. ನಯನ ಮನೋಹರ ತೋಟ ಮತ್ತು ಉದ್ಯಾನಗಳು, ಮನೆ, ಮಾಳಿಗೆ, ಡೇರೆಗಳೂ ಅದರಲ್ಲಿರುವ ಸಾಧನಗಳೂ ರಾಜ ವೈಭವದಿಂದ ಮೆರೆಯುತ್ತಿವೆ. ಅನಂತರ ವಿಶಾಲವಾದ ಮಹಾ ಸಾಮ್ರಾಜ್ಯ. ಭೂಮಿಯ ಯಾವ ಮಹಾ ರಾಜ ನಿಂದಲೂ ಏರ್ಪಡಿಸಲಾಗದ ಮಹಾ ಸೌಲಭ್ಯಗಳು. ಬಿಲ್ ಪಾವತಿಸಬೇಕೆಂಬ ಆಳುಕಿಲ್ಲ, ನಾಳೆ ಇಲ್ಲವಾದೀತೇ ಎಂಬ ಆಂಜಿಕೆಯಿಲ್ಲ, ಅಪ ಹರಣದ ಭೀತಿಯಿಲ್ಲ, ಕುಳಿತಲ್ಲಿಯೇ ಬಯಸಿದ್ದೆಲ್ಲವೂ ದೊರೆಯುತ್ತಿದೆ. ಎಲ್ಲವೂ ಸ್ವಂತ ಅಧಿಕಾರದಲ್ಲಿ ಸೇರಿದೆ. ಇಷ್ಟಬಂದಂತೆ ನಿತ್ಯ ಸುಖಾನಂದ ಪಡೆಯಬಹುದಾದ ಮಹಾ ಆಧಿಪತ್ಯ ಶಾಶ್ವತವಾಗಿ ತನ್ನ ಕೈ ಸೇರಿದೆ.

"ಅಲ್ಲಿ ನೀವು ಎತ್ತ ದೃಷ್ಟಿ ಹರಿಸಿದರೂ ಅನುಗ್ರಹಗಳನ್ನೇ ಕಾಣುವಿರಿ ಮತ್ತು ಒಂದು ಬೃಹತ್ ಸಾಮ್ರಾಜ್ಯದ ಸಂಪತ್ ಸಾಮಗ್ರಿಗಳೇ ನಿಮಗೆ ಕಾಣಿಸುವುವು."

(ಅದ್ದಹ್ರ್: 20)

ಮೊದಲ ಪ್ರತಿಕ್ರಿಯೆ

ಆಗ ಇವರ ಮೊದಲ ಪ್ರತಿಕ್ರಿಯೆ ಹೇಗಿರಬಹುದು? ಇದು ಚೆನ್ನಾಗಿ ತಿಳಿದಿರಬೇಕಾದ ವಿಷಯ. ಭೂಮಿಯಲ್ಲಿ ಏನಾದರೂ ಅನುಗ್ರಹ ಪ್ರಾಪ್ತವಾದಾಗ ಜನರಲ್ಲಿ ಎರಡು ರೀತಿಯ ಮನೋಭಾವ ಬೆಳೆಯುವುದು ಕಂಡು ಬರುತ್ತದೆ:

1. ಅದು ತನ್ನ ಯೋಗ್ಯತೆ, ಸಾಮರ್ಥ್ಯ ದುಡಿಮೆಯಿಂದಾಗಿ ನನಗೆ ದೊರೆತಿದೆ ಯೆಂಬ ಭಾವನೆಯಿಂದ ದುರಹಂಕಾರಿಯೂ ದುಷ್ಟನೂ ಆಗಿ ಮಾರ್ಪಡುತ್ತಾನೆ. ಒಂದು ವೇಳೆ ಯಾವುದೋ ರೀತಿಯ ದೇವವಿಶ್ವಾಸ ಆತನಲ್ಲಿದ್ದರೂ ಆತ ಅದನ್ನು ಅಪಾರ್ಥ ಮಾಡಿಕೊಳ್ಳುತ್ತಾನೆ. ದೇವನು ನನ್ನನ್ನು ಗೌರವಿಸಿದ್ದಾನೆ. (ರಬ್ಬೀ ಅಕ್ರಮನ್) ಎಂದು ಆತ ವಾದಿಸಬಹುದು. ಅನುಗ್ರಹ ಹೆಚ್ಚಿದಂತೆಯೇ ಈ ದುರ್ಗುಣವೂ ಆತನಲ್ಲಿ ಪ್ರಬಲವಾಗುತ್ತದೆ. ತರುವಾಯ ಪರೋಪಕಾರ ಬುದ್ಧಿ, ಪ್ರಾಣಿದಯೆ, ಸೇವಾ ಮನೋಭಾವ, ಸಹಾನುಭೂತಿ, ಹಿತಾಕಾಂಕ್ಷೆ, ಸ್ನೇಹಾನುಕಂಪ ಇತ್ಯಾದಿ ಎಲ್ಲ ಸದ್ಗುಣಗಳೂ

ಅಳಿದು, ಸ್ವಾರ್ಥ ಪಾಲನೆಯ ಉಗ್ರಮೂರ್ತಿಯಾಗಿ ಆತ ಮಾರ್ಪಡುತ್ತಾನೆ. ಅನಂತರ ತನ್ನ ಸ್ವಾಧೀನದಲ್ಲಿರುವುದೆಲ್ಲವೂ ಬೇಕಾದಂತೆ ಮೆರೆದಾಡಲಿಕ್ಕಾಗಿ ಮಾತ್ರ. ಸತ್ಯ, ನ್ಯಾಯ, ಹೆಣ್ಣು, ಹೊನ್ನು ಯಾವುದಕ್ಕೂ ಅಲ್ಲಿ ಉಳಿಗಾಲವಿಲ್ಲ. ಈ ಮನೋಭಾವದ ಓರ್ವನನ್ನು ಯಾವುದೋ ರೀತಿಯಲ್ಲಿ ಆ ಸ್ವರ್ಗದಲ್ಲಿ ಸೇರಿಸಿದರೆ ಆತನ ಪ್ರತಿಕ್ರಿಯೆ ಹೇಗಿರಬಹುದು ಎಂಬುದನ್ನು ಆಲೋಚಿಸಿ ನೋಡಿರಿ.

2. ಇನ್ನೊಂದು ಮನೋಭಾವ ತದ್ವಿರುದ್ಧವಾಗಿರುವುದು. ಆತನಿಗೆ ಇಲ್ಲಿ ಅನುಗ್ರಹ ಪ್ರಾಪ್ತವಾದರೂ ಇದು ನನ್ನ ಸ್ವಸಾಮರ್ಥ್ಯದಿಂದ ದೊರೆತುದಲ್ಲ, ಕೇವಲ ಅಲ್ಲಾಹನ ಕರುಣೆಯಿಂದ ದೊರೆತಿದೆಯೆಂದು ತಿಳಿದು ಆತ ಅಲ್ಲಾಹನಿಗೆ ಕೃತಜ್ಞನಾಗುತ್ತಾನೆ. ಅನುಗ್ರಹ ಹೆಚ್ಚಿದಂತೆಯೇ ಆತ ಅಧಿಕ ಕೃತಜ್ಞ ಮತ್ತು ವಿನಯಶೀಲನಾಗುತ್ತಾನೆ. ತರುವಾಯ ಮೊದಲಿನಾತ ಕಳೆದುಕೊಂಡ ಎಲ್ಲ ಸದ್ಗುಣಗಳೂ ಈತನಲ್ಲಿ ವರ್ಧಿಸುತ್ತದೆ. ಹೀಗೆ ಆತ ಎಲ್ಲ ರೀತಿಯಲ್ಲಿಯೂ ಓರ್ವ ಪರೋಪಕಾರಿಯಾಗುತ್ತಾನೆ. ಅದೇ ವೇಳೆ ತನಗೆ ದೊರೆತ ಎಲ್ಲ ಸಾಧನಾನುಕೂಲತೆಗಳಿಗೂ ಕೇವಲ ಅಲ್ಲಾಹನೇ ಕಾರಣನಾಗಿರುವನೆಂಬ ಪ್ರಜ್ಞೆಯಿಂದ ಅಲ್ಲಾಹನನ್ನು ಸ್ತುತಿಸಿ ಪ್ರಕೀರ್ತಿಸಲು ಅದು ಪ್ರಬಲ ಪ್ರೇರಣೆಯಾಗುವುದು. 'ಸುಬ್‌ಹಾನಲ್ಲಾಹ್, ವಲ್‌ಹಮ್ದುಲಿಲ್ಲಾಹ್' ಮುಂತಾದ ಪ್ರಶಂಸೆಗಳು ಆತನ ಹೃದಯಾಂತರಾಳದಿಂದ ಮೂಡಿ ಬರುವುದು. ಪರಲೋಕದ ಬಗ್ಗೆಯೂ ಆತನ ಮನೋಭಾವ ಹಾಗೆಯೇ ಇರುವುದು. ಸ್ವಂತ ಯೋಗ್ಯತೆ ಸಾಮರ್ಥ್ಯಗಳಿಂದ ಸ್ವರ್ಗವನ್ನು ಗಳಿಸಿ ಬಿಡಬಹುದೆಂಬ ಅಹಂಭಾವ ಆತನಲ್ಲಿರುವುದಿಲ್ಲ. ಬದಲಾಗಿ ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು, ಅಲ್ಲಾಹನ ಅಪಾರ ಕರುಣೆ, ಔದಾರ್ಯದ ನಿರೀಕ್ಷೆಯಿಂದ, ವಿಚಾರಣೆಯ ವೇಳೆ, ನನಗೆ ದೊರೆಯುವ ಬದಲಾಗಿ ನಾನೇ ನೀಡಬೇಕಾದೀತೇ ಎಂಬ ಭೀತಿಯಿಂದ ಆತ ಬಾಳುತ್ತಾನೆ.

ಪ್ರವಾದಿಯವರು(ಸ) ಹೇಳಿದ್ದಾರೆ, "ನಿಮ್ಮಲ್ಲಿ ಯಾರೊಬ್ಬನ ಕರ್ಮಗಳೂ ಆತನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸಲಾರದು." ಸಹಾಬಿಗಳು ಕೇಳಿದರು, "ತಾವು ಕೂಡಾ ಅದರಲ್ಲಿ ಸೇರಿದ್ದೀರಾ?" ಪ್ರವಾದಿ(ಸ) ಹೇಳಿ ದರು, "ನಾನು ಕೂಡಾ ಹಾಗೆಯೇ. ಕರುಣೆ ಔದಾರ್ಯಗಳನ್ನು ಅಲ್ಲಾಹನು ನನ್ನ ಮೇಲೆ ಸುರಿಸಿದರೆ ಮಾತ್ರ ಅದು ನನಗೆ ಸಾಧ್ಯವಾದೀತು." (ಬುಖಾರಿ)

ಸಾಮಾನ್ಯವಾಗಿ ಇಂತಹ ಮಂದಿ ಮಾತ್ರ ಸ್ವರ್ಗ ಪ್ರವೇಶಿಸುತ್ತಾರಲ್ಲವೇ. ಮಾನವನು ಇಲ್ಲಿ ಮೈಗೂಡಿಸಿದ ಎಲ್ಲ ಸದ್ಗುಣಗಳೂ ಐಹಿಕ ವಾತಾವರಣಕ್ಕಿಂತ ಸಂಪೂರ್ಣ ಭಿನ್ನ

ಮತ್ತು ಪಾವನ ರೀತಿಯಲ್ಲಿ ಆ ಸ್ವರ್ಗೀಯ ವಾತಾವರಣದಲ್ಲಿ ಮತ್ತಷ್ಟು ಶೋಭಿಸಿ ಅವುಗಳ ಪೂರ್ಣ ಘನತೆಯೊಂದಿಗೆ ಪ್ರಕಟವಾಗುವುದು. ಹಾಗಾದರೆ ಆ ಶ್ರೇಷ್ಠ ಸ್ವರ್ಗ ಪ್ರವೇಶದ ಬಗ್ಗೆ ಅವರ ಪ್ರಥಮ ಪ್ರತಿಕ್ರಿಯೆ ಹೇಗಿರ ಬಹುದೆಂದು ನಾವು ಊಹಿಸಬಹುದಾಗಿದೆ. ಅಲ್ಲಾಹನನ್ನು ಸ್ತುತಿಸಿ ಹಾಡಿ ಹೊಗಳುವುದು ಅವರ ಅತಿ ಮೆಚ್ಚಿನ ಹವ್ಯಾಸವಾಗಿರುವುದು. ಪರಸ್ಪರ ಹಿತಾಕಾಂಕ್ಷೆಯು ಸ್ವರ್ಗೀಯ ಸಮಾಜದ ಸಾರ್ವತ್ರಿಕ ಸಂವೇದನೆಯಾಗಿರುವುದು. ಹೌದು, ಈ ಹಿಂದೆ ವಿವರಿಸಿರುವಂತೆ, ಸ್ವರ್ಗದಲ್ಲಿ ಮೊದಲು ಪ್ರವೇಶಿಸಿ, ಶ್ರೇಷ್ಠ ಮತ್ತು ಶಾಶ್ವತ ಸುಖಾನಂದ ಹಾಗೂ ಬೃಹತ್ ಆಧಿಪತ್ಯ ದೊರೆತಿರುವುದನ್ನು ನೋಡಿದ ಆ ಸಜ್ಜನರ ಪ್ರಥಮ ಭಾವನೆಯನ್ನು ಅಲ್ಲಾಹ್ ಹೀಗೆ ವಿವರಿಸಿದ್ದಾನೆ.

"ಅವರು, ನಮಗೆ ಈ ಮಾರ್ಗವನ್ನು ತೋರಿಸಿಕೊಟ್ಟ ಅಲ್ಲಾಹನಿಗೇ ಸರ್ವ ಸ್ತುತಿ. ಅಲ್ಲಾಹ್ ನಮಗೆ ಮಾರ್ಗದರ್ಶನ ನೀಡದಿರುತ್ತಿದ್ದರೆ, ನಾವು ಸ್ವಯಂ ಮಾರ್ಗದರ್ಶನ ಹೊಂದುತ್ತಿರಲಿಲ್ಲ, ನಮ್ಮ ಪ್ರಭುವಿನಿಂದ ಕಳುಹಿಸಲ್ಪಟ್ಟ ಸಂದೇಶವಾಹಕರು ನಿಜಕ್ಕೂ ಸತ್ಯವನ್ನೇ ಪಡಕೊಂಡು ಬಂದಿದ್ದರು ಎಂದು ಹೇಳುವರು." **(ಅಲ್ ಅಅ್‌ರಾಫ್: 43)**

ಆಹಾ! ಭಕ್ತಿ, ವಿನಯ ಮತ್ತು ಕೃತಜ್ಞತಾ ಭಾವದ ಈ ಸಮ್ಮಿಶ್ರ ಸಂವೇದನೆಯು ಎಷ್ಟೊಂದು ಪಾವನವಾಗಿರಬಹುದು! ಆದರೆ, ಈ ಸಂವೇದನೆಗೆ ಅಲ್ಲಾಹನಿಂದ ದೊರೆಯುವ ಉತ್ತರವೇನು? ಅದು ಅತ್ಯಂತ ವಿಸ್ಮಯಕಾರಿಯಾಗಿದೆ. ನನ್ನ ಭಕ್ತ ದಾಸರೇ, ಹಾಗೆಲ್ಲ ಹೇಳಬೇಡಿರಿ. ಇದು ನಿಮ್ಮ ಕರ್ಮಗಳ ಪ್ರತಿಫಲವಾಗಿಯೇ ನಿಮಗೆ ದೊರೆತಿದೆ. ಇದು ಯಾಚಕರಿಗೆ ನೀಡುವ ಭಿಕ್ಷೆಯಲ್ಲ, ಪರಿಶ್ರಮದ ಕೂಲಿಯಾಗಿದೆ. ಇದು ನೀವು ನಿಮ್ಮ ಸಾಮರ್ಥ್ಯವನ್ನು ಬಳಸಿ ಗೌರವದಿಂದ ಸಂಪಾದಿಸಿದ್ದಾಗಿದೆ. ಇಲ್ಲಿ ಯಾವ ರೀತಿಯ ಕೀಳರಿಮೆಯೂ ಬೇಡ. ಈ ಭಾವದ ಒಂದು ವಾಕ್ಯವನ್ನು ನೋಡಿ. (ಹಾಗೆಯೇ ಭಕ್ತಜನರು ತಮ್ಮ ಪ್ರಥಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದಾಗ ಅದೋ) ಆಕಾಶದಿಂದ ಧ್ವನಿ ಕೇಳಿಸುತ್ತದೆ, "ನೀವು ಮಾಡುತ್ತಿದ್ದ ಕರ್ಮಗಳ ಪ್ರತಿಫಲವಾಗಿ ನಿಮ್ಮನ್ನು ಈ ಸ್ವರ್ಗದ ವಾರೀಸುದಾರರಾಗಿ ಮಾಡಲಾಗಿದೆ." **(ಅಲ್ ಅಅ್‌ರಾಫ್: 43)**

ಇದು ಕೇಳಿದೊಡನೆಯೇ, ಓಹೋ, ಅಲ್ಲಾಹ್ ಭರವಸೆ ನೀಡಿದ್ದಾನೆ. ಇನ್ನು ಯಾರಿಗೂ ಹೆದರಬೇಕಾಗಿಲ್ಲವೆಂದು ಅಲಕ್ಷಿಸುವ ಬದಲಾಗಿ ಅವರು ಮತ್ತಷ್ಟು ವಿನಯಶೀಲರಾಗುತ್ತಾರೆ. ಇನ್ನು ಮುಂದೆ ಅವರ ಧ್ವನಿಯು "ಓ ಅಲ್ಲಾಹ್ ನೀನೆಷ್ಟು ಪರಿಶುದ್ಧನೆಂದೂ ಅವರ ಪರಸ್ಪರ ಪ್ರಾರ್ಥನೆಯು, ಪ್ರಶಾಂತಿಯಿರಲಿ ಎಂದೂ ಆಗಿರುವುದು. ಎಲ್ಲಕ್ಕಿಂತ ಮಿಗಿಲಾಗಿ ಅವರ ಪ್ರತಿಯೊಂದು ಕಾರ್ಯವೂ ಸರ್ವಸ್ತುತಿ

ಸ್ತೋತ್ರಗಳೂ ಸಕಲ ಲೋಕಗಳ ಪ್ರಭುವಾದ ಅಲ್ಲಾಹನಿಗೇ ಎಂಬ ಘೋಷಣೆಯಲ್ಲಿ ಕೊನೆಗೊಳಿಸುವ ರೂಢಿಯಾಗಿರುವುದು." (ಯೂನುಸ್: 10)

ಅವರು ಹೇಳುತ್ತಾರೆ: ನಮ್ಮೊಂದಿಗೆ ತನ್ನ ವಾಗ್ದಾನವನ್ನು ಸತ್ಯಗೊಳಿಸಿದ ಹಾಗೂ ನಮ್ಮನ್ನು ಭೂಮಿಯ ವಾರೀಸುದಾರರನ್ನಾಗಿ ಮಾಡಿದ ಅಲ್ಲಾಹನಿಗೆ ಕೃತಜ್ಞತೆಗಳು. ಇನ್ನು ನಾವು ಸ್ವರ್ಗದಲ್ಲಿ ನಮಗೆ ಇಷ್ಟವಿರುವೆಡೆಯಲ್ಲಿ ವಾಸಿಸಬಹುದು. (ಯಾವ ರೀತಿಯ ಅಡ್ಡಿಯೂ ಇಲ್ಲದೆ ಅದು ನಮ್ಮ ಸ್ವಾಧೀನ ಬಂದಿದೆ) ನಮ್ಮ ಕರ್ಮಗಳಿಗೆ ದೊರೆತ ಪ್ರತಿಫಲ ಎಷ್ಟೊಂದು ಉತ್ಕೃಷ್ಟವಾಗಿದೆ! ಅದೋ ಅಸಂಖ್ಯಾತ ದೇವಚರರು ಅರ್ಶ್‌ನ ಸುತ್ತಲೂ ಹಲವು ತಂಡಗಳಾಗಿ ನಿಲ್ಲುತ್ತಾರೆ- ತಮ್ಮ ಪ್ರಭುವಿನ ಸ್ತುತಿ ಗೀತೆಗಳನ್ನು ಹಾಡುತ್ತಿದ್ದಾರೆ. ಆ ದೃಶ್ಯ ಎಷ್ಟೊಂದು ಪಾವನವಾಗಿರ ಬಹುದು! ಸೃಷ್ಟಿಗಳಿಗೆ ಸಂಪೂರ್ಣ ಸತ್ಯಾನುಸಾರ ನ್ಯಾಯ ಒದಗಿಸಿ ಆಗಿದೆ! ಅದೋ ಇಡೀ ಪ್ರಪಂಚವೇ ಪುಳಕಿತಗೊಂಡಿದೆ. ಎಲ್ಲ ದಿಕ್ಕುಗಳಿಂದಲೂ ಒಂದೇ ಘೋಷಣೆ, "ಸರ್ವಲೋಕ ಪಾಲಕ ನಾದ ಅಲ್ಲಾಹನಿಗೆ ಮಾತ್ರ ಸಕಲ ಸ್ತೋತ್ರಗಳು ಮೊಳಗುತ್ತಿದೆ." (ಅಝ್ಝುಮರ್: 74-75)

ನೀರಸ ಬದುಕು!

ಈಗ ಕೆಲವರಿಗೆ, ಏನಿದ್ದರೂ ಇದೊಂದು ನೀರಸ ಜೀವನವೆಂದು ತೋರುತ್ತಿರ ಬಹುದು. ಯಾವಾಗಲೂ ತಸ್ಬೀಹ್, ತಹ್ಲೀಲ್‌ಗಳು. ಮಾನವನೆಂದ ಮೇಲೆ ಸ್ವಲ್ಪ ಆಟ, ವಿನೋದ, ತಮಾಷೆ, ಮೋಜು, ಚಟಾಕಿ, ಹರಟೆ ಇತ್ಯಾದಿಗಳು ಇರಬೇಡವೇ? ಹೂರ್‌ಗಳ ಬಳಿ ಹೋಗುವಾಗಲೂ ತಸ್ಬೀಹ್ ಆದರೆ ಹೇಗೆ? ಆದರೆ ಇಲ್ಲಿ (ಐಹಿಕ ಜೀವನದಲ್ಲಿ) ಆಟ, ವಿನೋದಗಳಿಂದ ಮಾನವನಿಗೆ ದೊರೆಯುವ ಸುಖಾನಂದವು ಅಲ್ಲಿನ ತಸ್ಬೀಹ್ ಇತ್ಯಾದಿಗಳಿಂದ ದೊರೆಯುವುದಿದ್ದರೆ? ಅಲ್ಲಿನ ವ್ಯವಸ್ಥೆ ಹಾಗಿದ್ದರೆ?

ಅದಲ್ಲದೇ, ಕೇವಲ ತಸ್ಬೀಹ್, ತಹ್ಲೀಲ್ ಮಾತ್ರವೇ ಅಲ್ಲ, ಅಲ್ಲಾಹನಿಗೆ ಸಂಪೂರ್ಣ ವಿಧೇಯತೆ ಮತ್ತು ಅರ್ಪಣೆಯೇ ಮೂಲ ಸ್ವಭಾವವಾಗಿರುವುದು. ಎಲ್ಲ ಕ್ರಿಯೆ ಗಳಲ್ಲಿಯೂ ಅದು ಎದ್ದು ತೋರುವುದೆಂದರ್ಥ. ಅರ್ಪಣಾ ಭಾವ ಮತ್ತು ಸುಖಾನಂದ ಗಳಲ್ಲಿ ಪರಸ್ಪರ ಯಾವುದೇ ವೈರುಧ್ಯವಿಲ್ಲ, ಅಲ್ಲಾಹನಿಗಾಗಿ ಸಮರ್ಪಿಸುವುದನ್ನು ಜೀವನದ ಮೂಲ ನೀತಿಯಾಗಿ ಅಂಗೀಕರಿಸಿ ಅದೇ ವೇಳೆ ನಾನಾ ರೀತಿಯ ಸುಖಾನಂದಗಳನ್ನು ಸವಿಯುವ ಅನೇಕ ಮಂದಿಯನ್ನು ನಾವಿಲ್ಲಿ ನೋಡುತ್ತಿದ್ದೇವೆ. ಅವರು ಆಡುತ್ತಾರೆ, ನಗುತ್ತಾರೆ, ಹಾಸ್ಯ ಹರಟೆಗಳನ್ನು ಹೇಳುತ್ತಾರೆ. ಹಣ ಸಂಪಾದಿಸು ತ್ತಾರೆ, ವ್ಯಯಿಸುತ್ತಾರೆ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಜನಸೇವೆ

ಮೊದಲಾದ ಎಲ್ಲ ರಂಗಗಳಲ್ಲಿಯೂ ವ್ಯವಹರಿಸುತ್ತಾರೆ. ಆದರೆ, ಅಲ್ಲಾಹನೊಂದಿಗಿರುವ ವಿಧೇಯತೆಯಿಂದಾಗಿ ಅವುಗಳಲ್ಲಿ ಸ್ವಲ್ಪ ನಿಯಂತ್ರಣವನ್ನು ಪಾಲಿಸುತ್ತಾರಷ್ಟೆ. ಆ ನಿಯಂತ್ರಣವು ವಾಸ್ತವದಲ್ಲಿ, ನೈಜ ಸುಖಾನಂದಕ್ಕೆ ಅಡ್ಡಿಯಾಗುವುದಿಲ್ಲ, ಬದಲಾಗಿ ಅದನ್ನು ಸಾರ್ಥಕಗೊಳಿಸುತ್ತದೆ. ಅದೇ ವೇಳೆ ನಿಯಂತ್ರಣವಿಲ್ಲದ ಕುಡುಕರೂ ಸುಖ ಭೋಗಿಗಳೂ ವಸ್ತುಶಃ ಯಾವಾಗಲೂ ಒಂದು ರೀತಿಯ ಭಯಾಶಂಕೆಯಿಂದ ಕಾಲ ಕಳೆಯುತ್ತಾರೆ. ನಿರಂಕುಶಾಧಿಪತಿಯಾಗಿದ್ದ ಫರೋವಾ ಚಕ್ರವರ್ತಿಯ ಅವಸ್ಥೆಯನ್ನೇ ನೋಡೋಣ. ಹೆಚ್ಚುತ್ತಿರುವ ಇಸ್ರಾಈಲರು ಯಾವಾಗ ಪ್ರತ್ಯಾಕ್ರಮಣ ನಡೆಸಬಹುದೆಂಬ ಭೀತಿ, ಮೂಸಾರ ಕಿರುಕುಳವು ಎಲ್ಲವನ್ನೂ ಕೆಡಿಸಿಬಿಡುವುದೇ ಎಂಬ ಅಂಜಿಕೆ ಇತ್ಯಾದಿ ನಾನಾ ರೀತಿಯ ಚಿಂತೆ ಅವನ ಜೀವನದಲ್ಲಿ ಎದ್ದು ತೋರುತ್ತಿತ್ತಲ್ಲವೇ. ಹಾಗಾದರೆ, ನಿಯಂತ್ರಣವನ್ನು ಪಾಲಿಸುವವರೇ ವಾಸ್ತವದಲ್ಲಿ ಜೀವನದ ನೈಜ ಸುಖವನ್ನು ಅನುಭವಿಸುವವರೆಂದು ಸೂಕ್ಷ್ಮ ವಿಶ್ಲೇಷಣೆಯಿಂದ ಮನವರಿಕೆಯಾಗುತ್ತದೆ.

ಸಮ್ಮೇಳನ

ಸಾಲದಿದ್ದರೆ ಇದೋ ಇನ್ನೂ ಹೇಳುತ್ತೇನೆ. (ಆದರೆ ಮದ್ಯದಂಗಡಿಗಳ ಹುಚ್ಚಾಟಗಳಲ್ಲಿ ಹಾಗೂ ನೈಟ್‌ಕ್ಲಬ್‌ಗಳ ನಗ್ನತೆಯಲ್ಲಿ ಮಾತ್ರ ಅಭಿರುಚಿಯಿರುವವರು ಇಲ್ಲಿ ಏನನ್ನೂ ನಿರೀಕ್ಷಿಸಬೇಕಾಗಿಲ್ಲವೆಂದು ಮೊದಲೇ ಹೇಳಿ ಬಿಡುತ್ತೇನೆ) ಅದೋ ಅವರು ಸಭೆ ಸೇರಿದ್ದಾರೆ. ಭೂಲೋಕದಲ್ಲಿ ಹಿಂದೆ ಗತಿಸಿದ ಹಳೆಯ ಹಲವು ನೆನಪುಗಳನ್ನು ಮೆಲುಕು ಹಾಕುತ್ತಾ (ಅಲ್ಲಿ ಸಭಾಂಗಣ, ವೇದಿಕೆ, ಮೈಕ್‌ಇತ್ಯಾದಿ ಗಳನ್ನು ಏರ್ಪಡಿಸ ಬೇಕಾಗಿಲ್ಲ, ಸ್ವಲ್ಪ ಆ ಕಡೆ ತಿರುಗಿ ಕುಳಿತರಾಯಿತು) ಮಾತನಾಡುತ್ತಿರುವ ವೇಳೆ ಒಬ್ಬರು ಒಂದು ಹಳೆಯ ಘಟನೆಯನ್ನು ಹೇಳುತ್ತಾರೆ.

ಬಂಧುಗಳೇ! ಅಂದು ಭೂಲೋಕದಲ್ಲಿ ನನಗೋರ್ವ ಮಿತ್ರನಿದ್ದ, ವಿಚಿತ್ರ ಮಿತ್ರ. ಪರಲೋಕದ ಕಟ್ಟಾ ವಿರೋಧಿ. ನಾವು ಹೆಚ್ಚಾಗಿ ಒಟ್ಟಿಗೆ ಇರುತ್ತಿದ್ದೆವು. ಆದರೆ ಆತನ ಬಲೆಗೆ ಬೀಳದೆ ಪಾರಾಗಿರುವುದು ಮಹಾ ಸಾಹಸವೇ ಸರಿ! ಆತನ ಸಾಮರ್ಥ್ಯವನ್ನು ಹೇಳುತ್ತೇನೆ. ಪರಸ್ಪರ ಭೇಟಿಯಾದಾಗಲೆಲ್ಲಾ ಆತ ನನ್ನೊಡನೆ ಒಂದೇ ವಿಚಾರವನ್ನು ಹೇಳುತ್ತಿದ್ದ. ಪದೇ ಪದೇ ಆಚೀಚೆ ಮಾಡಿ ಅದೇ ವಿಚಾರವನ್ನು ಪ್ರಸ್ತಾಪಿಸುತ್ತಿದ್ದ. ಬಹಳ ಯುಕ್ತಿಯಿಂದ ಸಂದರ್ಭ ನೋಡಿ ಹಿತೈಷಿಯಂತೆ ಮಾತಾಡುತ್ತಿದ್ದ. ಆತ ಹೀಗೆ ಪ್ರಶ್ನಿಸುತ್ತಿದ್ದ, "ಕೆಲವರು ಪರಲೋಕ ಎಂದು ಮುಂತಾಗಿ ಹೇಳುತ್ತಿದ್ದಾರಲ್ಲವೇ? ನಿನಗೆ ಅದರಲ್ಲಿ ವಿಶ್ವಾಸವಿದೆಯೇ? ನಾವೆಲ್ಲರೂ ಸತ್ತು ನಮ್ಮ ಅಸ್ಥಿಪಂಜರಗಳು ಮಣ್ಣಲ್ಲಿ ಸೇರಿ

ಅಳಿದು ಹೋದ ಬಳಿಕ ಪುನಃ ನಮ್ಮನ್ನು ಜೀವಂತಗೊಳಿಸಿ ಶಿಕ್ಷೆ-ಪುರಸ್ಕಾರಗಳನ್ನು ನೀಡಲಾಗುವುದೇ? ಇದೆಂತಹ ತಿಳಿಗೇಡಿತನ. ಮಿತ್ರನೇ! ನಿಜವಾಗಿಯೂ ಇದೆಲ್ಲವನ್ನು ನಿನಗೆ ನಂಬಲು ಸಾಧ್ಯವಿದೆಯೇ? ಬುದ್ಧಿವಂತನಾದ ನೀನು ಈ ಶತಮೂರ್ಖತನಕ್ಕೆ ಸಿಲುಕಲಾರೆಯೆಂದು ನಾನು ಭಾವಿಸುತ್ತೇನೆ." **(ಅಸ್ಸಾಫ್ಫಾತ್: 50-53)**

ಆತ ಬಹಳ ಆತ್ಮೀಯವಾಗಿ ಅದನ್ನು ನನಗೆ ವಿವರಿಸುತ್ತಿದ್ದ, ನಾನು ಆತನ ಮೋಡಿಯಿಂದ ಪಾರಾಗಿರುವುದೊಂದು ಅದ್ಭುತವೇ ಸರಿ. ನೀವು ಕೂಡಾ ಆತನನ್ನೊಮ್ಮೆ ನೋಡಿ ಬಿಡಿ. ಎಲ್ಲಿದ್ದಾನೆಂದು ನೋಡುತ್ತೇನೆ. ಹಾಗೆ ನೋಡಿದಾಗ ನರಕದ ಮಧ್ಯ ಭಾಗದಲ್ಲಿ ಆತ ಕಾಣಿಸುತ್ತಾನೆ. ಅಲ್ಲಾಹನಾಣೆ! ಆ ಕೂಡಲೇ ಈತ ಅವನೊಡನೆ ಹೇಳುತ್ತಾನೆ "ಎಲೈ ಮಾನವಾ, ನೀನು ನನ್ನನ್ನು ಮೋಸಗೊಳಿಸಿದ್ದೆ, ನನ್ನ ಪ್ರಭುವಿನ ಅನುಗ್ರಹವಿಲ್ಲದಿರುತ್ತಿದ್ದರೆ ಈಗ ನಾನೂ ಆ ನರಕದಲ್ಲಿ ನೂಕಲ್ಪಟ್ಟವರಲ್ಲಿ ಸೇರುತ್ತಿದ್ದೆ."

(ಅಸ್ಸಾಫ್ಫಾತ್: 54-57)

(ಇದು ಸಹಸ್ರಾರು ಕಿಲೋ ಮೀಟರ್ ದೂರವಿರುವ ವ್ಯಕ್ತಿಯೊಡನೆ ನಡೆಯುತ್ತಿರುವ ಸಂಭಾಷಣೆ, ಕ್ಷಣ ಮಾತ್ರದಲ್ಲಿ ಟಿ.ವಿ., ಫೋನ್ ಇತ್ಯಾದಿ ಯಾವುದೂ ಇಲ್ಲದೆ) ಅನಂತರ ಆತ ಸಭಿಕರತ್ತ ನೋಡಿ ಸ್ವಯಂ ಹರ್ಷ ಪಡುತ್ತಾನೆ, "ಇರಲಿ. ಇನ್ನು ನಾವು ಸಾಯಲಿಕ್ಕಿಲ್ಲವಲ್ಲಾ? ನಮಗೆ ಬರಬೇಕಾಗಿದ್ದ ಮೃತ್ಯು ಈಗಾಗಲೇ ಬಂದಿದೆ. ಇನ್ನು ಯಾವೊಂದು ರೀತಿಯ ಶಿಕ್ಷೆಯನ್ನೂ ನಮಗೆ ಅನು ಭವಿಸಲಿಕ್ಕಿಲ್ಲ, ಖಂಡಿತವಾಗಿಯೂ ಇದೊಂದು ಮಹಾ ಯಶಸ್ಸೇ ಆಗಿದೆ. ಶ್ರಮಿಸುವವರು ಇಂತಹ ಯಶಸ್ಸಿಗಾಗಿಯೇ ಶ್ರಮಿಸಬೇಕಲ್ಲವೇ." **(ಅಸ್ಸಾಫ್ಫಾತ್: 58-61)**

ಪೂರ್ವ ಚರಿತ್ರೆಯ ಸ್ಮರಣೆ

ಇನ್ನೊಂದು ಸಭೆಯಲ್ಲಿ, ಅವರು ಭೂಲೋಕದ ಜೀವನದ ಬಗ್ಗೆ ಪರಸ್ಪರ ಮಾತಾಡಿಕೊಳ್ಳುವುದನ್ನು ನೋಡಿರಿ (ಅವರು ಆಗ ಮುಖ್ಯವಾಗಿ ಎತ್ತಿ ಹೇಳುವ ವಿಷಯಗಳು ಗಮನಾರ್ಹವಾಗಿದೆ. ಮಾನವನು ಇಲ್ಲಿ ಸುಳ್ಳು, ವಂಚನೆ, ಅಕ್ರಮ, ಸುಲಿಗೆ ಇತ್ಯಾದಿ ಅಪರಾಧ ಕೃತ್ಯಗಳನ್ನು ಹೆಚ್ಚಾಗಿ ತನ್ನ ಮತ್ತು ಮಡದಿ ಮಕ್ಕಳ ಜೀವನವನ್ನು ಸುಖಮಯಗೊಳಿಸುವ ಪ್ರೇರಣೆಯಿಂದಲೇ ಮಾಡುತ್ತಾನೆ. ಆದ್ದರಿಂದ ಈ ವಿಷಯದಲ್ಲಿ ಬಹಳ ಜಾಗ್ರತೆ ವಹಿಸಿದರೆ ಮಾತ್ರ ಸ್ವರ್ಗ ಪ್ರವೇಶ ಸಾಧ್ಯವಾದೀತಷ್ಟೆ, ಅದನ್ನೇ ಅವರು ಎತ್ತಿ ಹೇಳುತ್ತಾರೆ.) ಅವರು ಹೇಳುತ್ತಾರೆ, "ನಾವು ಹಿಂದೆ ನಮ್ಮ ಮನೆಯವರ ಮಧ್ಯೆ ಬಹಳ ಭಯದ (ಇವರಿಗಾಗಿ ಅಲ್ಲಾಹನು ಮೆಚ್ಚದ್ದನ್ನೇನಾದರೂ

ಮಾಡಿ ಬಿಡುವೆವೋ ಎಂಬಿತ್ಯಾದಿ ಭೀತಿ) ಜೀವನ ಸಾಗಿಸುತ್ತಿದ್ದೆವು. ಆದ್ದರಿಂದ ಅಲ್ಲಾಹನು ನಮ್ಮ ಮೇಲೆ ಔದಾರ್ಯ ತೋರಿಸಿದನು. ಈ ಸುಡುವ ಗಾಳಿಯ ನರಕ ಶಿಕ್ಷೆಯಿಂದ ಆತ ನಮ್ಮನ್ನು ರಕ್ಷಿಸಿದನು. ನಿಶ್ಚಯವಾಗಿಯೂ ಹಿಂದಿನ ಜೀವನದಲ್ಲಿ ನಾವು ಆತನನ್ನೇ ಪ್ರಾರ್ಥಿಸುತ್ತಲಿದ್ದೆವು. ಅವನು ನಿಜಕ್ಕೂ ಮಹಾ ಉಪಕಾರಿಯೂ ಕರುಣಾನಿಧಿಯೂ ಆಗಿದ್ದಾನೆ." **(ಅತ್ತೂರ್: 25-28)**

ಮರ್ದಕರನ್ನು ನೋಡಿ ನಗುತ್ತಾರೆ

ರಾಜ ವೈಭವದ ಪೀಠಗಳಲ್ಲಿ ಸುತ್ತಲೂ ಕುಳಿತು ಮಾತನಾಡುತ್ತಿರುವಾಗ ಅವರಿಗೆ ಇನ್ನೊಂದು ವಿಷಯವೂ ನೆನಪಾಗುತ್ತದೆ. ನಾವು ಹಿಂದೆ ಸತ್ಯವಿಶ್ವಾಸ ಸ್ವೀಕರಿಸಿದ ಆರಂಭ ಹಂತದಲ್ಲಿ ದುರ್ಬಲ ಅಲ್ಪಸಂಖ್ಯಾತರಾಗಿದ್ದೆವು. ಆಂದೋಲನದ ಆ ಆರಂಭ ಕಾಲದಲ್ಲಿ ನಾವು ಬೀದಿ ಬದಿಯಲ್ಲಿ ನಡೆದು ಹೋಗುವಾಗ, ಅದೋ ಹೋಗುತ್ತಿದ್ದಾನೆ, ಧರ್ಮಭಕ್ತ, ಸತ್ಯವಂತ! ಎಂದು ಕಣ್ಣು ಮಿಟುಕಿಸಿ ಕೆಲವರು ಗೇಲಿ ಮಾಡುತ್ತಿದ್ದರು. ದಾರಿ ಮಧ್ಯ ದಲ್ಲಿ ನಿಲ್ಲಿಸಿ ಬಯ್ದು ಹಂಗಿಸಿ ಅಪಮಾನಿಸಿ ಕೇಕೆ ಹಾಕಿ ಮೋಜು ಮಾಡುತ್ತಾ ಮನೆಗೆ ಮರಳುತ್ತಿದ್ದರು. ಇವರು ದಾರಿ ತಪ್ಪಿದವರೆಂದೂ ಕೆಲ ವರು ಪ್ರಚಾರ ಮಾಡುತ್ತಿದ್ದರಷ್ಟೆ. ಅವರಿಗೆ ಆ ಹೊಣೆಯನ್ನು ಯಾರೂ ನೀಡಿರಲಿಲ್ಲ. ಅವರು ಎಲ್ಲಿದ್ದಾರೆಂದು ಈಗ ನೋಡಿ ಬಿಡೋಣ. ಅದೋ ಕುಳಿತಲ್ಲಿಯೇ ಅವರು ಕಾಣಿಸುತ್ತಿದ್ದಾರೆ. ನರಕದಲ್ಲಿ! ಆಗ ಆ ಸತ್ಯನಿಷೇಧಿಗಳನ್ನು ನೋಡಿ ಇವರು ನಗುತ್ತಾರೆ, ಅವರು ತಮ್ಮ ಕರ್ಮದ ಫಲ ಅನುಭವಿಸುತ್ತಿದ್ದಾರೆಂಬ ತೃಪ್ತಿಯಿಂದ! **(ಅಲ್ ಮುತಫ್ಫಿಫೀನ್: 29-32)**

ನಾವು ಅವರನ್ನು ನೋಡಿ ಆಯಿತು. ಏನಿದ್ದರೂ ಅವರಲ್ಲೊಮ್ಮೆ ಕೇಳಿ ಬಿಡೋಣ: ಹೇ ನರಕದವರೇ, ನಮ್ಮ ಪ್ರಭು ನಮಗೆ ನೀಡಿದ್ದ ಸಕಲ ವಾಗ್ದಾನಗಳು ಸತ್ಯವಾಗಿರುವುದನ್ನು ನಾವು ಕಂಡುಕೊಂಡೆವು. ಆದರೆ ನಿಮ್ಮ ಪ್ರಭು ನಿಮಗೆ ನೀಡಿದ ವಾಗ್ದಾನ ಸತ್ಯವೆಂದು ನಿಮಗೆ ಮನವರಿಕೆಯಾಯಿತೇ? ಅವರು, ಹೌದೆನ್ನುತ್ತಾರೆ. ಆಗ ಓರ್ವ ಘೋಷಕನು ಅವರ ನಡುವೆ ಹೀಗೆ ಘೋಷಿಸುತ್ತಾನೆ: ಅಲ್ಲಾಹನ ಮಾರ್ಗದಿಂದ ಜನರನ್ನು ತಡೆಯು ತ್ತಿದ್ದ, ಅದನ್ನು ಜಟಿಲಗೊಳಿಸಲು ಯತ್ನಿಸುತ್ತಿದ್ದ, ಹಾಗೂ ಪರಲೋಕವನ್ನು ನಿರಾಕರಿಸುತ್ತಿದ್ದ ಅಕ್ರಮಿಗಳ ಮೇಲೆ ಅಲ್ಲಾಹನ ಶಾಪವಿದೆ. **(ಅಲ್ ಅಅ್‌ರಾಫ್: 44-45)**

ಬೇಸಾಯ

ಅದೋ ಒಬ್ಬನಲ್ಲಿ ಸ್ವರ್ಗದಲ್ಲಿ ಬೇಸಾಯ ಮಾಡಬೇಕೆಂಬ ಆಸೆ ಹುಟ್ಟುತ್ತದೆ.

ಅಬೂಹುರೈರಾ(ರ) ಹೇಳುತ್ತಾರೆ: ಪ್ರವಾದಿಯವರು(ಸ) ಒಮ್ಮೆ (ನಮ್ಮೊಡನೆ) ಮಾತಾಡುತ್ತಿದ್ದರು. ಬದಿಯಲ್ಲಿ ಓರ್ವ ಹಳ್ಳಿಗನೂ ಕುಳಿತಿದ್ದ, ಸ್ವರ್ಗವಾಸಿಗಳ ಪೈಕಿ ಒಬ್ಬರು ಅಲ್ಲಾಹನೊಡನೆ ಕೃಷಿ ಮಾಡುವ ಅನುಮತಿ ಕೇಳಿದಾಗ, ಅಲ್ಲಾಹನು, "ನಿನಗೆ ಬಯಸಿದ್ದೆಲ್ಲ ದೊರೆತಿದೆಯಲ್ಲವೇ, ಆದರೂ ಈ ಕೆಲಸವೇಕೆ?" ಎಂದು ಕೇಳಿದನು. ಆತ ಹೇಳುತ್ತಾನೆ, "ಹೌದು, ಆದರೂ ಒಮ್ಮೆ ಕೃಷಿ ಮಾಡಬೇಕೆಂದು ನನಗೆ ಆಸೆಯಾಗಿದೆ." ಅಂತೆಯೇ ಆತ ಬಿತ್ತನೆಯ ಕೆಲಸ ಮಾಡುತ್ತಾನೆ. ಅದೋ ಆ ಕೂಡಲೇ ಮೊಳಕೆ ಬಂತು, ಪೈರು ಬೆಳೆಯಿತು, ತೆನೆಯಾಯಿತು, ಬೆಳೆಯಿತು, ಕಟಾವು ಆಯಿತು, ಕಂತೆ ಕಟ್ಟಿತು, ಪರ್ವತ ಸಮಾನವಾದ ಕಂತೆಗಳು. ಎಲ್ಲವೂ ಕ್ಷಣಮಾತ್ರದಲ್ಲಿ! ಆಗ ಅಲ್ಲಾಹ್ ಹೇಳುತ್ತಾನೆ, "ಹೇ ಮಾನವಾ! ತೆಗೆದುಕೋ. ಎಷ್ಟು ದೊರೆತರೂ ನಿನ್ನ ಹೊಟ್ಟೆ ತುಂಬದು." (ಇದನ್ನು ಆಲಿಸುತ್ತಿದ್ದ) ಆ ಹಳ್ಳಿಗ ಕೂಡಲೇ ಹೇಳಿದ, "ಪ್ರವಾದಿಗಳೇ, ಅದು ಯಾವನೋ ಕುರೈಶಿ ಅಥವಾ ಅನ್ಸಾರಿಯಾಗಿರಬಹುದು. ಅವರು ರೈತರಲ್ಲವೇ. ನಾವು ಯಾರೂ ರೈತರಲ್ಲ." ಪ್ರವಾದಿಯವರಿಗೆ(ಸ) ನಗು ಬಂತು.

ಇಂತಹ ಬೇರೆ ಆಸೆಗಳಿರುವವರೂ ಅಲ್ಲಿರಬಹುದಷ್ಟೆ, ಹೀಗೆ ಹಲವು ಸ್ವಾರಸ್ಯಕರ ಘಟನೆಗಳು!!!

ಶಾಪಿಂಗ್

ಒಮ್ಮೊಮ್ಮೆ ಪೇಟೆಗೆ - ಸಂತೆಗೆ ಹೋಗುವ ಮನಸ್ಸಾಗಬಹುದು. ಯಾವ ವಸ್ತುವನ್ನು ಖರೀದಿಸಬೇಕಾಗಿಲ್ಲದಿದ್ದರೂ ಅದೊಂದು ಮೋಜು. ಆ ಮೋಜು ಕೂಡಾ ನಡೆಯಲಿ. ಸ್ವರ್ಗದಲ್ಲಿ ಒಂದು ಪೇಟೆಯಿದೆ. ಸ್ವರ್ಗವಾಸಿಗಳೆಲ್ಲರೂ ಶುಕ್ರವಾರ ಅಲ್ಲಿಗೆ ಹೋಗುತ್ತಾರೆ. ಅಲ್ಲಿ ಅವರಿಗೆ ಉತ್ತರ ದಿಕ್ಕಿನಿಂದ ಗಾಳಿ ಬೀಸುತ್ತಿರುವಂತೆ ಭಾಸವಾಗುವುದು. ಆ ಗಾಳಿಯು ಅವರ ಮುಖ ಮತ್ತು ಉಡುಪುಗಳ ಮೇಲೆ ಧೂಳು ಚೆಲ್ಲುತ್ತದೆ. (ಸ್ವರ್ಗದಲ್ಲಿ ಹಾರುವ ಧೂಳುಗಳು, ಕಸ್ತೂರಿ, ಕರ್ಪೂರ ಇತ್ಯಾದಿಗಳದ್ದೆಂದು ತಿಳಿದಿದೆಯಷ್ಟೆ) ಅದು ಅವರ ಸೌಂದರ್ಯ, ಶೋಭೆಯನ್ನು ಹೆಚ್ಚಿಸುತ್ತದೆ. ಹೀಗೆ ಅವರು ಹೆಚ್ಚಿನ ಸೌಂದರ್ಯ ಮತ್ತು ಶೋಭೆಯಿಂದ ಮನೆಗೆ ಮರಳುವಾಗ ಮನೆಯವರು ಅವರೊಡನೆ, "ಅಲ್ಲಾಹನಾಣೆ! ನೀವು ಇಲ್ಲಿಂದ ಹೋದ ಬಳಿಕ ಮತ್ತಷ್ಟು ಸುಂದರರೂ ಕೋಮಲರೂ ಆಗಿದ್ದೀರಿ" ಎಂದು ಹೇಳುತ್ತಾರೆ. (ಮುಸ್ಲಿಮ್) "ನಾವು ಪ್ರಭುವಿನ ಬಳಿ ಹೋಗಿ ಮರಳಿದ್ದೇವೆ. ಆದ್ದರಿಂದ ನಾವು ಈ ರೀತಿ ಮುಂದುವರಿಯಬೇಕಲ್ಲವೇ" ಎಂದು ಅವರು ಉತ್ತರಿಸುವರೆಂದೂ ಕೆಲವು ಹದೀಸ್‌ಗಳಲ್ಲಿವೆ.

ಉನ್ನತಿ

ಅಲ್ಲಾಹನನ್ನು ಆಗಾಗ್ಗೆ ಸ್ತುತಿಸಿ, ಪ್ರಕೀರ್ತಿಸಿ ಹೊಗಳುವುದು ಸ್ವರ್ಗವಾಸಿಗಳ ನಿತ್ಯ ರೂಢಿಯೆಂದು ಈ ಹಿಂದೆ ಹೇಳಿದೆಯಷ್ಟೆ. ಇದೋ ಇಲ್ಲಿ ಪ್ರತಿವಾರ ಅವರ ಸೌಂದರ್ಯ, ಶೋಭೆ ಹೆಚ್ಚುವುದೆಂದೂ ಹೇಳಲಾಗಿದೆ. ಇದರಿಂದ ಸ್ವರ್ಗವಾಸಿಗಳು ದಿನೇ ದಿನೇ ಉನ್ನತಿಗೇರುವರೆಂದು ನಾವು ಭಾವಿಸಬಹುದು. ಈ ಉನ್ನತಿಗೆ ಯಾವುದಾದರೂ ಮಿತಿ ಯಿದೆಯೇ. ಹೆಚ್ಚು ಉನ್ನತಿ ಸಾಧಿಸಿದಾಗ ಅದರ ಸ್ವರೂಪ ಹೇಗಿರಬಹುದು? ಅವು ಗಳನ್ನು ಊಹಿಸುವ ಸಾಮರ್ಥ್ಯ ಇಂದು ನಮಗಿಲ್ಲ, ಅಲ್ಲಾಹನೇ ಬಲ್ಲ.

ಸ್ವರ್ಗ ವಾಸವು ಸರ್ವಥಾ ನೀರಸವೆನಿಸುವುದಿಲ್ಲ, ಸುಖಾನುಭೋಗ, ಹರ್ಷೋಲ್ಲಾಸ ಮತ್ತು ಉನ್ನತಿಯ ಹೊಸ ಹೊಸ ಶೃಂಗವೇರುವ ತಾಣವಾಗಿದೆ. ಪ್ರವಾದಿ(ಸ) ಒಮ್ಮೆ ಹೀಗೆಂದಿದ್ದರು, "ಸ್ವರ್ಗವಾಸಿಗಳೆಲ್ಲರೂ ಅದರಲ್ಲಿ ಪ್ರವೇಶಿಸಿದ ಬಳಿಕ ಅಲ್ಲಾಹನು ಅವರೊಡನೆ ಕೇಳುತ್ತಾನೆ, 'ನಾನು ಇನ್ನೇನಾದರೂ ಒದಗಿಸಬೇಕೆಂದು ನೀವು ಬಯಸುತ್ತೀರಾ?' ಅವರು ಹೇಳುತ್ತಾರೆ, 'ನೀನು ನಮ್ಮನ್ನು ನರಕದಿಂದ ಪಾರುಗೊಳಿಸಿ ಸ್ವರ್ಗದಲ್ಲಿ ಪ್ರವೇಶಗೊಳಿಸಿದೆ, (ಎಲ್ಲ ವಿಷಯದಲ್ಲಿಯೂ) ನಮ್ಮನ್ನು ಪ್ರಸನ್ನಗೊಳಿಸಿರುವೆ, ನಮ್ಮನ್ನು ಸಂಪೂರ್ಣ ಸಂತುಷ್ಟಿಗೊಳಿಸಿರುವೆ. ಹೀಗಿರುತ್ತಾ ನಾವು ಇನ್ನೇನು ಬಯಸಲಿ.' ಆಗ ಆ ತೆರೆಯನ್ನು ಸರಿಸಲಾಗುತ್ತದೆ. (ಅವರಿಗೆ ಪ್ರಭುವಿನ ದರ್ಶನವಾಗುತ್ತದೆ.) ಈ ದೃಶ್ಯಕ್ಕಿಂತ ಪ್ರಿಯವಾದ ಬೇರೆ ಏನನ್ನೂ ಅವರಿಗೆ ನೀಡಿಯೇ ಇಲ್ಲ." (ಮುಸ್ಲಿಮ್)

ವಿವಿಧ ಸಂದರ್ಭಗಳಲ್ಲಿ ಈ ದೃಶ್ಯವು ಆಗಾಗ್ಗೆ ಗೋಚರವಾಗುತ್ತದೆ. ಪ್ರತಿಯೊಂದು ದೃಶ್ಯದಲ್ಲಿಯೂ ಸ್ವರ್ಗವಾಸಿಗಳು ಮೊದಲಿಗಿಂತ ಉನ್ನತಿ ಸಾಧಿಸಿರುತ್ತಾರೆ. ಹೀಗೆ ಈ ಉನ್ನತಿಯ ಕ್ರಿಯೆಯು ಸದಾ ಮುಂದುವರಿಯುತ್ತಿರುತ್ತದೆ. ಸ್ಥಳ ಮತ್ತು ಕಾಲ ಮಿತಿ ಯನ್ನೂ ಮೀರಿ!

"ಖಂಡಿತವಾಗಿಯೂ ಇದುವೇ ಅತಿ ದೊಡ್ಡ ಯಶಸ್ಸು, ಇಂತಹ ಕಾರ್ಯಕ್ಕಾಗಿ ಪ್ರಯತ್ನಿಸುವವರು ಪ್ರಯತ್ನಿಸಲಿ." **(ಪವಿತ್ರ ಕುರ್‌ಆನ್: 37: 60-61)**

❖ ❖ ❖ ❖